ಸಂವಾದ

ಏಪ್ರಿಲ್ 2003 ರೂ. 10/- ಮಾಸ ಪತ್ರಿಕೆ





ಅಂಬೇಡ್ಕರ್ ವಿಶೇಷಾಂಕ

ಅಂಬೇಡ್ಕರ್ ವಿಶೇಷಾಂಕ
ಸಂವಾದ

ಮನುಷ್ಯ ಜಾತಿ ತಾನೊಂದೆ ವಲಂ

ಸಂವಾದ

ಮಾಸ ಪತ್ರಿಕೆ

ಸಂಪುಟ 1 ಸಂಚಿಕೆ 6

ಏಪ್ರಿಲ್ 2003

ಸಂಪಾದಕ :
ಇಂದೂಧರ ಹೊನ್ನಾಪುರ

ನೆರವು :
ಕೆ.ಸಿ. ಶಿವರಾಂ
ಡಾ|| ಎಂ. ಶಿವಲಿಂಗಯ್ಯ
ಸುಬ್ಬು ಹೊಲೆಯಾರ್

ವಿಳಾಸ : ಸ್ಫೂರ್ತಿಧಾಮ
ಬಾಬಾಸಾಹೇಬ್ ಅಂಬೇಡ್ಕರ್
ಸ್ಮಾರಕ ಕೇಂದ್ರ
ಅಂಚೆ ಪೆಟ್ಟಿಗೆ ಸಂಖ್ಯೆ : 9143
ಹೇರೋಹಳ್ಳಿ, ಮಾಗಡಿರಸ್ತೆ
ವಿಶ್ವನೀಡಂ ಅಂಚೆ
ಬೆಂಗಳೂರು - 560 091
ದೂರವಾಣಿ : 3287943 / 3281667

PRINTED AND PUBLISHED BY
S. R. GOVINDU
ON BEHALF OF SPOORTHIDHAMA
PB NO. 9143, HEROHALLI
VISHWANEEDAM POST
BANGALORE - 560 091
PHONE : 3287943, 3281667

EDITOR :
INDUDHARA HONNAPURA

ಒಳ ಪುಟಗಳಲ್ಲಿ

- ಪತ್ರಗಳು 4
- ಅಂತರಂಗ 5
- ಮೇರಾ ಭಾರತ್ ಮಹಾನ್ 6
- ಅಂಬೇಡ್ಕರ್ ವಿಚಾರಧಾರೆ : ಡಿ.ಆರ್. ಟಿಪ್ಪಣಿ 10
- ಚಿಂತನೆ ಹೋರಾಟ- ಒಂದು ಅವಲೋಕನ 12
- ಅಂಬೇಡ್ಕರ್ ಮತ್ತು ಮಹಿಳಾ ವಿಮೋಚನೆ — ಪ್ರತಿಮಾ ಪರ್ದೇಶಿ 14
- ನಾನೇಕೆ ಮಂತ್ರಿ ಪದವಿ ಬಿಡಬೇಕಾಯ್ತು ? — ಡಾ|| ಬಿ.ಆರ್. ಅಂಬೇಡ್ಕರ್ 20
- ಜಲ ಸಂಪನ್ಮೂಲ ನಿರ್ವಹಣೆ : ಅಂಬೇಡ್ಕರ್ ನೀತಿ — ಪಿ. ಅಬ್ರಹಾಂ 26

- ಸ್ವತಂತ್ರ ರಾಜಕೀಯ ಶಕ್ತಿಯಾಗಿ ದಲಿತರು — ಡಾ|| ಬಿ.ಆರ್. ಅಂಬೇಡ್ಕರ್ 31
- ಬ್ರಾಹ್ಮಣವಾದ ಮತ್ತು ದಲಿತ ಸಮಸ್ಯೆ — ಎಸ್.ಎಸ್. ಹಿರೇಮಠ 34
- ಅಂಬೇಡ್ಕರ್ ಮತ್ತು ದಲಿತ ಐಡೆಂಟಿಟಿ — ಡಿ. ಡೊಮೆನಿಕ್ 38
- ಹಿಂದೂ ಧರ್ಮದ ವಿವರಣೆ 20 — ಪ್ರೊ. ಕೆ. ಎಸ್. ಭಗವಾನ್ 42
- ಹಸಿ ಸುಳ್ಳು ಹಬ್ಬಿಸುವ ಪುರೋಹಿತರು 48
- ಹಿಂದೂ ವಿವಾಹಗಳ ಸುತ್ತ ಮುತ್ತ-4 49

ಕವನಗಳು :
- ಶಕ್ತಿ ಸ್ವರೂಪಿ — ಮೋಹನ ನಾಗಮ್ಮನವರ 9
- ಮನದ ಬಾಗಿಲು — ಆರತಿ ಹೆಚ್.ಎನ್. 35

ಅಂಬೇಡ್ಕರ್ ಚಿತ್ರಗಳನ್ನು ಡಾ. ಆನಂದ್ ತೇಲ್‌ತುಂಬ್ಡೆ ಅವರು ಸಿದ್ಧಪಡಿಸಿರುವ ಸಿ.ಡಿ.ಯಿಂದ ಆಯ್ದುಕೊಳ್ಳಲಾಗಿದೆ.

ಮುಖಪುಟ ವಿನ್ಯಾಸ : ರಾಥೋಡ್

ಅದ್ಭುತವಾಗಿ ಮೂಡಿ ಬಂದ ಸಂವಾದ

ನನ್ನ ಪ್ರೀತಿಯ ಸಂವಾದ ಸಂಪಾದಕರಾದ ಶ್ರೀ ಇಂದೂಧರ ಹೊನ್ನಾಪುರರವರಿಗೆ ನನ್ನ ಅನಂತ ಶುಭಕಾಮನೆಗಳು.

ತಮ್ಮ ಸಂವಾದ ಫೆಬ್ರವರಿ ತಿಂಗಳಲ್ಲಿ ಮೂಡಿ ಬಂದ ಸಂವಾದ ಮಾಸ ಪತ್ರಿಕೆಯನ್ನು ಇಡೀ ರಾತ್ರಿಯಲ್ಲೆ 2 ಬಾರಿ ಓದಿದೆ. ನನಗೆ ಇನ್ನೂ ಓದಬೇಕೆಂದು ಮನಸ್ಸು ಹೇಳುತ್ತಿತ್ತು. ಈ ಬಾರಿ ತುಂಬಾ ಅದ್ಭುತವಾಗಿ ಮೂಡಿ ಬಂದಿದೆ. ಅದಕ್ಕೆ ನನ್ನ ಧನ್ಯವಾದಗಳು.

ಮೊದಲಿಗೆ ಸಂಪಾದಕರ 'ಸಮಾಜದ ನೈತಿಕತೆಗೆ ಗರಬಡಿದಿದೆ' ಎಂಬ ಲೇಖನ ತುಂಬಾ ಚೆನ್ನಾಗಿದೆ. ಯಾಕೆಂದರೆ ದಲಿತರು ಕೆಲಸಕ್ಕೆ ಹೋಗದ ಕಾರಣ ಉನ್ನತ ಜನ ಯಾವ ರೀತಿ ಈ ಜನರನ್ನು ಹಿಂಸಿಸುತ್ತಾರೆ ಎಂಬುದಕ್ಕೆ ಈ ಸಂಪಾದಕರ ಮಾತು ತುಂಬಾ ಅರ್ಥಗರ್ಭಿತವಾಗಿದೆ ಈ ವಿಷಯವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಗಂಭೀರವಾದ ಚಿಂತನೆ ನಡೆಸಬೇಕಾದ ವಿಷಯವಾಗಿದೆ.

ಇದೇ ರೀತಿ ನಾಲ್ವಡಿ ಕೃಷ್ಣರಾಜ ಒಡೆಯಾರ್ ಮೈಸೂರು ಪ್ರಾಂತ್ಯದ ರೂವಾರಿ ಎಂಬ ಲೇಖನವು ತುಂಬಾ ಚೆನ್ನಾಗಿ ಪ್ರಕಟಿಸಿದ್ದೀರಿ ಅದಕ್ಕೆ ನನ್ನ ಧನ್ಯವಾದಗಳು. ಯಾಕೆಂದರೆ ಯಾವುದೇ ಇತಿಹಾಸ ತಿರಿಗುಸಿ ನೋಡಿದರು ಈ ರೀತಿ ಅಂತರಾಳದ ವಿಷಯಗಳನ್ನು ಪ್ರಕಟಿಸಿಲ್ಲ ಯಾಕೆಂದರೆ ನಾನು ಓದಿದ ಮೈಸೂರು ಒಡೆಯಾರ್ ಇತಿಹಾಸದಲ್ಲಿ ಇಷ್ಟು ಸೂಕ್ತವಾಗಿ ಪ್ರಕಟವಾಗಿಲ್ಲ ಅದಕ್ಕೆ ನನಗೆ ತುಂಬಾ ದುಃಖವಾಗುತ್ತಿದೆ. ಇತಿಹಾಸವನ್ನು ಬರೆದವರು ಉನ್ನತ ಮಟ್ಟಡ ಜಾತಿ ಇತಿಹಾಸ ವಿಷ ಬೀಜಗಳು ಯಾಕೆಂದರೆ ದಲಿತರಿಗೆ ಅವರ ಕೊಟ್ಟ ಕೊಡಿಗೆಯನ್ನು ಬರೆದರೆ ಎಚ್ಚೆತ್ತುಕೊಳ್ಳುತ್ತಾರೆ ಎಂಬ ಮಾತೂ ಜಾಸ್ತಿಯಾಗಿದೆ ಆದ್ದರಿಂದ "ಈ ದಿನ ಇಂದಿನ ಇತಿಹಾಸ ಬರೆದ ಪುಸ್ತಗಳನ್ನು ಸುಟ್ಟು ನಿಜವಾದ ಇತಿಹಾಸವನ್ನು ದಲಿತ ಚಿಂತಕರು, ಬರಹಗಾರರು, ಕವಿಗಳು, ಬುದ್ಧಿವಂತರಿಂದ ರಚಿಸಿದ ಇತಿಹಾಸವನ್ನು ಕಾರ್ಯಾಚರಣೆಗೆ ತರಬೇಕಾಗಿದೆ"

ಸಂವಾದ ಮಾಸ ಪತ್ರಿಕೆ ಇನ್ನು ಉನ್ನತ ಮಟ್ಟಕ್ಕೆ ಬೆಳಯಲಿ ಎಂದು ನನ್ನ ಆರೈಕೆ.

ಶಿವಪ್ಪ, ಕೋಲಾರ

ಲೋಹಿಯಾ ನೆನಪು

ಸಹೃದಯರೆ,

60-70ರ ದಶಕದ ಭಾರತದ ಸಾಮಾಜಿಕ ಮತ್ತು ರಾಜಕೀಯ ದೃವತಾರೆಯಾಗಿ ಮೂಡಿ ಬಂದು, ದೇಶದಲ್ಲಿ ಸಮಾಜವಾದಿ ಆಂದೋಳನ ವುಂಟಾಗಲು ಕಾರಣೀಭೂತರಾದ ರಾಮಮನೋಹರ ಲೋಹಿಯಾರವರನ್ನು ಕುರಿತು ನಿಮ್ಮ ಸಂವಾದದಲ್ಲಿ ಪ್ರಕಟವಾಗಿರುವ ಲೇಖನ ಓದಿದೆ.

ಲೋಹಿಯಾರ ಸಮಾಜವಾದಿ ಸಿದ್ಧಾಂತದ ಹೆಸರಿನಲ್ಲಿ ಮಹತ್ವದ ರಾಜಕೀಯ ಅಧಿಕಾರ ನಿರೀಕ್ಷಿಸುತ್ತಿರುವ ಸಂಘಟನೆಗಳಾಗಲೀ ಅಥವಾ ಕಾರ್ಯಕರ್ತರುಗಳಿಗಾಲೀ (ಲೋಹಿಯಾವಾದಿ) ಮಾರ್ಚ್ 23 ಅವರ ಜನ್ಮದಿನವೆಂಬುದೇ ಮರೆತಿರುವಂತಿದೆ, ಏಕೆಂದರೆ ಅಂದು ನನಗೆ ಗೊತ್ತಿರುವಂತೆ ರಾಜ್ಯದ ಅಥವಾ ರಾಜಧಾನಿಯ ಯಾವ ಭಾಗದಲ್ಲೂ ಲೋಹಿಯಾ ನೆನಪಿನ ಕಾರ್ಯಕ್ರಮ ಇರಲಿಲ್ಲ.

ಅವಕಾಶವಾದಿ ಗೋಸುಂಬೆಗಳಂತೆ ವರ್ತಿಸುವ ಇವರೆಲ್ಲರ ನಡುವೆ ಜನಪರ/ಪ್ರಗತಿಪರ ಆಶಯ ಹೊತ್ತ 'ಸಂವಾದ' ಲೋಹಿಯಾರ ನೆನಪನ್ನು ಅರ್ಥಪೂರ್ಣವಾಗಿ ಮಾಡಿಕೊಟ್ಟು ತನ್ನ ಜವಾಬ್ದಾರಿಯನ್ನು ನ್ಯಾಯವಾಗಿ ನಿರ್ವಹಿಸಿದೆ ಅದಕ್ಕಾಗಿ ಓದುಗರ ಪರವಾಗಿ ಕೃತಜ್ಞತೆಗಳು.

ಎಂ. ಚಂದ್ರಶೇಖರ್, ಬೆಂಗಳೂರು

ವೈವಿಧ್ಯಮಯ

ಮಾನ್ಯರೆ

ನಮಸ್ಕಾರಗಳು. ತಾವು ಹೊರ ತರುತ್ತಿರುವ ಸಂವಾದ ಪತ್ರಿಕೆ ಓದಿದೆನು. ತುಂಬಾ ವೈವಿಧ್ಯಮಯವಾಗಿ ಮೂಢಿ ಬರುತ್ತಿದೆ. ಪತ್ರಿಕೆ ಕಳೆದುಹೋಗಿ ಇತಿಹಾಸ ಸೇರಿದ 'ಪಂಚಮ' ನೆನಪು ತರುತ್ತಿದೆ. ಈ ಪತ್ರಿಕೆಯನ್ನು ನಮ್ಮ ಗ್ರಂಥಾಲಯಕ್ಕೆ ಕಳುಹಿಸಿಕೊಡುವುದು.

ಬೀರಮಾನಹಳ್ಳಿ ಮುನಿರಾಜು
ಗೆಳೆಯರ ಗ್ರಾಮೀಣ ಗ್ರಂಥಾಲಯ
ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಸಂಘ,
ಕೋಲಾರ ಜಿಲ್ಲೆ

ಪತ್ರಗಳು



ಕಾರ್ಯಕರ್ತರಿಗೆ ಮಾದರಿಯಾಗಲಿ

ಆತ್ಮೀಯ ಸಂಪಾದಕರೆ,

ಸಂವಾದದ ಎಲ್ಲ ಸಂಚಿಕೆಗಳನ್ನು ಓದುತ್ತಿದ್ದೇನೆ. ಆದರೆ ಈ ತಿಂಗಳ ಸಂಚಿಕೆಯ ದ್ಯಾವನೂರು ಲೇಖನ, ಭಾರತಿ ರಾಜಣ್ಣ ಲೇಖನಗಳನ್ನು ನೋಡಿ 'ಪಂಚಮ' ಪತ್ರಿಕೆ ಜ್ಞಾಪಕಕ್ಕೆ ಬಂತು. ನಿಜವಾಗಲು ನಾವೆಲ್ಲ ಸಾಮಾಜಿಕ ಕಾರ್ಯಕರ್ತರಾಗಲು ಕಾರಣ 'ಪಂಚಮ' ಪತ್ರಿಕೆ ಹಾಗೂ ಸುದ್ದಿ ಸಂಗಾತಿ.

ನಾನು ಇಂದೂಧರ್ ಅವರಿಗೆ ಹಲವು ಬಾರೀ ಪತ್ರ ಬರೆದು ಹಾಗೂ ಖಾಸಗಿಯಾಗಿ ಸಿಕ್ಕಾಗಲೂ ಪುನಃ ಸುದ್ಧಿ ಸಂಗಾತಿ ಆಗಲಿ ಪಂಚಮ ಆಗಲಿ ತನ್ನಿ ಸಾರ್ ಅಂತ, 4-5 ವರ್ಷಗಳ ಹಿಂದೆ ವಿನಂತಿಸಿದ್ದೆ. ಸುದ್ಧಿ-ಸಂಗಾತಿ ಇಷ್ಟರಲ್ಲಿ ಬರುತ್ತದೆ ಎಂದು ಹೇಳುತ್ತಿದ್ದರು. ಬರಲಿಲ್ಲ? ಆದರೆ ಇಂದು ಆ ಆಸೆ ಸಂವಾದದ ಮೂಲಕ ಪುನಃ ಚಿಗುರುತ್ತಿದೆ. 'ದಲಿತ ಚಳುವಳಿ' ನೂರು ದಿಕ್ಕು ಹಿಡಿದಿರುವಾಗ ಹೊಸ ಕಾರ್ಯಕರ್ತರಿಗಾದರೂ, ಮಾದರಿಯಾಗಲಿ. ಹಾಗೇ ಆಗುತ್ತದೆ ಅನ್ನಿಸಿದೆ, ಸಂವಾದವನ್ನಾದರೂ ನಿಲ್ಲಿಸದೆ ತರುತ್ತೀರಿ ಎಂದು ನಂಬಿರುತ್ತೇನೆ.

ಮುಂದಿನ ತಿಂಗಳು ಪ್ರಕಟವಾಗಲಿರುವ ಅಂಬೇಡ್ಕರ್‌ರವರ ವಿವಿಧ ದೃಷ್ಟಿಕೋನಗಳನ್ನು ಬಿಂಬಿಸುವ ಅಂಬೇಡ್ಕರ್ ವಿಶೇಷಾಂಕಕ್ಕೆ ಕಾಯುತ್ತಿರುತ್ತೇನೆ.

ಸಿ.ಎನ್. ಪಾರ್ಥಸಾರಥಿ, ಬೆಂಗಳೂರು

ಮತ್ತೆ-ಮತ್ತೆ ಓದಬೇಕು ಎನಿಸುತ್ತದೆ

ಪ್ರಿಯ ಸಂಪಾದಕರೆ,

'ಸಂವಾದ'ದ 5ನೇ ಸಂಚಿಕೆಯ ಎಲ್ಲಾ ಲೇಖನಗಳನ್ನೂ 2-3ಬಾರಿ ಓದಿದ್ದೇನೆ-ಓದುತ್ತೇ ಇದ್ದೇನೆ. ಎಷ್ಟು ಓದಿದರೂ ಮತ್ತೆ-ಮತ್ತೆ ಓದಬೇಕಿನಿಸುವ ಲೇಖನಗಳ ಸರಮಾಲೆಯೇ ಇದೆ.

ಅದರಲ್ಲೂ ಬ್ರಾಹ್ಮಣರ ಸಸ್ಯಾಹಾರಿ ಆಟವಾದ ಕ್ರಿಕೇಟ್ಟಿನಲ್ಲಿನ ಜಾತಿ ರಾಜಕೀಯವನ್ನು ಚೆನ್ನಾಗಿಯೇ ಬರೆದಿದ್ದೀರಿ. ನಿಜವಾಗಿಯೂ ಉತ್ತಮ ಸಾಮರ್ಥ್ಯ ಹೊಂದಿರುವ ಹಲವಾರು ಶೂದ್ರ ಆಟಗಾರರು ನಮ್ಮಲ್ಲಿದ್ದರೂ, ಕೇವಲ ಜಾತಿ ಕಾರಣದಿಂದ ಅವಕಾಶವನ್ನು ನಿರಾಕರಿಸುತ್ತಿರುವುದು ಖಂಡನಾರ್ಹವಾದುದೇ ಸರಿ. ಭಾರತೀಯ ಕ್ರಿಕೆಟ್ ರಂಗದಲ್ಲಿ ಎಲ್ಲಿಯವರೆಗೆ ಜಾತೀಯತೆ ಇರುತ್ತದೋ ಅಲ್ಲಿಯವರೆಗೆ ಭಾರತ ವಿಶ್ವಕಪ್ ಗೆಲ್ಲಲು ಸಾಧ್ಯವೇ ಇಲ್ಲ ಎಂಬುದಕ್ಕೆ ಇದೀಗ ತಾನೇ ಮುಗಿದಿರುವ ವಿಶ್ವಕಪ್‌ನಲ್ಲಿನ ಪ್ರದರ್ಶನವೇ ಸಾಕ್ಷಿ.

ಬಿ.ಆರ್. ರಂಗಸ್ವಾಮಿ, ಬೆಂಗಳೂರು

ಮತ್ಸರ ನೀತಿ

ಪ್ರಿಯ ಸಂಪಾದಕರೆ,

ಇತ್ತೀಚಿನ ಸಂವಾದದಲ್ಲಿ ಪ್ರಕಟವಾಗಿರುವ "ದನ ಮತ್ತು ಸಂಸ್ಕೃತಿ" ಲೇಖನ ಓದಿದೆ. ತನ್ನ ಕುತ್ಸಿತ ಮತ್ಸರ ನೀತಿಯಿಂದಾಗಿ ಹಿಂದುತ್ವದ ಹೆಸರಿನಲ್ಲಿ ಭಾರತೀಯ ಸಮಾಜದ ಶಾಂತಿಯನ್ನು ಹದಗೆಡೆಸುತ್ತಿರುವ ಸಂಘ ಪರಿವಾರದವರು ಇದೀಗ ಗೋಹತ್ಯೆ ನಿಷೇದದ ಮೂಲಕ ಭಾರತೀಯರ ಆಹಾರ ಪದ್ಧತಿಯ ಮೇಲೂ ಹರಿಹಾಯ್ದಿರುವುದರ ಕುರಿತು ಉಪಯುಕ್ತ ಲೇಖನ ಪ್ರಕಟಿಸಿದ್ದೀರಿ.

ಒಂದು ಕಾಲದಲ್ಲಿ ಶಾಸ್ತ್ರ ಪುರಾಣಗಳ ನೆರವಿನೊಂದಿಗೆ ಎಳೆಗರುಗಳನ್ನೇ ಕೊಂದು ಅದರ ಮಾಂಸವನ್ನು ಮೆಲ್ಲುತ್ತಿದ್ದವರು ಇಂದು ಅದರ ವಿರುದ್ಧ ಪದೇ ಪದೇ ಶಂಖ ಹೊಡೆದುಕೊಳ್ಳುತ್ತಿರುವುದು ಹಾರವರ ಹಾದರವಲ್ಲದೆ ಮತ್ತೇನು?

ಇಂತಹ ಲೇಖನಗಳ ಮೂಲವೇ ವೈದಿಕರ ಮರ್ಮವನ್ನು ಲೋಕಕ್ಕೆ ಪ್ರಚುರಪಡಿಸುತ್ತಿರುವ ಸಂವಾದಕ್ಕೆ ನನ್ನ ಅನಂತ ನಮನಗಳು.

ಕೆ.ಎಸ್. ನಾಣಿ, ಶಿವಮೊಗ್ಗ

ಅಂತರಂಗ

ಜಾಗತಿಕ ಭಯೋತ್ಪಾದಕರ ಅಟ್ಟಹಾಸ



ಇಡೀ ಜಗತ್ತು ಈಗ ಆತಂಕದ ಕ್ಷಣಗಳನ್ನು ಎಣಿಸುತ್ತಿದೆ. ಬುಷ್-ಬ್ಲೇರ್ ಎಂಬ ಇಬ್ಬರು ಜಾಗತಿಕ ಭಯೋತ್ಪಾದಕರು ಜಗತ್ತಿನ ನೆಮ್ಮದಿಗೆ ಬೆಂಕಿ ಹಚ್ಚಿದ್ದಾರೆ. ಈ ಕೇಡಿಗರಿಬ್ಬರ ದುಷ್ಟಕೂಟ ಇರಾಕಿನ ಮುಗ್ಧ ಜನರ ಮೇಲೆ ಬಾಂಬುಗಳನ್ನು ಚೆಲ್ಲಿ ತಮ್ಮ ರಕ್ತ ದಾಹವನ್ನು ಇಂಗಿಸಿಕೊಳ್ಳುತ್ತದೆ. ಸಾವಿನ ಭಯದಿಂದ ತತ್ತರಿಸಿದ ಲಕ್ಷಾಂತರ ಮುಗ್ಧ ಇರಾಕಿಗಳ ಆಕ್ರಂದನ ಮುಗಿಲು ಮುಟ್ಟುತ್ತಿದೆ. ಅಮೆರಿಕಾ ಚೆಲ್ಲಿದ ಬಾಂಬುಗಳಿಂದ ಎದ್ದ ಹೊಗೆಯ ಕಾರ್ಮೋಡ ಇಡೀ ಜಗತ್ತನ್ನು ಆವರಿಸಿ ಸೂತಕದ ವಾತಾವರಣ ಮೂಡಿಸಿದೆ. ಜಗತ್ತಿನ ಆತ್ಮ ಸಾಕ್ಷಿಯಂತಿರಬೇಕಾದ ವಿಶ್ವಸಂಸ್ಥೆ ಬುಷ್ ಮತ್ತು ಬ್ಲೇರ್‌ರ ಜೀತದಾಳಿನಂತೆ ನಡೆದುಕೊಳ್ಳುತ್ತಿದೆ.

ಅಮೆರಿಕಾದ ಯುದ್ಧ ದಾಹಕ್ಕೆ ಇಡೀ ಜಗತ್ತೇ ವಿರೋಧ ವ್ಯಕ್ತಪಡಿಸುತ್ತಿದ್ದರೂ, ಭಂಡತನ ಹಾಗೂ ದುರಹಂಕಾರದಿಂದ ಯುದ್ಧ ಮುಂದುವರೆಸಿರುವ ಅಮೆರಿಕಾ, ಆಗತ್ಯಬಿದ್ದರೆ ಇರಾಕ್ ಮೇಲೆ ಅಣ್ವಸ್ತ್ರವನ್ನು ಕೂಡ ಪ್ರಯೋಗಿಸುವ ಬೆದರಿಕೆ ಹಾಕಿದೆ. ರಷ್ಯಾ, ಚೀನಾ, ಫ್ರಾನ್ಸ್, ಜರ್ಮನಿಯಂಥ ರಾಷ್ಟ್ರಗಳು ಅಮೆರಿಕಾದ ವಿರುದ್ಧ ಕೇವಲ ಬಾಯಿ ಮಾತಿನ ಪ್ರಹಾರ ಮಾಡುತ್ತಾ, ಅಸಹಾಯಕವಾಗಿ ನಿಂತಿವೆ. ಭಾರತವಂತೂ ಶಾಸ್ತ್ರಕ್ಕೆ ವಿರೋಧ ಸೂಚಿಸಿ, ಜಾಣ ಮೌನ ವಹಿಸಿದೆ. ಜಗತ್ತಿನಾದ್ಯಂತ ಸವಾಲಿಲ್ಲದ ಏಕಚಕ್ರಾಧಿಪತ್ಯವನ್ನು ಸ್ಥಾಪಿಸಬೇಕೆಂಬುದೇ ಅಮೆರಿಕಾದ ಈ ಏಕಪಕ್ಷೀಯ ಯುದ್ಧಕ್ಕೆ ಕಾರಣವಾಗಿದೆ. ಇರಾಕ್‌ನಲ್ಲಿರುವ ಸಂಪದ್ಭರಿತ ತೈಲ ನಿಕ್ಷೇಪಗಳನ್ನು ತನ್ನ ಯಜಮಾನಿಕೆಗೆ ಒಳಪಡಿಸಿಕೊಳ್ಳಬೇಕೆಂಬ ದಾಹವೇ ಇದಕ್ಕೆ ಮುಖ್ಯ ಕಾರಣವಾಗಿದ್ದು ಸಲ್ಲದ ಆರೋಪಗಳನ್ನು ಹೊರಿಸಿ, ಕಾಲು ಕೆರೆದು ಜಗಳಕ್ಕೆ ನಿಂತಿದೆ.

ಇಷ್ಟಕ್ಕೂ ಇರಾಕಿನ ಮೇಲೆ ಅಮೆರಿಕಾದ ಆರೋಪಗಳಾವುವು? ಇವರು ಕೇಳಿದಂತೆ ತೈಲ ಒದಗಿಸುತ್ತಿಲ್ಲ ಅನ್ನುವುದೇ? ಇಲ್ಲದಿರುವ ರಾಸಾಯನಿಕ ಅಸ್ತ್ರಗಳನ್ನು ನಾಶಮಾಡಲಿಲ್ಲ ಅನ್ನುವುದೇ? ಅಥವಾ ಬುಷ್ ಮಾತಿಗೆಲ್ಲ ಕೌದಪ್ಪನಂತೆ ಗೋಣು ಹಾಕಲು ಸದ್ದಾಂ ಹುಸೇನ್ ನಿರಾಕರಿಸಿದ್ದೇ? ತಮಾಷೆಯ ಸಂಗತಿಯೆಂದರೆ ಇರಾಕ್ ನಾಗರಿಕರಿಗೆ ಬುಷ್ ಸ್ವಾತಂತ್ರ್ಯ ತಂದು ಕೊಡುತ್ತಾರಂತೆ? ಅದೂ ಲಕ್ಷಾಂತರ ಹಸು ಕಂದಮ್ಮಗಳ ನೆತ್ತರೋಕುಳಿಯಾಡಿ! ಎಂಥಾ ರಾಕ್ಷಸ ಈ ಬುಷ್! ಸರ್ವತಂತ್ರ ಸ್ವತಂತ್ರ ರಾಷ್ಟ್ರವೊಂದರ ಮೇಲೆ ದುರಾಕ್ರಮಣ ಮಾಡಿ ಯಾರೂ ಕೇಳದ ಸ್ವಾತಂತ್ರ್ಯ ತಂದು ಕೊಡುತ್ತೇವೆನ್ನುವ ಈ ಯುದ್ಧಕೋರರನ್ನು ಏನೆನ್ನಬೇಕು?

ಜಗತ್ತಿನ ಬಹುತೇಕ ಎಲ್ಲ ಸ್ವಾಭಿಮಾನಿ ರಾಷ್ಟ್ರಗಳ ಮೇಲೆ ತನ್ನ ಹದ್ದಿನ ಕಣ್ಣಿಟ್ಟಿರುವ ಅಮೆರಿಕಾ-ಬ್ರಿಟನ್‌ಗಳು, ತಮ್ಮ ಪಾರಂಪರಿಕ ಸಾಮ್ರಾಜ್ಯ ಶಾಹಿ ದಾಹಕ್ಕೆ ಈಗ ಇರಾಕನ್ನು ಗುರಿಯಾಗಿಸಿ ಕೊಂಡಿವೆ. ಸೋವಿಯತ್ ಒಕ್ಕೂಟದ ಪತನಾನಂತರ ಭುಗಿಲೆದ್ದ ಅಮೆರಿಕಾದ ಸ್ವೇಚ್ಛಾಚಾರ ಈಗ ಪರಾಕಾಷ್ಠೆ ಮುಟ್ಟಿದೆ. ಜಗತ್ತಿನ ನಂಬರ್ ಒನ್ ಭಯೋತ್ಪಾದಕ ರಾಷ್ಟ್ರವಾಗಿರುವ ಅಮೆರಿಕಾ ಇತರ ರಾಷ್ಟ್ರಗಳಿಗೆ ನಿಶಸ್ತ್ರೀಕರಣದ ಬಗ್ಗೆ ನೀತಿ ಪಾಠ ಹೇಳುವ ಭಂಡತನ ತೋರುತ್ತಿರುವುದು ಹಾಸ್ಯಸ್ಪದವಾಗಿದೆ. ಹಿರೋಷಿಮಾ-ನಾಗಸಾಕಿಗಳ ಮೇಲೆ ಅಣ್ವಸ್ತ್ರ ಪ್ರಯೋಗಿಸಿ ಲಕ್ಷಾಂತರ ಮಂದಿಯ ಮಾರಣಹೋಮ ಮಾಡಿದ, ವಿಯೆಟ್ನಾಂ ಮತ್ತು ಕಾಂಬೋಡಿಯಾ ಮೇಲೆ ರಾಸಾಯನಿಕ ಅಸ್ತ್ರಗಳನ್ನು ಬಳಸಿ, ಜೀವಜಾಲವನ್ನೇ ಸರ್ವನಾಶ ಮಾಡಿದ ಅಮೆರಿಕಾ, ಇಂಥ ಮಾತುಗಳನ್ನಾಡಲು ಬಿಟ್ಟಿರುವುದೇ ನಮ್ಮ ನಡುವಿನ ಘೋರ ದುರಂತವಾಗಿದೆ.

ನಾಗರಿಕ ಸಮಾಜ ನಾಚಿಕೆಯಿಂದ ತಲೆ ತಗ್ಗಿಸುವಂತೆ ವರ್ತಿಸುತ್ತಿರುವ ಅಮೆರಿಕಾದ ಈ ಯುದ್ಧೋನ್ಮಾದತೆ ಜಗತ್ತಿನ ಶಾಂತಿಗೆ ಬಹು ದೊಡ್ಡ ಶತ್ರುವಾಗಿದೆ. ಜಾಗತೀಕರಣ, ಖಾಸಗೀಕರಣ, ಉದಾರೀಕರಣ ಮುಂತಾದ ಬಂಡವಾಳ ಶಾಹಿ ಮಂತ್ರಗಳ ಮೂಲಕ ಅಭಿವೃದ್ಧಿಶೀಲ ರಾಷ್ಟ್ರಗಳನ್ನು ದಿವಾಳಿ ಅಂಚಿಗೆ ತಂದು ನಿಲ್ಲಿಸಿರುವ ಅಮೆರಿಕಾ ತನ್ನ ಕಪಿಮುಷ್ಠಿಗೆ ಸಿಕ್ಕದ ದೇಶಗಳನ್ನು ಭಯೋತ್ಪಾದನೆ ಹೆಸರಿನಲ್ಲಿ ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿರುವುದು ಅತ್ಯಂತ ಹೇಯವಾಗಿದೆ. ಯುದ್ಧಾನಂತರ ಇರಾಕನ್ನು ಪುನರ್ ನಿರ್ಮಿಸುವುದಾಗಿ ಮಾತಾಡುತ್ತಿರುವ ಅಮೆರಿಕಾ, ಇದಕ್ಕಾಗಿ ವಿಶ್ವಸಂಸ್ಥೆಯ ನೆರವನ್ನು ತಿರಸ್ಕರಿಸುವುದಾಗಿಯೂ ಹೇಳಿದೆ. ನಿರ್ನಾಮ ಮಾಡಿದ ಮೇಲೆ ನಿರ್ಮಾಣ ಮಾಡಲೇಬೇಕು! ಅಮೆರಿಕಾ ಮತ್ತು ವಿಶ್ವಸಂಸ್ಥೆಯ ಈ ವರ್ತನೆಗಳು ರಾಕ್ಷಸ ಹೇಳಿದ ಮೋಕ್ಷದ ಪಾಠದಂತಿವೆ.

* * *

ಈ ಬಾರಿಯ 'ಸಂವಾದ' ಅಂಬೇಡ್ಕರ್ ವಿಶೇಷಾಂಕವಾಗಿ ಹೊರಬರುತ್ತಿದೆ. ಅತ್ಯಂತ ಕಡಿಮೆ ಅವಧಿಯಲ್ಲಿ ವಿಶೇಷಾಂಕ ತರಲು ನಿರ್ಧರಿಸಿ ನಾವು ತಪ್ಪು ಮಾಡಿದೆವೇನೋ ಅನಿಸುತ್ತಿದೆ. ನಾವು ಅಂದುಕೊಂಡಂತೆ ವಿಶೇಷಾಂಕವನ್ನು ಸಿದ್ಧಪಡಿಸಲಾಗಿಲ್ಲ. ಅಂಬೇಡ್ಕರ್ ತತ್ವ ಸಿದ್ಧಾಂತಗಳ ಬಗ್ಗೆ ವಿಶ್ಲೇಷಣಾತ್ಮಕ ಬರಹಗಳನ್ನು ಪ್ರಕಟಿಸುವ ನಮ್ಮ ಆಸೆ ಕಡೆಗೂ ಪೂರ್ಣವಾಗಿ ಈಡೇರಲಿಲ್ಲ. ಲೇಖನಗಳನ್ನು ಕೊಡಲು ಒಪ್ಪಿದ ಜನ ಕಡೇ ಗಳಿಗೆಯಲ್ಲಿ ಕೈ ಕೊಟ್ಟರು. ಹಾಗಾಗಿ ಅಂಬೇಡ್ಕರ್ ಅವರ ಸ್ವಂತ ಬರವಣಿಗೆಗಳಲ್ಲೇ ವೈವಿಧ್ಯವಾದ ಕೆಲಸವನ್ನು ಆಯ್ದು ಇಲ್ಲಿ ಪ್ರಕಟಿಸಿದ್ದೇವೆ. ಕೆಲವು ವಿಶ್ಲೇಷಣಾತ್ಮಕ ಲೇಖನಗಳೂ ಇವೆ.

ಅಂಬೇಡ್ಕರ್ ನಮಗೆ ಇಂದು ಎಷ್ಟು ಪ್ರಸ್ತುತ ಎಂಬ ಪ್ರಶ್ನೆ ನನ್ನನ್ನು ಗಾಢವಾಗಿ ಕಾಡುತ್ತಿದೆ. ಕೊಳೆತು ಹೋಗುತ್ತಿದ್ದ ಭಾರತೀಯ ಸಮಾಜಕ್ಕೆ ಹೊಸ ಚೈತನ್ಯ ನೀಡಿದ ಅಂಬೇಡ್ಕರ್ ಚಿಂತನೆಗಳು ಈಗ ಮಸುಕಾಗುತ್ತಿವೆ. ಅಂಬೇಡ್ಕರ್ ಚಿಂತನೆಗಳ ಫಲವಾಗಿ ಹುಟ್ಟಿದ ದಲಿತ ಜಾಗೃತಿ ಇಂದು ಜಾತಿ ಶಕ್ತಿಯಾಗಿ ಪರಿವರ್ತನೆಯಾಗುತ್ತಿದೆ. ಮತೀಯ ಶಕ್ತಿಗಳ ತಾಳಕ್ಕೆ ಹೆಜ್ಜೆ ಹಾಕುವ ದುರಂತ ಎದುರಾಗುತ್ತಿದೆ. ಅಂಬೇಡ್ಕರ್ ಅವರನ್ನು ನಮ್ಮ ನಾಯಕನೆಂದು ಒಪ್ಪಿಕೊಂಡಿದ್ದ ದಲಿತರಲ್ಲಿ ವಿವಿಧ ಜಾತಿ ಜನಾಂಗಗಳ ಹೊಸ ನಾಯಕರು ಸೃಷ್ಟಿಯಾಗಿ ಅಂಬೇಡ್ಕರ್ ಅವರನ್ನು ಒಂದು ಜಾತಿಯ ಕುಬ್ಜ ನಾಯಕನನ್ನಾಗಿಸುವ ಪಿತೂರಿ ನಡೆಯುತ್ತಿದೆ. ಅಂಬೇಡ್ಕರ್ ಪ್ರತಿಮೆಗೆ ದಲಿತರೇ ಅಪಮಾನ ಮಾಡುತ್ತಿದ್ದಾರೆ. ಜಗತ್ತಿನ ಮಹಾ ದಾರ್ಶನಿಕರ ಸಾಲಿನಲ್ಲಿರುವ ಅವರನ್ನು ದಲಿತರೇ ಹೀಗೆ ಹೀಗಳೆಯುತ್ತಿರುವುದರ ಹಿಂದಿನ ಪಿತೂರಿ ಉಪೇಕ್ಷೆ ಮಾಡುವಂಥದ್ದಲ್ಲ.

ಅಂಬೇಡ್ಕರ್ ವಾದದ ಪುನರ್ ವ್ಯಾಖ್ಯಾನ ಇಂದು ತುರ್ತಾಗಿ ಆಗಬೇಕಾಗಿದೆ. 'ಸರ್ವ ಸಮಸ್ಯೆಗಳಿಗೂ ಅಂಬೇಡ್ಕರ್ ಅವರೇ ಮದ್ದು' ಅನ್ನುವ ಕೆಲವು ದಲಿತ ಚಿಂತಕರ ವಿಚಾರದ ಬಗ್ಗೆ ಕೂಡ ಚರ್ಚೆ ನಡೆಯಬೇಕಾಗಿದೆ. ಇಂದಿನ ಸಾಮಾಜಿಕ ಸಂದರ್ಭದಲ್ಲಿ ಬುದ್ಧನ ಪ್ರೀತಿ, ಬಸವನ ನೀತಿ, ಗಾಂಧಿಯ ನಿಷ್ಠುರತೆ, ಅಂಬೇಡ್ಕರರ ಛಲ, ಲೋಹಿಯಾರ ವಿವೇಕ ಬೆರೆತ ಹೊಸ ಆಲೋಚನಾ ಕ್ರಮವೊಂದರ ಸಾಧ್ಯತೆ ಬಗ್ಗೆ ಕೂಡ ಚಿಂತಿಸಬೇಕಾದ ಅಗತ್ಯವಿದೆ. ವಿಚಾರಶೂನ್ಯವಾಗುತ್ತಿರುವ ಸಮಾಜ ಈ ದಿಕ್ಕಿನಲ್ಲಿ ಹೆಜ್ಜೆ ಇರಿಸಲೆಂದು ಹಾರೈಸುತ್ತೇನೆ.

○ ಇಂದೂಧರ ಹೊನ್ನಾಪುರ
ಸಂಪಾದಕ



ಪಾವಗಡದ ವಿಧವೆ ಆಂಧ್ರಕ್ಕೆ ಮಾರಾಟ : 48 ಸಾವಿರಕ್ಕೆ ಖರೀದಿ

ತುಮಕೂರು, ಮಾ. 25 : ವಿಧವೆಯೊಬ್ಬಳನ್ನು 48 ಸಾವಿರ ರೂ.ಗಳಿಗೆ ಆಂಧ್ರಪ್ರದೇಶದ ರಾಮಗಿರಿಯ ವ್ಯಾಪಾರಿಯೊಬ್ಬನಿಗೆ ಮಾರಾಟ ಮಾಡಿರುವ ಘಟನೆ ಪಾವಗಡದಲ್ಲಿ ಕುತೂಹಲ ಕೆರಳಿಸಿದೆ.

ಪೆನ್ನಗೊಂಡ ತಾಲ್ಲೂಕಿನ ರಾಮಗಿರಿಯಲ್ಲಿ ಬುಟ್ಟಿ, ಚಂದ್ರಿಕೆ, ಮಂಕರಿ ಇತ್ಯಾದಿ ಬಿದಿರಿನ ವಸ್ತುಗಳನ್ನು ಮಾರಾಟ ಮಾಡುವ ಪೆದ್ದಮೋದಲೇಟಿ ಎಂಬಾತ 37 ವರ್ಷದ ಮುತ್ಯಾಲಮ್ಮ ಎಂಬಾಕೆಯನ್ನು 48 ಸಾವಿರ ರೂ.ಗಳಿಗೆ ಖರೀದಿಸಿದ್ದನೆಂದು ತಿಳಿದು ಬಂದಿದೆ.

ಮುತ್ಯಾಲಮ್ಮನ ಮೃತ ಪತಿಯ ಹಿರಿಯ ಸಹೋದರ ವ್ಯಾಪಾರಿ ಪೆದ್ದ ಮೊದಲಿಗ ಕಳೆದ 6-7 ದಿನಗಳ ಹಿಂದೆ ಮಾರಾಟ ಮಾಡಿದ್ದನು. ಈ ಸಂಬಂಧ ರಾಜಕೀಯ ವ್ಯಕ್ತಿಗಳ ಪ್ರವೇಶದಿಂದ ಇಡೀ ಘಟನೆ ಅತ್ಯಂತ ಕುತೂಹಲ ಮೂಡಿಸಿದೆ. ಪಾವಗಡ ಪಟ್ಟಣದ ರೆಡ್ಡಿ ಕಾಲೋನಿಯ ಮುತ್ಯಾಲಮ್ಮನನ್ನು ಸುಮಾರು ವರ್ಷಗಳ ಹಿಂದೆ ಪೆನಗೊಂಡ ತಾಲ್ಲೂಕಿನ ರಾಮಗಿರಿಗೆ ವಿವಾಹ ಮಾಡಿ ಕೊಡಲಾಗಿತ್ತು. ಆದರೆ ಆಕೆ ತನ್ನ ಗಂಡ ಸತ್ತ ನಂತರ ಮತ್ತೆ ತವರು ಮನೆಗೆ ವಾಪಸಾಗಿದ್ದಳು. ಕುಂಚಲರು ಜಾತಿಗೆ ಸೇರಿದ ಮುತ್ಯಾಲಯಮ್ಮ ಬಡ ಕುಟುಂಬದವರಾಗಿದ್ದು, ಪಾವಗಡ ಪಟ್ಟಣದಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದಾಳೆ.

ಮುತ್ಯಾಲಮ್ಮನ ಮೃತ ಗಂಡನ ಹಿರಿಯ ಸಹೋದರ ಕುಂಚಲರು ಜಾತಿಗೇ ಸೇರಿ ವ್ಯಾಪಾರಿ ಪೆದ್ದ ಮೊದಲೇಟಿಗೆ 48ಸಾವಿರ ರೂ.ಗಳಿಗೆ ಆಕೆಯನ್ನು ಮಾರಿದ್ದರಿಂದ ನಮ್ಮೊಂದಿಗೆ ನೀನು ಬರಬೇಕೆಂದು ಒತ್ತಾಯಿಸಿದರು. ಆದರೆ ಆಕೆ ನಿರಾಕರಿಸಿ, 'ನನ್ನನ್ನು ಮಾರುವ ಅಥವಾ ಕೊಳ್ಳುವ ಅಧಿಕಾರ ಯಾರಿಗೂ ಇಲ್ಲ ಆದ್ದರಿಂದ ನಾನು ನಿಮ್ಮೊಂದಿಗೆ ಬರುವುದಿಲ್ಲ' ಎಂದು ತಿರಸ್ಕರಿಸಿದಳು. ಆದರೆ ಅವರು ಆಕೆಯನ್ನು ಬಲವಂತದಿಂದ ಕರೆದು ಕೊಂಡು ಹೋದರು.

(ಸಂಯುಕ್ತ ಕರ್ನಾಟಕ)

ದೇವಸ್ಥಾನದಲ್ಲಿ ಊಟಕ್ಕೆ ಕುಳಿತ ದಲಿತರನ್ನು ಎಬ್ಬಿಸಿದರು

ಉಪ್ಪಿನಂಗಡಿ, ಮಾ. 17 : ದೇವಸ್ಥಾನದ ಬ್ರಹ್ಮಕಳಶೋತ್ಸವದ ನಿಮಿತ್ತದ ಸಾರ್ವಜನಿಕ ಅನ್ನಸಂತರ್ಪಣೆ ಕಾರ್ಯಕ್ರಮದಲ್ಲಿ ಊಟಕ್ಕೆ ಕುಳಿತ ದಲಿತರನ್ನುಹೊರದಬ್ಬಿ ಜಾತಿ ನಿಂದನೆ ಮಾಡಿ ಅವಮಾನಿಸಿದ ಘಟನೆಯೊಂದು ನೆಲ್ಯಾಡಿ ಸಮೀಪದ ನಿಡ್ಲೆ ಎಂಬಲ್ಲಿಂದ ವರದಿಯಾಗಿದೆ.

ಬ್ರಹ್ಮಕಲಶೋತ್ಸವದ ಸಂದರ್ಭ ಸಾರ್ವಜನಿಕ ಅನ್ನಸಂತರ್ಪಣೆಯಲ್ಲಿ ದಲಿತರು ಊಟಕ್ಕೆ ಕುಳಿತಾಗ ಸ್ಥಳೀಯರಾದ ರಘುರಾಮರಾವ್ ಧ್ವನಿವರ್ಧಕದ ಮೂಲಕ ಜಾತಿಯ ಹೆಸರನ್ನು ಹೇಳಿ ಊಟಕ್ಕೆ ಕುಳಿತ ಇವರನ್ನೆಲ್ಲಾ ಎಬ್ಬಿಸುವಂತೆ ಕರೆ ನೀಡಿದರೆಂದೂ, ಅದರಂತೆ ಸ್ವಯಂ ಸೇವಕರು ಊಟಕ್ಕೆ ಕುಳಿತಿದ್ದವರನ್ನು ಎಬ್ಬಿಸಿ ಹೊರದಬ್ಬಿದರೆನ್ನಲಾಗಿದೆ. ಊಟಕ್ಕೆ ಕೈ ಹಾಕುತ್ತಿದ್ದ ಎಳೆಯ ಮಕ್ಕಳನ್ನು, ಮಹಿಳೆಯರನ್ನು ಎಬ್ಬಿಸಿ ಅವಮಾನವೀಯವಾಗಿ ಹೊರಗೆ ಕಳುಹಿಸಿರುವುದಾಗಿ ದೂರಿನಲ್ಲಿ ಆರೋಪಿಸಲಾಗಿದೆ.

ಆರೋಪಿಗಳಾದ ರಘುರಾಮರಾವ್, ವೆಂಕಟಪ್ಪರಾವ್, ಜಿನ್ನಪ್ಪ ಗೌಡ, ನಾರಾಯಣಗೌಡ, ಧರ್ಮಪ್ಪಗೌಡ ಎಂಬುವರು ಸಾರ್ವಜನಿಕ ಅನ್ನ ಸಂತರ್ಪಣೆ ಕಾರ್ಯಕ್ರಮದಲ್ಲಿ ಊಟ ಮಾಡಲು ಬಿಡದೆ ಜಾತಿ ನಿಂದನೆ ಮಾಡಿ ಹಲ್ಲೆ ಮಾಡಿದ್ದಾರೆ ಎಂದು ನಿಡ್ಲೆಯ ದೇಜಪ್ಪ ನಲ್ಕೆ ಎಂಬುವರು ಉಪ್ಪಿನಂಗಡಿ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ.

(ಜನವಾಹಿನಿ)

ಸವರ್ಣೀಯ ಯುವತಿ ಪ್ರೀತಿಸಿದ ದಲಿತ ಯುವಕನ ಮನೆಗೆ ಬೆಂಕಿ

ಮಾಲೂರು, ಏ. 4: ಸವರ್ಣೀಯ ಹುಡುಗಿಯೊಬ್ಬಳನ್ನು ಪ್ರೀತಿಸಿದ ದಲಿತ ಕುಟುಂಬದ ಮನೆಯೊಂದಕ್ಕೆ ಗುರುವಾರ ರಾತ್ರಿ ಬೆಂಕಿ ಹಚ್ಚಿರುವ ಘಟನೆ ಮಾಲೂರು ತಾಲ್ಲೂಕಿನ ಮಾಸ್ತಿ ಪೊಲೀಸ್ ಠಾಣೆಯ ಕೊಮ್ಮನಹಳ್ಳಿ ಗ್ರಾಮದಲ್ಲಿ ಸಂಭವಿಸಿದೆ.

ಕೊಮ್ಮನಹಳ್ಳಿ ಗ್ರಾಮದ ವೆಂಕಟೇಶ್ ಎಂಬ ಯುವಕ ಅದೇ ಗ್ರಾಮದ ಸವರ್ಣೀಯರ ಯುವತಿಯೊಬ್ಬಳನ್ನು ಪ್ರೀತಿಸುತ್ತಿದ್ದ ಇದರಿಂದ ಕೆರಳಿದ ಸವರ್ಣೀಯರು ರಾತ್ರಿ 12-00 ಘಂಟೆ ಸಮಯದಲ್ಲಿ ವೆಂಕಟೇಶ್ ಕುಟುಂಬಕ್ಕೆ ಸೇರಿದ ಹುಲ್ಲು ಮನೆಗೆ ಬೆಂಕಿ ಹಚ್ಚಿದ್ದಾರೆ. ಕೂಡಲೇ ಅಗ್ನಿ ಶಾಮಕದಳ ಧಾವಿಸಿ ಬೆಂಕಿಯನ್ನು ನಂದಿಸಿದರು.

ಯಾವುದೇ ಜೀವ ಹಾನಿಯಾಗಿಲ್ಲ. ಆದರೆ ಬೆಂಕಿಯಿಂದಾಗಿ ಕೆಲವು ಕುರಿ ಮತ್ತು ಮೇಕೆಗಳು ಸತ್ತಿವೆ. ಆಪಾದಿತರು ವೆಂಕಟೇಶಪ್ಪನ ತಂದೆಯ ಮೇಲೆ ಹಲ್ಲೆ ನಡೆಸಿದ್ದಾರೆ. ಎಸ್ಪಿ ಸೈಯ್ಯದ್ ಉಲ್ಫತ್ ಹುಸೇನ್ ಸ್ಥಳಕ್ಕೆ ಭೇಟಿ ನೀಡಿದ್ದರು.

(ಜನವಾಹಿನಿ)

ರಾಜಧಾನಿಯ ಸರ್ಕಾರಿ ಸಂಸ್ಕೃತ ಕಾಲೇಜಿನಲ್ಲಿ ಅಸ್ಪೃಶ್ಯತೆ

ಬೆಂಗಳೂರು, ಮಾ. 10 : ಸರ್ಕಾರಿ ಕಾಲೇಜೊಂದರಲ್ಲಿ ಅಸ್ಪೃಶ್ಯತೆ, ಜಾತೀಯತೆ ಜಾರಿಯಲ್ಲಿದೆ ಎನ್ನುವುದು ನಿಮಗೆ ಅಚ್ಚರಿಯಾಗಬಹುದಲ್ಲವೇ...!?

ಅಚ್ಚರಿಯಾದರೂ ಕಟು ಸತ್ಯ. 110 ವರ್ಷಗಳ ಇತಿಹಾಸ ಹೊಂದಿರುವ ಕಾಲೇಜೊಂದು ಅಸ್ಪೃಶ್ಯತೆ ಮತ್ತು ಜಾತೀಯತೆಯನ್ನು ಕಾಯ್ದುಕೊಂಡು ಬಂದಿರುವುದು ಹೈಟೆಕ್ ಯುಗಕ್ಕೆ ಕಪ್ಪುಮಸಿಯೇ ಸರಿ. ಆ ಕಾಲೇಜಿರುವುದು ಹೈಟೆಕ್ ನಗರದ ಹೃದಯಭಾಗದಲ್ಲಿದೆ ಎಂದರೆ ಇನ್ನೂ ಅಚ್ಚರಿಯಾಗಬಹುದು. ಆ ಕಾಲೇಜಿನ ಹೆಸರು ಬೆಂಗಳೂರಿನ ಸರ್ಕಾರಿ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು ಎಂದು.

ಸಂಸ್ಕೃತ ಮತ್ತು ವೇದ ಉಪನಿಷತ್ತು ಕೇವಲ ಒಂದು ವರ್ಗದ ಸ್ವತ್ತನ್ನಾಗಿಸಿಕೊಂಡಿರುವ ಕಾಲೇಜಿನ ಅಧ್ಯಾಪಕ ವರ್ಗ ಅಸ್ಪೃಶ್ಯತೆ, ಜಾತೀಯತೆಯ ರಕ್ಷಕರೆಂಬಂತೆ ವರ್ತಿಸುತ್ತಿದ್ದರೂ ಸರ್ಕಾರ ಇಲ್ಲಿಯವರೆಗೆ ಯಾವುದೇ ಕ್ರಮಕೈಗೊಳ್ಳದಿರುವುದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದ ಮಕ್ಕಳ ಭವಿಷ್ಯಕ್ಕೆ ಅಪಾಯ.

ರಾಜ್ಯ ಸರ್ಕಾರದಿಂದ ಪ್ರತಿ ವರ್ಷ 50 ಲಕ್ಷ ರೂ. ಅನುದಾನ ಪಡೆಯುವ ಈ ಕಾಲೇಜು ಸರ್ಕಾರದ ನೀತಿಯನ್ನೇ ಮುರಿದು ಬಂದಿರುವ ಇತಿಹಾಸವೇ ಶಿಕ್ಷಣ ನೀತಿಗೆ ಆತಂಕ. ಈ ಕಾಲೇಜಿನಿಂದ ಒಬ್ಬನೇ ಒಬ್ಬ ಬ್ರಾಹ್ಮಣೇತರ ವಿದ್ಯಾರ್ಥಿ ವೇದವಿದ್ವಾಂಸನಾಗಿ ಹೊರಬಂದಿಲ್ಲ. ದಲಿತರು, ಹಿಂದುಳಿದವರು ಮತ್ತು ಶೋಷಿತ ವರ್ಗದ ಮಕ್ಕಳು ತೀವ್ರ ಆಸಕ್ತಿಯಿಂದ ಸಂಸ್ಕೃತ-ವೇದಾಧ್ಯಯನಕ್ಕೆಂದು ಹೋದರೆ "ಕಿರುಕುಳ"ವೇ ಅವರಿಗೆ ದಿನನಿತ್ಯದ ಪಾಠವಾಗಿದೆ. ಕೆಲ ವರ್ಷಗಳ ಹಿಂದಷ್ಟೇ ಇಲ್ಲಿ ಓದುತ್ತಿದ್ದ ಗಂಗಾಧರ ಎಂಬ ಪರಿಶಿಷ್ಟ ಜಾತಿ ವಿದ್ಯಾರ್ಥಿಗೆ ಮಾನಸಿಕ ಹಿಂಸೆಯಷ್ಟೇ ಅಲ್ಲ, ದೈಹಿಕ ಹಲ್ಲೆಯೂ ಮಾಡಲಾಯಿತು ಎಂಬುದು ಇಲ್ಲಿನ ಶೋಷಿತ ವರ್ಗದ ವಿದ್ಯಾರ್ಥಿಗಳ ದೂರು.

(ಜನವಾಹಿನಿ)

ಒಡೆದು ಆಳುವ ನೀತಿಯ ಒಳಸುಳಿಗಳು

ಇತ್ತೀಚೆಗೆ ಅಬ್ಬರ ಹೆಚ್ಚಿಸಿಕೊಳ್ಳುತ್ತಿರುವ "ಹಿಂದುತ್ವ"ದ ಮುಂಚೂಣಿ ನಾಯಕರ ಅಬ್ಬರದಲ್ಲಿ ನಮ್ಮ "ಪ್ರಧಾನ ಮಂತ್ರಿಯವರೇ ದಿನಕ್ಕೊಂದೊಂದು "ಹೇಳಿಕೆ", 'ವ್ಯಾಖ್ಯಾನ', 'ಸಮಜಾಯಿಷಿ' ನೀಡಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆಯೆಂದರೆ, ಈ ಹಿಂದೂವಾದಿಗಳ" ಸಾಮರ್ಥ್ಯ ಅವರ "ಹಿಡನ್ ಅಜೆಂಡಾದಿಂದ" ಈಗ ಎಷ್ಟರಮಟ್ಟಿಗೆ ಸಾರ್ವಜನಿಕ ಗರ್ಜನೆ ಆಗಿದೆ ಎನ್ನುವುದು ಎಂತಹ ಮಾನವಂತರಿಗೂ ಆತಂಕ ಮೂಡಿಸುವ ವಿಷಯ.

ಈ ಹಿಂದೂವಾದಿಗಳು ಇಷ್ಟರಮಟ್ಟಿಗೆ ಬೆಳೆಯಲು ಮುಖ್ಯ ಕಾರಣ ಬ್ರಿಟಿಷರಿಂದ ಹಿಂದೂವಾದಿಗಳು ದೇಣಿಗೆ ಪಡೆದಿದ್ದೋ? ಅಥವಾ ಪ್ರತಿಯುಗದಲ್ಲಿ ಕಾಲಘಟ್ಟದಲ್ಲಿ ಆಡಳಿತಶಾಹಿ ವರ್ಗಗಳಿಗೆ ಸಲಹೆಗಾರರಾಗಿ ತಮ್ಮ ಪೀಠಗಳನ್ನು ಭದ್ರಪಡಿಸಿಕೊಳ್ಳುವ ದೃಷ್ಟಿಯಿಂದ ಇರುವ ವ್ಯವಸ್ಥೆಯನ್ನು ಗೊಂದಲವಾಡಿ ವಿಭಜಿಸಿ ಮೇಲ್ನೋಟಕ್ಕೆ ಅತ್ಯಂತ ಗಂಭೀರವೆನ್ನುವ ಕೋಲಾಹಲಗಳನ್ನು ಸೃಷ್ಟಿಮಾಡುತ್ತಾ ತಮ್ಮ ಸ್ವಹಿತ ಕಾಪಾಡಿಕೊಳ್ಳುತ್ತಿದ್ದ ಒಂದು ವರ್ಗ ಸದಾಕಾಲ ಸಮಾಜದ ವ್ಯವಸ್ಥೆಯಲ್ಲಿ ಒಡಕು ಉಂಟುಮಾಡುವುದರಲ್ಲಿ ಜಾಗೃತವಾಗಿತ್ತು ಎನ್ನುವುದಕ್ಕೆ ಅನೇಕ ಉದಾಹರಣೆಗಳು ಐತಿಹಾಸಿಕವಾಗಿ ನಮಗೆ ದೊರೆಯುತ್ತದೆ.

ತೀರಾ ಇತ್ತೀಚಿನ ಮಹತ್ವದ ಘಟನೆ ಹಿಂದುಳಿದ ವರ್ಗಗಳ ಹಾಗೂ ದಲಿತರ ನಡುವಿನ ಭಿನ್ನಾಭಿಪ್ರಾಯಗಳನ್ನು ಬಳಸಿಕೊಳ್ಳುತ್ತಾ ತನ್ನ ಹಿಂದುತ್ವದ ಅಲೆಯಲ್ಲಿ ದಲಿತರನ್ನು ಆಕರ್ಷಿಸುತ್ತಿರುವ ಕಾರ್ಯತಂತ್ರ, ಅದೇ ರೀತಿ ಹಿಂದೂ ಧರ್ಮದಲ್ಲಿದ್ದೂ ಅಮಾನವೀಯ ಘಟನೆಗಳನ್ನು ಎದುರಿಸುತ್ತಿರುವ ದಲಿತ ಜನಾಂಗ ಬೇರೆ ಧರ್ಮವನ್ನು ಅಪ್ಪಿಕೊಳ್ಳಲು ಮುಂದಾದಾಗ ಅವರ ವ್ಯಕ್ತಿಗತ ಸ್ವಾತಂತ್ರ್ಯವನ್ನು ಹರಣ ಮಾಡುವಂತಹ ಪೋಟೋದಂತಹ ಕಾಯಿದೆಯನ್ನು ಜಾರಿಗೊಳಿಸುವ ಹುನ್ನಾರ.

'ಮೀಸಲಾತಿಯ' ಹೆಸರೇ ನಾಶವಾಗುವಂತೆ ಸರ್ಕಾರದ ಆದಿಪತ್ಯದಲ್ಲಿರುವ ಎಲ್ಲಾ ಸಂಸ್ಥೆಗಳನ್ನು ವಿದೇಶಿಯರಿಗೆ ಮಾರಿಕೊಳ್ಳುತ್ತಿರುವ ನಯವಂಚಕ ಸರ್ಕಾರ ದಲಿತರ, ಹಿಂದುಳಿದವರ, ಮೂಲಭೂತ ಸಾಮಾಜಿಕ ನ್ಯಾಯಕ ಕಲ್ಪನೆಗೆ ಕೊಡಲಿ ಬೀಸಿದೆ. ದೇಶದ ಪ್ರತಿಯೊಂದು ಕೆಲಸವೂ ಮಾಹಿತಿ ತಂತ್ರಜ್ಞಾನದಿಂದಲೇ ನಡೆಯುತ್ತದೆ ಎಂಬ ಭ್ರಮೆ ಹುಟ್ಟಿಸಿ ಕೇವಲ ಮೇಲ್ಜಾತಿಯ ಹಾಗೂ ತಮ್ಮ ಸರ್ಕಾರದ, ಪಕ್ಷದ ಸ್ವಹಿತ ಕಾಪಾಡುವ ವರ್ತಕರು, ಕೈಗಾರಿಕೋದ್ಯಮಿಗಳ ಸ್ವಹಿತವನ್ನು ಮಾತ್ರ ಕಾಪಾಡುವಲ್ಲಿ ಯಶಸ್ವಿಯಾಗಿದೆ.

ಒಂದು ಕಡೆ ದಲಿತರಲ್ಲಿ ಎಡಗೈ-ಬಲಗೈ ವಿಭಜನೆ, ಮುಸ್ಲಿಮರಲ್ಲಿ ಒಳಪಂಗಡಗಳ ನಡುವೆ ಸಂಘರ್ಷ, ಹಿಂದುಳಿದ ವರ್ಗ ಹಾಗೂ ದಲಿತರ ನಡುವೆ ಸಂಘರ್ಷ ಇದೆಲ್ಲದರ ಮೇಲೆ ಹಚ್ಚಡ ಹಾಸಿದಂತೆ "ಹಿಂದುತ್ವ"ದ ಅಬ್ಬರ ಈ ರಣರಂಗದಲ್ಲಿ ಮುಖಾಮುಖಿಯಾಗುತ್ತಿರುವ ನಿರುದ್ಯೋಗಕ್ಕೆ, ಬಡತನಕ್ಕೆ ರೋಸಿ ಹೋದ ಸಾವಿರಾರು ಶೂದ್ರರು ದಲಿತರೂ ಹಾಗೂ ಸಮಾಜದ ಮುಖ್ಯವಾಹಿನಿಯಿಂದ ನಿರಂತರವಾಗಿ ದೂರವಾಗುತ್ತಲಿರುವ ಅಲ್ಪಸಂಖ್ಯಾತರು.

ಸಾಮಾಜದಲ್ಲಿ ಜಾತೀಯತೆ ಎಂದಿಗಿಂತ ಹೆಚ್ಚಾಗುತ್ತಿದೆ. ಪ್ರತಿಯೊಂದು ಬಲಿಷ್ಠ ಜಾತಿಯೂ ಸಂಘಟಿತವಾಗುತ್ತಿದೆ. ಜಾತಿ ಚಲನಶೀಲ ವರ್ಗ ಎನ್ನುವ ಮಾತನ್ನು ಒಪ್ಪಿಕೊಳ್ಳಲೇ ಬೇಕಾದ ಇನ್ನೊಂದು ವಿಪರ್ಯಾಸ ಸನ್ನಿವೇಶವೆಂದರೂ ಬೆಳೆಯುತ್ತಿರುವ ಶ್ರೀಮಂತ "ಎನ್.ಆರ್.ಐ" ವರ್ಗ ಉದ್ಧಾರೀಕರಣದಿಂದ ಸಮಾನ ಅವಕಾಶಗಳು ಎಂದು ಸಾರುತ್ತಲೇ ಸೃಷ್ಟಿಸಿಕೊಂಡ ಅವಕಾಶಗಳನ್ನೆಲ್ಲಾ ತನಗೇ ಮಾತ್ರ ಎನ್ನುವ ಧೋರಣೆಯಲ್ಲಿ ಆರ್ಥಿಕ, ರಾಜಕೀಯ ಮಾತ್ರವೇಕೆ ಕಲೆ, ಸಂಸ್ಕೃತಿ, ಸಾಹಿತ್ಯ ಕ್ಷೇತ್ರಗಳನ್ನೆಲ್ಲಾ ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಯಶಸ್ವಿಯಾದ ಈ ವರ್ಗ ಜಾಗತೀಕರಣದ ಹೆಸರಿನಲ್ಲಿ ಜಾಗೃತವಾಗುತ್ತಿರುವುದು ಬ್ರಾಹ್ಮಣಶಾಹಿ ವ್ಯವಸ್ಥೆ ಎನ್ನುವುದನ್ನು

(30ನೇ ಪುಟಕ್ಕೆ)



ಸಾಮಾಜದಲ್ಲಿ ಜಾತೀಯತೆ ಎಂದಿಗಿಂತ ಹೆಚ್ಚಾಗುತ್ತಿದೆ. ಪ್ರತಿಯೊಂದು ಬಲಿಷ್ಠ ಜಾತಿಯೂ ಸಂಘಟಿತವಾಗುತ್ತಿದೆ. ಜಾತಿ ಚಲನಶೀಲ ವರ್ಗ ಎನ್ನುವ ಮಾತನ್ನು ಒಪ್ಪಿಕೊಳ್ಳಲೇ ಬೇಕಾದ ಇನ್ನೊಂದು ವಿಪರ್ಯಾಸ ಸನ್ನಿವೇಶವೆಂದರೂ ಬೆಳೆಯುತ್ತಿರುವ ಶ್ರೀಮಂತ "ಎನ್.ಆರ್.ಐ" ವರ್ಗ ಉದಾರೀಕರಣದಿಂದ ಸಮಾನ ಅವಕಾಶಗಳು ಎಂದು ಸಾರುತ್ತಲೇ ಸೃಷ್ಟಿಸಿಕೊಂಡ ಅವಕಾಶಗಳನ್ನೆಲ್ಲಾ ತನಗೇ ಮಾತ್ರ ಎನ್ನುವ ಧೋರಣೆಯಲ್ಲಿ ಆರ್ಥಿಕ, ರಾಜಕೀಯ ಮಾತ್ರವೇಕೆ ಕಲೆ, ಸಂಸ್ಕೃತಿ, ಸಾಹಿತ್ಯ ಕ್ಷೇತ್ರಗಳನ್ನೆಲ್ಲಾ ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಯಶಸ್ವಿಯಾದ ಈ ವರ್ಗ ಜಾಗತೀಕರಣದ ಹೆಸರಿನಲ್ಲಿ ಜಾಗೃತವಾಗುತ್ತಿರುವುದು ಬ್ರಾಹ್ಮಣಶಾಹಿ ವ್ಯವಸ್ಥೆ ಎನ್ನುವುದನ್ನು ಅರ್ಥೈಸುವ ಯಾವ ಚಳುವಳಿಯಾಗಲಿ, ರಾಜಕೀಯ ಪಕ್ಷವಾಗಲಿ ಸಮರ್ಥವಾಗಿ ಹೇಳದೇ ಇರುವುದು ನಮ್ಮ ಜನರ ದುರಾದೃಷ್ಟವೇ ಅಥವಾ ಪರಿಸ್ಥಿತಿಯ ವಿಪರ್ಯಾಸವೇ? ತಿಳಿಯುತ್ತಿಲ್ಲ.

○ ಸುಜಾತಾ ಕುಮುಟಾ

ಅಂಬೇಡ್ಕರ್ ಜನ್ಮ ದಿನಾಚರಣೆ : ಕೆಲ ಅನಿಸಿಕೆಗಳು

> ನಾವು ಬಾಬಾರಿಗೆ ಸರಿಯಾದ ರೀತಿಯಲ್ಲಿ ಗೌರವ ಸಲ್ಲಿಸುವ ದಿಸೆಯಲ್ಲಿ ಮಾಡಬೇಕಾದುದು ಅವರ ಜನ್ಮ ದಿನವನ್ನು ಒಂದೇ ದಿನ ಆಚರಿಸುವುದು ಮತ್ತು ಅದನ್ನು ನಿಜವಾದ ಅರ್ಥದಲ್ಲಿ ಅಂದರೆ ಬಾಬಾ ಸಾಹೇಬರ ವ್ಯಕ್ತಿತ್ವ, ಅವರ ಚಿಂತನೆ ಮತ್ತು ಅವರು ನಮಗೆ ತೋರಿದ ಮಾರ್ಗಗಳಿಗೆ ಒತ್ತುಕೊಟ್ಟು ಅದನ್ನು ಗಂಭೀರವಾಗಿ ಆಚರಿಸುವುದು. ಒಂದೇ ದಿನ ಎಲ್ಲ ಕಡೆ ಲಕ್ಷೋಪಲಕ್ಷ ಜನ ಬಾಬಾ ಜನ್ಮದಿನ ಪುಣ್ಯತಿಥಿಗಳನ್ನು ಆಚರಿಸುವುದರ ಪರಿಣಾಮವನ್ನು ನೆನೆಸಿಕೊಂಡರೆ ಮೈ ಜುಮ್ಮೆನ್ನುತ್ತದೆ. ಇದು ಆಳುವವರು ದಲಿತರನ್ನು ಗಂಭೀರವಾಗಿ ಪರಿಗಣಿಸುವಂತೆ ಮಾಡೀತು.
>
> ○ ಎಸ್. ಮರಿಸ್ವಾಮಿ

ಏಪ್ರಿಲ್ ಹದಿನಾಲ್ಕು ಹತ್ತಿರವಾಗುತ್ತಿದ್ದಂತೆ ಬಾಬಾ ಸಾಹೇಬ್ ಅಂಬೇಡ್ಕರ್ ಜನ್ಮ ದಿನಾಚರಣೆ ಕಾಲ ಆರಂಭವಾಯಿತು. ಹಳ್ಳಿ, ಪಟ್ಟಣಗಳಲ್ಲಿ, ಗಲ್ಲಿ ಗಲ್ಲಿಗಳಲ್ಲಿ ಆಚರಣೆ ನಡೆಯುತ್ತವೆ. ಇದು ಮುಗಿಯಲು ಒಂದೆರಡು ತಿಂಗಳೇ ತೆಗೆದುಕೊಳ್ಳಬಹುದು. ನಿಜ ಹೇಳಬೇಕೆಂದರೆ ಇಂತಹ ಒಂದು ಸಭೆಯಲ್ಲಿ ಭಾಗವಹಿಸಲು ನನಗೆ ಈಗಲೇ ಆಹ್ವಾನ ಬಂದಿದೆ. ಬೆಂಗಳೂರಿನ ಒಂದು ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು ತಾವು ಪರೀಕ್ಷೆ ಮುಗಿಸಿ ತಮ್ಮ ತಮ್ಮ ಊರುಗಳಿಗೆ ತೆರಳರಿರುವುದರಿಂದ ಸ್ವಲ್ಪ ಮುಂಚಿತವಾಗಿಯೇ ಈ ಕಾಯಕ ನಿರ್ವಹಿಸಿ ಹೋಗುವುದಾಗಿ ತೀರ್ಮಾನಿಸಿದ್ದಾರೆ. ನಾನು "ಬೇರಾವುದೇ ಹೆಸರಿನಲ್ಲಿ ಕಾರ್ಯಕ್ರಮ ಮಾಡಿ; ಆದರೆ ಜನ್ಮ ದಿನಾಚರಣೆ ಎಂದು ಮಾತ್ರ ಮುಂಚಿತವಾಗಿ ಮಾಡಬೇಡಿ" ಎಂದಿರುವೆ. ಆದರೆ ಅವರು ನನ್ನ ಮಾತು ಕೇಳುತ್ತಾರೆಂಬ ನಂಬಿಕೆ ನನಗಿಲ್ಲ.

ಬಾಬಾ ಸಾಹೇಬ್ ಅಂಬೇಡ್ಕರ್ ದಲಿತರ, ಶೋಷಿತರ, ಮಾರ್ಗದಾತ; ಭಾಗ್ಯವಿಧಾತ. ಆ ಹೆಸರು ಕೇಳಿದ ತಕ್ಷಣ ಅವರು ಪುಳಕಗೊಳ್ಳುತ್ತಾರೆ. ದೇವರು ಸೋತಲ್ಲಿ ಬಾಬಾ ಸಾಹೇಬ್ ಜಯಶಾಲಿಯಾದರು. ತಮ್ಮೆಷ್ಟೋ ಪ್ರಾರ್ಥನೆಗಳಿಂದ ತಮ್ಮ ಸ್ಥಿತಿ ಉತ್ತಮವಾಗದಿದ್ದಾಗ, ತಮಗೆ ಹೋರಾಟದ ಮಂತ್ರ ಕಲಿಸಿ, ತಮ್ಮ ಸ್ಥಿತಿ ಉತ್ತಮಗೊಳಿಸಿದರು. ತಮ್ಮೆಲ್ಲಾ ಸ್ಥಾನಮಾನ, ಸಂಪತ್ತು ದೌಲತ್ತುಗಳೆಲ್ಲಾ ಆ ಹೋರಾಟದ ಫಲ ಎಂಬ ಅರಿವು ಅವರಿಗಿದೆ. ಹಿಂದುಳಿದ ಜನ ಇತರರಂತಲ್ಲ. ಎಲ್ಲ ಉಪಕಾರಗಳನ್ನೂ ನೆನಸಿಕೊಳ್ಳುವವರು ಕೃತಜ್ಞತಾ ಭಾವವುಳ್ಳವರು. ಹಾಗಾಗಿಯೇ ಬಾಬಾರ ಪೂಜೆಯೂ ನಡೆದಿದೆ. ಬೇಕೆಂದವರು ಬೇಕೆಂದಾಗ ಅವರ ಹುಟ್ಟು ಹಬ್ಬ, ಪುಣ್ಯತಿಥಿಗಳನ್ನು ಆಚರಿಸುತ್ತಾರೆ. ಇಲ್ಲದಿದ್ದವರನ್ನೆಲ್ಲಾ ಕರೆಯಿಸಿ ಭಾಷಣಗಳ ಏರ್ಪಾಡು ಮಾಡುತ್ತಾರೆ. ಬುದ್ಧಿವಂತಿಕೆಯ ಯಾವುದಾದರೂ ಮಾತು ಹೊರಟರೆ ಚಪ್ಪಾಳೆಯ ಸುರಿಮಳೆಗೈಯ್ಯುತ್ತಾರೆ. ನಂತರ ಏನೋ ಘನ ಉದ್ದೇಶ ಸಾಧಿಸಿದ ಧನ್ಯಭಾವದೊಂದಿಗೆ ತಂತಮ್ಮ ಮನೆಗಳಿಗೆ ತೆರಳಿ ತಮ್ಮ ತಮ್ಮ ಕೆಲಸಗಳಲ್ಲಿ ತೊಡಗುತ್ತಾರೆ. ಮತ್ತೆ ಅವರು ಎದ್ದೇಳುವುದು ಇಂತಹ ಆಚರಣೆ ಬಂದಾಗಲೇ.

ನಮಗೆ ಬೇಕಾಗಿರುವುದು ಇಂತಹ ಆಚರಣೆಯೇ? ಮೂವತ್ತು ಮೂರು ಕೋಟಿ ಹಿಂದೂ ದೇವತೆಗಳೊಡನೆ ಬಾಬಾರನ್ನೂ ಒಂದು ಮರಿ ದೇವತೆಯಾಗಿ ಮಾಡಿ ಕುಳ್ಳಿರಿಸುವುದೇ ನಮ್ಮ ಉದ್ದೇಶವೇ? ಬಾಬಾ ಅವರಾದರೂ ಇದನ್ನು ಬಯಸಿದ್ದರೇ? ವ್ಯಕ್ತಿ ಪೂಜೆಯನ್ನು ಮತ್ತೆ ಮತ್ತೆ ವಿರೋಧಿಸುತ್ತಿದ್ದ ಅವರಿಗೆ ಈ ಕುರುಡು ಆಚರಣೆಗಳಿಂದ ಏನಾಗಿರಬೇಡ? ನಾವು ಮಾಡುವ

ಆಚರಣೆಗಳು ಕುರುಡು ಕಾಣಿಕೆಗಳಾಗಿರದೆ ಅರಿವಿನ, ಸಹಜ ಧನ್ಯಭಾವದ, ಸಾಂಸ್ಕೃತಿಕ ನೆಲೆಯ, ಸಂಘಟನಾ ಶಕ್ತಿಯ ಕ್ರಿಯೆಗಳಾಗುವಂತೆ ನಿಯೋಜಿಸಲು ಸಾಧ್ಯವಿಲ್ಲವೇ?

ಯಾವುದೇ ಒಂದು ಆಚರಣೆಗೆ ಅನೇಕ ಉದ್ದೇಶಗಳುಂಟು. ಕೆಲವು ಮೇಲೆದ್ದು ಕಾಣುವಂತಹವು. ಮತ್ತೆ ಕೆಲವು ಅಷ್ಟು ಸ್ಪಷ್ಟವಲ್ಲದವು. ಅವು ಆಚರಣಾ ವಿಧಾನದಲ್ಲಿಯೆ ವಿಲೀನಗೊಂಡು ಒಂದು ಸಾಂಘಿಕ ಶಕ್ತಿಯ ಅನೇಕ ಆಶೋತ್ತರಗಳನ್ನು ತುಂಬುವಂತಹವಾಗಿರುತ್ತವೆ. ನಾವು ಹಬ್ಬಗಳನ್ನು ಆಚರಿಸುವಾಗ ಮತ್ತು ನಮ್ಮ ಇತರ ಅನೇಕ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಾಮಾಜಿಕ ರಾಜಕೀಯ ಆಶೋತ್ತರಗಳು ತುಂಬಿಕೊಂಡಿರುವುದನ್ನು ನಾವು ಗುರುತಿಸಬಹುದು. ಈ ಸಾಂಸ್ಕೃತಿಕ ನೆಲೆ ನಮ್ಮ ಸಾಮಾಜಿಕ ರಾಜಕೀಯ ಜೀವನವನ್ನು ರೂಪಿಸುವುದರಲ್ಲಿ ತುಂಬಾ ಸಹಾಯವಾಗುವ ಸಾಧ್ಯತೆಗಳೂ ಇವೆ. ಉದಾಹರಣೆಗೆ ಈ ಶತಮಾನದ ಆದಿ ಭಾಗದಲ್ಲಿ ನಮ್ಮ ಜನರಲ್ಲಿ ಭಾವನಾತ್ಮಕ ಸಂಘಟನೆಯನ್ನು ಉಂಟು ಮಾಡಲು ತಿಲಕರು ಗಣೇಶನ ಹಬ್ಬವನ್ನು ಮಹಾರಾಷ್ಟ್ರದ ಎಲ್ಲಾ ಭಾಗಗಳಲ್ಲೂ ವಿಜೃಂಭಣೆಯಿಂದ ಆಚರಿಸುವಂತೆ ಪ್ರೇರೇಪಿಸಿದ್ದು, ಅದು ಎಲ್ಲ ಕಡೆ ಹಾಗೇ ಹಬ್ಬಿದ್ದು, ನಾವೆಲ್ಲಾ ಕೇಳಿದ್ದೇವೆ. ಈ ಭಾವೈಕ್ಯತೆ ರಾಜಕೀಯ ಹೋರಾಟದಲ್ಲಿಯೂ ಸಹಾಯಕವಾಯಿತು.

ಯಾವುದೇ ಒಂದು ಹೋರಾಟವನ್ನು ರೂಪಿಸುವಾಗ ಅದಕ್ಕೆ ಒಂದು ಐತಿಹಾಸಿಕ, ಸೈದ್ಧಾಂತಿಕ ನೆಲೆ ಬೇಕಾಗುತ್ತದೆ. ಆ ಭೂಮಿಕೆ ಮೇಲೆ ಹೋರಾಟ ಬೆಳೆಯಬೇಕಾಗುತ್ತದೆ. ನಿಮಗೆ ತಿಳಿದಿರಬಹುದು. ನಮ್ಮ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ನಮ್ಮ ನಾಯಕರು ಇತಿಹಾಸದ ಮೂಲೆ ಮೂಲೆಗಳಲ್ಲಿ ಹುದುಗಿದ್ದ ಅನೇಕ ಸಣ್ಣ ಪುಟ್ಟ ಹೋರಾಟಗಾರರಿಗೆ ಜೀವ ತುಂಬಿ ಅವರಿಗೆ ರಾಷ್ಟ್ರವೀರರ ಪಟ್ಟ ಕಟ್ಟಿದರು. ಇತಿಹಾಸದ ಪುಟಗಳಲ್ಲಿ ಮರೆಯಾಗಿದ್ದ ಅನೇಕ ಸಣ್ಣಪುಟ್ಟ ಯುದ್ಧಗಳು ಸ್ವಾತಂತ್ರ್ಯ ಸಮರಗಳಾದವು. ವರ್ತಮಾನದಲ್ಲಿ ಒಂದು ಜನಾಂಗವನ್ನು ಪ್ರೋತ್ಸಾಹಿಸಿ, ಪ್ರಚೋದಿಸಿ, ಸ್ಫೂರ್ತಿಗೊಳಿಸಿ ಅದನ್ನು ಒಂದು ಗುರಿಯತ್ತ ಕೊಂಡೊಯ್ಯಲು ಇತಿಹಾಸದುದ್ದಕ್ಕೂ ಜನ ನಾಯಕರು ಇಂತಹ ಐತಿಹ್ಯಗಳನ್ನು ಕಟ್ಟುತ್ತಾ ಬಂದಿದ್ದಾರೆ. ತನ್ಮೂಲಕ ತಮ್ಮ ಗುರಿಯನ್ನೂ ಸಾಧಿಸಿಕೊಂಡಿದ್ದಾರೆ.

ಅನೇಕ ಜನಾಂಗಗಳಿಗೆ ತಮ್ಮ ಆಸೆ ಆಕಾಂಕ್ಷೆಗಳನ್ನು, ನಿಲುವು ನಿರ್ಧಾರಗಳನ್ನು ತೂಗು ಹಾಕಲು ಬೇಕಾದ ಒಂದು ಗೂಟದ ಕೊರತೆ ಇದೆ. ಯಾವುದೇ ಹಿಂದಿನ ನಾಯಕ, ಚಳವಳಿ ಅವರ ಇಂದಿನ ಆಶೋತ್ತರಗಳಿಗೆ ಸ್ಪಂದಿಸುವ ಮಾದರಿಯಲ್ಲಿಲ್ಲ. ಯಾವುದೇ ದೀಪದ ಬೆಳಕಿನಲ್ಲಿ ಅವರು ದಾರಿ ಸವೆಸಲಾರದು. ಯಾವ ಸಿದ್ಧಾಂತ, ಯಾವ ಮುಖ

ಮುಂದಿಟ್ಟುಕೊಂಡು ಮುಂದುವರೆಯಬೇಕು ಎಂಬ ಬಗ್ಗೆ ಅವರು ಗೊಂದಲದಲ್ಲಿ ಬಿದ್ದಿದ್ದಾರೆ. ಭಾರತದ ದಲಿತರು, ಹಿಂದುಳಿದವರು, ಶೋಷಿತರು, ಈ ವಿಷಯದಲ್ಲಿ ಅದೃಷ್ಟವಂತರು, ಅವರಿಗೆ ಬಾಬಾರ ವ್ಯಕ್ತಿತ್ವ, ಹೋರಾಟ, ಚಿಂತನೆ ಇಂತಹ ನೆಲೆಯನ್ನು ಒದಗಿಸಬಲ್ಲದು. ಇಲ್ಲಿಂದ ಮುಂದೆ ಅವರು ತಮ್ಮ ಹೋರಾಟವನ್ನು ಬೆಳೆಸಿದರೆ ಸಾಕು. ಅವರು ಜಯಶಾಲಿಗಳಾದಾರು. ಸಾಮಾಜಿಕ, ರಾಜಕೀಯ ಸಂಘಟನೆಯನ್ನು ಸಾಧಿಸಿಯಾರು. ಶತಮಾನಗಳ ತುಳಿತದಿಂದ ವಿಮೋಚನೆ ಹೊಂದಿಯಾರು.

ಸಾಧ್ಯತೆಗಳಿಷ್ಟಿದ್ದರೂ ನಾವು ಬಾಬಾರನ್ನು ಅರ್ಥ ಮಾಡಿಕೊಂಡಿರುವ ರೀತಿ, ಅವರಿಗೆ ಗೌರ ಸಲ್ಲಿಸುವ ರೀತಿ ಮಾತ್ರ ಅತಿ ಸೀಮಿತವಾದುದು. ಅದು ಒಂದು ಧಾರ್ಮಿಕ ವಿಧಿಯ ಮಾದರಿಯದು. ಏನೋ ಒಂದು ಮಾಡಬೇಕು, ಮಾಡಿ ಮುಗಿಸಿದರೆ ಆಯಿತು ಎನ್ನುವ ರೀತಿಯದು. ಅವರ ಜೀವನ, ಅವರು ಅಲ್ಲಿ ಅಷ್ಟು ಕಷ್ಟಪಟ್ಟರು, ಇಲ್ಲಿ ಇಷ್ಟು ಹಿಂಸೆಗೊಳಗಾದರು ಎಂಬುದನ್ನು ಬಿಟ್ಟು-ಚಿಂತನೆ, ಹೋರಾಟದ ಮಜಲುಗಳು, ಮುಂದಿನ ಪೀಳಿಗೆಗೆ ಅವರು ತೋರಿರುವ ದಾರಿ, ಮಾಡಬೇಕಾದ ಕೆಲಸಗಳ ಬಗ್ಗೆ ನಾವು ಹೆಚ್ಚು ಯೋಚಿಸುತ್ತಿಲ್ಲ. ಅಷ್ಟೇ ಏಕೆ, ನಾವೆಲ್ಲರೂ ಒಂದೇ ದಿನ ಬಾಬಾರಿಗೆ ಗೌರವ ಸಲ್ಲಿಸಿ ಇತರರಿಗೆ ದಿಗ್ಭ್ರಮೆ ಹುಟ್ಟಿಸಬಹುದು ಎನ್ನುವ ಸಾಮಾನ್ಯ ಸಾಧ್ಯತೆಯೂ ನಮಗೆ ಕಾಣಿಸುತ್ತಿಲ್ಲ. ಇನ್ನು ಇಂತಹ ಆಚರಣೆಯ ಸಾಮಾಜಿಕ ರಾಜಕೀಯ ಸಾಧ್ಯತೆಗಳ ಮಾತು ಹಾಗೆಯೇ ಉಳಿಯಿತು.

ನಾವು ಬಾಬಾರಿಗೆ ಸರಿಯಾದ ರೀತಿಯಲ್ಲಿ ಗೌರವ ಸಲ್ಲಿಸುವ ದಿಸೆಯಲ್ಲಿ ಮಾಡಬೇಕಾದುದು ಅವರ ಜನ್ಮ ದಿನವನ್ನು ಒಂದೇ ದಿನ ಆಚರಿಸುವುದು ಮತ್ತು ಅದನ್ನು ನಿಜವಾದ ಅರ್ಥದಲ್ಲಿ ಅಂದರೆ ಬಾಬಾ ಸಾಹೇಬರ ವ್ಯಕ್ತಿತ್ವ, ಅವರ ಚಿಂತನೆ ಮತ್ತು ಅವರು ನಮಗೆ ತೋರಿದ ಮಾರ್ಗಗಳಿಗೆ ಒತ್ತುಕೊಟ್ಟು ಅದನ್ನು ಗಂಭೀರವಾಗಿ ಆಚರಿಸುವುದು. ಒಂದು ಪಟ್ಟಣದ, ಹಳ್ಳಿಯ ಜನ ಒಂದೇ ಸ್ಥಳದಲ್ಲಿ ಆಚರಿಸುವುದು. ಅವರ ಹೋರಾಟದ, ಚಿಂತನೆಗಳ ಚಿತ್ರ ಅಂದು ಎಲ್ಲೆಲ್ಲೂ ಮೆರೆದಾಡುವಂತೆ ಮಾಡುವುದು. ಇಂದು ದೇಶಾದ್ಯಂತ ಲಕ್ಷೋಪಲಕ್ಷ ಜನ ತಮ್ಮ ಅನುಕೂಲಕ್ಕೆ ತಕ್ಕಂತೆ ಅಂದರೆ ಒಬ್ಬ ಸ್ನೇಹಿತರು ಹೇಳಿದಂತೆ, ಅವರ ಹೆಂಡತಿ ಮಕ್ಕಳ ಹುಟ್ಟುಹಬ್ಬ ಆಚರಿಸುವ ರೀತಿಯಲ್ಲಿ ಬಾಬಾರ ಜನ್ಮದಿನ ಆಚರಿಸುವುದರಿಂದ ಅದರ ಫಲ ಅಷ್ಟಾಗಿ ಕಾಣುತ್ತಿಲ್ಲ; ಒಂದೇ ದಿನ ಎಲ್ಲ ಕಡೆ ಲಕ್ಷೋಪಲಕ್ಷ ಜನ ಬಾಬಾ ಜನ್ಮದಿನ-ಪುಣ್ಯತಿಥಿಗಳನ್ನು ಆಚರಿಸುವುದರ ಪರಿಣಾಮವನ್ನು ನೆನೆಸಿಕೊಂಡರೇ ಮೈ ಜುಮ್ಮೆನ್ನುತ್ತದೆ. ಇದು ಆಳುವವರು ದಲಿತರನ್ನು ಗಂಭೀರವಾಗಿ ಪರಿಗಣಿಸುವಂತೆ ಮಾಡೀತು. ದಲಿತರಲ್ಲಿ ರಾಜಕೀಯ-ಸಾಮಾಜಿಕ ನಾಯಕತ್ವ ಬರಲು ಸಹಾಯಕವಾದೀತು. ಆ ದಿನ ಬೇಗ ಬರಲು ಸಾಧ್ಯವೇ? ●

ಶಕ್ತಿ ಸ್ವರೂಪಿ

○ ಮೋಹನ ನಾಗಮ್ಮನವರ



ಬಿಗಿದ ಸರಪಳಿ, ಅಡಗಿದ ದನಿ
ಮೊಳೆಯುವ ಮೊದಲೇ ಸತ್ತ ಕನಸು
ಬದುಕಿನಾಗಸದಲ್ಲಿ ಗ್ರಹಣ ಪೀಡಿತ ಸೂರ್ಯ

ಕೆಳಗೆ ಕೆಲವರ ಅನುದಿನದ ಕ್ರೌರ್ಯ
ದಿಕ್ಕುಗಳೇ ದಿಕ್ಕೆಡಿಯಾಗಿ ಬಿಕ್ಕುತಿರಲು
ಚಲನೆಯ ಗಡಿಯಾರಕ್ಕೇ ಬಡಿದ ಗರ
ನಡೆವ ಕಾಲುಗಳಡಿ ಬಾಗಿದ ಸ್ಥಿತಿಯೇ ಸ್ಥಿರ
ಚೈತನ್ಯಕ್ಕೆ ಜ್ಞಾನಕ್ಕೆ ಅನವರತ ಬರ !

ಕವಿದ ಕತ್ತಲು, ಮೇಲೆ ಕಾರ್ಮೋಡ
ಎದೆ ನಡುಗಿಸುವ ಗುಡುಗಿನೆದುರು
ಅಡವಿಯಲ್ಲೆಲ್ಲೋ ಸಿಕ್ಕು ಬಿದ್ದ ಪಥಿಕನಿದ್ದರೆ
ಅವರ ಕೈಗೊಂದು ಕಂದೀಲು ಇದ್ದರೆ
ಅದರ ಬೆಳಕಲ್ಲೇ ಅವನ ನಡೆ
ಹಿಡಿದ ಹಾದಿ, ಪಡೆವ ಗಮ್ಯ!

ತೆರೆದ ಒರೆಯೊಳು ಖಡ್ಗವಷ್ಟೇ ಏಕೆ?
ಕಾಲಾಳು, ಕುದುರೆ ಆನೆಗಳಿರಬಹುದು
ನೆರೆದಿರಬಹುದವನ ಅಕ್ಷೋಹಿಣಿ
ಮುನ್ನಡೆವ ದಾರಿ ಗೊತ್ತಿಲ್ಲವಾದರೆ
ನಡವ ಹಾದಿಗೆ ಬೆಳಕಿಲ್ಲವಾದರೆ
ಮುಗ್ಗರಿಸುವಂತೆ ಸೈನ್ಯ
ಯುದ್ಧ ಪೂರ್ವದಲ್ಲಿಯೇ ಸೋತಂತೆ ಸೇನಾನಿ !

ಹೊರಟ ದಾರಿಯನ್ನು
ಹಣೆ ಬರಹದ ಮಾತಿಗಿಂತ
ಹಣತೆಯ ಪಾತ್ರ ದೊಡ್ಡದು
ಅವತಾರಗಳನೆಲ್ಲ ಹಿತ್ತಲಿಗೆ ತಳ್ಳಿ
ಅವತರಿಸಬೇಕಾದದ್ದು ಬೆಳಕು
ಜೊತೆಗಷ್ಟು ಮೆದುಳ ಸೆಳಕು !

ಯೋಜನದ ಹಾದಿ ದೂರ ನಿಜ
ಇಟ್ಟ ಹೆಜ್ಜೆಗಿಂತ ತೊಟ್ಟ ತೀರ್ಮಾನ ಸತ್ಯ
ಮೊದಲ ನಡೆಯಿರಬಹುದು. ಮೂಡಲಿ ಅರಿವು
ಅರಿತವನೆದುರು ಅಜ್ಞಾನವಳಿದು
ಬಿಗಿದ ಬೇಡಿಗಳ ಬಿಡಿಸಬಹುದು
ಬಿಡಿಸಬಹುದು ಅಜ್ಞಾತದ ಪದಬಂಧ
ಪರಿವರ್ತನೆಯ ಹಾದಿಯಲ್ಲಿ
ಸೃಷ್ಟಿಯಾಗುವ ಪ್ರತಿಯೋಧ!

ಕಹಳೆ ಸದ್ದಿಗೆ ಕೆರಳುತಿರುವ ಯೋಧ
ಸಮರದಲ್ಲೀಗ ಧರ್ಮ ದೇವರುಗಳು ನಿಶ್ಶಬ್ದ
ಪುರಾಣ, ಪಂಚಾಂಗಗಳ ಮೆಟ್ಟಿರುವಲ್ಲಿ
ಅಕ್ಷರಗಳವನ ಭುಜ ಬಲ
ಯುಗದ ಭಾಗ್ಯಗಳಿಗೆ ಬೀಗ ಜಡಿದು
ಅಡಗಿಸಿಟ್ಟ ಕೋಟೆ ಮೇಲಿನ ಮುತ್ತಿಗೆ
ಶಿಕ್ಷಣವೆಂಬುದು ಶಕ್ತಿ ಸ್ವರೂಪಿ
ವಿದ್ಯೆಗೊಂದೇ ಅಂತಿಮ ಜಯ
ಅವರ ಬತೇರಿಗಳ ಮೇಲೆ
ನಮ್ಮ ಮುಗಿಲ ನೀಲಿಯ ಪತಾಕೆ!

ಕುಲ ನೆಲೆಯ ಮಾತು ಕೊನೆಗೊಂಡು
ಕಾಲದ ಕಣದಲ್ಲಿ ಸಮತೆಯ ಫಸಲನೊಕ್ಕಲು
ಬೇಕು ಬಾಬಾ ಸಾಹೇಬರ ಬುದ್ಧಿ ಬೇಸಾಯ
ಅಕ್ಷರ ಮತ್ತು ಅರಿವುಗಳೇ ಈ ಹಾದಿಯ ಆಶಯ!

ಅಂಬೇಡ್ಕರ್ ವಿಚಾರಧಾರೆ : ಡಿ.ಆರ್. ಟಿಪ್ಪಣಿ

೧೯ನೇ ಶತಮಾನದ ಕಡೆಯ ಭಾಗದ ಮತ್ತು ಈ ಶತಮಾನದ ಮೊದಲ ಭಾಗದಲ್ಲಿ ಅನೇಕ ಜನ ಕೆಳಜಾತಿಗಳ ಚಿಂತಕರು, ನಾಯಕರು ಬಂದರು. ನಾರಾಯಣ ಗುರು ಮತ್ತು ಮಹಾತ್ಮಫುಲೆ ಇವರಲ್ಲಿ ತೀರಾ ಮುಖ್ಯವಾದವರು. ಈ ರೀತಿಯ ನಾಯಕತ್ವ ಪ್ರಧಾನವಾಗಿ ಧಾರ್ಮಿಕ ನೆಲೆಯಿಂದ ಜಾತಿ ವಿರುದ್ಧ ಮಾತನಾಡಿತ್ತು. ಅಲ್ಲಿ ಧಗಧಗಿಸುವ ಸಾಮಾಜಿಕ ಸಿಟ್ಟಿರಲಿಲ್ಲ. ಇಡೀ ಸಮಾಜಕ್ಕೆ ಸವಾಲೆಸೆವ ಛಾತಿ ಇರಲಿಲ್ಲ. ಆದರೆ, ಭಾರತೀಯ ದಲಿತರಿಗೆ ಅಂಬೇಡ್ಕರರ ಕಾರಣದಿಂದಾಗಿ ಧಗಧಗಿಸುವ ಸಿಟ್ಟು ಮತ್ತು ಸಮಗ್ರ ಬದಲಾವಣೆಯ ಛಲ ಬಂತು. ದಲಿತ ಸಮಸ್ಯೆಯನ್ನು ಪರಿಹರಿಸಲು ಯತ್ನಿಸಿದ ಉಳಿದೆಲ್ಲ ರಾಜಕೀಯ ಮಾದರಿಗಳಿಗಿಂತ ತೀರಾ ಭಿನ್ನವಾಗಿ ಈ ಚಿಂತನೆ ಮೂಡಿ ಬಂತು. ಇದು ಅಂತಿಮವಾಗಿ ಧಾರ್ಮಿಕ ರಾಜಕೀಯ ನೆಲೆಗಳನ್ನು ಮೇಳೈಸಲು ಯತ್ನಿಸಿತು.

○ ಡಾ॥ ಡಿ.ಆರ್. ನಾಗರಾಜ್

ಆಧುನಿಕ ಭಾರತದ ಸಮಾಜವಾದಿ ಚಿಂತನೆಯ ಇತಿಹಾಸದಲ್ಲಿ ಅಂಬೇಡ್ಕರ್‌ರ ಕೊಡುಗೆ ಅನನ್ಯವಾದದ್ದು. ಈ ಅನನ್ಯತೆಯ ಮೊದಲ ಕಾರಣವೆಂದರೆ, ಭಾರತೀಯ ಶೋಷಿತರ ಒಂದು ನಿರ್ದಿಷ್ಟ ವರ್ಗವಾದ ಅಸ್ಪೃಶ್ಯರ ಬದುಕಿನ ಗರ್ಭದಿಂದ ಮೂಡಿ ಬಂದ ಚಿಂತನೆ ಇದು. ಇದನ್ನೆ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಮಾರ್ಕ್ಸ್‌ರ ಚಿಂತನೆ ಕಾರ್ಮಿಕ ವರ್ಗದ ಜತೆಗೆ ಹೇಗೆ ಬಿಡಿಸಲಾಗದ ಸಂಬಂಧವನ್ನು ಸ್ಥಾಪಿಸಿಕೊಂಡಿದೆಯೊ ಹಾಗೆ ಅಂಬೇಡ್ಕರರ ಚಿಂತನೆ ಅಸ್ಪೃಶ್ಯರ ಅಥವಾ ದಲಿತರ ಬದುಕಿನ ಜತೆ ಅನಿವಾರ್ಯ ಸಂಬಂಧವನ್ನು ಹೊಂದಿದೆ. ಕಾರ್ಮಿಕ ವರ್ಗದ ವಿಮೋಚನೆ ಆಗದೆ ಇಡೀ ಮಾನವ ಸಮಾಜದ ವಿಮೋಚನೆ ಸಾಧ್ಯವಿಲ್ಲ ಎಂದು ಮಾರ್ಕ್ಸ್ ಭಾವಿಸಿದ ಹಾಗೆ, ದಲಿತರ ವಿಮೋಚನೆ ಆಗದೆ ಇಡೀ ಭಾರತೀಯ ಸಮಾಜದ ವಿಮೋಚನೆ ಸಾಧ್ಯವಿಲ್ಲ ಎಂದು ಅಂಬೇಡ್ಕರ್ ಭಾವಿಸಿದ್ದರು.

ಅಂಬೇಡ್ಕರ್ ಇವತ್ತು ನಮಗೆ ವಿಶೇಷವಾಗಿ ಪ್ರಸ್ತುತವಾಗಿರುವುದು ಈ ಕಾರಣಕ್ಕಾಗಿಯೆ, ಭಾರತೀಯ ಸಮಾಜ ತನ್ನ ಎಲ್ಲ ರೀತಿಯ ಕಾರ್ಯವನ್ನು, ಹಿಂಸೆಯನ್ನು ದಲಿತ ಸಮಾಜದ ಮೇಲೆ ಹೇರಿಬಿಟ್ಟಿದೆ. ದಲಿತ ಸಮಾಜದ ನೋವು ಬರೀ ಹಸಿವಿನದಲ್ಲ, ಬಡತನದ್ದಲ್ಲ, ಸಮಾಜದ ಉಳಿದ ಬಡವರ ಸಂಕಟಕ್ಕಿಂತ ಹೆಚ್ಚು ಆಳವಾದ, ಬಹುಮುಖಿ ಯಾತನೆ ಅವರದು. ಸಮಾಜದ ಉಳಿದೆಲ್ಲ ಬಡ ವರ್ಗಗಳಿಗಿಂತ ಹೆಚ್ಚು ರೀತಿಗಳ ಭಾರವನ್ನು ದಲಿತರು ಹೊತ್ತಿದ್ದಾರೆ.

೧೯ನೇ ಶತಮಾನದ ಕಡೆಯ ಭಾಗದ ಮತ್ತು ಈ ಶತಮಾನದ ಮೊದಲ ಭಾಗದಲ್ಲಿ ಅನೇಕ ಜನ ಕೆಳಜಾತಿಗಳ ಚಿಂತಕರು, ನಾಯಕರು ಬಂದರು. ನಾರಾಯಣ ಗುರು ಮತ್ತು ಮಹಾತ್ಮಫುಲೆ ಇವರಲ್ಲಿ ತೀರಾ ಮುಖ್ಯವಾದವರು. ಈ ರೀತಿಯ ನಾಯಕತ್ವ ಪ್ರಧಾನವಾಗಿ ಧಾರ್ಮಿಕ ನೆಲೆಯಿಂದ ಜಾತಿ ವಿರುದ್ಧ ಮಾತನಾಡಿತ್ತು. ಅಲ್ಲಿ ಧಗಧಗಿಸುವ ಸಾಮಾಜಿಕ ಸಿಟ್ಟಿರಲಿಲ್ಲ. ಇಡೀ ಸಮಾಜಕ್ಕೆ ಸವಾಲೆಸೆವ ಛಾತಿ ಇರಲಿಲ್ಲ. ಆದರೆ, ಭಾರತೀಯ ದಲಿತರಿಗೆ ಅಂಬೇಡ್ಕರರ ಕಾರಣದಿಂದಾಗಿ ಧಗಧಗಿಸುವ ಸಿಟ್ಟು ಮತ್ತು ಸಮಗ್ರ ಬದಲಾವಣೆಯ ಛಲ ಬಂತು. ದಲಿತ ಸಮಸ್ಯೆಯನ್ನು ಪರಿಹರಿಸಲು ಯತ್ನಿಸಿದ ಉಳಿದೆಲ್ಲ ರಾಜಕೀಯ ಮಾದರಿಗಳಿಗಿಂತ ತೀರಾ ಭಿನ್ನವಾಗಿ ಈ ಚಿಂತನೆ ಮೂಡಿ ಬಂತು. ಇದು ಅಂತಿಮವಾಗಿ ಧಾರ್ಮಿಕ ರಾಜಕೀಯ ನೆಲೆಗಳನ್ನು ಮೇಳೈಸಲು ಯತ್ನಿಸಿತು.

ಅಂಬೇಡ್ಕರರ ಚಿಂತನೆ ಸಮಕಾಲೀನ ರಾಜಕೀಯ ಮಾದರಿಗಳಿಗಿಂತ ಭಿನ್ನ ಎಂಬ ಮಾತನ್ನು ಹೀಗೆ ವಿವರಿಸಲು ಸಾಧ್ಯ. ದಲಿತ ಸಮಸ್ಯೆಯನ್ನು ಪರಿಹರಿಸುವ ಒಂದು ನಿರ್ದಿಷ್ಟ ಮಾದರಿ ಗಾಂಧಿವಾದ ಮತ್ತು ಕಾಂಗ್ರೆಸ್ ಪಕ್ಷದ್ದು. ಗಾಂಧಿವಾದ ಮತ್ತು ಕಾಂಗ್ರೆಸ್ ಪಕ್ಷದ ಚೌಕಟ್ಟಿನಲ್ಲಿ ಬಂದ ಮೊದಲ ತಲೆಮಾರಿನ ಹರಿಜನ ನಾಯಕರನ್ನು ಅಂಬೇಡ್ಕರ್‌ವಾದಿಗಳ ಜತೆಗೆ ಹೋಲಿಸಿ ನೋಡಿದರೆ ವ್ಯತ್ಯಾಸ ಸ್ಪಷ್ಟವಾಗುತ್ತದೆ. ಮೂಲತಃ ಹರಿಜನ ಮತ್ತು ದಲಿತ ಎಂಬ ಎರಡು ಹೆಸರುಗಳಲ್ಲಿಯೇ ಇರುವ ವ್ಯತ್ಯಾಸ ಅದು. ಗಾಂಧಿ ಅಸ್ಪೃಶ್ಯರನ್ನು ಹರಿಜನ ಎಂದು ಕರೆದರು. ಅದಕ್ಕೆಹೊಸ ತಲೆಮಾರಿನ ದಲಿತರು ಪ್ರತಿಭಟಿಸಿದರು. 'ಹೊಲೆಯ, ಮಾದಿಗ ಅನ್ನೊ ಬದಲು ಹರಿಜನ ಅಂತ ಕರೆದು ನಗ್ತಾರಲ್ಲಪೊ' ಎಂದು ವ್ಯಗ್ರರಾದರು. ಹೊಲೆಯ, ಮಾದಿಗ ಅಂತ ಕರೆದರೆ ಕಡೇಪಕ್ಷ ತಮ್ಮ ಮೇಲಿನ ಅಪಾರ ಹಿಂಸೆಯ ಅರಿವಾದರೂ ಮತ್ತೆ ಮತ್ತೆ ಆಗುತ್ತದೆ. ಹರಿಜನ ಎಂದು ಕರೆಯುವುದು ಹೀಗಾಗಿ ಅಪ್ರಾಮಾಣಿಕವಾಗುತ್ತದೆ ಎಂದು ಇವರ ನಿಲುವು. ಹೃದಯದ ಒಳಗೆ ನಿಜವಾದ ಬದಲಾವಣೆ ಆಗದೆ, ಬರೀ ಹೊರಗೆ ಬದಲಾವಣೆ ಆದರೆ, ಮಾತಿನಲ್ಲಿ ಬದಲಾವಣೆ ಆದರೆ ಏನು ಪ್ರಯೋಜನ ಎಂಬುದು ಇವರ ಸಮರ್ಥನೀಯವಾದ.

ಆದರೆ, ಇಲ್ಲಿ ಮುಖ್ಯ ಪ್ರಶ್ನೆ, ಎಂದರೆ-ಗಾಂಧಿವಾದ ಮತ್ತು ಕಾಂಗ್ರೆಸ್ ಪಕ್ಷ ರೂಪಿಸಿದ ಹರಿಜನ ನಾಯಕತ್ವ ಎಂಥ'ದು ಎಂಬುದು. ಆ ರೀತಿಯ ಮೊದಲ ತಲೆಮಾರಿನವರಲ್ಲಿ ಬಹುಮಟ್ಟಿಗೆ ಸಜ್ಜನರು, ಸಂಭಾವಿತರು. ಆದರೆ, ಮೂಲತಃ ರಾಜೀ ಮನೋಭಾವದವರು. ಸಿಟ್ಟಿಗಿಂತ ಹೆಚ್ಚಾಗಿ ಅನುಸರಿಸಿಕೊಂಡು ಹೋಗುವ ಸ್ವಭಾವದವರು. ಏನೋ ತಮ್ಮ ಜೀವನದಲ್ಲಿ ಇಷ್ಟರ ಮಟ್ಟಿಗೆ ಆಗಿರುವುದೇ ಮೇಲು ಜಾತಿಯವರ ಕೃಪೆ ಎಂದು ನಂಬಿದವರು. ಮೇಲು ಜಾತಿಯವರ ಔದಾರ್ಯಕ್ಕೆ ತಕ್ಕ ಉತ್ತರವೆಂದರೆ ವಿಧೇಯತೆ ಎಂದೇ ಭಾವಿಸಿದ್ದ ಹರಿಜನ ನಾಯಕತ್ವ ಇದು. ಈ ವಿದ್ಯಮಾನವನ್ನು ಇನ್ನಷ್ಟು ಆಳವಾಗಿ ವಿವರಿಸಲು ಸಾಧ್ಯವಿದೆ. ಮೂಲತಃ ಇಡೀ ಅಸ್ಪೃಶ್ಯ ಸಮಾಜದ ಚಾರಿತ್ರಿಕಕಾನುಭವವೇ ಆ ಘಟ್ಟದಲ್ಲಿ ಪ್ರತಿಭಟನೆಗಿಂತ ಹೆಚ್ಚಾಗಿ ಸುಧಾರಣಾ ಮನೋಭಾವದಿಂದ ಇದ್ದಂಥದ್ದು.

ಗಾಂಧಿವಾದದ್ದ ಮತ್ತು ಆ ಕಾಲಘಟ್ಟದ ಕಾಂಗ್ರೆಸ್ ಪಕ್ಷದ ದಲಿತ ಸುಧಾರಣೆಯ ಇನ್ನೊಂದು ಪ್ರಮುಖ ಲಕ್ಷಣವೆಂದರೆ-ಅದು ಬಹುಮಟ್ಟಿಗೆ ದಲಿತ ಸಮಾಜದ ಒಳಗಿನಿಂದ ಸಹಜವಾಗಿ, ಜೈವಿಕವಾಗಿ ಮೂಡಿ ಬಂದ ಛಲವಲ್ಲ. ಬದಲಾಗಿ ಸವರ್ಣೀಯ ಸಮಾಜ ಪ್ರಗತಿ ಪರ ದೃಷ್ಟಿಕೋನದಿಂದ ತನ್ನನ್ನು ತಾನೇ ವಿಮರ್ಶಿಸಿಕೊಂಡ ಪರಿಣಾಮವಾಗಿ ಬಂದ ಪಾಪಪ್ರಜ್ಞೆ ಮತ್ತು ಅನುಕಂಪದ ಫಲ ಅದು. ಇಲ್ಲಿ ತನ್ನ ಮೇಲಾಗುತ್ತಿರುವ ಹಿಂಸೆಯ ವಿರುದ್ಧ ಸ್ವತಃ ದಲಿತ ಸಿಡಿದೆದ್ದ ಅನುಭವ ಇಲ್ಲ. ತಾನು ಮಾಡುತ್ತಿರುವ ಅಥವಾ ತನ್ನ ಮೇಲುಜಾತಿ ಸಮಾಜ ಮಾಡುತ್ತಿರುವ ಹಿಂಸೆಯನ್ನು ಕಂಡು ನಾಚಿಕೊಂಡ ಹೇಸಿದ ಮೇಲುಜಾತಿಯವನ ದೃಷ್ಟಿಕೋನವೇ ಅಲ್ಲಿಯ ಮುಖ್ಯತೆ. ಈ ಹಿನ್ನೆಲೆಯಿಂದ ಅಂಬೇಡ್ಕರ್‌ವಾದದ ಪ್ರೇರಣೆ ಮತ್ತು ಹುಟ್ಟಿನ ಕಾರಣಗಳು ಪೂರ್ಣವಾಗಿ ಭಿನ್ನ. ದಲಿತ ಸಮಾಜದ ಒಡಲಿನಿಂದಲೇ ಅಧಿಕೃತವಾಗಿ ಮೂಡಿ ಬಂದ ಚಿಂತನೆ, ಹೋರಾಟದ ಕ್ರಮ ಇದು. ಆದ್ದರಿಂದಲೇ ಇಲ್ಲಿ ಸವರ್ಣೀಯ ಸಮಾಜದ ಸಹಾನುಭೂತಿಯನ್ನು ಕೂಡಾ ಸಂದೇಹಿಸುವ ಸ್ವಭಾವ ಸಹಜವಾಗಿಯೇ ಬೆಳೆದುಬಂದಿದೆ. ಇಲ್ಲಿ ಉತ್ತಮಿಕೆಯ ಛಲ ಒಡೆದು ಕಾಣುತ್ತದೆ. ಈ ಉತ್ತಮಿಕೆಯ ಛಲ ಸಹಜವಾಗಿಯೇ ಮೇಲು ಜಾತಿಯವರಿಗೆ ಧಿಮಾಕಿನ ಹಾಗೆ, ದುರಹಂಕಾರದ ಹಾಗೆ ಕಾಣುತ್ತದೆ.

ಇಲ್ಲೊಂದು ಚಾರಿತ್ರಿಕ ವ್ಯಂಗ್ಯ ಅಡಗಿದೆ. ಅನ್ಯಾಯದ ಮೇಲೆ, ಹಿಂಸೆಯ ಮೇಲೆ ನಿಂತ ಪ್ರತಿಯೊಂದು ಸಮಾಜವೂ ತನ್ನದೇ ಆದ 'ಮೃದು ಕ್ರಾಂತಿಕಾರೀ ವ್ಯಕ್ತಿತ್ವ'ವನ್ನು ರೂಪಿಸಲು ಪ್ರಯತ್ನಿಸುತ್ತದೆ ಮತ್ತು ಬಹುಮಟ್ಟಿಗೆ ಯಶಸ್ವಿಯೂ ಆಗುತ್ತದೆ. ತನ್ನ ಅಂತರ್ಗತ ಹಿಂಸೆಯ

ತೀವ್ರತೆಯನ್ನು ತನಗೆ ನೋವಾಗದ ಹಾಗೆ ಕಡಿಮೆ ಮಾಡುವ ಚಿಕಿತ್ಸಾಕ್ರಮ ಅದು. ಆದರೆ, ಆಳವಾಗಿ ಬೇರೂರಿರುವ ರೋಗಕ್ಕೆ ಬರೀ ಮೇಲೆ ಮುಲಾಮು ಸವರಿದಂತೆ ಅದು. ಈ ರೀತಿಯ ಹರಿಜನ ನಾಯಕತ್ವವನ್ನೇ ಹೊಸಪೀಳಿಗೆಯ ಕ್ರಾಂತಿಕಾರಿಗಳು ಢೋಂಗಿ ನಾಯಕತ್ವ ಎಂದು ಟೀಕಿಸಿದರು. ಬಹುಜನ ಸಮಾಜದ ನಾಯಕ ಕಾನ್ಷೀರಾಂ ಹಿರಿಯ ಹರಿಜನ ನಾಯಕ ದಿ|| ಜಗಜೀವನರಾಂರನ್ನು ಹುಚ್ಚಾಪಟ್ಟೆ ಹೀಯಾಳಿಸುವುದು ಈ ಕಾರಣಕ್ಕಾಗಿಯೇ. ಅವರ ಪ್ರಕಾರ, ಜಗಜೀವನರಾಂ ಹರಿಜನ ನಾಯಕರ ಗುಲಾಮಿತನದ ಅತ್ಯುತ್ತಮ ಸಂಕೇತ. ಕಾಂಗ್ರೆಸ್ ಕೊಳೆಯುತ್ತಾ ಹೋದಂತೆ, ವಿಕಾರವಾಗುತ್ತಾ ಹೋದಂತೆ ಅಲ್ಲಿಯ ಹರಿಜನ ನಾಯಕತ್ವದ ಗುಣ ಕೂಡಾ ಅಧೋಗತಿಗೆ ಇಳಿಯುತ್ತಾ ಬಂತು. ಅಂಬೇಡ್ಕರರ ಮೌಲ್ಯಗಳಿಗೆ ಸಂಪೂರ್ಣವಾಗಿ ವಿರುದ್ಧ ರೀತಿಯ ನಾಯಕತ್ವ ಬೆಳೆಯುತ್ತ ಬಂತು.

ಈ ಹಿನ್ನೆಲೆಯಿಂದ ಹೇಳುವುದಾದರೆ, ಹರಿಜನ ಮತ್ತು ದಲಿತ ಪದಗಳೆರಡೂ ಎರಡು ಭಿನ್ನ ವ್ಯಕ್ತಿತ್ವಗಳ, ಆದರ್ಶಗಳ ಪ್ರತೀಕವಾಗಿ ಬೆಳೆದುಬಂದಿವೆ. 'ಹರಿಜನ' ಪದ ಮತ್ತು ಆ ಧೋರಣೆ ಸೃಷ್ಟಿಸಿದ ನಾಯಕತ್ವ ಆ ಇಡೀ ಜನಾಂಗವನ್ನು ವಿಧೇಯತೆಗೆ, ಹಂಗಿಗೆ, ರಾಜೀ ಮನೋಭಾವಕ್ಕೆ ತಳ್ಳಿದ್ದರ ಸಂಕೇತ. 'ದಲಿತ' ಪದ ಅದೆಲ್ಲದರ ವಿರುದ್ಧದ ಮೌಲ್ಯಗಳ ಬಂಡುಕೋರತನದ ಸಂಕೇತ.

ಆದರೆ, ಗಾಂಧಿವಾದ ಸೃಷ್ಟಿಸಿದ ಹರಿಜನ ನಾಯಕವರ್ಗ ಸಂಪೂರ್ಣವಾಗಿ ನಾಲಾಯಕ್ಕು ಎಂದು ಇದರರ್ಥವಲ್ಲ. ಗಾಂಧಿವಾದ ತನ್ನ ಕ್ರಾಂತಿಕಾರಕತೆಯನ್ನು ಕಳೆದುಕೊಂಡ ಒಂದು ಉತ್ತಮ ಉದಾಹರಣೆ ಇದು ಎಂದು ಮಾತ್ರ ಸದ್ಯಕ್ಕೆ ಹೇಳಬಹುದು. ವಿವಿಧ ರೀತಿಯ ಹಿಂಸೆ, ಶೋಷಣೆಗಳು ತೀವ್ರವಾಗುತ್ತಿದ್ದ, ಗಾಂಧಿವಾದವನ್ನು ಕಾಂಗ್ರೆಸ್ಸಿನ ಕಪಟಿಗಳು ಬಳಸಿಕೊಳ್ಳುತ್ತಿದ್ದ ಸ್ವಾತಂತ್ರ್ಯೋತ್ತರ ಚಾರಿತ್ರಿಕ ಸನ್ನಿವೇಶದಲ್ಲಿ ಗಾಂಧಿವಾದೀ ಹರಿಜನ ಮಾರ್ಗ ಸಂಪೂರ್ಣವಾಗಿ ಹಾಳಾಗಿಹೋಗಿತ್ತು. ಹರಿಜನರ ಹೆಸರು ಹೇಳಿ ಆಳುವ ವ್ಯವಸ್ಥೆ ನಡೆಸುತ್ತಿದ್ದ ಭಂಡತನ ಮಿತಿಮೀರಿಹೋಗಿತ್ತು. ಹೀಗಾಗಿ, ಹೊಸ ತಲೆಮಾರಿನ ದಲಿತರಿಗೆ ಕಾಂಗ್ರೆಸ್, ಗಾಂಧಿವಾದ ಎರಡು ಹಾಸ್ಯಾಸ್ಪದ ಸಂಗತಿಗಳಾದವು. ಇದಕ್ಕೆ ನೆಲೆಯನ್ನು ತುಂಬ ಅರ್ಥಪೂರ್ಣವಾಗಿ ಸಿದ್ಧಪಡಿಸಿದ್ದ ದಲಿತ ನಾಯಕ ಎಂದರೆ ಅಂಬೇಡ್ಕರ್.

ಗಾಂಧಿವಾದ ತನ್ನ ಶೃಂಗ ಸ್ಥಿತಿಯಲ್ಲಿದ್ದಾಗಲೇ ಅದರ ಮಿತಿಗಳನ್ನು ಅಂಬೇಡ್ಕರ್ ಸ್ಪಷ್ಟವಾಗಿ ಕಂಡುಕೊಂಡಿದ್ದರು. ಕಾಂಗ್ರೆಸ್ ತನ್ನ ಜನಪ್ರಿಯತೆಯ ತುತ್ತತುದಿಯಲ್ಲಿದ್ದಾಗಲೇ ಅದರ ವಿನಾಶಕಾರೀ ಶಕ್ತಿಯನ್ನು ಕೊಳಕನ್ನು ಅವರು ಸ್ಪಷ್ಟವಾಗಿ ಕಂಡುಕೊಂಡಿದ್ದರು.

ಮೇಲೆ ಹೇಳಿದ ಮಾತಿನ ಅರ್ಥವೇನು ಎಂಬುದನ್ನು ಇನ್ನಷ್ಟು ವಿವರವಾಗಿ ಈಗ ಚರ್ಚಿಸಬಹುದು. ಗಾಂಧೀವಾದ ತನ್ನ ಶೃಂಗಸ್ಥಿತಿಯಲ್ಲಿದ್ದಾಗಲೇ ಅದರ ಮಿತಿಗಳನ್ನು ಅಂಬೇಡ್ಕರ್ ಕಂಡುಕೊಂಡರು ಎಂಬ ಮಾತನ್ನು ಹೀಗೆ ವಿವರಿಸಬಹುದು.



ಹರಿಜನ ಮತ್ತು ದಲಿತ ಪದಗಳೆರಡೂ ಎರಡು ಭಿನ್ನ ವ್ಯಕ್ತಿತ್ವಗಳ, ಆದರ್ಶಗಳ ಪ್ರತೀಕವಾಗಿ ಬೆಳೆದುಬಂದಿವೆ. 'ಹರಿಜನ' ಪದ ಮತ್ತು ಆ ಧೋರಣೆ ಸೃಷ್ಟಿಸಿದ ನಾಯಕತ್ವ ಆ ಇಡೀ ಜನಾಂಗವನ್ನು ವಿಧೇಯತೆಗೆ, ಹಂಗಿಗೆ, ರಾಜೀ ಮನೋಭಾವಕ್ಕೆ ತಳ್ಳಿದ್ದರ ಸಂಕೇತ. 'ದಲಿತ' ಪದ ಅದೆಲ್ಲದರ ವಿರುದ್ಧದ ಮೌಲ್ಯಗಳ ಬಂಡುಕೋರತನದ ಸಂಕೇತ.

ಗಾಂಧಿ ಅಸ್ಪೃಶ್ಯತೆಯ ಸಮಸ್ಯೆಯ ಮೂಲವನ್ನು ಕಂಡದ್ದು ಹಿಂದೂ ಧರ್ಮದ ಚೌಕಟ್ಟಿನಲ್ಲಿ. ಅದರ ಪರಿಹಾರವನ್ನು ಕಂಡದ್ದು ಕೂಡಾ ಹಿಂದೂಧರ್ಮದ ಚೌಕಟ್ಟಿನಲ್ಲಿಯೇ. ಅಸ್ಪೃಶ್ಯತೆಯನ್ನು ಹಿಂದೂ ಧರ್ಮದ ಒಂದು ದೊಡ್ಡ ಕಳಂಕ, ಒಂದು ದೊಡ್ಡ ಪಾಪಾ ಎಂದು ಗಾಂಧಿ ತುಂಬ ತೀವ್ರವಾಗಿಯೇ ಸಿಡಿದೆದ್ದರು. ಅವರ ಪ್ರಾಮಾಣಿಕತೆಯ ಬಗೆಗೆ, ಪ್ರಯತ್ನದ ಬಗೆಗೆ ಸಂದೇಹಿಸುವುದು ಸಾಧ್ಯವೇ ಇಲ್ಲ. ಸಮಸ್ಯೆ ಇರುವುದು ಅದರ ಪರಿಹಾರಕ್ಕೆ ಅವರು ಪ್ರಯತ್ನಿಸಿದ ಕ್ರಮಗಳಲ್ಲಿ.

ಗಾಂಧೀಜಿ ದಲಿತರ ಸ್ವ-ಸಂಘಟನೆ ಮತ್ತು ಹೋರಾಟಕ್ಕಿಂತ ಸವರ್ಣೀಯ ಸಮಾಜದ ಹೃದಯ ಪರಿವರ್ತನೆಗೇ ಹೆಚ್ಚು ಒತ್ತು ಹಾಕಿದರು. ದಲಿತರು ತಮ್ಮ ನೈತಿಕ-ಸಾಮಾಜಿಕ ಮೌಲ್ಯಗಳನ್ನು ಬದಲಿಸಿಕೊಳ್ಳಬೇಕೆಂದು ಕರೆ ನೀಡಿದರು. ಹಿಂದೂ ಧರ್ಮದ ಒಳಗೇ ಅಸ್ಪೃಶ್ಯತೆಯ ಪರಿಹಾರದ ಶಕ್ತಿಯೂ ಇದೆ, ಮಾರ್ಗವೂ ಇದೆ ಎಂಬ ಗಾಢನಂಬಿಕೆಯ ನೆಲೆಯಲ್ಲೇ ಈ ಎಲ್ಲ ಕಾರ್ಯಕ್ರಮಗಳೂ ರೂಪುಗೊಂಡವು. ದೇವಾಲಯ ಪ್ರವೇಶ ಮುಂತಾದವು ಪ್ರಮುಖ ಕಾರ್ಯಕ್ರಮಗಳಾಗಿ ಕಾಣಿಸಿಕೊಂಡವು. ಈ ರೀತಿಯ ಕಾರ್ಯಕ್ರಮಗಳಿಗೂ ಸವರ್ಣೀಯ ಸಮಾಜ ತುಂಬ ಬಲವಾಗಿಯೇ ಪ್ರತಿಭಟಿಸಿತು. ಸನಾತನಿಗಳು ಗಾಂಧೀಜಿಯ ಪರಮಶತ್ರುಗಳಾದರು. ಹಿಂದೂ ಧರ್ಮದ ಅವಿಭಾಜ್ಯ ಅಂಗ ದಲಿತರು ಎಂದು ಗಾಂಧಿ ನಂಬಿದ್ದರಿಂದಲೇ ಮುಂದೆ ಅಂಬೇಡ್ಕರರಿಗೂ ಅವರಿಗೂ ಘರ್ಷಣೆಯಾಯಿತು.

ಈ ಸಮಸ್ಯೆಯನ್ನು ಅಂಬೇಡ್ಕರ್ ನೋಡಿದ ಕ್ರಮವೇ ಸಂಪೂರ್ಣವಾಗಿ ಬೇರೆ ರೀತಿಯದು. ಅವರು ದಲಿತರ ಜೀವನದ ದೈನಂದಿನ ಅನುಭವಗಳ ಜತೆಗೆ ಹಿಂದೂ ಧರ್ಮದ ಮೂಲಭೂತ ಮೌಲ್ಯ ರಚನೆಯನ್ನು ಆಳವಾಗಿ ವಿಶ್ಲೇಷಣೆ ಮಾಡಿದರು. ಈ ದೃಷ್ಟಿಯಿಂದ ಹಿಂದೂ ಧರ್ಮದ ತತ್ತ್ವಜ್ಞಾನದ ಬಗೆಗೆ ಅವರು ಮಾಡಿರುವ ಚಿಂತನೆ, ವಿಶ್ಲೇಷಣೆಗಳು ತುಂಬ ದೊಡ್ಡ ಮಟ್ಟದ ಒಳನೋಟಗಳನ್ನು ತುಂಬಿಕೊಂಡಿದೆ. 'ಫಿಲಾಸಫಿ ಆಫ್ ಹಿಂದೂಯಿಸಂ' ಈ ದೃಷ್ಟಿಯಿಂದ ತುಂಬ ಮಹತ್ವದ ಕೃತಿ. ಆಧುನಿಕ ಹಾಗೂ ಮಾನವೀಯ ಮೌಲ್ಯಗಳಿಗೆ ಹಿಂದೂ ಧರ್ಮದ ಅಂತರಗಂದಲ್ಲಿ ಸ್ಥಳವೇ ಇಲ್ಲ ಎಂಬುದನ್ನು ಅಂಬೇಡ್ಕರ್ ಸೂಕ್ಷ್ಮವಾಗಿ ವಿಶ್ಲೇಷಿಸಿದರು. ಸಮಾನತೆ ಮತ್ತು ಸಹೋದರತೆ ಎಂಬೆರಡು ಮಾನವೀಯ ಮೌಲ್ಯಗಳನ್ನು ಹಿಂದೂ ಧರ್ಮ ಎಲ್ಲ ಹಂತಗಳಲ್ಲೂ ಹತ್ತಿಕ್ಕುತ್ತಿದೆ. ಮಾನವ-ಮಾನವನನ್ನು ಕಿತ್ತು ತಿನ್ನುವುದೇ ಹಿಂದೂ ಧರ್ಮದ ನಿಜವಾದ ಅನುಭವ. ಅಸ್ಪೃಶ್ಯತೆ ಮತ್ತು ಜಾತಿ ಪದ್ಧತಿಯನ್ನು ತೆಗೆದುಬಿಟ್ಟರೆ ಹಿಂದೂ ಧರ್ಮಕ್ಕೆ ಪ್ರತ್ಯೇಕವಾಗಿ ಅಸ್ತಿತ್ವವೇ ಇಲ್ಲ ಎಂಬುದು ಅಂಬೇಡ್ಕರರ ವಾದ. ಈ ವಾದಕ್ಕೆ ಕೋಟ್ಯಂತರ ದಲಿತರ ನಿಜಜೀವನದ ನೋವಿನ ಅನುಭವದ ಹಿನ್ನೆಲೆಯಿತ್ತು.

ಈ ಹಿನ್ನೆಲೆಯಿಂದ ಅಂಬೇಡ್ಕರ್ ದಲಿತರು ಮತ್ತು ಹಿಂದೂ ಧರ್ಮದ ನಡುವಣ ಯಾವುದೇ ಸಂಧಾನ, ಸಂವಾದದ ಸಾಧ್ಯತೆಯನ್ನೇ ನಿರಾಕರಿಸಿದರು. ಹಿಂದೂ ಧರ್ಮದ ಚೌಕಟ್ಟಿನಲ್ಲೆ ಉಳಿದರೆ ಅವರು ಶಾಶ್ವತವಾಗಿ

(19ನೇ ಪುಟಕ್ಕೆ)

ಚಿಂತನೆ, ಹೋರಾಟ-ಒಂದು ಅವಲೋಕನ

ಅಂಬೇಡ್ಕರ್ ಜಗತ್ತಿನ ಶ್ರೇಷ್ಠ ವಿಶ್ವವಿದ್ಯಾಲಯಗಳಲ್ಲಿ ಕ್ರಮಬದ್ಧವಾದ ಜ್ಞಾನವನ್ನು ಪಡೆದುಕೊಂಡವರು. ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ತತ್ವಶಾಸ್ತ್ರ, ಸಮಾಜಶಾಸ್ತ್ರಗಳ ಆಳವಾದ ಅಧ್ಯಯನ ಮಾಡಿದ್ದವರು. ಅಗಾಧವಾದ ಚಾರಿತ್ರಿಕ ಪ್ರಜ್ಞೆಯುಳ್ಳ, ಕಾಲದ ಸನ್ನೆಗಳಿಗೆ ಓಗೊಟ್ಟು ಶೋಷಿತ ವಿಮೋಚನೆಗೆ ನಿರಂತರ ಶ್ರಮಿಸಿದ ಧೀಮಂತ ಮಾನವತಾವಾದಿ. ಭಾರತೀಯ ಸಾಮಾಜಿಕ ವ್ಯವಸ್ಥೆಯ ಮೂಲ ಭೂತ ಬದಲಾವಣೆಯನ್ನು ಬಯಸುವ ಜನರು ಅಂಬೇಡ್ಕರರ ಚಿಂತನೆಗಳನ್ನು ಮರೆಯುವಂತಿಲ್ಲ. ಸಮಕಾಲೀನ ದಲಿತ ಸಂಘಟನೆಗಳು ಇತಿಹಾಸದ ಪಾಠಗಳನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕು

○ ಹೆಚ್.ಎಂ. ರುದ್ರಸ್ವಾಮಿ

ಡಾ|| ಬಾಬಾ ಸಾಹೇಬ್ ಅಂಬೇಡ್ಕರ್, ಇಂದು ವಿವಿಧ ಕಾರಣಗಳಿಂದಾಗಿ ಜನಮನದಲ್ಲಿ ಚಲಾವಣೆಯಲ್ಲಿದ್ದಾರೆ. ಶತಮಾನಗಳಿಂದ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಅತ್ಯಂತ ಕ್ರೂರವಾದ ದಬ್ಬಾಳಿಕೆಗೆ ಒಳಗಾದ ಜನಸಮುದಾಯದ ಪ್ರತಿಭಟನೆಯ ಸಂಕೇತವಾದ ಅಂಬೇಡ್ಕರ್, ಅವರ ವಿಚಾರಗಳು ಶೋಷಿತ ಸಮೂಹಗಳಲ್ಲಿ ಪ್ರತಿಭಟನೆಯ ಸೆಲೆ ಸೃಷ್ಟಿಸುತ್ತಿವೆ. ಅವರ ಚಿಂತನೆಗಳು ಭಾರತೀಯ ಪಟ್ಟಭದ್ರ ಹಿತಾಶಕ್ತಿಗಳಿಗೆ, ಹಿಂದೂ ಕೋಮುವಾದಿಗಳಿಗೆ ಸಿಂಹ ಸ್ವಪ್ನವಾಗಿವೆ.

ಭಾರತೀಯ ಸಾಮಾಜಿಕ ವ್ಯವಸ್ಥೆಯ ಮೂಲಭೂತ ಬದಲಾವಣೆಯನ್ನು ಬಯಸುವ ಜನರು ಅಂಬೇಡ್ಕರ್‌ರವರ ಚಿಂತನೆಗಳನ್ನು ಮರೆಯುವಂತಿಲ್ಲ. ಆದರೆ ಅಂಬೇಡ್ಕರ್ ಅವರ ಹೋರಾಟಮಯ ಬದುಕಿನಿಂದ ಸ್ಫೂರ್ತಿ ಪಡೆದ ಸಮಕಾಲೀನ ದಲಿತ ಸಂಘಟನೆಗಳು ಇತಿಹಾಸದ ಪಾಠಗಳನ್ನು ಸರಿಯಾಗಿ ಗಮನಿಸಿದಂತಿಲ್ಲ. ಅಂಬೇಡ್ಕರ್‌ರವರಿಗಿದ್ದ "ಕೊಟ್ಟು ತೆಗೆದು" ಕೊಳ್ಳುವ ಪ್ರವೃತ್ತಿ ಸಮಗ್ರ ಸಮಾಜದ ನೈಜ ಪ್ರವೃತ್ತಿಗಳ ಪರಿಜ್ಞಾನವಿಲ್ಲದವರಂತೆ ವರ್ತಿಸುತ್ತವೆ. ಇಂಡಿಯಾದ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ದಲಿತ ಚಳುವಳಿಗಳು ಅಂಬೇಡ್ಕರ್-ತನ್ನ ಹೋರಾಟವನ್ನು ನಿಲ್ಲಿಸಿದ್ದರಿಂದ ಮುಂದುವರಿಯದೆ, ಅವರು ಪ್ರಾರಂಭಿಸಿದ 'ಶಿಕ್ಷಣ-ಸ್ವಾವಲಂಬನೆ-ಸವಲತ್ತು'ಗಳ ಸುತ್ತಾ ಸುತ್ತುತ್ತಿವೆ. ಊಳಿಗಮಾನ್ಯ ಸಾಮಾಜಿಕ ವ್ಯವಸ್ಥೆಯ ಅವಶೇಷಗಳಿಂದ ಉಂಟಾಗುತ್ತಿರುವ ನಿರಂತರ ಕೊಲೆ-ಸುಲಿಗೆಗಳ ವಿರುದ್ಧ ಪ್ರತಿಭಟಿಸುತ್ತಿವೆ. ಶೋಷಣೆ ಕ್ರೌರ್ಯದ ಮೂಲ ಬೇರುಗಳು ನಮ್ಮ ಸಾಮಾಜಿಕ-ಆರ್ಥಿಕ ಮತ್ತು ಧಾರ್ಮಿಕ ರಚನೆಯಲ್ಲಿವೆ. ಅವುಗಳ ಮೂಲ ಪರಿವರ್ತನೆಗೆ ಪ್ರಯತ್ನಿಸದೇ ದಬ್ಬಾಳಿಕೆಗಳ ವಿರುದ್ಧದ ಪ್ರತಿಭಟನೆಗಳು "ಹಾವು ಬಿಟ್ಟು ಹುತ್ತ ಬಡಿದಂತೆ".

ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ಬದುಕಿನ ಅಪರಿಚಿತ ಮುಖಗಳ ಬಗ್ಗೆ ಪ್ರಸ್ತಾಪಿಸಲು ಪ್ರಯತ್ನಿಸುತ್ತೇನೆ. ಅಂಬೇಡ್ಕರ್ ಜಗತ್ತಿನ ಶ್ರೇಷ್ಠ ವಿಶ್ವವಿದ್ಯಾಲಯಗಳಲ್ಲಿ ಕ್ರಮಬದ್ಧವಾದ ಜ್ಞಾನವನ್ನು ಪಡೆದುಕೊಂಡವರು. ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ತತ್ವಶಾಸ್ತ್ರ, ಸಮಾಜಶಾಸ್ತ್ರಗಳ ಆಳವಾದ ಅಧ್ಯಯನ ಮಾಡಿದ್ದವರು. ಅಗಾಧವಾದ ಚಾರಿತ್ರಿಕ ಪ್ರಜ್ಞೆಯುಳ್ಳ, ಕಾಲದ ಸನ್ನೆಗಳಿಗೆ ಓಗೊಟ್ಟು ಶೋಷಿತ ವಿಮೋಚನೆಗೆ ನಿರಂತರ ಶ್ರಮಿಸಿದ ಧೀಮಂತ ಮಾನವತಾವಾದಿ.

1924 ಮಾ. 9 ರಂದು ಮಹಾರಾಷ್ಟ್ರದಲ್ಲಿ ಸ್ಥಾಪಿತವಾದ ಅಸ್ಪೃಶ್ಯರ ಮೊದಲ ಸಂಘಟನೆ "ಬಹಿಷ್ಕೃತ ಹಿತಕಾರಣಿ ಸಭಾ"ದಿಂದ ಅಂಬೇಡ್ಕರ್‌ರವರ ಹೋರಾಟದ ಪ್ರಾರಂಭವಾಗಿ 1956ರಲ್ಲಿ ಅವರು ಸ್ಥಾಪಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದ "ರಿಪಬ್ಲಿಕ್ ಪಕ್ಷದ"ವರೆಗೆ ಅವರ ನಿಂತರ ಬೆಳವಣಿಗೆಯನ್ನು ಗುರುತಿಸಬಹುದು. ಅಸ್ಪೃಶ್ಯರ ಜೊತೆಗೆ ಸಾಮಾಜಿಕವಾಗಿ ವಂಚಿತರಾದ ಅವಮಾನಿತ ಕೆಳಜಾತಿ/ವರ್ಗಗಳನ್ನು ತಮ್ಮ ಸಂಘಟನೆಯ ಒಳಗೆ 1936ರಷ್ಟರಲ್ಲಿ ತಂದುಕೊಂಡಿದ್ದಾರೆ. ಅವರ ಹೋರಾಟದ ನೆಲೆ, ಅತ್ಯಂತ ಶೋಷಿತರಾದ ಅಸ್ಪೃಶ್ಯರ ಜೊತೆಗೆ, ಉಳಿದ ಹಿಂದುಳಿದ ವರ್ಗಗಳವರೆಗೆ ತಮ್ಮ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದ್ದು ಗಮನಾರ್ಹವಾದದ್ದು. 1935ರಲ್ಲಿ ಭಾರತದ ಇತಿಹಾಸದಲ್ಲಿ ಪ್ರಮುಖ ಬೆಳವಣಿಗೆಗಳು ಸಂಭವಿಸಿವೆ. ಬ್ರಿಟಿಷರು ಸ್ಥಳೀಯ ವಿವಿಧ ವರ್ಗಗಳಿಗೆ ಪ್ರಾತಿನಿಧ್ಯ ಕೊಡಲು ವಿಶೇಷ ಕಾಯಿದೆಯನ್ನು ಜಾರಿಗೆ ತಂದರು. ಆ ಸಂದರ್ಭದಲ್ಲಿ 1936 ಆಗಸ್ಟ್ ತಿಂಗಳಲ್ಲಿ ಡಾ. ಅಂಬೇಡ್ಕರ್‌ರವರು ಮುಂಬೈ ಪ್ರಾಂತ್ಯದಲ್ಲಿ 'Indipendent Labour Party' ಕಟ್ಟಿದರು. ತಮ್ಮ ಈ ಪಕ್ಷದಲ್ಲಿ ಕೆಲವು ಮುಖ್ಯ ಕಾರ್ಯಕ್ರಮಗಳನ್ನು ರೂಪಿಸಿದ್ದರು; ಅವುಗಳಲ್ಲಿ ಮುಖ್ಯವಾದವು-ಜಮೀನ್ದಾರಿ ಪದ್ಧತಿಯ ರದ್ದು ದರಖಾಸ್ತು ಮತ್ತು ಅರಣ್ಯ ಭೂಮಿಯನ್ನು ದಲಿತರಿಗೆ ಹಂಚುವುದು; ರೈತ-ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿಪಡಿಸುವುದು; ಕಾರ್ಮಿಕರಿಗೆ 8 ಘಂಟೆಗಳ ಕೆಲಸ ನಿಗದಿ; ಕೃಷಿ ಕಾರ್ಮಿಕರಿಗೆ ಜೀವ ವಿಮಾ ಪದ್ಧತಿ ಜಾರಿಗೊಳಿಸುವುದು.

1937ರಲ್ಲಿ ಸಾರ್ವಜನಿಕ ಚುನಾವಣೆಗಳು ನಡೆದಾಗ ಅಂಬೇಡ್ಕರ್ ನಾಯಕತ್ವದ ILP ಪಕ್ಷವು ಅತ್ಯಂತ ದೊಡ್ಡ ಪಕ್ಷವಾಗಿದ್ದ ಕಾಂಗ್ರೆಸ್ ಪಕ್ಷದ ವಿರುದ್ಧ 17 ಸ್ಥಾನಗಳಿಗೆ ತನ್ನ ಪಕ್ಷದ ಪ್ರತಿನಿಧಿಗಳನ್ನು ನಿಲ್ಲಿಸಿ 15 ಸ್ಥಾನಗಳಲ್ಲಿ ಜಯಗಳಿಸಿಕೊಂಡಿದ್ದರು ಮತ್ತು ಅವರು ಮುಂಬೈ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿ ಪ್ರಮುಖ ಪಾತ್ರ

ನಿರ್ವಹಿಸಿದ್ದರು. ಆ ಸಂದರ್ಭದಲ್ಲಿ "ದಲಿತರು ಮತ್ತು ಹಿಂದುಳಿದ ವರ್ಗಗಳ ನಡುವೆ ರಾಜಕೀಯ ಹೊಂದಾಣಿಕೆ, ಸಹಕಾರದ ಅಗತ್ಯತೆಯನ್ನು ಪ್ರತಿಪಾದಿಸಿದ್ದರು" ಅಲ್ಲದೆ ಸಮಾಜವಾದಿ ಚಿಂತನೆಯಲ್ಲಿ ಆಳವಾದ ಪ್ರಭುತ್ವ ಪಡೆದಿದ್ದ ಅವರು "ಭಾರತದಲ್ಲಿ ಸಮಾಜವಾದವನ್ನು ಜಾರಿಗೆ ತರಬೇಕಾದರೆ ರಾಜಕೀಯ ಅಧಿಕಾರವು ಹಿಂದುಳಿದ ಜನಾಂಗ ಮತ್ತು ಅಸ್ಪೃಶ್ಯರ ನಿಯಂತ್ರಣದಲ್ಲಿರಬೇಕು. ಅದಕ್ಕಾಗಿ ಅಹಿಂಸಾತ್ಮಕವಾದ ಜನತಾಂತ್ರಿಕ ವಿಧಾನದ ಮೂಲಕ ರಾಜಕೀಯ ಪಕ್ಷಗಳನ್ನು ಸಂಘಟಿಸಿ, ಹೋರಾಡಬೇಕೆಂದು ಹೇಳಿದ್ದಾರೆ.

ಅವರ ILPಯ ಪ್ರಣಾಳಿಕೆಯಲ್ಲಿ States and Minorities ಪುಸ್ತಕಗಳಲ್ಲಿ ಅವರ ಆರ್ಥಿಕ ಚಿಂತನೆಗಳನ್ನು ಗುರುತಿಸಬಹುದಾಗಿದೆ. ಭೂಮಿಯ ರಾಷ್ಟ್ರೀಕರಣ: ಬೃಹತ್ ಕೈಗಾರಿಕೆಗಳ ರಾಷ್ಟ್ರೀಕರಣ; ಸಹಕಾರಿ ಬೇಸಾದ ಪದ್ಧತಿ, ಕೃಷಿ ಕಾರ್ಮಿಕರಿಗೆ ವಿಮಾ ಪದ್ಧತಿಯಂತ ಪ್ರಗತಿಪರವಾದ ಯೋಜನೆಗಳನ್ನು ಪ್ರಕಟಿಸಿದ್ದರು. 1942ರಿಂದ 1947ರವರೆಗೆ ಅಂಬೇಡ್ಕರ್ 'National Executive Council'ನ ಸದಸ್ಯರಾಗಿ ಕಾರ್ಮಿಕ ಮಂತ್ರಿಗಳಾಗಿದ್ದರು. ನಮ್ಮ ದೇಶದ ಪ್ರಥ'ಮ 'Labour Policy' ಅಂಬೇಡ್ಕರ್‌ರವರಿಂದ ರಚಿತವಾದದ್ದು. ಮುಖ್ಯವಾಗಿ ಕಾರ್ಮಿಕರಿಗೆ 'ಮುಷ್ಕರದ ಹಕ್ಕು' (Workers Rights to Striks) ಒದಗಿಸಿಕೊಟ್ಟ ಕೀರ್ತಿ ಅಂಬೇಡ್ಕರ್‌ರವರದ್ದು.

"ಕಾರ್ಮಿಕರ ಶಕ್ತಿ ಮತ್ತು ಸಂಘಟನಾತ್ಮಕ ಚಳುವಳಿಗಳು ಒಗ್ಗೂಡಿ "ಸಾಮಾಜಿಕ ನ್ಯಾಯ" ಸ್ಥಾಪನೆಗೆ ಶ್ರಮಿಸಬೇಕೆಂದು ಅಭಿಪ್ರಾಯಪಟ್ಟಿದ್ದಾರೆ.

ಕಾರ್ಮಿಕರ 'Minimum Wage Act' ಮತ್ತು "Compalsary Insurance Scheme Under Compensation Act" ಸಹ ಅಂಬೇಡ್ಕರ್‌ರ ಹೋರಾಟ ಮತ್ತು ಶ್ರಮದಿಂದ ಆದ ಬ್ರಿಟಿಷ್ ಭಾರತದ ಪ್ರಮುಖ ಕಾಯಿದೆಗಳು,

ಕಾರ್ಮಿಕ ನಾಯಕರಾಗಿ ಮುಖ್ಯ ಹೋರಾಟಗಳಲ್ಲಿ ಭಾಗವಹಿಸಿದ್ದರು. ದುಡಿಯುವ ವರ್ಗದ ಇಬ್ಬರು ಪ್ರಮುಖ ಶತ್ರುಗಳು, "ಬಂಡವಾಳಶಾಹಿ ನೀತಿ ಮತ್ತು ಬ್ರಾಹ್ಮಣಿಕೆ" ಈ ಎರಡು ಶಕ್ತಿಗಳ ವಿರುದ್ಧ ಕಾರ್ಮಿಕ ರೈತನೊಡನೆ ಕೂಡಿ ಹೋರಾಡಬೇಕೆಂಬುದು ಅವರ ಆಶಯವಾಗಿತ್ತು. ಅವರ ಪ್ರಕಾರ "ಬ್ರಾಹ್ಮಣಿಕ ಎಂದರೆ ಬ್ರಾಹ್ಮಣ ಜಾತಿಯಲ್ಲ, ದುಡಿಯುವ ವರ್ಗದ ವಿರೋಧಿಯಾದ, ಮೇಲು-ಕೀಳು ಭಾವನೆಗಳನ್ನು ಉದ್ದೀಪಗೊಳಿಸುವ ಮಾನಸಿಕ ಪ್ರವೃತ್ತಿ" ಎಂದು ಅಭಿಪ್ರಾಯ ಪಟ್ಟಿದ್ದಾರೆ. ಸ್ವಾತಂತ್ರ್ಯ ಪೂರ್ವ ಕಾಂಗ್ರೆಸ್‌ನ ಕಟು ಟೀಕಾಕಾರರಾಗಿದ್ದ ಅಂಬೇಡ್ಕರ್ ಕಾಂಗ್ರೆಸ್‌ನ್ನು ಬಂಡವಾಳಶಾಹಿಗಳು ಮತ್ತು ದೊಡ್ಡ ಭೂಮಾಲೀಕರ ಬೆಂಬಲ ಪಡೆದ "ಬ್ರಾಹ್ಮಣ ಬನಿಯಾಗಳ" ಒಕ್ಕೂಟವೆಂದು ಕರೆದಿದ್ದರು.

ಡಾ।। ಅಂಬೇಡ್ಕರ್ ರೈತ ಸಮುದಾಯ ಮತ್ತು ಕೃಷಿ ಕಾರ್ಮಿಕರ ಹಕ್ಕುಗಳಿಗಾಗಿ ಸಹ ತಮ್ಮ ಮಿತಿಗಳಲ್ಲಿ ಶ್ರಮಿಸಿದ್ದಾರೆ. 1938ರಲ್ಲಿ ಮುಂಬೈ ಸರ್ಕಾರ ಮಹಾರಾಷ್ಟ್ರದಲ್ಲಿದ್ದ "The Khoti System"ನ ವಿರುದ್ಧ ಬೃಹತ್ ಮೆರವಣಿಗೆಗಳನ್ನು ರಾಜ್ಯಾದ್ಯಂತ ತೆಗೆದು "The Khoti Ablition Bill" ತರುವಂತೆ ಮಾಡುವಲ್ಲಿ ಸಕ್ರಿಯ ಪ್ರಯತ್ನ ನಡೆಸಿದ್ದರು. ಈ ಕಾಯ್ದೆಯ ಪ್ರಕಾರ "ಭೂಮಾಲೀಕರ ಜಮೀನುಗಳಲ್ಲಿ ಗೇಣಿದಾರರಾಗಿ ದುಡಿಯುತ್ತಿದ್ದ ರೈತರಿಗೇ ಜಮೀನು ದೊರಕಿಸಿಕೊಡುವ ಅವಕಾಶ ಮತ್ತು ಇನಾಂ ಜಮೀನುಗಳನ್ನು ಉಳುವವರಿಗೇ ಕೊಡುವ ಅವಕಾಶಗಳು ಲಭ್ಯವಾದವು" ಇದರಿಂದ ಆ ಕಾಲದಲ್ಲಿ ಪ್ರಬಲ ವಿರೋಧವನ್ನು ಎದುರಿಸಿದರು. ಜೊತೆಗೆ ಮುಂಬೈ ಪ್ರಾಂತ್ಯದಲ್ಲಿ ಸಣ್ಣ ಹಿಡುವಳಿದಾರ ರೈತರ ಮೇಲೆ ಹಾಕಿದ ಕರದಲ್ಲಿ ಶೇಕಡ 50 ವಿನಾಯ್ತಿಗಾಗಿ ಹೋರಾಟ ನಡೆಸಿದ್ದರು. ಅಂಬೇಡ್ಕರ್ ಕೇವಲ ಅಸ್ಪೃಶ್ಯರ ರಾಜಕೀಯ ಸವಲತ್ತುಗಳಿಗಾಗಿ ಹೋರಾಟ ಮಾಡಿದರೆಂದು ಮಾತ್ರ ತಿಳಿದಿರುವ ಜನರು, ಅವರ ಈ ಪ್ರಮುಖ ಘಟನೆಗಳನ್ನು ಮರೆಮಾಚುವುದು ಇತಿಹಾಸಕ್ಕೆ ಮಾಡಿದ ಅಪಚಾರವಾಗುತ್ತದೆ.

> **ಅಂಬೇಡ್ಕರ್ ನಿರಂತರವಾಗಿ ಗುಲಾಮಗಿರಿ, ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಯ ವಿರುದ್ಧ ಹೋರಾಡುತ್ತಾ ಈ ವರ್ಗಕ್ಕೆ ನಾಗರೀಕ ಸವಲತ್ತು ಸಮಾನತೆ ದೊರಕಿಸಿ ಕೊಡಲು ಶ್ರಮಿಸಿದ್ದಾರೆ. ಬಹು ಮುಖ್ಯವಾಗಿ ಅಸ್ಪೃಶ್ಯ ಸಮೂಹಗಳಿಗೆ ಮತದಾನದ ಹಕ್ಕು ಮತ್ತು ರಾಜಕೀಯ ಮೀಸಲಾತಿಯನ್ನು ಒದಗಿಸಿಕೊಟ್ಟಿದ್ದು ಮಹಾಸಾಧನೆ. ಇಂದು ಇವುಗಳ ಪರಿಣಾಮಗಳೇನೇ ಆಗಿರಲಿ, ಜಗತ್ತಿನ ಗಮನ ಸೆಳೆದಿರುವ ದಕ್ಷಿಣ ಆಫ್ರಿಕಾದ ನಮ್ಮ ಕಪ್ಪು ಸಹೋದರರ ಹೋರಾಟ ನೆನೆಸಿಕೊಂಡರೆ, ಇಂಡಿಯಾದ ದಲಿತರು ರಾಜಕೀಯವಾಗಿ ಪ್ರಬಲವಾದ ಅಸ್ತ್ರ ಪಡೆದುಕೊಂಡಿದ್ದಾರೆ.**

1942ರಲ್ಲಿ ಒಂದು ಪ್ರಮುಖ ಘಟನೆ ಅಂಬೇಡ್ಕರ್‌ರವರ ಹೋರಾಟಕ್ಕೆ ದೊಡ್ಡ ಮಿತಿಯನ್ನು ಹಾಕಿತು. ಅದು ಬ್ರಿಟಿಷ್ ಸೈಮನ್-ಕಮಿಷನ್ ಭಾರತಕ್ಕೆ ಭೇಟಿಕೊಟ್ಟಾಗ ಅಂಬೇಡ್ಕರ್ ಕಮೀಷನ್ ಜೊತೆ ಮಾತುಕತೆ ಮಾಡಿದಾಗ ತನ್ನ ಹೋರಾಟಕ್ಕೆ ಸದ್ಯದ ಮಿತಿ ಹೇರಿಕೊಂಡಂತೆ ಕಾಣುತ್ತದೆ. ಆ ಕಾಲ ಅಂಬೇಡ್ಕರ್ ಅಸ್ಪೃಶ್ಯರ ವಿಶೇಷ ರಾಜಕೀಯ ಸವಲತ್ತುಗಳಿಗಾಗಿ ಹೋರಾಡುತ್ತಿದ್ದ ಸಂದರ್ಭ; ಬ್ರಿಟಿಷರು ಮತ್ತು ಭಾರತೀಯ ಮೇಲ್ ವರ್ಗಗಳ ಮೇಲೆ ಏಕಕಾಲದಲ್ಲಿ ಜನಾಭಿಪ್ರಾಯ ಮತ್ತು ತನ್ನ ಜನ ಸಮುದಾಯಕ್ಕೆ ಶತಮಾನಗಳಿಂದ ಆದ ಅನ್ಯಾಯದ ವಿರುದ್ಧ ಸೂಕ್ತ ನ್ಯಾಯಕ್ಕಾಗಿ ಹೋರಾಡುತ್ತಿದ್ದ ಕಾಲ ಸೈಮನ್ ಅಂಬೇಡ್ಕರ್‌ರನ್ನು ಕುರಿತು "ನೀವು ಕಾರ್ಮಿಕರನ್ನು ಪ್ರತಿನಿಧಿಸುತ್ತಿರೋ? ಅಥ'ವಾ Depressed classಗಳನ್ನು ಪ್ರತಿನಿಧಿಸುತ್ತಿರೋ? ಎಂದು ನಿಖರವಾದ ಉತ್ತರ ಕೊಡಬೇಕೆಂದು ಒತ್ತಾಯಿಸುತ್ತಾರೆ. ಆಗ ILPಯ ನಾಯಕರಾಗಿದ್ದ ಅಂಬೇಡ್ಕರ್ "ಈ ಎರಡು ವರ್ಗಗಳನ್ನು ಪ್ರತಿನಿಧಿಸುತ್ತೇನೆ ಏಕೆಂದರೆ Depressed Classಗಳೆ ಭಾರತದ ಕಾರ್ಮಿಕರು ಎನ್ನುತ್ತಾರೆ. ಸೈಮನ್ ಈ ಎರಡು ವರ್ಗಗಳಲ್ಲಿ ಯಾವ ಸಮಸ್ಯೆಗೆ ಮಹತ್ವ ನೀಡುತ್ತೀರಿ? ಎನ್ನುತ್ತಾರೆ. "ಶೋಷಿತ ದಲಿತ ವರ್ಗಕ್ಕೆ! ಎಂದು ಅಂಬೇಡ್ಕರ್ ಉತ್ತರಿಸುತ್ತಾರೆ. ಆ ನಂತರ ಇತಿಹಾಸದ ಒತ್ತಡದಿಂದಾಗಿ ILP All India Scheduled Caste Federationನ್ನು ಸ್ಥಾಪಿಸುತ್ತಾರೆ. (1942) ಈ ಘಟನೆಗೆ ಕಾರಣ ಮತ್ತು ಒತ್ತಡವನ್ನು ಚಾರಿತ್ರಿಕ ಸಂಶೋಧನೆಗೆ ಒಳಪಡಿಸಬೇಕಾಗಿದೆ.

ಅಂಬೇಡ್ಕರ್ ನಿರಂತರವಾಗಿ ಗುಲಾಮಗಿರಿ, ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಯ ವಿರುದ್ಧ ಹೋರಾಡುತ್ತಾ ಈ ವರ್ಗಕ್ಕೆ ನಾಗರೀಕ ಸವಲತ್ತು ಸಮಾನತೆ ದೊರಕಿಸಿ ಕೊಡಲು ಶ್ರಮಿಸಿದ್ದಾರೆ. ಬಹು ಮುಖ್ಯವಾಗಿ ಅಸ್ಪೃಶ್ಯ ಸಮೂಹಗಳಿಗೆ ಮತದಾನದ ಹಕ್ಕು ಮತ್ತು ರಾಜಕೀಯ ಮೀಸಲಾತಿಯನ್ನು ಒದಗಿಸಿಕೊಟ್ಟಿದ್ದು ಮಹಾಸಾಧನೆ. ಇಂದು ಇವುಗಳ ಪರಿಣಾಮಗಳೇನೇ ಆಗಿರಲಿ, ಜಗತ್ತಿನ ಗಮನ ಸೆಳೆದಿರುವ ದಕ್ಷಿಣ ಆಫ್ರಿಕಾದ ನಮ್ಮ ಕಪ್ಪು ಸಹೋದರರ ಹೋರಾಟ ನೆನೆಸಿಕೊಂಡರೆ, ಇಂಡಿಯಾದ ದಲಿತರು ರಾಜಕೀಯವಾಗಿ ಪ್ರಬಲವಾದ ಅಸ್ತ್ರ ಪಡೆದುಕೊಂಡಿದ್ದಾರೆ.

ಅಂಬೇಡ್ಕರ್ ಇಂಡಿಯಾದ ಸ್ವಾತಂತ್ರ್ಯ ಚಳುವಳಿಗೆ ತನ್ನದೇ ಆದ ರೀತಿಯಲ್ಲಿ ಹೋರಾಟ ನಡೆಸಿದ್ದಾರೆ. ಅವರು ಲಂಡನ್‌ನಲ್ಲಿ, ನಡೆದ ಪ್ರಥಮ ಮತ್ತು ದ್ವಿತೀಯ ದುಂಡು ಮೇಜಿನ ಪರಿಷತ್‌ನಲ್ಲಿ ಬ್ರಿಟಿಷರ ದುರಾಡಳಿತವನ್ನು ತೀವ್ರವಾಗಿ ಖಂಡಿಸಿದ್ದರು. ಬ್ರಿಟಿಷರ ತಪ್ಪು ಆರ್ಥಿಕ ನೀತಿಯ ಬಗ್ಗೆ ಲೇಖನಗಳನ್ನು ಬರೆದಿದ್ದರು. ಆದಷ್ಟು ಬೇಗ ಬ್ರಿಟಿಷರು ಇಂಡಿಯಾವನ್ನು ಬಿಟ್ಟು ಹೋಗಬೇಕು. ಆದರೆ ಅಧಿಕಾರ ಹಸ್ತಾಂತರ ಮಾಡುವಾಗ ಸಮಾಜದ ವಿವಿಧ ವರ್ಗಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡಬೇಕೆಂದು ಪ್ರತಿಪಾದಿಸಿದ್ದರು. ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ಸಮಾನತೆಯಿಲ್ಲದೆ ರಾಜಕೀಯ ಸ್ವಾತಂತ್ರ್ಯ ಸಮಾನತೆಗೆ ಅರ್ಥವೇ ಇಲ್ಲವೆಂದು ಅವರು ಭಾವಿಸಿದ್ದರು.

ಅಂಬೇಡ್ಕರ್‌ರವರು ತಮ್ಮ ಹೋರಾಟಮಯ ಜೀವನದ ಎರಡು ಸಂದರ್ಭಗಳಲ್ಲಿ ಇಡೀ ರಾಷ್ಟ್ರದ ಗಮನವನ್ನು ಸೆಳೆದಿದ್ದರು. ಅವು-1932 ಸೆಪ್ಟೆಂಬರ್ 24ರ 'Poona Fact' ಮತ್ತು 1956ರ ಮತಾಂತರ ಸಂದರ್ಭಗಳು.

ಬ್ರಿಟಿಷರೊಡನೆ ಅತ್ಯಂತ ಶ್ರಮವಹಿಸಿ ದುಂಡು ಮೇಜಿನ ಪರಿಷತ್ ತನ್ನವಾದವನ್ನು ಮಂಡಿಸಿ "Communial award" ಅನ್ನು ಪಡೆದುಕೊಂಡಿದ್ದರು. ಅದರ ಪ್ರಕಾರ ದಲಿತರಿಗೆ ಪ್ರತ್ಯೇಕ ಮತದಾನದ ಹಕ್ಕು ನೀಡಲಾಗಿತ್ತು. ಇದರ ವಿರುದ್ಧ ಗಾಂಧೀಜಿ 22 ದಿನಗಳ ಪ್ರಸಿದ್ಧ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದ್ದರು. 1932ರಲ್ಲಿ ಗಾಂಧೀಜಿ ಮತ್ತು ಅಂಬೇಡ್ಕರ್ ನಡುವಿನ ವಾದ ವಿವಾದಗಳು ಭಾರತೀಯ ಸಾಮಾಜಿಕ ವ್ಯವಸ್ಥೆಯ

(19ನೇ ಪುಟಕ್ಕೆ)

ಅಂಬೇಡ್ಕರ್ ಮತ್ತು ಮಹಿಳಾ ವಿಮೋಚನೆ



ಮಹಾರಾಷ್ಟ್ರದಲ್ಲಿ ಕಳೆದ ದಶಕದಲ್ಲಿ "ಅಬ್ರಾಹ್ಮಣಿ ಸ್ತ್ರೀವಾದ" (ಬ್ರಾಹ್ಮಣೇತರ ಸ್ತ್ರೀವಾದ)ದ ಬಗೆಗೆ ಅನೇಕ ಬರಹಗಳು ಬಂದವು. ದಲಿತ ಮಹಿಳಾ ವೇದಿಕೆ, ದಲಿತ ಮಹಿಳಾ ಸಂಘಟನೆ, ಕ್ರಿಸ್ತಿ ದಲಿತ ಮಹಿಳಾ ಸಂಘ ಮುಂತಾದುವು ತಮ್ಮ ಪ್ರಣಾಳಿಕೆಗಳನ್ನು ಪ್ರಕಟಿಸಿದವು. ಪ್ರೊ. ಕುಮುದ ಪವಾಡೆ, ಊರ್ಮಿಳಾ ಪವಾರ್, ರೇಖಾ ಠಾಕೂರ್, ಲತಾ ಸಿ.ಎಂ., ಪ್ರಮೀಳಾ ಎಲ್.ಎಸ್., ಉಷಾ ವಾಘ್, ಸುಲಭ ಪಟೋಲ್, ಪ್ರತಿಮಾ ಪರ್ದೇಶಿ ಮತ್ತು ಅನೇಕರು 'ಅಬ್ರಾಹ್ಮಣಿ ಸ್ತ್ರೀವಾದ'ದ ಬಗ್ಗೆ ವಿವಿಧ ಭಾಷಾಂತರಗಳನ್ನು ವಿಸ್ತೃತವಾಗಿ ಹೊರತಂದಿದ್ದಾರೆ. 'ಮೀಸಲಾತಿಯೊಳಗೆ ಮೀಸಲಾತಿ ವರ್ಗೀಕರಣ ವಾಗಬೇಕೆನ್ನುವುದರ ಬಗ್ಗೆ ಗಂಭೀರವಾದ ಚರ್ಚೆಗಳು ನಡೆಯುತ್ತಿವೆ ಅಲ್ಲದೆ, ಮನುಸ್ಮೃತಿ ದಹನ ದಿನವಾದ ಡಿಸೆಂಬರ್ 25ನ್ನು ಭಾರತೀಯ ಸ್ತ್ರೀ ಮುಕ್ತಿ ದಿನವನ್ನಾಗಿ ಆಚರಿಸಲಾಗಿದೆ. ಪ್ರತಿಮಾ ಪರ್ದೇಶಿಯವರು ಬರೆದಿರುವ "ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ಸ್ತ್ರೀ ಮುಕ್ತಿ" ಪುಸ್ತಕದ ಎರಡನೇ ವಿಭಾಗದ ಮುಖ್ಯ ವಿಚಾರಗಳನ್ನು ಈ ಲೇಖನ ಅನುವಾದಿಸಿದೆ. "ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ಸ್ತ್ರೀಮುಕ್ತಿ"ಯ ಬಿಡುಗಡೆ ನಡೆದದ್ದು ಕ್ರಾಂತಿಸಿನ್ಹ ನಾನಾ ಪಾಟೀಲ್ ಅಕಾಡೆಮಿ, ಪೂಣೆಯವರು ಮನುಸ್ಮೃತಿ ದಹನ ದಿನವನ್ನು ಆಚರಿಸುವ ಸಂದರ್ಭದಲ್ಲಿ ಕ್ರಾಂತಿಜ್ಯೋತಿ ಸಾವಿತ್ರಿಬಾಯಿ ಫೂಲೆ ಸ್ತ್ರೀ ಅಧ್ಯಯನ ಕೇಂದ್ರವು ಆ ಪುಸ್ತಕದ ಇಂಗ್ಲೀಷ್ ಭಾಷಾಂತರವನ್ನು ಪ್ರಕಟಿಸಿದ್ದು, ಅದರ ಪ್ರತಿಗಳನ್ನು wsc@unipune.etnet.inನಿಂದ ಪಡೆಯಬಹುದು.

ಬಾಬಾ ಸಾಹೇಬರ ಜನ್ಮ ಶತಮಾನೋತ್ಸವವನ್ನು ಅಧಿಕೃತವಾಗಿ ಮತ್ತು ಸಂಘಟನಾ ಕಾರ್ಯಕರ್ತರ ಗುಂಪುಗಳು, ರಾಜಕೀಯ ಪಕ್ಷಗಳು ಅದ್ದೂರಿಯಾಗಿ ಆಚರಿಸಿದರು. ಆ ವರ್ಷದುದ್ದಕ್ಕೂ ಅನೇಕ ಕೃತಿಗಳು, ಪ್ರಬಂಧಗಳು ಮತ್ತು ಕರಪತ್ರಗಳು ಡಾ. ಅಂಬೇಡ್ಕರವರ ಬದುಕು ಮತ್ತು ಸಾಧನೆಗಳನ್ನು ಕುರಿತಂತೆ ಪ್ರಕಟವಾದವು. ಅವುಗಳಲ್ಲಿ ಕೆಲವು ಅವರ ಕೊಡುಗೆ ಮತ್ತು ಮಿತಿಗಳನ್ನು ಕುರಿತಂತಿದ್ದರೆ, ಉಳಿದವು ಅವರ ವಿಚಾರಗಳನ್ನು ಹೊಸದಾಗಿ ಅರ್ಥೈಸಲು ಕರೆ ನೀಡಿದವು. ಅವರ ಮುಖ್ಯ ವಿಚಾರಗಳು ಮತ್ತು ಘಟನೆಗಳ ಕುರಿತಂತೆ ಮಹಾರಾಷ್ಟ್ರ ಸರ್ಕಾರವು 'ಡಾ. ಅಂಬೇಡ್ಕರ್‌ರವರ ಗೌರವ ಗ್ರಂಥ'ವನ್ನು ಹೊರ ತಂದಿತು. ಇಲ್ಲಿ ಎದ್ದು ಕಾಣುವ ಸಂಗತಿಯೆಂದರೆ ಮಹಿಳಾ ವಿಮೋಚನೆಯ ಬಗ್ಗೆ ಅಂಬೇಡ್ಕರವರ ವಿಚಾರಗಳನ್ನು ಗೌಣವಾಗಿಸಿದ್ದು, ಬ್ರಾಹ್ಮಣ ಬಲಪಂಥೀಯ ವೇದಿಕೆಗಳಲ್ಲಿ ಒಂದಾದ ಸಮರಸ್ತ ಮಂಚ್, ಅಂಬೇಡ್ಕರವರ ಮೂಲ ಬರಹಗಳನ್ನು ತಿರುಚಿ, ಹೊರ ತಂದ ಕರಪತ್ರ ಅವರ ವಿಚಾರಗಳೆಂದೇ ನಂಬಿಸಿತು. ಈ ಬ್ರಾಹ್ಮಣ ಕೂಟವು ಹಿಂದೂ ಕೋಡ್ ಬಿಲ್‌ನ್ನು ಯಾವಾಗಲೂ ವಿರೋಧಿಸಿದ್ದು, ಮಹಿಳಾ ವಿಮೋಚನೆಯ ಕುರಿತ ಅಂಬೇಡ್ಕರವರ ವಿಚಾರಗಳನ್ನು ವ್ಯಕ್ತಪಡಿಸಲು ಅವರೆಂದೂ ಧೈರ್ಯ ತಾಳಲಿಲ್ಲ. ಹಾಗೇನಾದ್ರೂ ಆಗಿದ್ದಲ್ಲಿ ಅಂಬೇಡ್ಕರವರ ವಿಚಾರಗಳಿಗೆ ಭಾದ್ಯಸ್ಥರನ್ನಾಗಿ ರಿತಾಂಬರ ಮತ್ತು ಉಮಾ ಭಾರತಿಯವರನ್ನು ನಾವು ಪಡೆಯಬಹುದಾಗಿತ್ತು.

> ನಾನು ಪ್ರಜ್ಞಾಪೂರ್ವಕವಾಗಿ ಗ್ರಹಿಸಿರುವ ಸಂಗತಿಯೆಂದರೆ ಮಹಿಳೆಯರನ್ನು ಜಾಗೃತಗೊಳಿಸಿದ್ದಲ್ಲಿ ಅಸ್ಪೃಶ್ಯ ಸಮಾಜ ಪ್ರಗತಿ ಹೊಂದುತ್ತದೆ. ನನ್ನ ನಂಬಿಕೆಯೆಂದರೆ ಮಹಿಳೆಯರು ಸಂಘಟಿತರಾಗಲೇ ಬೇಕು. ಇದು ಸಮಾಜದಲ್ಲಿನ ಪಿಡುಗುಗಳನ್ನು ನಿವಾರಿಸುವಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತದೆ. ಇದನ್ನು ನನ್ನ ಅನುಭವದಿಂದಲೇ ಹೇಳುತ್ತಿದ್ದೇನೆ. ದಲಿತ ಪ್ರಶ್ನೆಯೊಂದಿಗೆ ನಾನು ಕೆಲಸ ಮಾಡಲು ನಿರ್ಧರಿಸಿದ್ದಾಗಿನಿಂದಲೇ, ನನ್ನ ಅಚಲ ಗುರಿಯೆಂದರೆ ಪುರುಷರೊಡನೆ ಮಹಿಳೆಯರನ್ನು ಸಹ ಮುಂದೊಯ್ಯಬೇಕೆನ್ನುವುದು. ಆದ್ದರಿಂದಲೇ ಎಲ್ಲಾ ಪರಿಷತ್ತುಗಳೂ, ಜೊತೆ ಜೊತೆಯಲ್ಲೇ ಮಹಿಳಾ ಪರಿಷತ್ತುಗಳನ್ನು ಸಂಘಟಿಸುತ್ತಿರುವುದು. ದಲಿತ ಸಮುದಾಯಗಳ ಪ್ರಗತಿಯನ್ನು ಮಹಿಳೆಯರೆಷ್ಟು ಮುಂದುವರಿದಿದ್ದಾರೆಂಬುದರಿಂದ ಅಳೆಯಬೇಕಾಗುತ್ತದೆ. ಪ್ರತಿಯೊಬ್ಬ ಹೆಣ್ಣೂ ಸಹ ತನ್ನ ಗಂಡಿನೊಂದಿಗೆ ಸಮನಾಗಿ ನಿಲ್ಲಬೇಕು; ಗುಲಾಮಳಾಗಿ ಅಲ್ಲ. ಆತನ ಸಮಕಾಲೀನ ಮತ್ತು ಸ್ನೇಹಿತಳಾಗಿ.

ಮೂಲ : ಪ್ರತಿಮಾ ಪರ್ದೇಶಿ   ಕನ್ನಡಕ್ಕೆ ಅನು : ದಿ.ದಾ.ಚ.

ಮಾರ್ಕ್ಸಿಸ್ಟ್ ಬಳಗದವರಾದ ಕಾಮ್ರೇಡ್ ಪ್ರಭಾಕರ್ ಸಂಸ್‌ಗಿರಿಯವರು ಪ್ರಕಟಿಸಿದ ಕೃತಿಯು ಎಂದಿನಂತೆ, ಅಂಬೇಡ್ಕರವರು ಸ್ವಯಂತಂತ್ರವಾದಿ (ಲಿಬರಲ್) ಎಂದು ವಿಶ್ಲೇಷಿಸಿತ್ತಷ್ಟೆ. ಆದ್ದರಿಂದ ಈ ಬಳಗವೂ ಸಹ ಡಾ. ಅಂಬೇಡ್ಕರವರು ಮಹಿಳಾ ವಿಮೋಚನೆಯ ಬಗ್ಗೆ ವ್ಯಕ್ತಪಡಿಸದ ವಿಚಾರಗಳನ್ನು ವಿಶ್ಲೇಷಣೆಗೆ ಒಳಪಡಿಸಲಿಲ್ಲ.

ಅಂಬೇಡ್ಕರ್ ಬಳಗವೆಂದು ಬಡಾಯಿಕೊಚ್ಚುವ ದಲಿತ ರಾಜಕೀಯ ಪಕ್ಷಗಳು ಮತ್ತು ಸಂಘಟನೆಗಳೂ ಸಹ, ಎಂದೂ ಮಹಿಳಾ ವಿಷಯಗಳ ಬಗ್ಗೆ ದೃಢ ನಿಲುವನ್ನು ತಾಳಲಿಲ್ಲ ಮತ್ತು ಆ ಕುರಿತ ಅಂಬೇಡ್ಕರವರ ಮುಖ್ಯ ಬರಹಗಳನ್ನು ಅವಗಣಿಸಿದ್ದಾರೆ. (ನಿರ್ಲಕ್ಷಿಸಿದ್ದಾರೆ). ದುರಂತವೆಂದರೆ ದಲಿತ ಚಳುವಳಿಯೂ ಸಹ ಇಂದಿಗೂ ಮಹಿಳಾ ವಿಮೋಚನೆಯನ್ನು ಗಂಭೀರವಾಗಿ ಭಾವಿಸಿಲ್ಲ. ಇದರಿಂದಾಗಿ ಪುರುಷ ಪ್ರಾಧಾನ್ಯ ರಾಜಕೀಯ ರೂಢಿಯೇ ಮುಂದುವರೆಯಿತು. ಆದ್ದರಿಂದ ಪ್ರತಿರೋಧ ಮತ್ತು ಸ್ವತಂತ್ರವಾದ ದಲಿತ ಮಹಿಳಾ ಸಂಘಟನೆಗಳು ರೂಪುಗೊಳ್ಳಲಾರಂಭಿಸಿದವು.

ಸ್ತ್ರೀವಾದಿ ಚಿಂತಕಿಯರು ಬಹಳಷ್ಟು ಶ್ರಮವನ್ನು ಬ್ರಾಹ್ಮಣ ಪುರುಷ ಮತ್ತು ಸ್ತ್ರೀಯರ ಬರಹಗಳನ್ನು ವ್ಯಾಖ್ಯಾನಿಸಲು ಮತ್ತು ಅರ್ಥೈಸಲು ವ್ಯಯಿಸಿದ್ದಾರೆ. ಆದರೆ, ದಲಿತ ಸ್ತ್ರೀವಾದಕ್ಕೆ ತಳಹದಿಯಾದ ಅಂಬೇಡ್ಕರವರ ಬರಹಗಳನ್ನು ಅವರ್ಯಾರೂ ಅರ್ಥೈಸಲು ಪ್ರಯತ್ನವನ್ನಾದರೂ ಮಾಡಲೇ ಇಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ ಇರುವ ಮೌನದಲ್ಲೇನೋ ಕುತಂತ್ರವಿದೆಯೆಂದು ತೋರುತ್ತದೆ. ಹಾಗಾದರೆ ಇದಕ್ಕೆ ಇರುವ ಕಾರಣಗಳನ್ನು ಪರಿಶೀಲಬೇಕೆಂದು ತೋರುತ್ತದೆ. ಈ ಹಿನ್ನೆಲೆಯಲ್ಲಿ ಮಹಿಳಾ ವಿಮೋಚನೆಗೆ ಸಂಬಂಧಿಸಿದಂತೆ ಅಂಬೇಡ್ಕರವರ ವಿಚಾರಗಳನ್ನು ಗಮನಿಸಬೇಕಾಗುತ್ತದೆ. ಅಂದರೆ ಇಲ್ಲಿನ ಉದ್ದೇಶ ಡಾ|| ಅಂಬೇಡ್ಕರವರನ್ನು ಪ್ರಶಂಶಿಸಬೇಕೆಂದೇನೂ ಅಲ್ಲ. ಬದಲು ಮಹಾತ್ಮ ಫೂಲೆ, ತಾರಾಬಾಯಿ ಶಿಂಧೆ ಹಾಗೂ ಅಂಬೇಡ್ಕರವರ ಮೂಲಕ ಮಹಿಳಾ ವಿಮೋಚನೆಗೆ ಸಂಬಂಧಿಸಿದಂತೆ ಬ್ರಾಹ್ಮಣೇತರ ಕ್ರಾಂತಿಕಾರತ್ವವನ್ನು ಗುರುತಿಸುತ್ತಾ, ಸಮಕಾಲೀನ ಸಂದರ್ಭಕ್ಕೆ ಅದನ್ನು ಪ್ರಸ್ತುತಗೊಳಿಸುವುದೇ ಆಗಿದೆ. ಹಾಗೆಂದೇನೂ ಇದು ಸಂಪೂರ್ಣ ಮಂಡನೆಯೆಂದು ನನಗೇನೂ ಅನಿಸುವುದಿಲ್ಲ. ಮತ್ತಷ್ಟು ವಿವರಗಳು ಮತ್ತು ಸಂಗತಿಗಳನ್ನು ಹೊರತೆಗೆಯುವ ಅಗತ್ಯವಿದೆ. ಆ ನಿಟ್ಟಿನಲ್ಲಿ ಇದೊಂದು ಮೊದಲ ಹೆಜ್ಜೆಯೇ ಸರಿ.

ಮಹಿಳೆ ಮತ್ತು ಜಾತಿ : ತಮ್ಮ ಬರಹಗಳು ಮತ್ತು ಭಾಷಣಗಳಲ್ಲಿ ಡಾ|| ಅಂಬೇಡ್ಕರ್ ಸ್ಪಷ್ಟವಾಗಿ ಮಹಿಳೆಯರ ಅಧೀನತೆ ಮತ್ತು ಜಾತಿ ಪದ್ಧತಿಯ ನಡುವಿರುವ ಸಂಬಂಧವನ್ನು ಹೊರಗೆಳೆಯುತ್ತಾರೆ. ಅವರ ಪ್ರಕಾರ ಮಹಿಳೆಯರು ಜಾತಿ ವ್ಯವಸ್ಥೆಗೆ ತೆರೆದ ಹೆಬ್ಬಾಗಿಲಿದ್ದಂತೆ.

- ಜಾತಿ ವ್ಯವಸ್ಥೆ ಮಹಿಳೆಯರ ಅಧೀನತೆಯನ್ನು ಮತ್ತಷ್ಟು ಗಾಢವಾಗಿಸುತ್ತದೆ.
- ಅಂದರೆ ಬ್ರಾಹ್ಮಣ ಸಂಸ್ಕೃತಿ ಮಹಿಳೆಯರ ಅಧೀನತೆಗೆ ಪ್ರಬಲ ಕಾರಣವಾಗಿದೆ.
- ಹಿಂದೂ ಕೋಡ್ ಬಿಲ್ (ಹಿಂದೂ ಕಾನೂನು) ಜಾತಿ-ಆಧಾರಿತ ಪುರುಷ ನಿಯಮಗಳಿಗೆ ತದ್ವಿರುದ್ಧವಾಗಿದೆ.
- ದಲಿತ ಮಹಿಳೆಯರಿಗೆ ಒಂದು ಸ್ಪಷ್ಟ ಐಡೆಂಟಿಟಿ (ಅಸ್ತಿತ್ವ) ಇದ್ದು, ರಾಜಕೀಯವಾಗಿ ಪ್ರಬಲ ಶಕ್ತಿಯಾಗಿದ್ದಾರೆ.
- ಮಹಿಳೆಯರ ಮೇಲಾಗುವ ದೌರ್ಜನ್ಯವನ್ನು ವಿರೋಧಿಸಲೇ ಬೇಕಾಗುತ್ತದೆ.

(ತಮ್ಮ ಜಾತಿ ಪದ್ಧತಿಯ ವಿಶ್ಲೇಷಣಾ ಪ್ರಬಂಧದಲ್ಲಿ (ಭಾರತದಲ್ಲಿ ಜಾತಿಗಳು ಸಂ.1) ಅಂಬೇಡ್ಕರವರು ಸೂಚಿಸಿರುವಂತೆ ಜಾತಿಗಳು ಮುಚ್ಚಿಕೊಂಡ ವರ್ಗಗಳಾಗಿದ್ದು, ಅವುಗಳ ಮೂಲ ಅಸ್ಪೃಶ್ಯತೆಯಲ್ಲಿದೆ. ಅಂದರೆ ದನದ ಮಾಂಸ ತಿನ್ನುವುದರಲ್ಲಿ ಅಸ್ಪೃಶ್ಯತೆ ಅಡಗಿದೆ. ಅವರ ಪ್ರಕಾರ ಅಂತರ್‌ಜಾತಿ ವಿವಾಹದ ಗೈರು ಹಾಜರಿ ಅಥವಾ ಸ್ವಗೋತ್ರ ವಿವಾಹ ಜಾತಿ ವ್ಯವಸ್ಥೆ ಮುಖ್ಯ ಲಕ್ಷಣವಾಗಿದೆ. ಹೀಗೆ ಅವರು ಶ್ರಮವಹಿಸಿ ಮಹಿಳೆಯ ಪರಾವಲಂಬಿ ಅಧೀನತೆಯನ್ನು ಜಾತಿ ಪದ್ಧತಿಯೊಳಗೆ ಅಂತರ್ಗತವಾಗಿರುವುದನ್ನು ವಿವರಿಸುತ್ತಾರೆ.

> **ಸ್ತ್ರೀವಾದಿ ಚಿಂತಕಿಯರು ಬಹಳಷ್ಟು ಶ್ರಮವನ್ನು ಬ್ರಾಹ್ಮಣ ಪುರುಷ ಮತ್ತು ಸ್ತ್ರೀಯರ ಬರಹಗಳನ್ನು ವ್ಯಾಖ್ಯಾನಿಸಲು ಮತ್ತು ಅರ್ಥೈಸಲು ವ್ಯಯಿಸಿದ್ದಾರೆ. ಆದರೆ, ದಲಿತ ಸ್ತ್ರೀವಾದಕ್ಕೆ ತಳಹದಿಯಾದ ಅಂಬೇಡ್ಕರವರ ಬರಹಗಳನ್ನು ಅವರ್ಯಾರೂ ಅರ್ಥೈಸಲು ಪ್ರಯತ್ನವನ್ನಾದರೂ ಮಾಡಲೇ ಇಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ ಇರುವ ಮೌನದಲ್ಲೇನೋ ಕುತಂತ್ರವಿದೆಯೆಂದು ತೋರುತ್ತದೆ. ಹಾಗಾದರೆ ಇದಕ್ಕೆ ಇರುವ ಕಾರಣಗಳನ್ನು ಪರಿಶೀಲಬೇಕೆಂದು ತೋರುತ್ತದೆ. ಈ ಹಿನ್ನೆಲೆಯಲ್ಲಿ ಮಹಿಳಾ ವಿಮೋಚನೆಗೆ ಸಂಬಂಧಿಸಿದಂತೆ ಅಂಬೇಡ್ಕರವರ ವಿಚಾರಗಳನ್ನು ಗಮನಿಸಬೇಕಾಗುತ್ತದೆ. ಅಂದರೆ ಇಲ್ಲಿನ ಉದ್ದೇಶ ಡಾ|| ಅಂಬೇಡ್ಕರವರನ್ನು ಪ್ರಶಂಶಿಸಬೇಕೆಂದೇನೂ ಅಲ್ಲ. ಬದಲು ಮಹಾತ್ಮ ಫೂಲೆ, ತಾರಾಬಾಯಿ ಶಿಂಧೆ ಹಾಗೂ ಅಂಬೇಡ್ಕರವರ ಮೂಲಕ ಮಹಿಳಾ ವಿಮೋಚನೆಗೆ ಸಂಬಂಧಿಸಿದಂತೆ ಬ್ರಾಹ್ಮಣೇತರ ಕ್ರಾಂತಿಕಾರತ್ವವನ್ನು ಗುರುತಿಸುತ್ತಾ, ಸಮಕಾಲೀನ ಸಂದರ್ಭಕ್ಕೆ ಅದನ್ನು ಪ್ರಸ್ತುತಗೊಳಿಸುವುದೇ ಆಗಿದೆ.**

ಅಂದರೆ, ಅಂಬೇಡ್ಕರವರಿಗೆ ಅಶುದ್ಧ ಅಥವಾ ಅಸ್ಪೃಶ್ಯತೆ (ಮಡಿ ಅಥವಾ ಮೈಲಿಗೆ) ಜಾತಿ ವ್ಯವಸ್ಥೆಯ ಮೂಲ ಲಕ್ಷಣಗಳಲ್ಲ. ಬದಲು ಸ್ವ-ಗೋತ್ರ ವಿವಾಹ ಆಗಿದೆ. ಈ ಸ್ವ-ಗೋತ್ರ ಪದ್ಧತಿಯನ್ನು ಹೇಗೆ ನಿಭಾಯಿಸಲಾಗುತ್ತದೆ ಮತ್ತು ಸಮಾಜದಲ್ಲಿ ಅದನ್ನು ಹೇಗೆ ಮುಂದುವರಿಸಲಾಗಿದೆ ಎಂಬುದನ್ನು ಗಮನಿಸಿದಲ್ಲಿ ಜಾತಿ ವ್ಯವಸ್ಥೆಯ ಆರಂಭ ಗೊತ್ತಾಗುತ್ತದೆ. ಯಾವ ಸಮಾಜಗಳಲ್ಲಿ ಸ್ವಗೋತ್ರ ವಿವಾಹ ಪದ್ಧತಿ ರೂಢಿಯಲ್ಲಿದೆಯೋ ಅಲ್ಲಿ ಜಾತಿಗಳು ಇರುವುದಿಲ್ಲ. ಆದಾಗ್ಯೂ ಭಾರತದಲ್ಲಿ ಜಾತಿಗಳ ಪ್ರಾಧಾನ್ಯತೆಯನ್ನು ಕಾಣುತ್ತೇವೆ. ಅಂಬೇಡ್ಕರವರ ವಿವರಣೆಯಂತೆ ಭಾರತೀಯ ಸಂದರ್ಭದಲ್ಲಿ ಜಾತಿಗಳು ಉದ್ಭವಿಸಲು ಕಾರಣ ಗುಂಪುಗಳ ನಡುವೆ ಭಿನ್ನತೆ (ವರ್ಗಗಳು)ಗಳು ಬೆಳೆಯುವುದರಿಂದ. ಅನಂತರದಲ್ಲಿ ಅವರು ಒಂದು ಸಮಾಜದಲ್ಲಿ ಹೇಗೆ ಸ್ವ-ಗೋತ್ರ ವ್ಯವಸ್ಥೆಯನ್ನು ಕಾಯ್ದುಕೊಳ್ಳಲಾಗಿದೆ ಎಂಬುದನ್ನು ಕುರಿತ ಪ್ರಶ್ನೆಯನ್ನು ತೆಗೆದುಕೊಳ್ಳುತ್ತಾರೆ. ಇದನ್ನು ಕೇವಲ ಕಟ್ಟುಪಾಡುಗಳನ್ನು ವಿಧಿಸುವುದರ ಮೂಲಕ ಕಾಯ್ದುಕೊಳ್ಳುವುದಿಲ್ಲ; ಏಕೆಂದರೆ ಯಾವಾಗ ಜನ ಹತ್ತಿರದ ಸಂಬಂಧಗಳಲ್ಲಿ ಜೀವಿಸುತ್ತಾರೋ ಮತ್ತು ಬೆರೆಯುತ್ತಾರೆ, ಅಲ್ಲಿ ಸಮಗ್ರ ಸಮಾಜವನ್ನು ನಿರ್ಮಿಸುತ್ತಾರೆ. ಇಂಥ ಸಹಜವಾದ ಮಾನವ ಪ್ರವೃತ್ತಿಯನ್ನು ನಿಯಂತ್ರಿಸಿ-ನಿರ್ಧರಿಸಲಾಗಿದೆ ಮತ್ತು ಆ ಮೂಲಕ ಜಾತಿಗಳನ್ನು ಹೇಗೆ ಹುಟ್ಟುಹಾಕಲು ಸಾಧ್ಯವಾಗಿದೆ?

ಅತ್ಯಧಿಕ ಪುರುಷರು, ಸ್ತ್ರೀಯರು : ಜಾತಿಯೊಳಗೆ ಮದುವೆಯಾಗಬೇಕೆಂಬ ನಿರ್ಬಂಧನೆ ಹಲವು ಸಮಸ್ಯೆಗಳನ್ನು ಹುಟ್ಟುಹಾಕುತ್ತದೆ. ಸಹಜವಾಗಿ, ಲಿಂಗ ಸರಾಸರಿ ಯಾವುದೇ ಗುಂಪಿನಲ್ಲಿ ಸಮ ತೋಲನದಲ್ಲಿಡಲಾಗುತ್ತದೆ. (ಅಂದರೆ ಗಂಡಸು-ಹೆಂಗಸರ ಸಂಖ್ಯೆ ಸಮನಾಗಿರುತ್ತದೆ) ಇದರಲ್ಲಿ ಯಾವುದೇ ಅಸಮತೋಲನವಾದರೂ ಅಧಿಕ ಗಂಡಸರು ಅಥವಾ ಅಧಿಕ ಮಹಿಳೆಯರು ಇರಲು ಕಾರಣವಾಗುತ್ತದೆ. ಅಂದರೆ ಹೆಂಡತಿಯೇನಾದರೂ ತೀರಿಕೊಂಡಲ್ಲಿ ಗಂಡಸು 'ಅಧಿಕ'ನೆನಿಸಿಕೊಳ್ಳುತ್ತಾನೆ. ಹಾಗೆಯೇ ಹೆಣ್ಣು ಸಹ. ಆಗ ಸಮುದಾಯಕ್ಕೆ ಸಮಸ್ಯೆ ಎದುರಾಗುತ್ತದೆ. ಇಂಥ ವ್ಯಕ್ತಿಗಳನ್ನು ನಿಭಾಯಿಸುವುದು ಹೇಗೆ? ಅಂಬೇಡ್ಕರವರ ಪ್ರಕಾರ ಲಿಂಗ ಸರಾಸರಿ ಸಮತೋಲನವನ್ನು ಕಾಯ್ದುಕೊಳ್ಳಲು ಹಾಗೂ ಸ್ವ-ಗೋತ್ರ ಪದ್ಧತಿಯನ್ನು ಉಳಿಸಿಕೊಂಡು ಜಾತಿ ಪದ್ಧತಿಯನ್ನು ಮುಂದುವರೆಸಲು ನಾಲ್ಕು ಭಿನ್ನಕ್ರಮಗಳನ್ನು ಅನುಸರಿಸಲಾಗುತ್ತದೆ: 1) ಸತಿ ಪದ್ಧತಿಯನ್ನು ಅನುಸರಿಸುವುದು, 2) ವಿಧವಾ ವಿವಾಹವನ್ನು ನಿಷೇಧಿಸುವುದು, 3) ಬಲತ್ಕಾರದ ಬ್ರಹ್ಮಚರ್ಯವನ್ನು ಅನುಸರಿಸುವುದು, 4) ವಯಸ್ಸಾದ ಗಂಡಸು ಅಥವಾ ವಿಧುರರೊಂದಿಗೆ ಹಸುಳೆ ಹೆಣ್ಣು ಮಕ್ಕಳನ್ನು ಮದುವೆ ಮಾಡಿಸುವುದು.

ತದ ನಂತರದಲ್ಲಿ ಡಾ. ಅಂಬೇಡ್ಕರವರು ಈ ರೂಢಿಗಳನ್ನು ಒಂದೊಂದಾಗಿ ವಿಶ್ಲೇಷಿಸುತ್ತಾರೆ. ಆ ಮೂಲಕ ಹೇಗೆ ಲಿಂಗ ಸರಾಸರಿ ಮತ್ತು ಜಾತಿಗಳನ್ನು ಉದ್ಭವವನ್ನು ನೋಡಿಕೊಳ್ಳಲಾಗುತ್ತದೆಂದು ಸೂಚಿಸುತ್ತಾರೆ. ಈ ಪದ್ಧತಿಗಳು ಮಹಿಳೆಯನ್ನು ಶೋಷಿಸುತ್ತವೆ. ಅಂಬೇಡ್ಕರವರು ಒತ್ತಿ ಹೇಳುವುದೇನೆಂದರೆ ಮಹಿಳೆಯನ್ನು ಲೈಂಗಿಕವಾಗಿ ಶೋಷಿಸುವುದರ ಮೂಲಕ ಜಾತಿಗಳನ್ನು ಉಳಿಸಿಕೊಳ್ಳಲಾಗುತ್ತದೆ. ಅಂದರೆ ಮಹಿಳೆಯ ಲೈಂಗಿಕತೆಯನ್ನು ನಿಯಂತ್ರಿಸುವುದರ ಮೂಲಕ ಜಾತಿಗಳ ಮುಚ್ಚಿಕೊಂಡ ಲಕ್ಷಣವನ್ನು ನಿಭಾಯಿಸಲಾಗುತ್ತದೆ, ಮತ್ತು ಈ ಪ್ರಕಾರ ಮಹಿಳೆಯರು ಜಾತಿ ಪದ್ಧತಿಯ ಹೆಬ್ಬಾಗಿಲುಗಳೆಂದು ಅಂಬೇಡ್ಕರವರು ವಾದಿಸುತ್ತಾರೆ.

ಅಂತರ್ಜಾತಿ ವಿವಾಹಗಳನ್ನು ಯಾವತ್ತೂ ಜಾತಿ ಪದ್ಧತಿ ವಿರೋಧಿಸುತ್ತದೆ; ಸಂಪ್ರದಾಯ, ಧರ್ಮ ಹಾಗೂ ಕಾನೂನು ಎಲ್ಲವೂ ಅಂತಹದನ್ನು ತಿರಸ್ಕರಿಸುತ್ತಲೇ ಸಾಗಿವೆ. ತಮ್ಮ ಕೃತಿ 'ಹಿಂದೂ ಧರ್ಮದ ತಾತ್ವಿಕತೆ' (ಫಿಲಾಸಫಿ ಆಫ್ ಹಿಂದೂಯಿಸಂ)ಯಲ್ಲಿ ಅಂಬೇಡ್ಕರವರು ಈ ಸಮಸ್ಯೆಯನ್ನು ಸುದೀರ್ಘವಾಗಿ ಚರ್ಚಿಸುತ್ತಾರೆ. ಮನುಸ್ಮೃತಿಯಿಂದ ಉಕ್ತಿಗಳನ್ನು ಉಲ್ಲೇಖಿಸುತ್ತಾ ಅವರು ತರ್ಕಿಸುವುದು ಹೀಗೆ, 'ಯಾರು ಯಾರನ್ನು ಮದುವೆಯಾಗಬೇಕೆಂದು ಕಠಿಣವಾದ ನಿರ್ಬಂಧಗಳನ್ನು ಮನು ವಿಧಿಸುತ್ತಾನೆ: ಎರಡು ಬಾರಿ ಹುಟ್ಟಿದವನು ತಾನು ಮೊದಲ ಸಲ ಮದುವೆಯಾಗುವಾಗ, ತನ್ನ ಜಾತಿಯಲ್ಲೇ ಹೆಣ್ಣನ್ನು ಮದುವೆಯಾಗುವುದು ಖಿಡ್ಡಾಯ. ತದನಂತರದ ಮದುವೆಗಳಲ್ಲಿ ಆತ ಕೆಳವರ್ಣಗಳಿಂದ ಹೆಣ್ಣನ್ನು ಮದುವೆಯಾಗಬಹುದು. ಆದಾಗ್ಯೂ, ಒಬ್ಬ ಶೂದ್ರ ಹೆಂಗಸು, ಶೂದ್ರ ಗಂಡಸನ್ನೇ ಮದುವೆಯಾಗಬೇಕು. ಹೀಗೆ ಅಂತರ್ಜಾತಿ, ವಿವಾಹಕ್ಕೆ ಮನು ವಿರುದ್ಧವಾಗಿರುವುದು ಸ್ಪಷ್ಟವಾಗಿದೆ. ಅಲ್ಲದೆ ತನ್ನ ವರ್ಣದಿಂದಲೇ ಹೆಣ್ಣೊಬ್ಬಳು ವಿವಾಹವಾಗುವುದು ವಿಧಿಬದ್ಧವಾಗುತ್ತದೆ. ಈ ಕಠಿಣ ನಿಯಮದ ಮಧ್ಯೆಯೂ ಅಂತರ್ಜಾತಿ ವಿವಾಹವೇನಾದರೂ ನಡೆದಲ್ಲಿ, ಅದನ್ನು ನಿಯಂತ್ರಿಸಲು ಇದ್ದ ವಿಧಿಯೂ ಸಹ ಪುರುಷ ಪ್ರಧಾನವಾಗಿದ್ದು, ಪೂರ್ವಗ್ರಹ ಪೀಡಿತವಾಗಿತ್ತು. ಅಲ್ಲಿ ಎರಡು ವಿಧದ ಅಂತರ್ಜಾತಿ ವಿವಾಹಗಳಿದ್ದವು: ಪ್ರತಿಲೋಮ (ಹೈಪೋಗಮಿ) ಮತ್ತು ಅನುಲೋಮ (ಹೈಪರ್‌ಗಮಿ). ಪ್ರತಿಲೋಮ ರೀತಿಯ ಮದುವೆಯು ಒಪ್ಪಿತವಾಗಿರುವುದಿಲ್ಲ. ಏಕೆಂದರೆ ಇಲ್ಲಿ ಮಹಿಳೆಯು ತನ್ನ ಜಾತಿಯ ನಿಯಮಗಳನ್ನು ಉಲ್ಲಂಘಿಸುತ್ತಾಳೆ. ಇಂತಹ ಉಲ್ಲಂಘನೆಯು ಜಾತಿ ಪದ್ಧತಿಯ ಅವನತಿಗೆ ಕಾರಣವಾಗುತ್ತಿತ್ತಾದ್ದರಿಂದ, ಅಂತಹದ್ದನ್ನು ಕ್ರೂರವಾಗಿ ಶಿಕ್ಷಿಸಲಾಗುತ್ತಿತ್ತು ಮತ್ತು ಬಹಿಷ್ಕರಿಸಲಾಗುತ್ತಿತ್ತು. ಅಂತಹ ಮದುವೆಗಳನ್ನು ನಿಷೇಧಿಸಲು ಬೇಕಾದ ಐಡಿಯಾಲಾಜಿಕಲ್ ನೆಲೆಯನ್ನು ಧರ್ಮವು ಸಮರ್ಥಿಸುತ್ತಿತ್ತು. ಇದು ಚಾರಿತ್ರಿಕವಾಗಿ ಬೆಂಬಲಿತವಾಗಿರುವುದಕ್ಕೆ ಸಾಕ್ಷಿಗಳು ದೊರೆಯುತ್ತವೆ.

ಗೇಲ್ ಒಮ್‌ವೆಡ್ತ್, ತಮ್ಮ ಕೃತಿ 'ದಲಿತರು ಮತ್ತು ಪ್ರಜಾಸತ್ತಾತ್ಮಕ ಕ್ರಾಂತಿ'ಯಲ್ಲಿ ಅಂತಹ ಒಂದು ಉದಾಹರಣೆಯನ್ನು ನೀಡುತ್ತಾರೆ. ಮಲ್ಲ ಎಂಬ ಜಾತಿಯ ಬುದ್ಧಿವಂತನೊಬ್ಬನು ಬ್ರಾಹ್ಮಣ ಹೆಂಗಸೊಬ್ಬಳನ್ನು ವಿವಾಹವಾಗುತ್ತಾನೆ. ಈ ವ್ಯಕ್ತಿ ಜ್ಞಾನದಾಹಿಯಾಗಿ ತನ್ನ ಜಾತಿಯನ್ನು ಬಚ್ಚಿಟ್ಟು ಬ್ರಾಹ್ಮಣ ಮನೆಯಲ್ಲಿ ನೆಲೆಸುತ್ತಾನೆ. ಈತನ ಬುದ್ಧಿವಂತಿಕೆಗೆ ಮಾರುಹೋದ ಆ ಬ್ರಾಹ್ಮಣನ ಮಗಳು ಆತನನ್ನು ಮದುವೆಯಾಗುತ್ತಾಳೆ. ತನ್ನ ಗಂಡ ಅಸ್ಪೃಶ್ಯನೆಂದು ಆಕೆಗೆ ಗೊತ್ತಾದಾಕ್ಷಣ, ಆಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಏಕೆಂದರೆ ಆಕೆಯ ಮದುವೆ ಪ್ರತಿಲೋಮ ರೀತಿಯದ್ದಾಗಿತ್ತು. ಆದ್ದರಿಂದ ಈ ದಂಪತಿಗಳನ್ನು ಸಮಾಜದಿಂದಲೇ ಕಿತ್ತೊಗೆಯಲಾಗುತ್ತಿತ್ತು. ಈ ಸಂಗತಿಯಿಂದಾಗಿಯೇ ಅಂಬೇಡ್ಕರವರು, 'ಹೆಂಗಸರು ಜಾತಿ ಪದ್ಧತಿಯ ಹೆಬ್ಬಾಗಿಲುಗಳೆಂದು ನಿರ್ಣಯಿಸಿದ್ದು, ಇದೇ ವಿಷಯ ಮಹಾಡ್ ಸತ್ಯಾಗ್ರಹ ಪರಿಷತ್ತಿನಲ್ಲಿ ಅವರು ಪುನರುಚ್ಚರಿಸುತ್ತಾರೆ.

ಇಂದಿಗೂ ಇದು ಒಳಗೊಳ್ಳುವ ಸಮಾಜವಲ್ಲ

ನನ್ನ ನಾಗರೀಕ ಬಂಧುಗಳೇ, ಒಂದು ಸಮಾಜದ ಅಭಿವೃದ್ಧಿಯ ಸ್ಪಷ್ಟವಾದ ಮಾನದಂಡವೆಂದರೆ ಆ ಸಮಾಜದಲ್ಲಿ ಮಹಿಳೆಯೆಷ್ಟು ಸ್ಥಾನ-ಮಾನವನ್ನು ಅನುಭವಿಸುತ್ತಿದ್ದಾಳೆಂಬುದು. ಮಹಿಳೆಯ ಹಕ್ಕುಗಳನ್ನು ಮಾನವ ಹಕ್ಕುಗಳೆಂದು ಪರಿಗಣಿಸಿದ್ದರೂ ಸಹ, ಅವುಗಳು ಮಾನವನ ಅತ್ಯುತ್ತಮ ಸಂಪನ್ಮೂಲಗಳಾಗಿವೆ ಹಾಗೂ ಅಭಿವೃದ್ಧಿಯ ಕೇಂದ್ರ ಪಾತ್ರಧಾರಿಗಳಾಗಿದ್ದರೂ... ನಮ್ಮ ಸಮಾಜದಲ್ಲಿ ಅವುಗಳ ಸ್ಥಾನ ದುಃಸ್ಥಿತಿ ಯದ್ದಾಗಿದೆ...2001ನೇ ವರ್ಷವನ್ನು ನಾವು ಮಹಿಳಾ ಸಶಕ್ತೀಕರಣದ ವರ್ಷವನ್ನಾಗಿ ಘೋಷಿಸಿದ್ದೇವೆ. ಪ್ರಸ್ತುತ ಸ್ಥಾನದಿಂದ ಅವರನ್ನು ಮೇಲೆತ್ತಲು ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಮಾಹಿತಿ ಹಕ್ಕು, ನದಿ ಪುನರುಜ್ಜೀವನ ಕಾರ್ಯಕ್ರಮಗಳು ಮತ್ತು ಮಳೆನೀರು ಸಂಗ್ರಹಣೆ ಹಾಗೂ ನೀರು ನಿರ್ವಹಣಾ ಯೋಜನೆಗಳ ಚಳುವಳಿಗಳು ಮತ್ತು ಪ್ರಚಾರಾಂದೋಲನಗಳಲ್ಲಿ ಸಕ್ರೀಯವಾಗಿ ಸಾಮಾನ್ಯ ಹಾಗೂ ಬಡ ಮಹಿಳೆಯರು ಭಾಗವಹಿಸುವುದನ್ನು ನೋಡುವಾಗ ಸಮಾಧಾನವೆನಿಸುತ್ತದೆ. ಬುಡಮಟ್ಟದಲ್ಲಿ ನಮ್ಮ ಅನೇಕ ಅಭಿವೃದ್ಧಿ

ಮಹಿಳಾ ಚಳುವಳಿ ಇಂದು ಪ್ರಮುಖ ಘಟ್ಟವನ್ನು ತಲುಪಿದ್ದು, ಒಂದರ ನಂತರ ಇನ್ನೊಂದಂತೆ ಮೈಲುಗಲ್ಲನ್ನು ಮುಟ್ಟುತ್ತಿದೆಯಾದರೂ, ಮಹಿಳೆಯ ಮೇಲಾಗುವ ನಿರಂತರವಾದ, ಅಪಮಾನ ಮತ್ತು ದೌರ್ಜನ್ಯಗಳು ಮಾತ್ರ ಕಮ್ಮಿಯಾಗಿಲ್ಲ.

ಕಾರ್ಯಕ್ರಮಗಳಲ್ಲಿ ಒಂದು ತಾಂತ್ರಿಕ ಬದಲಾವಣೆಯು ಒಂದು ಮಿಲಿಯನ್ ಮಹಿಳೆಯರು ಪಂಚಾಯತಿ ರಾಜ್ಯ ವ್ಯವಸ್ಥೆಯ ಸಂಸ್ಥೆಗಳಿಗೆ ಚುನಾಯಿತರಾಗಿದ್ದು, ಅವುಗಳಲ್ಲಿ ಅವರು ತೊಡಗಿರುವುದರಿಂದ ಸಾಧ್ಯವಾಗಿದೆ.

ಮಹಿಳಾ ಚಳುವಳಿ ಇಂದು ಪ್ರಮುಖ ಘಟ್ಟವನ್ನು ತಲುಪಿದ್ದು, ಒಂದರ ನಂತರ ಇನ್ನೊಂದಂತೆ ಮೈಲುಗಲ್ಲನ್ನು ಮುಟ್ಟುತ್ತಿದೆಯಾದರೂ, ಮಹಿಳೆಯ ಮೇಲಾಗುವ ನಿರಂತರವಾದ, ಅಪಮಾನ ಮತ್ತು ದೌರ್ಜನ್ಯಗಳು ಮಾತ್ರ ಕಮ್ಮಿಯಾಗಿಲ್ಲ. ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ ಒಂದು ದಿನವಾದರೂ ಅಂತಹ ಕ್ರೂರ ಘಟನೆಗಳನ್ನು ನೋಡಲಾಗದು.

ದೇಶದಲ್ಲಿ ವರದಕ್ಷಿಣೆ ಪಿಡುಗಿನಿಂದಾಗಿ ಎಳೆ ವಯಸ್ಸಿನಲ್ಲೇ ಮಹಿಳೆಯರ ಬದುಕು ಅಂತ್ಯಗೊಂಡರೆ, ಭ್ರೂಣ ಹತ್ಯೆ ದಿನೇ ದಿನೇ ತೀವ್ರವಾಗುತ್ತಿದೆ. ಅತ್ಯಾಚಾರದ ಘಟನೆಗಳು, ಕೌಟುಂಬಿಕ ಹಿಂಸೆ, ಕೆಲಸದ ಜಾಗದಲ್ಲಿ ಲೈಂಗಿಕ ಕಿರುಕುಳ ಹಾಗೂ ಮಹಿಳಾ ವೈಶ್ಯಾವಾಟಿಕೆ ಅಗಾಧವಾಗಿ ಹೆಚ್ಚಾಗುತ್ತಿವೆ. ಭಾರತದಲ್ಲಿ ಅರ್ಧದಷ್ಟು ಕೊಲೆಗೀಡಾಗುವ ಮಹಿಳೆಯರು ಹಾಸಿಗೆ ಕೋಣೆಗಳಲ್ಲಿ ಹತ್ಯೆಗೀಡಾಗುವವರಾಗಿದ್ದಾರೆ. ಲೈಂಗಿಕ ಕಿರುಕುಳ ಮೊಕದ್ದಮೆಗಳು 40%, ವರದಕ್ಷಿಣೆ ಸಾವು 15% ಹಾಗೂ ಹುಡುಗಿಯರ ಸಾಗಾಣೆ 87.2% ಹೆಚ್ಚಾಗಿರುವುದು 1998ರ ಸಾಲಿನಲ್ಲಿ. ಇದು ಮಹಿಳೆಯರ ದಾರುಣ ಅಸ್ತಿತ್ವವನ್ನು ಸೂಚಿಸುತ್ತವೆ. ಅವರಿಗಾವುದೇ ಜಾಗವೂ, ಅಂದರೆ ತಾಯಿಯ ಗರ್ಭವೂ ಸಹ ಸುರಕ್ಷಿತವಾಗಿಲ್ಲ. ಅವರು ಹುಟ್ಟುವ ಮುನ್ನವೇ ಅವರನ್ನು ಕೊಲ್ಲಲಾಗುತ್ತದೆ. ಕೌರವರ ಆಸ್ಥಾನದಲ್ಲಿ ದ್ರೌಪದಿಗಾದ ಅನುಭವ-ಅಪಮಾನ, ನಮ್ಮ ದೇಶದಲ್ಲಿ ಮಹಿಳೆಯರಿಗೆ ದೊರೆಯುತ್ತಿರುವ ಅವಗಣನೆಗೆ ಸಾಂಕೇತಿಕವಾಗಿದೆ. ಶ್ರೀ ಅಟಲ್ ಬಿಹಾರಿ ವಾಜಪೇಯಿಯವರ ಕವನಗಳಲ್ಲಿ ಒಂದನ್ನು ಉಲ್ಲೇಖಿಸುವುದಾದರೆ, 'ಪ್ರತಿಯೊಂದು ಪಂಚಾಯತಿಯಲ್ಲಿಯೂ ಸಹ ದ್ರೌಪದಿಯ ಗೌರವವನ್ನು ಕದಿಯಲಾಗಿದೆ"

ಆಕೆ ಇಂದು ಕೇವಲ ಪಂಚಾಯತಿಗಳಲ್ಲಿ ಮಾತ್ರ ಅಗೌರವಕ್ಕೊಳಗಾಗಿರದೆ, ನಗರ ಸಾರಿಗೆ ಬಸ್ಸುಗಳಲ್ಲಿ, ನಗರದ ಬೀದಿಗಳಲ್ಲಿ ಹಾಗೂ ಆಕೆ ಸ್ವಂತ ಮನೆಯಲ್ಲಿಯೂ ಅಗೌರವಗೊಂಡಿದ್ದಾಳೆ. ನಮ್ಮ ದೇಶದಲ್ಲಿ ಈ ಅಸಮಾನತೆ ಮತ್ತು ಅಪಮರ್ಯಾದೆಯನ್ನು ಮಹಿಳೆಯರಿಂದ ದೂರಕ್ಕೆಸೆಯಲು ಇದು ಸೂಕ್ತ ಸಮಯವಾಗಿದೆ. ಬುಡಮಟ್ಟದಲ್ಲಿ ಮಹಿಳಾ ಚಳುವಳಿಗಳ ಯಶಸ್ಸು ಅದನ್ನು ನಮಗೆ ಸಾಧ್ಯವಾಗಿಸಿ ತೋರಿಸಿದೆ. ಹಾಗೆಯೇ ನಾವು ಮಾಡಬೇಕಾಗಿದೆ.

ಭಾರತದಲ್ಲಿನ ಮಹಿಳೆಯರ ಅಸಮಾನತೆಗಳು ಹಾಗೂ ಅನ್ಯಾಯಗಳು ನಮ್ಮ ಸಮಾಜದಲ್ಲಿ ಸಾಮಾನ್ಯವಾಗಿ ಬಿಟ್ಟಿವೆ. ಇಂದಿಗೂ, ಪ್ರಜಾಪ್ರಭುತ್ವದ ರಾಜಕೀಯ ಯಶಸ್ಸಿನ ಮಧ್ಯೆಯೂ ಸಹ ನಮ್ಮ ಸಮಾಜ ಒಳಗೊಳ್ಳುವ ಸಮಾಜವಲ್ಲದಿರುವುದು ಸೋಜಿಗದ ಸಂಗತಿಯೇ ಸರಿ. ತಾರತಮ್ಯಕ್ಕೊಳಗಾಗಿರುವ [illegible], ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳಿಂದ ಸಂವಿಧಾನಾತ್ಮಕವಾದ ಪ್ರಜಾಪ್ರಭುತ್ವವನ್ನು [illegible] ನಿರಂತರವಾದ [illegible] ಕಾರಣವಾಗಿದೆ.

-ಕೆ.ಆರ್. ನಾರಾಯಣನ್

(ಗಣರಾಜ್ಯೋತ್ಸವ ಸಂದರ್ಭದಲ್ಲಿ ರಾಷ್ಟ್ರವನ್ನುದ್ದೇಶಿಸಿ ಮಾಡಲಾದ ಭಾಷಣದ ಸಂಗ್ರಹ, ನವದೆಹಲಿ, 25 ಜನವರಿ 2002)

ಈ ಭಾಷಣದಲ್ಲಿ 'ದಲಿತ ಸ್ತ್ರೀ ವಾದ'ವೆನ್ನಬಹುದಾದ ಒಂದು ವ್ಯಾಖ್ಯೆಯನ್ನು ನಾವು ಕಾಣಬಹುದಾಗಿದೆ. ಅವರ ಪ್ರಕಾರ, "ಅಸ್ಪೃಶ್ಯತೆಯ ನಿವಾರಣೆಯ ಪ್ರಶ್ನೆ ಗಂಡಸರಿಗಿಂತ ಅಧಿಕವಾಗಿ ಹೆಂಗಸರದ್ದಾಗಿದೆ. ಗಂಡಸರಾದ ನಮಗೆ ಜನ್ಮ ಕೊಟ್ಟವರು ನೀವು. ಆದರೆ ಬೇರೆಯವರು ನಮ್ಮನ್ನು ಪ್ರಾಣಿಗಳಿಗಿಂತ ಕಡೆಯಾಗಿ ಪರಿಗಣಿಸುತ್ತಾರೆ....ಕೆಲವೆಡೆ ನಮ್ಮ ನೆರಳೂ ಸಹ ಬೀಳಲು ಬಿಡರು. ಬೇರೆಯವರು ಸರ್ಕಾರ ಮತ್ತು ಕಛೇರಿಗಳಲ್ಲಿ ಅತ್ಯುನ್ನತ ಸ್ಥಾನಗಳನ್ನು ಪಡೆಯುತ್ತಾರೆ. ಆದರೆ ನಿಮಗುಟ್ಟಿದವರಾದ ನಾವು ಅತ್ಯಂತ ಕೆಳ ದರ್ಜೆಯ ಸ್ಥಾನವನ್ನು ಪಡೆಯುತ್ತೇವೆ. ಏಕೆಂದರೆ ನಾವು ಕೆಳಸ್ಥಾನದವರೆಂದು ಪರಿಗಣಿಸಲಾಗಿದೆ...ಈ ಸಭೆಯಲ್ಲಿ ಕುಳಿತಿರುವ ಸವರ್ಣೀಯ ಮಹಿಳೆ ಮತ್ತು ಕಾಯಸ್ಥ ಮಹಿಳೆಯರ ಮಕ್ಕಳಿಗಿಂತ ನಾವು ಭಿನ್ನರಾಗಿರುವುದು ಹೇಗೆ? ನೀವು ಬ್ರಾಹ್ಮಣ ಮಹಿಳೆಯರಂತೆಯೇ, ಸ್ವಭಾವವನ್ನು ಹೊಂದಿದ್ದೀರಿ. ಆದರೂ ಅವರ ಸಂತತಿ ಎಲ್ಲರಿಗೂ ಒಪ್ಪಿತವಾದರೆ, ನಿಮಗೆ ಹುಟ್ಟಿದವರಿಗೆ ಅವಮಾನಿಸುವುದಲ್ಲದೆ, ಮಾನವರಾಗಿ ಜೀವಿಸುವ ಮೂಲಭೂತ ಹಕ್ಕನ್ನೂ ಸಹ ನೀಡುವುದಿಲ್ಲ ಏಕೆ? ಇದನ್ನು ನೀವೇಂದಾದರೂ ಯೋಚಿಸಿದ್ದೀರಾ? ನಿಮ್ಮ ಹೊಟ್ಟೆಯಿಂದ ಜನಿಸುವುದು ಪಾಪವೇ? (ಮಹಾಡ್ ಸತ್ಯಾಗ್ರಹ ಪರಿಷತ್ತಿನಲ್ಲಿ ಅಂಬೇಡ್ಕರವರು ಮಾಡಿದ ಭಾಷಣವನ್ನು 1928ರಲ್ಲಿ ಬಹಿಷ್ಕೃತ ಭಾರತದಲ್ಲಿ ಪ್ರಕಟಿಸಿದ್ದು)

ಜಾತಿ ಪದ್ಧತಿ ಮತ್ತು ಮಹಿಳೆಯರ ಅಧೀನತೆಯ ನಡುವೆ ಸಂಬಂಧವನ್ನು ಏರ್ಪಡಿಸುತ್ತಾ, ಡಾ. ಅಂಬೇಡ್ಕರವರು ಹೇಳುವುದೇನೆಂದರೆ ಜಾತಿ ಪದ್ಧತಿಯು ಶ್ರೇಣೀಕೃತವಾಗಿರುವುದರಿಂದ, ಮಹಿಳೆಯ ಸ್ಥಾನ ಅದರಲ್ಲಿ ಕೆಳಗಿದ್ದಷ್ಟು ಅವರ ಶೋಷಣೆ ಅಧಿಕವಾಗುತ್ತದೆ...ಆದ್ದರಿಂದ ಮಹಿಳೆಯರೆಲ್ಲ ಜಾತಿ ವಿನಾಶ ಹೋರಾಟದಲ್ಲಿ ಪಾಲ್ಗೊಳ್ಳಲು ಅವರು ಕರೆ ನೀಡುತ್ತಾರೆ.

ಮನುವಿನ ಮಹಿಳೆಯರು : 'ಹಿಂದೂ ಮಹಿಳೆಯರ ಏಳು-ಬೀಳು' ಎನ್ನುವ ಪ್ರಬಂಧದಲ್ಲಿ ಡಾ|| ಅಂಬೇಡ್ಕರವರು, ಮಹಿಳೆಯರು ಗುಲಾಮಗಿರಿಯ ಪ್ರಪಾತಕ್ಕೆ ನಿಲುಕಿಸಿರುವ ಬ್ರಾಹ್ಮಣ ಸಂಸ್ಕೃತಿ, ಪಠ್ಯಗಳು ಮತ್ತು ಧಾರ್ಮಿಕ ವಿಧಿಗಳನ್ನು ವಿವರವಾಗಿ ವಿಶ್ಲೇಷಿಸಲು ತೊಡಗುತ್ತಾರೆ. ಪ್ರಾಚೀನ ಕಾಲದಿಂದಲೂ ಹಿಂದೂ ಕುಟುಂಬದಲ್ಲಿ ಮಗಳು ಹುಟ್ಟಿದರೆ ದುಃಖದ ಸಂಗತಿಯಾಗುತ್ತದೆಂದು ಅಂಬೇಡ್ಕರ್‌ರವರು ಹೇಳುತ್ತಾರೆ. ಬೌದ್ಧ ಪರಂಪರೆ ಇದಕ್ಕೆ ತದ್ವಿರುದ್ಧವಾಗಿ ನಿಲ್ಲುತ್ತದೆ. ಮಗಳು ಹುಟ್ಟುವುದೆಂದರೆ ದುಃಖದ ಘಟನೆಯೆಂದು ಬುದ್ಧ ಎಂದೂ ಭಾವಿಸಿರಲಿಲ್ಲ. ಇದನ್ನು ಸಮರ್ಥಿಸಲು ಡಾ|| ಅಂಬೇಡ್ಕರವರು ಬೌದ್ಧ ಸಾಹಿತ್ಯದಿಂದ ಒಂದು ಸಂವಾದವನ್ನು ಹೆಣೆದುಕೊಡುತ್ತಾರೆ; ಅದು ಬುದ್ಧ ಮತ್ತು ರಾಜ ಪ್ರಸಂಜೀತ್ ನಡುವೆ ನಡೆಯುತ್ತದೆ. ರಾಜ ಪ್ರಸಂಜೀತ್ ಹೆಣ್ಣು ಹುಟ್ಟಿದ ಕಾರಣಕ್ಕಾಗಿ ಬೇಸರಗೊಂಡಿರುತ್ತಾನೆ. ಆತನ ಬೇಸರಕ್ಕೆ ಕಾರಣವನ್ನು ಬುದ್ಧ ಕೇಳುತ್ತಾನೆ. ಕಾರಣ ತಿಳಿದ ಬುದ್ಧ, ಮಗಳು ಹುಟ್ಟಿರುವುದಕ್ಕೆ ದುಃಖಿಸುವ ಅಗತ್ಯವಿಲ್ಲ. ಏಕೆಂದರೆ ಮಗಳು ಮಗನಿಗಿಂತ ಅಧಿಕವಾಗಿ ಪ್ರತಿಭೆಯನ್ನು ಹೊಂದಿದ್ದಾಳೆಂದೂ, ಈ ಮಗಳು ಮುಂದೆ ಗುಣವಂತಳು ಹಾಗೂ ಬುದ್ಧಿವಂತಳಾಗುತ್ತಾಳೆಂದು ಹೇಳುತ್ತಾನೆ.

ಕಲಾಕೃತಿ : ಎಂ. ಕ್ಯೂ. ಮುತ್ತುಸ್ವಾಮಿ

ಹೀಗೆ ಡಾ. ಅಂಬೇಡ್ಕರ್‌ರವರು ಬುದ್ಧ ಹೇಗೆ ತನ್ನ ಸಂಘದೊಳಗೆ ಹೆಂಗಸರನ್ನು ಒಪ್ಪಿದ್ದ ಎಂಬುದನ್ನು ಎತ್ತಿ ತೋರಿಸುತ್ತಾರೆ. ಆದರೆ ಹಿಂದೂ ಧರ್ಮ ಮತ್ತೊಂದು ಬದಿಯಲ್ಲಿ ಜ್ಞಾನದ ಯಾವುದೇ ಅವಕಾಶವನ್ನು ಮಹಿಳೆಗೆ ತಿರಸ್ಕರಿಸುತ್ತದೆ; ಸನ್ಯಾಸ ವ್ರತವನ್ನು ಶೂದ್ರರಿಗೆ ಮತ್ತು ಮಹಿಳೆಯರಿಗೆ ಕೊಡಲಾಗುವುದಿಲ್ಲ. ಇದಕ್ಕೆ ಕಾರಣಗಳು ಮನುವಿನ ಆಜ್ಞೆಯಲ್ಲಿ ಗುರುತಿಸಬೇಕಾಗುತ್ತದೆ. ಅಲ್ಲಿ ಮಹಿಳೆ ವೇದಗಳನ್ನು ಕಲಿಯುವ ಹಕ್ಕು ಹೊಂದಿಲ್ಲ. ಆದ್ದರಿಂದಲೇ ಮಹಿಳೆಯರಿಗೆ ಅಂತ್ಯ ಸಂಸ್ಕಾರಗಳನ್ನು ಮಾಡುವಾಗ ಪಾಪ ನಿವಾರಕ ವೇದ-ಮಂತ್ರಗಳನ್ನು ಪಠಿಸಲಾಗುವುದಿಲ್ಲ. ಹೀಗೆ ಮಹಿಳೆಗೆ ವೇದಾಧ್ಯಯನವನ್ನು ತಿರಸ್ಕರಿಸಿದ ಬ್ರಾಹ್ಮಣ ಸಂಸ್ಕೃತಿ ಆಕೆಯನ್ನು ನಿರಂತರವಾಗಿ ಅಸತ್ಯ ಮತ್ತು ಪಾಪದವಳೆಂದು ಬರೆಯುತ್ತದೆ.

ಈ ಮನುವಿನ ಕಾನೂನು ಬ್ರಾಹ್ಮಣ ಪಠ್ಯಗಳ ಪರಂಪರೆಯ ಮೇರೆಗೆ ಇದೆಯಲ್ಲದೆ, ಈ ಹಿಂದೆಯೂ ಅದೇ ನಿಯಮ ವಿಧಿಬದ್ಧವಾಗಿತ್ತು. ಇದು, ಅಂಬೇಡ್ಕರವರು ಹೇಳುವಂತೆ ಭಾರತದಲ್ಲಿ ಮಹಿಳೆಯ ಸರ್ವನಾಶಕ್ಕೆಡೆ ಮಾಡುತ್ತದೆ. ಜ್ಞಾನ ಪ್ರಕ್ರಿಯೆಯಲ್ಲಿ ಎಲ್ಲಾ ಮಾನವರು ಪಾಲ್ಗೊಳ್ಳಲು ಸ್ವಾಭಾವಿಕ ಹಕ್ಕಿದೆ, ಆದರೆ ಕಾರಣವಿಲ್ಲದೆ ಇದನ್ನು ಬ್ರಾಹ್ಮಣರು ಮಹಿಳೆಗೆ ವಂಚಿಸಿದ್ದಾರೆ. ಬ್ರಾಹ್ಮಣ ಸಂಸ್ಕೃತಿಯ ನಂಬುಗೆಯಂತೆ ಒಬ್ಬ ಗಂಡಸು ಯಾವುದೇ ಆಧ್ಯಾತ್ಮಿಕ ಜ್ಞಾನವಿಲ್ಲದೆ, ಕೇವಲ ಪುರುಷನಾಗಿರುವುದರಿಂದಲೇ ದೈವಕ್ಕೆ ಹತ್ತಿರದವನಾಗುತ್ತಾನೆ. ಇದು ಹೇಗೆ? ಇದು ಏಕೆ ಹೆಣ್ಣಿಗೆ ಅನ್ವಯವಾಗುವುದಿಲ್ಲ? ಎಂದು ಅಂಬೇಡ್ಕರವರು ಕೇಳುತ್ತಾರೆ. ಜ್ಞಾನ ಕ್ಷೇತ್ರದಲ್ಲಿ ಬ್ರಾಹ್ಮಣ ಬಳಗ ಮಹಿಳೆಗೆ ಅಗಾಧ ರೀತಿಯ ಅನ್ಯಾಯವನ್ನೆಸಗಿದೆ. ಬುದ್ಧ ಮಹಿಳೆಗೆ 'ಪಾರಿವ್ರಜ'ಕ್ಕೆ ಅವಕಾಶ ನೀಡುವುದರ ಮೂಲಕ ಅದಕ್ಕೆ ಅಂತ್ಯವನ್ನಾಡುತ್ತಾನೆ. ಗಂಡಸರಂತೆ ಮಹಿಳೆಯೂ ಸಹ ಜ್ಞಾನದಲ್ಲಿ ಭಾಗಿಯಾಗುತ್ತಾಳೆ ಮತ್ತು ಆಧ್ಯಾತ್ಮಿಕ ಜ್ಞಾನೋದಯದ ಅನುಭವವನ್ನು ಪಡೆಯಲು ಶಕ್ತಳಾಗುತ್ತಾಳೆ. ಆದ್ದರಿಂದ ಅಂಬೇಡ್ಕರವರ ಪ್ರಕಾರ ಬುದ್ಧ ಭಾರತೀಯ ಮಹಿಳೆಯನ್ನು ತನ್ನ ಗುಲಾಮಿತನದಿಂದ ಬಿಡಿಸಿದ್ದಲ್ಲದೆ, ಆಕೆಯ ಬದುಕಿನಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತರುತ್ತಾನೆ.

ಹಿಂದೂ ಸಂಹಿತೆ ಮಸೂದೆ (ಹಿಂದೂ ಕೋಡ್ ಬಿಲ್) : ಸ್ತ್ರೀ ದ್ವೇಷಿ ಮತ್ತು ಮಹಿಳೆಯನ್ನು ವಸ್ತುವನ್ನಾಗಿಸುವ ಮನುವಿನ ನಿಯಮಗಳನ್ನು ಡಾ|| ಅಂಬೇಡ್ಕರವರು ಬದಲಾಯಿಸಲು ಬಯಸುತ್ತಾರೆ. ಆದ್ದರಿಂದ, ಸ್ವಾತಂತ್ರ್ಯೋತ್ತರ ಕಾಲದಲ್ಲಿ, ಸಂವಿಧಾನ ಶಿಲ್ಪಿಯಾಗಿ, ಅವರು ಮಹಿಳೆಗೆ ಮೂಲಭೂತ ಹಕ್ಕುಗಳಾದ ಸಮಾನತೆ, ನ್ಯಾಯ ಮತ್ತು ಭದ್ರತೆಯನ್ನು ನೀಡುತ್ತಾರೆ. ಆದಾಗ್ಯೂ, ಇದೇ ಅಂತಿಮವೆಂದೇನು ಅವರು ನೋಡಲಿಲ್ಲ. ಮುಖ್ಯವಾಗಿ ಅವರಿಗೆ ಮನುವಿನ ನೀತಿ-ನಿಯಮಗಳನ್ನು ಧಿಕ್ಕರಿಸಿ, ಅವುಗಳನ್ನು ಬದಲಿಸಬೇಕಿತ್ತು ಮತ್ತು ಮಹಿಳೆಯರಿಗೆ ಅಗತ್ಯವಾದ ಆಸ್ತಿಯ ಹಕ್ಕುಗಳನ್ನು ನೀಡಲು ಡಾ|| ಅಂಬೇಡ್ಕರ್‌ರವರು ಹಿಂದೂ ಸಂಹಿತ ಮಸೂದೆಯನ್ನು ತಯಾರಿಸುತ್ತಾರೆ.

ಡಾ|| ಅಂಬೇಡ್ಕರವರು ಸಾರ್ವಜನಿಕವಾಗಿ, ಮನುಸ್ಮೃತಿಯನ್ನು ಸುಡುತ್ತಾರೆ. ಏಕೆಂದರೆ ಅದು ಶೂದ್ರರ ಮತ್ತು ಮಹಿಳೆಯರ ಗುಲಾಮಗಿರಿಯನ್ನು ಸಮರ್ಥಿಸುತ್ತಿತ್ತು. ಹೀಗೆ ಸುಡುವುದರ ಮೂಲಕ ಒಂದು ಶಕ್ತಿಯುತ ಸಂಕೇತವನ್ನು ಸ್ಥಾಪಿಸುತ್ತಾರೆ. ಕೆಲವು ಮಹಿಳಾ ಚಳುವಳಿಯ ಕಾರ್ಯಕರ್ತರು ಇದನ್ನು ಒಪ್ಪಿಕೊಳ್ಳಲು ಇಷ್ಟಪಡದೆ, ಡಾ|| ಅಂಬೇಡ್ಕರ್‌ರವರು ಮನುಸ್ಮೃತಿಯನ್ನು ಸುಟ್ಟಿದ್ದು ಜಾತಿಯ ಸಂದರ್ಭದಲೊಂದೂ, ಮಹಿಳಾ ವಿಮೋಚನೆಯ ಬೆಂಬಲಕ್ಕಾಗಿ ಅಲ್ಲವೆಂದು ವಾದಿಸುತ್ತಾರೆ. ಇಂಥ ಹೇಳಿಕೆಗಳು ಡಾ|| ಅಂಬೇಡ್ಕರವರಿಗೆ ನ್ಯಾಯವನ್ನು ಒದಗಿಸುವುದಿಲ್ಲ ಮತ್ತು ಅವರ ಚಿಂತನೆಗಳನ್ನು

ಅರ್ಥೈಸುವಲ್ಲಿ ಸೋಲುತ್ತಾರೆ. ಅಂಬೇಡ್ಕರವರಿಗೆ ಜಾತಿ ಪದ್ಧತಿ ಮತ್ತು ಮಹಿಳೆಯ ಅಧೀನತೆ-ಇವೆರಡೂ ಸಹ ಪ್ರತ್ಯೇಕವಲ್ಲ ಹಾಗೂ ಅವುಗಳಲ್ಲಿ ದ್ವಂದ್ವವೇನೂ ಕಾಣುವುದಿಲ್ಲ.

ಉದಾಹರಣೆಗೆ, ಅವರ ಪ್ರಕಾರ, ಈಗಿರುವ ಹಿಂದೂ ಕಾನೂನಿನಲ್ಲಿ ಗಂಡಸು ಎಷ್ಟು ಸಲವಾದರೂ ಮದುವೆಯಾಗಬಹುದು. ಇದು ನ್ಯಾಯ ಸಮ್ಮತವಲ್ಲ. ಏಕ ರೀತಿಯ ಏಕಪತ್ನಿತ್ವ ಅಥವಾ ಏಕ ಪತ್ನಿತ್ವ ನಿಯಮ ಪುರುಷ ಮತ್ತು ಮಹಿಳೆಯರಿಬ್ಬರಿಗೂ ಅಗತ್ಯವಾಗಿದೆ. ಮದುವೆ ಎನ್ನುವುದು ಹಿಂದೂ ಕಾನೂನಿನ ಪ್ರಕಾರ ಪವಿತ್ರ ಸಂಸ್ಕಾರವಾಗಿರುವುದರಿಂದ ಅದನ್ನು ಮುರಿಯಲು ಅಥವಾ ವಿಚ್ಛೇದನ ಸಾಧ್ಯವಿರುವುದಿಲ್ಲ. ಇದು ನ್ಯಾಯ ಸಮ್ಮತವಲ್ಲವೆಂದು ಡಾ|| ಅಂಬೇಡ್ಕರವರಿಗೆ ಕಾಣುತ್ತದೆ. 1937ರ ಆಸ್ತಿಯ ಉತ್ತರಾಧಿಕಾರ ಕಾಯ್ದೆಯ ಪ್ರಕಾರ ಒಬ್ಬ ಮಹಿಳೆಗೆ ಆಸ್ತಿಯಲ್ಲಿ ಸಮಪಾಲು ಇರುವಂತಿಲ್ಲ. ಡಾ|| ಅಂಬೇಡ್ಕರವರು ಈ ಕಾಯ್ದೆಗೆ ತಿದ್ದುಪಡಿ ತರಲು ಬಯಸುತ್ತಾರಲ್ಲದೆ, ಮಗಳು ಮತ್ತು ಮಗಂದಿರಿಬ್ಬರಿಗೂ ಸಮಪಾಲು ಸಿಗಬೇಕೆಂದು ಇಚ್ಛಿಸುತ್ತಾರೆ. ಅವರ ಪ್ರಕಾರ, "ಈ ಮಸೂದೆ ಏನನ್ನು ತರಲು ಇಚ್ಛಿಸುತ್ತದೆ? ಇದಕ್ಕೆ ಉತ್ತರವೆಂಬಂತೆ ಈ ಮಸೂದೆ ಹಳೆಯದನ್ನು ಅದರ ಜಾಗದಲ್ಲಿರಿಸಿ, ಹೊಸತನ್ನು ಪ್ರಧಾನವಾಗಿ ಪೋಷಿಸುತ್ತದೆ.

ಅದು ಪ್ರತಿಯೊಬ್ಬ ಹಿಂದೂವಿಗೂ ತನ್ನ ಆಸ್ತಿಯ ಬಗ್ಗೆ ಇಚ್ಛಾ ಪತ್ರವನ್ನು ಬರೆದಿರುವ ಹಕ್ಕನ್ನು ನೀಡುತ್ತದೆಯಾದ್ದರಿಂದ ಮಗಳೂ ಸಹ ಆಸ್ತಿಯ ಹಕ್ಕನ್ನು ಹೊಂದಿರುವುದರಿಂದ, ಸಂಪ್ರದಾಯವಾದಿಗಳೇನು ಮಾಡಲಾಗುವುದಿಲ್ಲ. ಏಕೆಂದರೆ ಇವರು ತಮ್ಮ ಮಗಳ ವಿರುದ್ಧವಾಗಿ ಇಚ್ಛಾ ಪತ್ರ ಮಾಡಿ, ಆಸ್ತಿಯಿಂದ ಅವರನ್ನು ತಪ್ಪಿಸಬಹುದಾಗಿತ್ತು. (11-6-1950 ರಂದು ಡಾ|| ಅಂಬೇಡ್ಕರ್‌ರವರು ಸಿದ್ದಾರ್ಥ ಕಾಲೇಜಿನ ಪಾರ್ಲಿಮೆಂಟ್‌ನಲ್ಲಿ ಮಾಡಿದ ಭಾಷಣದಿಂದ ಸಂಗ್ರಹಿಸಿದ್ದು) ಪ್ರಕಟಣೆ : ಸತ್ಯಶೋಧಕ ಮಾರ್ಕ್ಸ್‌ವಾದಿ, ಏಪ್ರಿಲ್ 1983)

ಡಾ|| ಅಂಬೇಡ್ಕರವರು ಪ್ರಸ್ತುತದಲ್ಲಿರುವ ಹಿಂದೂ ಕಾನೂನನ್ನು ಬಲವಾಗಿ ಖಂಡಿಸುತ್ತಾರೆ. ಏಕೆಂದರೆ ಅದು ಮಹಿಳೆಯರಿಗೆ ಆಸ್ತಿಯ ಹಕ್ಕನ್ನು ಹಾಗೂ ವಿಚ್ಛೇದನವನ್ನು ತಿರಸ್ಕರಿಸಿ, ಗಂಡಸಿಗೆ ಎಷ್ಟು ಬಾರಿಯಾದರೂ ಮದುವೆಯಾಗಲು ಅನುವು ಮಾಡಿಕೊಡುವುದರಿಂದ ಅದು ಪುರುಷ ಪ್ರಧಾನ್ಯವಾಗಿದೆ. ಭಾರತೀಯ ಮಹಿಳೆಯರ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳುವ ಸಲುವಾಗಿ ಈ ಮಸೂದೆಯನ್ನು ಅನುಮೋದಿಸಬೇಕೆಂದು ಅವರು ಒತ್ತಿ ಹೇಳುತ್ತಾರೆ. ಅಲ್ಲದೆ, ಅವರು ನೆಹರೂಗೆ ಪತ್ರ ಬರೆದು ಈ ಮಸೂದೆ ಎಷ್ಟೊಂದು ಮುಖ್ಯವೆಂದೂ, ತನಗೂ ಅದು ಇಷ್ಟವಾಗಿರುವುದರಿಂದ, ಅದರ ವಿರೋಧಿಗಳನ್ನು ಮನವೊಲಿಸಿ, ಮಸೂದೆಯನ್ನು ಅಂಗೀಕರಿಸಬೇಕೆನ್ನುತ್ತಾರೆ.

ತಮ್ಮ ಕಾನೂನು ಮಂತ್ರಿ ಪದವಿಗೆ ರಾಜಿನಾಮೆಯನಿತ್ತ ಸಂದರ್ಭದಲ್ಲಿ ಡಾ|| ಅಂಬೇಡ್ಕರ್‌ರವರು ಸ್ಪಷ್ಟಪಡಿಸುವುದೇನೆಂದರೆ, ತಾವು ಮಂತ್ರಿಯಾದದ್ದು ಹಿಂದೂ ಸಂಹಿತೆ ಮಸೂದೆಗಾಗಿ, ಮತ್ತು ಅದಕ್ಕಾಗಿ

ಅಸ್ಪೃಶ್ಯತೆಯ ನಿವಾರಣೆಯ ಪ್ರಶ್ನೆ ಗಂಡಸರಿಗಿಂತ ಅಧಿಕವಾಗಿ ಹೆಂಗಸರದ್ದಾಗಿದೆ. ಗಂಡಸರಾದ ನಮಗೆ ಜನ್ಮ ಕೊಟ್ಟವರು ನೀವು. ಆದರೆ ಬೇರೆಯವರು ನಮ್ಮನ್ನು ಪ್ರಾಣಿಗಳಿಗಿಂತ ಕಡೆಯಾಗಿ ಪರಿಗಣಿಸುತ್ತಾರೆ....ಕೆಲವೆಡೆ ನಮ್ಮ ನೆರಳೂ ಸಹ ಬೀಳಲು ಬಿಡರು. ಬೇರೆಯವರು ಸರ್ಕಾರ ಮತ್ತು ಕಛೇರಿಗಳಲ್ಲಿ ಅತ್ಯುನ್ನತ ಸ್ಥಾನಗಳನ್ನು ಪಡೆಯುತ್ತಾರೆ. ಆದರೆ ನಿಮಗ್ಹುಟ್ಟಿದವರಾದ ನಾವು ಅತ್ಯಂತ ಕೆಳ ದರ್ಜೆಯ ಸ್ಥಾನವನ್ನು ಪಡೆಯುತ್ತೇವೆ. ಏಕೆಂದರೆ ನಾವು ಕೆಳಸ್ಥಾನದವರೆಂದು ಪರಿಗಣಿಸಲಾಗಿದೆ...ಈ ಸಭೆಯಲ್ಲಿ ಕುಳಿತಿರುವ ಸವರ್ಣೀಯ ಮಹಿಳೆ ಮತ್ತು ಕಾಯಸ್ಥ ಮಹಿಳೆಯರ ಮಕ್ಕಳಿಗಿಂತ ನಾವು ಭಿನ್ನರಾಗಿರುವುದು ಹೇಗೆ? ನೀವು ಬ್ರಾಹ್ಮಣ ಮಹಿಳೆಯರಂತೆಯೇ, ಸ್ವಭಾವವನ್ನು ಹೊಂದಿದ್ದೀರಿ. ಆದರೂ ಅವರ ಸಂತತಿ ಎಲ್ಲರಿಗೂ ಒಪ್ಪಿತವಾದರೆ, ನಿಮಗೆ ಹುಟ್ಟಿದವರಿಗೆ ಅವಮಾನಿಸುವುದಲ್ಲದೆ, ಮಾನವರಾಗಿ ಜೀವಿಸುವ ಮೂಲಭೂತ ಹಕ್ಕನ್ನೂ ಸಹ ನೀಡುವುದಿಲ್ಲ ಏಕೆ? ಇದನ್ನು ನೀವೇಂದಾದರೂ ಯೋಚಿಸಿದ್ದೀರಾ? ನಿಮ್ಮ ಹೊಟ್ಟೆಯಿಂದ ಜನಿಸುವುದು ಪಾಪವೇ?

ತಮ್ಮನ್ನು ಹಿಂಸಿಸಲಾಗಿದೆ' ಆದ್ದರಿಂದ, ಒಂದು ರೀತಿಯ ರಾಜಿ ಮಾಡಿಕೊಂಡು ಸಂವಿಧಾನಾ ಸಮಿತಿಯಲ್ಲಿರಲು ಒಪ್ಪಿದ್ದೂ ಸಹ ಆ ಮಸೂದೆಗಾಗಿಯೇ. ಅವರ ನಿಶ್ಚಲ ನಂಬುಗೆಯೆಂದರೆ ಪ್ರಸ್ತುತದಲ್ಲಿರುವ ಪುರುಷ ಪ್ರಧಾನ ಬ್ರಾಹ್ಮಣ ಕಾನೂನು ಮತ್ತು ಜಾತಿ ಪಂಚಾಯತಿಯ ನಿಯಮದಿಂದ ಮಹಿಳೆಯರನ್ನು ಮುಕ್ತಿಗೊಳಿಸಬೇಕೆಂಬುದು. ಈ ನಿಟ್ಟಿನಲ್ಲಿ ಆ ಮಸೂದೆಯು ಹೊಸದಾಗಿ ಉದಯಿಸುತ್ತಿರುವ ರಾಷ್ಟ್ರದ ಬದುಕಲ್ಲಿ ಒಂದು ಮುಖ್ಯ ಘಟನೆಯಾಗಿದ್ದರಿಂದ, ತಾನು ರಾಜಿ ಮಾಡಿಕೊಂಡದ್ದು ಹಾಗೂ ನೆಹರೂ ಮಂತ್ರಿ ಮಂಡಲವನ್ನು ಸೇರಿದ್ದು. ಹೀಗಿರುವಲ್ಲಿ ಮಹಿಳಾ ವಿಮೋಚನೆಯಲ್ಲಿ ಅವರಿಗೆ ಆಸ್ತಿಯಲ್ಲಿ ಸಮಾನ ಪಾಲಿನ ಹಕ್ಕು ಮುಖ್ಯ ಹೆಜ್ಜೆಯಾಗಿತ್ತು. ಹೀಗೆಂದು ಅವರ ಚಿಂತನೆಗಳು ಕೇವಲ ಮಹಿಳೆಯ ಆರ್ಥಿಕ ಸ್ವಾತಂತ್ರ್ಯಕ್ಕಷ್ಟೇ ಮೀಸಲೆಂದು ಅರ್ಥೈಸಲಾಗದು. ಇಲ್ಲಿ ನಾವು ಮಹಿಳಾ ಅಧೀನತೆ ಮತ್ತು ಜಾತಿ ಪದ್ಧತಿಯ ನಡುವೆ ಅವರು ತೋರಿಸಿದ ಸಂಬಂಧವನ್ನು ನೆನಪಿಸಿಕೊಳ್ಳಬೇಕು. ಅಲ್ಲದೆ, ಅವರು ನಿರಂತರವಾಗಿ ಪುರುಷ ಪ್ರಧಾನ ವ್ಯವಸ್ಥೆಯ ಬಗ್ಗೆ ಮಾಡಿದ ಪ್ರತಿಭಟನೆಯನ್ನು ನಾವು ಮರೆಯುವಂತಿಲ್ಲ. ಅಲ್ಲದೆ ಮಹಿಳಾ ಪ್ರಶ್ನೆಯ ಸಲುವಾಗಿ ಅವರು ರಾಜಿನಾಮೆ ನೀಡಿದ್ದು, ಭಾರತೀಯ ಮಹಿಳಾ ಚಳುವಳಿಯ ಯಾವುದೇ ನಾಯಕರಲ್ಲೂ ಅಂತಹ ಸಾದೃಶ್ಯವನ್ನು ಕಾಣಲಾಗದು.

ಉಡುಗೆ ತೊಡಿಗೆ ಮತ್ತು ಗುರುತು (ಐಡೆಂಟಿಟಿ) : ಈ ಉಡುಗೆ ತೊಡಿಗೆಯ ಗುರುತಿನಿಂದಾಗಿಯೇ ಒಬ್ಬರನ್ನು 'ಅಸ್ಪೃಶ್ಯ'ನೆಂದು ಗುರುತಿಸುವುದರಿಂದ ಡಾ|| ಅಂಬೇಡ್ಕರ್ ಜನತೆಗೆ, ಜಾತಿ ಪದ್ಧತಿ ವಿಧಿಸಿರುವ ಉಡುಗೆಯನ್ನು ಬಿಟ್ಟು ಬಿಡಬೇಕೆಂದು ಕೋರುತ್ತಾರೆ. ಇದನ್ನವರು ಎರಡು ಕಾರಣಗಳಿಗಾಗಿ ಒತ್ತಿ ಹೇಳುತ್ತಾರೆ : ಗುರುತು ಚಿಹ್ನೆಯನ್ನು ತೊರೆಯಲು ಮತ್ತು ಸ್ವಾಭಿಮಾನದ ಬದುಕನ್ನು ನಡೆಸಲು ಬ್ರಾಹ್ಮಣ ಪರಂಪರೆ ದಲಿತ ಮಹಿಳೆಯರು ಅರ್ಧ ಸೀರೆ (ಮೊಣಕಾಲಿನ ಮೇಲೆ) ಧರಿಸಲು ಮತ್ತು ಭಾರವಾದ ಹಾಗೂ ಕೆಳದರ್ಜೆಯ ಆಭರಣಗಳನ್ನು ತೊಟ್ಟು, ಅವರು 'ಅಸ್ಪೃಶ್ಯ'ರೆಂದು ಗುರುತಿಸುವಂತೆ ಆದೇಶಿಸುತ್ತದೆ. ಈ ಸಂಪ್ರದಾಯಗಳು ಮಹಿಳೆಯರನ್ನು ಗುಲಾಮರನ್ನಾಗಿಡಲು ರೂಪುಗೊಂಡಿವೆ. ಮಹಾಡ್ ಸತ್ಯಾಗ್ರಹ ಪರಿಷತ್‌ನಲ್ಲಿ ಮಾಡಿದ ಭಾಷಣದಲ್ಲಿ ಅವರು ಹೇಳುತ್ತಾರೆ, "ನೀವೆಲ್ಲಾ ಈ ಹಳೆಯ ಮತ್ತು ಕೊಳಕು ಬಟ್ಟೆಗಳನ್ನು ತೊರೆಯಲು ಪಣ ತೊಡಲೇಬೇಕು. ನಿಜ ಹೇಳಬೇಕೆಂದರೆ, ಅಸ್ಪೃಶ್ಯನೆನಿಸಿಕೊಳ್ಳಲು ಯಾರ ಹಣೆಯ ಮೇಲೂ ಮುದ್ರೆಯೇನೂ ಇಲ್ಲ. ಆದರೆ ಅದನ್ನು ಗುರುತಿಸುವುದು ಜನರುಡುವ ಉಡುಗೆ ತೊಡುಗೆಗಳಿಂದ, ವ್ಯಕ್ತಿಯ ಜಾತಿಯನ್ನು ಗುರುತಿಸಲಾಗುತ್ತದೆ. ನನ್ನ ನಂಬುಗೆಯೆಂದರೆ ಈ ರೂಢಿಗಳನ್ನು ನಮ್ಮ ಮೇಲೆ ಪೂರ್ವ ಕಾಲದಿಂದಲೇ ಹೇರಲಾಗಿವೆ" (ಬಹಿಷ್ಕೃತ್ ಭಾರತ್, 1928)

ಡಾ|| ಅಂಬೇಡ್ಕರವರು ದಲಿತ ಮಹಿಳೆಯರು ಸುಂದರಿಯರಾಗಿರಲು ಕೇಳಿಕೊಳ್ಳುತ್ತಿಲ್ಲ, ಅವರ ಕೋರಿಕೆಯೆಂದರೆ ಜಾತಿ-ಆಧಾರಿತ ಉಡುಗೆಯನ್ನು ತೊರೆಯುವ ಮೂಲಕ, ಮತ್ತಷ್ಟು ವ್ಯಾಪ್ತಿಯುಳ್ಳ ಗುರುತಿಸಿಕೊಳ್ಳುವ (ಐಡೆಂಟಿಟಿ) ಹೋರಾಟದಲ್ಲಿ ಧುಮುಕುವುದು. ದಲಿತ ಮಹಳಾ ಒಕ್ಕೂಟಗಳಲ್ಲಿ ಅನೇಕ ನಿರ್ಧಾರಗಳನ್ನು ಅನುಮೋದಿಸಲಾಯಿತು. ಅವುಗಳ ಮೇರೆಗೆ ದಲಿತ ಮಹಿಳೆಯರು 'ತಮಾಷಾ'ಗಳಂದ ಅಂದರ ಜನಪ್ರಿಯ ನೃತ್ಯಗಳಿಂದ ದೂರವಿರಬೇಕು ಅಲ್ಲದೆ ಗ್ಯಾಸ್ ದೀಪಗಳನ್ನು ತಲೆಗಳ ಮೇಲೆ ಹೊರಲು ತಿರಸ್ಕರಿಸಬೇಕು. ಏಕೆಂದರೆ ಈ ಸಂಪ್ರದಾಯಗಳು ಅವರನ್ನು ಕೀಳೆಂದು ಮತ್ತು ದ್ವೇಷಾರ್ಹವೆಂದು ಮಾಡುತ್ತವೆ. ಡಾ|| ಅಂಬೇಡ್ಕರವರು ದಲಿತ ಮಹಿಳಾ ಐಡೆಂಟಿಟಿ ಪ್ರಶ್ನೆ ಹಾಗೂ ಸ್ವಾಭಿಮಾನ ಕ್ರಾಂತಿಯ ಹೋರಾಟದಲ್ಲಿ ಬಹು ಮುಖ್ಯವೆಂದು ನೋಡುತ್ತಾರೆ. ಮಹಿಳಾ ವಿಮೋಚನೆಯೆಂದರೆ ಜಾತಿಗಳ ವಿನಾಶವೇ ಆಗಿದೆಯೆಂಬುದು ಅವರಿಗೆ ಸ್ಪಷ್ಟವಾಗಿತ್ತು. ಆದರೆ ಜಾತ್ಯಾಧಾರಿತ ಉಡುಗೆಯನ್ನು ತೊರೆಯಲು ನೀಡಿದ ಕರೆಯನ್ನು ಶೈಕ್ಷಣಿಕ (ಅಕಾಡೆಮಿಕ್) ಪಂಡಿತರು ಅನೇಕ ಬಾರಿ ತಪ್ಪಾಗಿ ಗ್ರಹಿಸಿ, ಅದು ದಲಿತ ಮಹಿಳೆಯರ ಬ್ರಾಹ್ಮಣೀಕರಣವೆಂದು ಹೇಳುತ್ತಾರಲ್ಲದೆ, ದಲಿತ ಸ್ತ್ರೀವಾದದ ಬಗ್ಗೆ ಬೇರೇನನ್ನೂ ಹೇಳುವುದಿಲ್ಲ. ●

ಅಂಬೇಡ್ಕರ್ ವಿಚಾರಧಾರೆ : ಡಿ.ಆರ್. ಟಿಪ್ಪಣಿ

(11ನೇ ಪುಟದಿಂದ)

ದ್ವಿತೀಯ ದರ್ಜೆ ಪ್ರಜೆಗಳಾಗಿಯೇ ಉಳಿಯುತ್ತಾರೆ ಎಂಬ ಅವರ ನಂಬಿಕೆ ತುಂಬ ಬಲವಾದದ್ದಾಗಿತ್ತು.

ಹಿಂದೂ ಧರ್ಮದ ಬಗೆಗಿನ ಗಾಂಧೀಜಿಯ ಆಶಾವಾದಕ್ಕೆ ಚಾರಿತ್ರಿಕ ಆಧಾರಗಳ ಬೆಂಬಲವಿರಲಿಲ್ಲ. ಏಕೆಂದರೆ, ಜಾತಿ ಪದ್ಧತಿಯ ವಿರುದ್ಧದ ಭಾರತೀಯ ಇತಿಹಾಸದಲ್ಲಿ ಅನೇಕ ಜನ ಕ್ರಾಂತಿಕಾರಿಗಳು ಹೋರಾಡಿದರು. ಆದರೆ, ಅವರ ಪ್ರಯತ್ನ ಹಿಂದೂ ಧರ್ಮದ ಮೂಲ ಸ್ವರೂಪವನ್ನೇನೂ ಬದಲಿಸಲಿಲ್ಲ. ಅದು ಒಂದು ಚಿಕ್ಕ ಭಿನ್ನಮತೀಯ, ಆದರ್ಶವಾಗಿ, ಧಾರೆಯಾಗಿ, ಮುಂದಿನ ಪ್ರಯತ್ನಗಳಿಗೆ ಸ್ಫೂರ್ತಿಯಾಗಿ ಮಾತ್ರ ಉಳಿಯಿತು. ಹಿಂದೂ ಧರ್ಮದೊಳಗಿನ ಜಾತಿ ಹಿಂಸೆ ದಿನೇ ದಿನೇ ತೀವ್ರವಾಗುತ್ತ ಹೋಯಿತು.

ಹೀಗಾಗಿ, ಅಂಬೇಡ್ಕರ್‌ರ ನಿರಾಶಾವಾದಕ್ಕೆ ಸಮಕಾಲೀನ ಅನುಭವದ ಸಮರ್ಥನೆಯು ಇತ್ತು; ಚಾರಿತ್ರಿಕ ತಾತ್ವಿಕ ಆಧಾರಗಳಂತೂ ಸಮೃದ್ಧವಾಗಿ ಇದ್ದೇ ಇದ್ದವು.

ಮತ್ತೆ ಹಿಂದೂ ದರ್ಮದ ಚೌಕಟ್ಟಿನೊಳಗೇ ಈ ಸಮಸ್ಯೆಗೆ ಪರಿಹಾರವನ್ನು ಕಾಣುವುದು ಅಂಬೇಡ್ಕರರಿಗೆ ಶುದ್ಧ ಹುಚ್ಚುತನವಾಗಿ, ಪ್ರತಿಗಾಮಿ ಕ್ರಿಯೆಯಾಗಿ ಕಂಡಿರಬೇಕು. ಹಿಂದೂ ಧರ್ಮದ ಆಚಾರ, ವಿಚಾರಗಳ ಬಗ್ಗೆ ಅವರ ತಿರಸ್ಕಾರ, ರೊಚ್ಚು ದಿನೇ ದಿನೇ ತೀವ್ರವಾಗುತ್ತಾ ಹೋಯಿತು. ಹಿಂದೂ ಸಮಾಜದ ಯಾವುದೇ ಆಚಾರ, ವಿಚಾರಗಳಲ್ಲಿ ಅಸ್ಪೃಶ್ಯರು ಭಾಗವಹಿಸುವುದು ಅತ್ಯಂತ ಅಪಮಾನಕಾರಿ ಕೆಲಸ ಎಂದು ಅವರು ಭಾವಿಸಿದ್ದರು. ಇದು ಸಂಪೂರ್ಣ ನಿರಾಕರಣೆಯ ಮಾರ್ಗ. ಉಡುಗೆ-ತೊಡುಗೆಗಳ ಮಟ್ಟಕ್ಕೂ ಅದು ವ್ಯಾಪಿಸಿತು. ಪಶ್ಚಿಮದ ಆಚಾರ ವಿಚಾರಗಳು ಭಾರತೀಯ ಸಾಮಾಜಿಕ ಮೌಲ್ಯಗಳಲ್ಲಿನ ಹಿಂಸೆಗೆ ಉತ್ತರ ಎಂಬಂತೆ ಒಂದು ಘಟ್ಟದಲ್ಲಿ ಅವರು ಭಾವಿಸಿದರು. ಈ ಕಾರಣಕ್ಕಾಗಿಯೇ, ಮೊದಲ ತಲೆಮಾರಿನ ಅಂಬೇಡ್ಕರ್ ವಾದಿಗಳು ಉಡುಗೆ ತೊಡುಗೆ ಪೋಷಾಕಿನಲ್ಲಿ ಪಶ್ಚಿಮದ ಜನ, ಇಲ್ಲಿ ಕೂಡಾ ಗಾಂಧೀಜಿಯದು ತದ್ವಿರುದ್ಧ ಮಾರ್ಗ.

ಈ ಸಂಪೂರ್ಣ ಸಾಂಸ್ಕೃತಿಕ ನಿರಾಕರಣೆಯ ಸ್ವರೂಪವನ್ನು ಈ ಚಾರಿತ್ರಿಕ ಘಟ್ಟದಲ್ಲಿ ನಾವು ಹೆಚ್ಚು ಎಚ್ಚರದಿಂದ ಪರಿಶೀಲಿಸಬೇಕಾಗಿದೆ. ಭಾರತದ ದಲಿತರು ಮತ್ತಿತರ ಅವಮಾನಿತ ಜಾತಿಗಳು ಮೂಲತಃ ಕಡುಬಡವರು, ಕೃಷಿಕೂಲಿಗಳು, ಇಂಥವರಿಗೆ ಪಶ್ಚಿಮದ ಸಾಂಸ್ಕೃತಿಕ ಮಾದರಿ ಬಿಡುವುದು ಎಷ್ಟರಮಟ್ಟಿಗೆ ಸೂಕ್ತ ಎಂಬುದನ್ನು ಈಗ ಮತ್ತೊಮ್ಮೆ ವಸ್ತುನಿಷ್ಠವಾಗಿ ವಿಶ್ಲೇಷಿಸಬೇಕಾಗಿದೆ. ಇನ್ನೂ ಕೊಂಚ ಆಳವಾಗಿ ನೋಡಿದರೆ, ಇದು ಉತ್ತಮಿಕೆಯ ಛಲವನ್ನು ಅಂಬೇಡ್ಕರ್ ಒಂದು ನಿರ್ದಿಷ್ಟ ಘಟ್ಟದಲ್ಲಿ ಗ್ರಹಿಸಿದ ಪ್ರಶ್ನೆ. ಪಶ್ಚಿಮದ ಪ್ರಮುಖ ಮೌಲ್ಯಗಳು ಶುದ್ಧಾಂಗವಾಗಿ, ಸಮಗ್ರವಾಗಿ ದಲಿತ ಸಮಸ್ಯೆಗೆ ಪರಿಹಾರ ನೀಡಬಲ್ಲವು ಎಂದು ಅಂಬೇಡ್ಕರ್ ನಂಬಿದ್ದ ಘಟ್ಟದ ಪ್ರಶ್ನೆ ಇದು.

ಆದರೆ, ಅಂಬೇಡ್ಕರ್ ತಮ್ಮ ಜೀವನದ ಉತ್ತರಾರ್ಧದಲ್ಲಿ ಇದಕ್ಕೆ ಭಿನ್ನವಾದ ನಿಲುವನ್ನು ತಳೆದರು. ಬೌದ್ಧಧರ್ಮದ ಕಡೆಗೆ ಅವರು ನಡೆದದ್ದು ಇದಕ್ಕೆ ಸಾಕ್ಷಿ. ಇದು ಮೇಲುನೋಟಕ್ಕೆ ಕಾಣುವಷ್ಟು ಸರಳವಲ್ಲ. ಈ ಅಂಶವೊಂದು ಪ್ರತ್ಯೇಕ ಚರ್ಚೆಯ ವಸ್ತು. ●

(ಸೌಜನ್ಯ : ಸಂಸ್ಕೃತಿ ಕಥನ)

ಚಿಂತನೆ, ಹೋರಾಟ-ಒಂದು ಅವಲೋಕನ

(13ನೇ ಪುಟದಿಂದ)

ಎರಡು ಪ್ರಾತಿನಿಧಿಕ ವರ್ಗಗಳ ನಡುವಿನ ಅಂತಃಕಲಹವನ್ನು ಪ್ರತಿನಿಧಿಸುತ್ತಿದ್ದವು. ಕೊನೆಗೆ ಅಂಬೇಡ್ಕರ್ ಮಾನವೀಯತೆಯ ಕರೆಗೆ ಓಗೊಟ್ಟು ಗಾಂಧೀಜಿಯ ಅಭಿಪ್ರಾಯಗಳಿಗೆ ಮಣಿದರು. ಇಲ್ಲಿ ಯಾರೂ ಸೋಲಲಿಲ್ಲ. ಯಾರೂ ಗೆಲ್ಲಲೂ ಇಲ್ಲ. ಚರಿತ್ರೆ ಈ ಸಮಾಜದ ಅಂತರ್ಗತವಾದ ಕ್ರೌರ್ಯದ ನಡುವೆಯೂ ಉಳಿದಿದ್ದ ನೈತಿಕತೆ ಮತ್ತು ನ್ಯಾಯ ಪ್ರಜ್ಞೆಯನ್ನು ಪರೀಕ್ಷಿಸಿದಂತಾಯ್ತು. ಪ್ರವೃತ್ತಿ ಮತ್ತು ಅನುಕರಣೆಗಳಿಂದ ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಯನ್ನು ಆಚರಿಸುತ್ತಿದ್ದ ಮೇಲ್ ಜಾತಿಗಳು ತಮ್ಮ ಅಪರಾಧಿ ಪ್ರಜ್ಞೆಯನ್ನು ಮುಟ್ಟಿನೋಡಿಕೊಳ್ಳಲು ಪ್ರಾರಂಭಿಸಿದವು.

ಈ ಮಹತ್ವದ ಘಟನೆಯ ನಂತರ ಗಾಂಧೀಜಿ ಸ್ವಾತಂತ್ರ್ಯ ಆಂದೋಲನದ ಜೊತೆಗೆ ಅಸ್ಪೃಶ್ಯತೆಯ ವಿರುದ್ಧ ಧ್ವನಿ ಎತ್ತಿದರು.

ಇಡೀ ರಾಷ್ಟ್ರಕ್ಕೆ ದೊಡ್ಡ ಷಾಕ್ ನೀಡಿದ್ದು 1956ರಲ್ಲಿ ಅವರು ಹಿಂದೂ ಧರ್ಮ ತೊರೆದದ್ದು. 1935ರಲ್ಲಿ ಯೋಲಾಸಮಾವೇಶದಲ್ಲಿ" ನಾನು ಹಿಂದೂವಾಗಿ ಹುಟ್ಟಿದ್ದೇನೆ-ಹಿಂದೂವಾಗಿ ಸಾಯಲಾರೆ" ಎಂದು ಘೋಷಿಸಿದ್ದರು. ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಅಸಮಾನತೆ ಅನಧಿಕೃತ ಶಾಸನದಂತಿದೆ. ಬ್ರಾಹ್ಮಣಿಕ ಸಮಾಜದ ಅಂತಃಶಕ್ತಿಯನ್ನು ನಿಯಂತ್ರಿಸುವ ಮನಃ ಕ್ಷೋಭೆಯಾಗಿದೆ. ಇವು ವಿನಾಶ ಹೊಂದುವ ಸೂಚನೆಗಳಾವುವೂ ಕಂಡು ಬರದಿದ್ದರಿಂದ ಸುಮಾರು 20 ವರ್ಷಗಳ ಸುದೀರ್ಘವಾದ ಆಲೋಚನೆ ಅಧ್ಯಯನದ

ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಅಸಮಾನತೆ ಅನಧಿಕೃತ ಶಾಸನದಂತಿದೆ. ಬ್ರಾಹ್ಮಣಿಕ ಸಮಾಜದ ಅಂತಃಶಕ್ತಿಯನ್ನು ನಿಯಂತ್ರಿಸುವ ಮನಃಕ್ಷೋಭೆಯಾಗಿದೆ.

ನಂತರವೇ 1956 ಆ. 14ರಂದು ಬುದ್ಧ ಧರ್ಮಕ್ಕೆ ತಮ್ಮ ಮನಸ್ಸು ಮತ್ತು ಆತ್ಮವನ್ನು ಸಮರ್ಪಿಸಿಕೊಂಡರು. ಇದು ಹಿಂದೂ ಧರ್ಮದ ಮೇಲಿನ ದ್ವೇಷದಿಂದ ಮಾಡಿದ ಕ್ರಿಯೆಯಲ್ಲ, ಬದಲಾಗಿ ಸತ್ಯ ನೈತಿಕತೆ ಮಾನವೀಯ ಮೌಲ್ಯಗಳೇ ನಿಜ ಧರ್ಮವೆಂದು ನಂಬಿದ ಮಹಾಚೇತನ ತನ್ನ ಅಂತರಂಗದ ಆಸೆಯನ್ನು ಬಹಿರಂಗ ಪಡಿಸಿದಂತೆ;

ಅಂಬೇಡ್ಕರ್ "ಜಾತಿ ವಿನಾಶ" ಎಂಬ ಮುದ್ರಿತ ಭಾಷಣಕ್ಕೆ, ಗಾಂಧೀಜಿ 1936 ಅ. 15ರಂದು ತಮ್ಮ "ಹರಿಜನ" ಪತ್ರಿಕೆಯಲ್ಲಿ ಪ್ರತಿಕ್ರಿಯೆ ಬರೆಯುತ್ತಾ ಹೀಗೆ ಹೇಳಿದ್ದಾರೆ. ಅಂಬೇಡ್ಕರ್ ಅಭಿಪ್ರಾಯಗಳನ್ನು ಯಾವ ಸುಧಾರಕನೂ ಮರೆಯುವಂತಿಲ್ಲ ಹಾಗೂ ಅವರು ಹಿಂದೂ ಧರ್ಮದ ದೊಡ್ಡ ಸವಾಲು" ಎಂದಿದ್ದಾರೆ. ಈ ಮಾತುಗಳನ್ನು ಈ ದೇಶ ನೆನಪಿಟ್ಟುಕೊಳ್ಳುವುದು ಒಳ್ಳೆಯದು.

ಅಸಮಾನತೆಯ ಮೂಲವಾದ ಧರ್ಮ-ಆರ್ಥಿಕ ಅಂಶಗಳು ಹಾಗೂ ರಾಜಕೀಯ ಬೆಳವಣಿಗೆಗಳನ್ನು ಅಂಬೇಡ್ಕರ್ ಹೋರಾಟ ಮತ್ತು ಚಿಂತನೆಯ ಬೆಳಕಿನಲ್ಲಿ ಅಧ್ಯಯನ ಮಾಡಬೇಕಾದ ಕಾಲ ಬಂದಿದೆ. ಕೇವಲ ಅವರ ಬಿಡಿ ಬಿಡಿ ನುಡಿಗಳಿಂದ "ಹಿಂದೂ ಧರ್ಮ-ಗಾಂಧೀಜೀ-ಕಾಂಗ್ರೆಸ್‌ಗಳನ್ನು ಟೀಕಿಸಿ, ರಂಜಿಸಿಕೊಳ್ಳುವುದರಿಂದ ಪ್ರಯೋಜನವಿಲ್ಲ ನಿರಂತರ ಅಧ್ಯಯನ ರಾಜಕೀಯ ಮತ್ತು ಆರ್ಥಿಕ ಬೆಳವಣಿಗೆಗಳ ಹೊಸ ಆಯಾಮಗಳ ಪರಿಣಾಮ ಪ್ರಭಾವಗಳನ್ನು ಜಾಗರೂಕತೆಯಿಂದ ಅಧ್ಯಯನ ಮಾಡಿ ದಲಿತ ವಿಮೋಚನೆಗಾಗಿ ನೈಜ ಚರಿತ್ರೆಯ ಮೊಗಸಾಲೆಯಲ್ಲಿ ನಿಂತು ಹೊಸ ಹಾದಿ ಹುಡುಕಬೇಕಾಗಿದೆ. ಇಂಥ ಗುರುತರವಾದ ಜವಾಬ್ದಾರಿಯನ್ನು ಮನಗಂಡು ದಲಿತ ಸಂಘಟನೆಗಳು ಮುಂದುವರೆದರೆ ಮಾತ್ರ ದಲಿತ ಸಮುದಾಯದ ವಿಮೋಚನೆಗೆ ಹೊಸ ಆಯಾಮ ದೊರೆಯಬಲ್ಲದು. ●

(ಅಂಬೇಡ್ಕರರ ತಾತ್ವಿಕ ಚಿಂತನೆಯನ್ನು ನಾಡಿನ ಉದ್ದಗಲಕ್ಕೂ ಒಯ್ಯುತ್ತಿರುವ ಹೆಚ್.ಎಂ. ರುದ್ರಸ್ವಾಮಿ ಈ ಹಿಂದೆ ದಲಿತ ವಿದ್ಯಾರ್ಥಿ ಒಕ್ಕೂಟದ ರಾಜ್ಯ ಸಂಚಾಲಕರೂ ಆಗಿದ್ದರು.)

ನಾನೇಕೆ ಮಂತ್ರಿ ಪದವಿ ಬಿಡಬೇಕಾಯ್ತು?

ನೆಹರೂ ಮಂತ್ರಿ ಮಂಡಲದಲ್ಲಿ ಕಾನೂನು ಮಂತ್ರಿಯಾಗಿದ್ದ ಬಾಬಾ ಸಾಹೇಬರು 'ಹಿಂದೂ ಸಂಹಿತೆ ಮಸೂದೆ' ಕುರಿತು ನಡೆದ ವಿವಾದದ ಹಿನ್ನೆಲೆಯಲ್ಲಿ ಮಂತ್ರಿ ಪದವಿಗೆ ರಾಜಿನಾಮೆ ನೀಡಿದರು. ರಾಜಿನಾಮೆ ನೀಡಿದ ನಂತರ ಸದನದಲ್ಲಿ ಈ ಕುರಿತು ಹೇಳಿಕೆಯೊಂದನ್ನು ನೀಡಲು ಅಂಬೇಡ್ಕರ್ ಮುಂದಾದಾಗ ಅಂದಿನ ಲೋಕಸಭೆ ಅಧ್ಯಕ್ಷರು ಅದಕ್ಕೆ ಅವಕಾಶ ನೀಡಲಿಲ್ಲ. ನಂತರ 1951ರ ಅಕ್ಟೋಬರ್ 10ರಂದು ಪತ್ರಿಕಾ ಗೋಷ್ಠಿಯೊಂದರಲ್ಲಿ ಬಾಬಾ ಸಾಹೇಬರು ಸದನದಲ್ಲಿ ನೀಡಬೇಕೆಂದಿದ್ದ ಹೇಳಿಕೆಯನ್ನು ಬಿಡುಗಡೆ ಮಾಡಿದರು. ಮಹಾರಾಷ್ಟ್ರ ಸರ್ಕಾರದ ಶಿಕ್ಷಣ ಇಲಾಖೆ 1955ರಲ್ಲಿ ಪ್ರಕಟಿಸಿರುವ ಅಂಬೇಡ್ಕರರ ಬರಹಗಳು ಮತ್ತು ಭಾಷಣಗಳು ಮಾಲಿಕೆಯ 14ನೇ ಸಂಪುಟದ 2ನೇ ಭಾಗದಿಂದ (ಪುಟ 1317 ರಿಂದ 1327) ಈ ಲೇಖನವನ್ನು ಆಯ್ದು ಪ್ರಕಟಿಸಲಾಗಿದೆ.

○ ಡಾ|| ಬಿ.ಆರ್. ಅಂಬೇಡ್ಕರ್ ಅನು : ಎಂ. ಗೋಪಿನಾಥ್

ಸೆಪ್ಟೆಂಬರ್ 27, 1951ರಂದು, ಕಾನೂನು ಮಂತ್ರಿಸ್ಥಾನಕ್ಕೆ ನಾನು ರಾಜೀನಾಮೆ ನೀಡಿದೆ. ನನ್ನ ರಾಜೀನಾಮೆ ಪತ್ರವನ್ನು ಪ್ರಧಾನಮಂತ್ರಿಯವರಿಗೆ ತಲುಪಿಸಿ, ಕೂಡಲೇ ನನ್ನನ್ನು ಜವಾಬ್ದಾರಿಯಿಂದ ಮುಕ್ತಗೊಳಿಸಬೇಕೆಂದು ಕೇಳಿಕೊಂಡೆ. ಪ್ರಧಾನಮಂತ್ರಿಗಳು ನನ್ನ ರಾಜೀನಾಮೆಯನ್ನು ಮರುದಿನವೇ ಒಪ್ಪಿಕೊಂಡಿರು. ಆದರೆ, ಅಧಿವೇಶನದ ಕೊನೆಯ ತನಕ ಮಂತ್ರಿಯಾಗಿ ಮುಂದುವರಿಯುವಂತೆ ವಿನಂತಿಸಿಕೊಂಡರು. ರಾಜ್ಯಾಂಗದ ನಿಯಮಕ್ಕೆ ಅನುಸಾರವಾದ ಈ ಕೋರಿಕೆಯನ್ನು ನಾನು ಒಪ್ಪಲೇಬೇಕಾಗಿತ್ತು. ಆದ್ದರಿಂದ, ಸೆಪ್ಟೆಂಬರ್ 28ರ ನಂತರವೂ ನಾನು ಮಂತ್ರಿಯಾಗಿ ಮುಂದುವರಿಯಬೇಕಾಗಿದೆ. ಆದರೆ, ನಾನು ಮಂತ್ರಿಮಂಡಲದ ಸದಸ್ಯನಾಗಿ ಉಳಿದಿಲ್ಲವೆಂಬುದು ಸದನಕ್ಕೆ ತಿಳಿದಿದೆ ಎಂದು ನಾನು ಖಂಡಿತವಾಗಿ ಹೇಳಬಲ್ಲೆ. ಒಬ್ಬ ಮಂತ್ರಿಯು ರಾಜೀನಾಮೆ ನೀಡಿದಲ್ಲಿ, ತಾನು ರಾಜೀನಾಮೆ ನೀಡಲು ಕಾರಣವಾದ ಹಿನ್ನೆಲೆಯನ್ನು ವಿವರಿಸಿ ಹೇಳಿಕೆ ನೀಡಲು ನಮ್ಮ ಸಂಸದೀಯ ನಿಯಮಾವಳಿಗಳು ಅವಕಾಶ ನೀಡುತ್ತವೆ. ನಾನು ಮಂತ್ರಿಯಾಗಿದ್ದ ಕಾಲದಲ್ಲೇ ಅನೇಕರು ತಮ್ಮ ಸಚಿವ ಸ್ಥಾನಗಳಿಗೆ ರಾಜೀನಾಮೆ ನೀಡಿ ಹೋಗಿದ್ದಾರೆ. ಆದರೆ ತಮ್ಮ ತಮ್ಮ ಹೇಳಿಕೆಗಳನ್ನು ನೀಡಲು ಯಾವುದೇ ಒಂದು ನಿರ್ಧಿಷ್ಟ ಕ್ರಮವನ್ನು ರೂಢಿಗೆ ತಂದಿಲ್ಲ. ಕೆಲವರು ಮೊದಲು ತಮ್ಮ ಹೇಳಿಕೆಯನ್ನು ನೀಡಿ, ನಂತರ ರಾಜೀನಾಮೆ ಸಲ್ಲಿಸಿದ್ದಾರೆ. ಇನ್ನೂ ಕೆಲವರು, ತಮ್ಮ ಸ್ಥಾನಗಳಿಗೆ ರಾಜೀನಾಮೆ ಸಲ್ಲಿಸಿದ ನಂತರ ಹೇಳಿಕೆಗಳನ್ನು ನೀಡಿದ್ದಾರೆ. ಯಾವ ಕ್ರಮವನ್ನು ಅನುಸರಿಸುವುದೆಂದು ತಿಳಿಯದೆ ನಾನು ಕೆಲವು ದಿನಗಳ ಕಾಲ ಹಿಂಜರಿಯುತ್ತಿದ್ದೆ ಪರಿಸ್ಥಿತಿಯನ್ನು ಚೆನ್ನಾಗಿ ಅರ್ಥ ಮಾಡಿಕೊಂಡ ಮೇಲೆ ಒಂದು ತೀರ್ಮಾನಕ್ಕೆ ಬಂದೆ. ರಾಜೀನಾಮೆ ನೀಡಬೇಕಾದ ಅನಿವಾರ್ಯತೆಯನ್ನು ವಿವರಿಸಿ ಹೇಳಿಕೆ ನೀಡುವುದು ಅಗತ್ಯ ಮಾತ್ರವಲ್ಲ, ಪ್ರತಿಯೊಬ್ಬ ಸಚಿವನೂ ಸದನಕ್ಕೆ ತೋರಲೇಬೇಕಾದ ಕರ್ತವ್ಯ ಅದು.

ಸುರಕ್ಷಿತ ದಾರಿ : ಮಂತ್ರಿಮಂಡಲವು ಒಳಗೆ ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ತಿಳಿಯಲು ಇಡೀ ಸದನಕ್ಕೆ ಯಾವುದೇ ಅವಕಾಶವಿಲ್ಲ. ಮಂತ್ರಿಗಳ ನಡುವೆ ಸಾಮರಸ್ಯ ಉಂಟೋ ಅಥವಾ ಸಂಘರ್ಷ ಉಂಟೋ ಎಂಬುದು ಸದನಕ್ಕೆ ಗೊತ್ತಾಗುವುದಿಲ್ಲ. ಏಕೆಂದರೆ, ಮಂತ್ರಿ ಮಂಡಲದಲ್ಲಿ ಉಂಟಾಗುವ ಭಿನ್ನಾಭಿಪ್ರಾಯಗಳನ್ನು ಬಯಲು ಮಾಡದಿರುವಂತೆ, ಸಚಿವರ ಮೇಲೆ ಹೊಣೆಗಾರಿಕೆಯಿದೆ. ಆದಕಾರಣ, ಮಂತ್ರಿಮಂಡಲದಲ್ಲಿ ಒಳಗೊಳಗೇ ಭಿನ್ನಾಭಿಪ್ರಾಯ-ತಿಕ್ಕಾಟಗಳಿದ್ದಾಗ್ಯೂ, ಮಂತ್ರಿಗಳ ನಡುವೆ ಯಾವುದೇ ವಿರಸವಿಲ್ಲವೆಂದು ಸದನವು ತಿಳಿದಿರುತ್ತದೆ. ಆದಕಾರಣ, ಹೊರಹೋಗಬೇಕಾದ ಸಚಿವನು ತಾನು ರಾಜೀನಾಮೆ ನೀಡಲು ಕಾರಣವೇನು ಎಂಬುದನ್ನು ಸದನಕ್ಕೆ ತಿಳಿಸಬೇಕಾದ ಕರ್ತವ್ಯಕ್ಕೆ ಒಳಪಟ್ಟಿರುತ್ತಾನೆ. ತನ್ನ ಹೊಣೆಯನ್ನು ನಿರ್ವಹಿಸದಿರಲು ಕಾರಣವಾದ ಪರಿಸ್ಥಿತಿಯ ಬಗ್ಗೆ ಆತನು ತಿಳಿಸಬೇಕಾಗುತ್ತದೆ.

ಎರಡನೆಯದಾಗಿ, ಒಬ್ಬ ಸಚಿವನು ಯಾವುದೇ ವಿವರಣೆಯನ್ನು ನೀಡದೆ ರಾಜೀನಾಮೆ ಕೊಟ್ಟು ಹೊರನಡೆದರೆ, ಸಚಿವನ ನಡವಳಿಕೆಯಲ್ಲೇ-ವೈಯಕ್ತಿಕ ಜೀವನ ಅಥವಾ ಸಾರ್ವಜನಿಕ ಜೀವನದಲ್ಲಿ ಏನೋ ತಪ್ಪಾಗಿರಬಹುದೆಂದು ಜನರು ಭಾವಿಸಬಹುದು. ಸಚಿವನಾದವನು ಅಂತಹ ಅನುಮಾನಗಳಿಗೆ ಆಸ್ಪದ ಕೊಡಲೇಬಾರದು. ಇದನ್ನು ತಪ್ಪಿಸಲು ಇರುವ ಸುರಕ್ಷಿತ ದಾರಿ ಎಂದರೆ, ಹೇಳಿಕೆಯನ್ನು ನೀಡುವುದು.

ಪಕ್ಷಪಾತ ಪತ್ರಿಕೆಗಳು : ಮೂರನೆಯದಾಗಿ, ನಮ್ಮಲ್ಲಿ ಸುದ್ದಿ ಪತ್ರಿಕೆಗಳಿವೆ. ಅವರಿಗೆ ಕೆಲವರ ವಿರುದ್ಧ ಯುಗಯುಗಗಳ ದ್ವೇಷವಿದ್ದರೆ, ಇನ್ನೂ ಕೆಲವರ ಪರ ಅಸಾಧಾರಣ ಒಲವಿದೆ. ಈ ಪತ್ರಿಕೆಗಳ ನಿರ್ಧಾರಗಳು ಮತ್ತು ಅಭಿಪ್ರಾಯಗಳು ತಿಳಿಯಾದ ನಿಷ್ಪಕ್ಷಪಾತ ಧೋರಣೆಯಿಂದ ಕೂಡಿರುವುದು ಬಲು ಅಪರೂಪ. ಪತ್ರಿಕೆಯಲ್ಲಿ ಸ್ವಲ್ಪ ಜಾಗ ಕಂಡರೆ ಸಾಕು, ತಮಗೆ ಆಗದ ಮಂತ್ರಿಗಳು ರಾಜೀನಾಮೆ ಕೊಟ್ಟ ಹಿನ್ನೆಲೆಯನ್ನು ತಮಗೆ ಅನುಕೂಲ ಕಂಡ ರೀತಿಯಲ್ಲಿ ಬರೆದು, ಆ ಮಂತ್ರಿಯ ವಿರುದ್ಧ ಸುಳ್ಳು ಪ್ರಚಾರ ಮಾಡುತ್ತಾರೆ. ಆದರೆ ತಮಗೆ ಬೇಕಾದ ಮಂತ್ರಿಯು ರಾಜೀನಾಮೆ ಕೊಟ್ಟಾಗ ಆತನ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡುವಂತೆ ಬರೆಯುತ್ತಾರೆ. ಇಂತಹ ಅಪಪ್ರಚಾರಕ್ಕೆ ನಾನು ಬಲಿಯಾಗಿದ್ದೇನೆ.

ಈ ಎಲ್ಲಾ ಕಾರಣಗಳಿಗಾಗಿ, ನಾನು ರಾಜೀನಾಮೆ ಸಲ್ಲಿಸಿ ಸದನದಿಂದ ಹೊರನಡೆಯುವ ಮುನ್ನ, ನನ್ನ ನಿರ್ಧಾರಕ್ಕೆ ಕಾರಣವಾದ ಹಿನ್ನೆಲೆಯನ್ನು ವಿವರಿಸಿ ಹೇಳಿಕೆ ನೀಡಲು ನಿರ್ಧರಿಸಿದೆ.

ವಿರೋಧಿ ಗುಂಪು : ಇಂದಿಗೆ ನಾಲ್ಕು ವರ್ಷಗಳು, ಒಂದು ತಿಂಗಳು ಮತ್ತು ಇಪ್ಪತ್ತಾರು ದಿನಗಳಿಗೆ ಮೊದಲು, ನನಗೆ ಕಾನೂನು ಸಚಿವ ಸ್ಥಾನವನ್ನು ಒಪ್ಪಿಕೊಳ್ಳಲು ಆಹ್ವಾನಿಸಿ ಪ್ರಧಾನಮಂತ್ರಿಯವರು ಕರೆ ನೀಡಿದರು. ಪ್ರಧಾನಮಂತ್ರಿಗಳ ಕರೆಯು ನನ್ನ ಪಾಲಿಗೆ ಅತಿದೊಡ್ಡ ಅಚ್ಚರಿಯಾಗಿತ್ತು. ನಾನು ವಿರೋಧಿ ಗುಂಪಿನಲ್ಲಿದ್ದವನು. ಆಗಸ್ಟ್ 1946ರಲ್ಲಿ ಮಧ್ಯಾವಧಿ ಸರ್ಕಾರವನ್ನು ರಚಿಸಿದಾಗ, ನನಂತಹವನ ಸಹವಾಸವೇ ಅಯೋಗ್ಯತನವೆಂದು ನಿರ್ಧರಿಸಿ ನನ್ನನ್ನು ತಿರಸ್ಕರಿಸಿ ದೂರವಿಡಲಾಗಿತ್ತು. ಇದ್ದಕ್ಕಿದ್ದಂತೆ ಪ್ರಧಾನ ಮಂತ್ರಿಗಳ ಸ್ವಭಾವದಲ್ಲಿ ಇಂತಹ ಬದಲಾವಣೆ ಯುಂಟಾಗಲು ಏನು ನಡೆದಿರ ಬಹುದೆಂಬುದನ್ನು ನಾನು ಊಹಿಸಲಾಗಿಲ್ಲ. ನನಗೆ ಯಾವ ಕಾಲದಲ್ಲೂ ಸ್ನೇಹಿತರಾಗಿರದಿದ್ದ ಮಂದಿಯೊಂದಿಗೆ ಹೇಗೆ ಕಾರ್ಯ ನಿರ್ವಹಿಸುವುದು ಎಂಬುದೇ ನನಗೆ ಗೊತ್ತಾಗಲಿಲ್ಲ. ನನಗೆ ನನ್ನದೇ ಆದ ಸಂಶಯಗಳಿದ್ದವು. ನನಗಿಂತ ಮೊದಲು ಆಗಿ ಹೋದ ಕಾನೂನು ಮಂತ್ರಿಗಳಲ್ಲಿದ್ದ ಕಾನೂನು ಜ್ಞಾನ ಮತ್ತು ದಕ್ಷತೆಯ ಮಟ್ಟವನ್ನು ಕಾಪಾಡುವ ತಾಕತ್ತು ನನ್ನಲ್ಲಿರುವುದೆ? ಆದರೆ ನನ್ನ ಸಂದೇಹಗಳನ್ನು ನನ್ನಲ್ಲೇ ಇರಿಸಿಕೊಂಡು, ನಮ್ಮ ದೇಶವನ್ನು ಕಟ್ಟಿ ಬೆಳೆಸಲು ಅಗತ್ಯವಾದ ಸಹಕಾರವನ್ನು ನನ್ನಿಂದ ಕೇಳಿದಾಗ ನಾನು ನಿರಾಕರಿಸಕೂಡದೆಂದು ಭಾವಿಸಿ, ಪ್ರಧಾನಮಂತ್ರಿಯ ಆಹ್ವಾನವನ್ನು ಒಪ್ಪಿಕೊಂಡೆನು. ಮಂತ್ರಿಮಂಡಲದ ಸದಸ್ಯನಾಗಿ ಹಾಗೂ ಕಾನೂನು ಮಂತ್ರಿಯಾಗಿ ನಿರ್ವಹಿಸಿದ ನನ್ನ ಕೆಲಸದ ಗುಣಮಟ್ಟವನ್ನು ನಿರ್ಧರಿಸುವ ತೀರ್ಪನ್ನು ನಾನು ಜನತೆಗೆ ಬಿಡುತ್ತೇನೆ.

ಮಂತ್ರಿಮಂಡಲದ ಜತೆಗಾರರ ಸಂಬಂಧವನ್ನು ಕಡಿದುಕೊಳ್ಳಲು ಕಾರಣವಾದ ವಿಚಾರಗಳ ಬಗ್ಗೆ ಇದೀಗ

ಆಗಸ್ಟ್ 1946ರಲ್ಲಿ ಮಧ್ಯಾವಧಿ ಸರ್ಕಾರವನ್ನು ರಚಿಸಿದಾಗ, ನನಂತಹವನ ಸಹವಾಸವೇ ಅಯೋಗ್ಯತನವೆಂದು ನಿರ್ಧರಿಸಿ ನನ್ನನ್ನು ತಿರಸ್ಕರಿಸಿ ದೂರವಿಡಲಾಗಿತ್ತು. ಇದ್ದಕ್ಕಿದ್ದಂತೆ ಪ್ರಧಾನ ಮಂತ್ರಿಗಳ ಸ್ವಭಾವದಲ್ಲಿ ಇಂತಹ ಬದಲಾವಣೆ ಯುಂಟಾಗಲು ಏನು ನಡೆದಿರ ಬಹುದೆಂಬುದನ್ನು ನಾನು ಊಹಿಸಲಾಗಿಲ್ಲ. ನನಗೆ ಯಾವ ಕಾಲದಲ್ಲೂ ಸ್ನೇಹಿತರಾಗಿರದಿದ್ದ ಮಂದಿಯೊಂದಿಗೆ ಹೇಗೆ ಕಾರ್ಯ ನಿರ್ವಹಿಸುವುದು ಎಂಬುದೇ ನನಗೆ ಗೊತ್ತಾಗಲಿಲ್ಲ. ನನಗೆ ನನ್ನದೇ ಆದ ಸಂಶಯಗಳಿದ್ದವು. ನನಗಿಂತ ಮೊದಲು ಆಗಿ ಹೋದ ಕಾನೂನು ಮಂತ್ರಿಗಳಲ್ಲಿದ್ದ ಕಾನೂನು ಜ್ಞಾನ ಮತ್ತು ದಕ್ಷತೆಯ ಮಟ್ಟವನ್ನು ಕಾಪಾಡುವ ತಾಕತ್ತು ನನ್ನಲ್ಲಿರುವುದೆ? ಆದರೆ ನನ್ನ ಸಂದೇಹಗಳನ್ನು ನನ್ನಲ್ಲೇ ಇರಿಸಿಕೊಂಡು, ನಮ್ಮ ದೇಶವನ್ನು ಕಟ್ಟಿ ಬೆಳೆಸಲು ಅಗತ್ಯವಾದ ಸಹಕಾರವನ್ನು ನನ್ನಿಂದ ಕೇಳಿದಾಗ ನಾನು ನಿರಾಕರಿಸಕೂಡದೆಂದು ಭಾವಿಸಿ, ಪ್ರಧಾನಮಂತ್ರಿಯ ಆಹ್ವಾನವನ್ನು ಒಪ್ಪಿಕೊಂಡೆನು. ಮಂತ್ರಿಮಂಡಲದ ಸದಸ್ಯನಾಗಿ ಹಾಗೂ ಕಾನೂನು ಮಂತ್ರಿಯಾಗಿ ನಿರ್ವಹಿಸಿದ ನನ್ನ ಕೆಲಸದ ಗುಣಮಟ್ಟವನ್ನು ನಿರ್ಧರಿಸುವ ತೀರ್ಪನ್ನು ನಾನು ಜನತೆಗೆ ಬಿಡುತ್ತೇನೆ.

ಹೇಳುತ್ತೇನೆ. ಮಂತ್ರಿಮಂಡಲವನ್ನು ಬಿಡಬೇಕೆಂಬ ತುಡಿತ, ಅನೇಕ ಕಾರಣಗಳಿಂದಾಗಿ, ಬಲುದಿನಗಳಿಂದಲೂ ನನ್ನಲ್ಲಿ ಬೆಳೆಯುತ್ತಲಿತ್ತು.

ನನ್ನ ರಾಜೀನಾಮೆಗೆ ವೈಯಕ್ತಿಕ ಕಾರಣಗಳು ಅಷ್ಟೇನೂ ಮುಖ್ಯವಲ್ಲದಿದ್ದರೂ, ಅವುಗಳ ಬಗ್ಗೆ ಮೊದಲು ಹೇಳುತ್ತೇನೆ. ಬ್ರಿಟಿಷ್ ವೈಸರಾಯ್ ಎಕ್ಸಿಕ್ಯೂಟಿವ್ ಕೌನ್ಸಿಲ್‌ನಲ್ಲಿ ಸದಸ್ಯನಾಗಿದ್ದ ಫಲವಾಗಿ, ಕಾನೂನು ಮಂತ್ರಿಗೆ ಯಾವುದೇ ಆಡಳಿತಾತ್ಮಕ ಅಧಿಕಾರವಿಲ್ಲ ಎಂಬುದು ನನಗೆ ಚೆನ್ನಾಗಿ ಗೊತ್ತಿತ್ತು. ಇಂಡಿಯಾ ಸರ್ಕಾರದ ನಿಯಮಾವಳಿಗಳನ್ನು ರೂಪಿಸುವಲ್ಲಿ ಕಾನೂನು ಮಂತ್ರಿಗಿರಿಗೆ ಯಾವುದೇ ಅವಕಾಶವನ್ನು ನೀಡಿಲ್ಲ. ಕಾನೂನು ಖಾತೆಯನ್ನು ಖಾಲಿ ಸಾಬೂನು ಡಬ್ಬಿ ಎಂದು ನಾವು ಲೇವಡಿ ಮಾಡುತ್ತಿದ್ದೆವು. ಈ ಖಾತೆಯು ವಯಸ್ಸಾದ ವಕೀಲರಿಗೆ ತಕ್ಕ ಸ್ಥಾನವಾಗಿತ್ತು. ಪ್ರಧಾನಮಂತ್ರಿಯು ನನಗೆ ಈ ಖಾತೆಯನ್ನು ವಹಿಸಿಕೊಳ್ಳುವಂತೆ ಕರೆನೀಡಿದಾಗ, ನಾನು ಬೇರೆ ಯಾವುದಾದರೂ ಆಡಳಿತಾತ್ಮಕ ಕಾನೂನು ಖಾತೆ ನೀಡುವಂತೆ ಕೇಳಿದ್ದೆ. ನನಗೆ ಕಾನೂನು ಶಿಕ್ಷಣ ಮತ್ತು ವಕೀಲಿ ಅನುಭವವಿದ್ದರೂ, ವೈಸರಾಯ್ ಕೌನ್ಸಿಲ್‌ನಲ್ಲಿ ಕಾರ್ಮಿಕ ಖಾತೆ ಮತ್ತು ಲೋಕೋಪಯೋಗಿ ಖಾತೆಯಂತಹ ಆಡಳಿತಾತ್ಮಕ ಖಾತೆಗಳನ್ನು ಹೊಂದಿದ್ದೆನು. ಆ ಖಾತೆಗಳಲ್ಲಿ ಸಾಕಷ್ಟು ಯೋಜನೆಗಳನ್ನು ಕೈಗೊಂಡು ಸಮರ್ಥವಾಗಿ ನಿಭಾಯಿಸಿದ್ದೆ. ಆದ್ದರಿಂದ ಅಂತಹ ಖಾತೆಗಳನ್ನೇ ನಾನು ಕೇಳಿದ್ದೆ. ನನ್ನ ಮಾತಿಗೆ ಪ್ರಧಾನಮಂತ್ರಿಯವರು ಒಪ್ಪಿದ್ದರು. ಕಾನೂನು ಖಾತೆಯೊಂದಿಗೆ, ಯೋಜನಾ ಖಾತೆಯನ್ನು ಸೃಷ್ಟಿಸುವುದಾಗಿ ಹೇಳಿದರು. ಆದರೆ ಯೋಜನಾ ಖಾತೆಯು ಬಲು ನಿಧಾನವಾಗಿ ಜನುಮ ಪಡೆಯಿತು. ಆ ವೇಳೆಗಾಗಲೇ ನಾನು ಮಂತ್ರಿಮಂಡಲದಿಂದ ಹೊರನಡೆದಿದ್ದೆ. ನನ್ನ ಅಧಿಕಾರ ಅವಧಿಯಲ್ಲಿ, ಒಬ್ಬ ಮಂತ್ರಿಯಿಂದ ಮತ್ತೊಂದು ಮಂತ್ರಿಗೆ ಖಾತೆಗಳ ವರ್ಗಾವಣೆ ಅನೇಕ ಬಾರಿ ನಡೆದವು. ಅವುಗಳ ಪೈಕಿ, ಎಂದಾದರೊಮ್ಮೆ ನನಗೂ ಅವಕಾಶ ಸಿಗಬಹುದೆಂದು ನಾನು ಎಣಿಸಿದ್ದೆ. ಆದರೆ ಯಾವಾಗಲೂ ನನ್ನ ವಿಚಾರವನ್ನು ಪರಿಗಣಿಸಲೇ ಇಲ್ಲ. ಅನೇಕ ಮಂತ್ರಿಗಳಿಗೆ ಎರಡು ಮೂರು ಖಾತೆಗಳನ್ನು ಕೊಡಲಾಗಿತ್ತು. ಅದರಿಂದಾಗಿ, ಅವರಿಗೆ ತಲೆಗೆ ಮೀರಿದಷ್ಟು ಕೆಲಸದ ಹೊರೆಯಿತ್ತು. ನನ್ನಂತಹವರಿಗೆ ಯಾವಾಗಲೂ ಕೆಲಸದ ಕೊರತೆಯಿತ್ತು. ಆದರೆ, ನನಗೆ ಮತ್ತೊಂದು ಖಾತೆಯನ್ನು ನೀಡುವ ವಿಚಾರವನ್ನೇ ಮಾಡಲಿಲ್ಲ. ಇತರ ಮಂತ್ರಿಗಳು ಕೆಲವು ಕಾಲ ವಿದೇಶ ಪ್ರವಾಸದಲ್ಲಿದ್ದಾಗಲೂ ಕೂಡ, ತಾತ್ಕಾಲಿಕವಾಗಿಯಾದರೂ, ನನಗೆ ಅವರ ಖಾತೆಗಳನ್ನು ವಹಿಸಿಕೊಳ್ಳುವ ಜವಾಬ್ದಾರಿ ಕೊಡಲಿಲ್ಲ. ಮಂತ್ರಿಗಳಲ್ಲಿ ಮಾನದಂಡವನ್ನು ಅನುಸರಿಸುತ್ತಾರೆ ಎಂಬುದನ್ನು ಅರಿಯುವುದೇ ಕಷ್ಟವಾಗಿತ್ತು. ಸಾಮರ್ಥ್ಯವೋ? ವಿಶ್ವಾಸವೋ? ಸ್ನೇಹವೋ? ಭಟ್ಟಂಗಿತನವೋ?

ಮಂತ್ರಿಮಂಡಲದ ಪ್ರಮುಖ ಕಮಿಟಿಗಳಾದ ವಿದೇಶಿ ವ್ಯವಹಾರ ಕಮಿಟಿ ಅಥವಾ ರಕ್ಷಣಾ ಕಮಿಟಿಗೂ ನನ್ನನ್ನು ಸದಸ್ಯನನ್ನಾಗಿ ರಚಿಸಿದಾಗ, ನಾನು ಮೂಲಭೂತವಾಗಿ ಹಣಕಾಸು ಮತ್ತು ಅರ್ಥಶಾಸ್ತ್ರದ ವಿದ್ಯಾರ್ಥಿಯಾಗಿರುವುದರಿಂದ, ಈ ಕಮಿಟಿಗೆ ನನ್ನನ್ನು ನೇಮಿಸಬಹುದೆಂದು ನಾನು ನಿರೀಕ್ಷಿಸಿದ್ದೆ. ಆದರೆ ನನ್ನನ್ನು ಕೈಬಿಡಲಾಯಿತು. ಪ್ರಧಾನಿಯು ಇಂಗ್ಲೆಂಡ್ ಪ್ರವಾಸದಲ್ಲಿದ್ದಾಗ, ಮಂತ್ರಿಮಂಡಲವು ನನ್ನನ್ನು ಈ ಕಮಿಟಿಗೆ ನೇಮಿಸಿತು. ಆದರೆ, ಪ್ರವಾಸದಿಂದ ಹಿಂದಿರುಗಿದ ಪ್ರಧಾನಿಯು ತನ್ನ ಮಂತ್ರಿಮಂಡಲವನ್ನು ಪುನರ್ರಚಿಸಿದಾಗ, ಅನೇಕ ಬದಲಾವಣೆಗಳಲ್ಲಿ, ನನ್ನನ್ನು ಕಮಿಟಿಯಿಂದ ಕೈಬಿಡುವ ಕೆಲಸವೂ ಆಗಿಹೋಯಿತು. ಮತ್ತೊಮ್ಮೆ ಪುನರ್ರಚನೆ ನಡೆದಾಗ, ಕಮಿಟಿಗೆ ನನ್ನನ್ನು ಸೇರಿಸಿಕೊಳ್ಳುವಂತೆ ನಿರ್ಧಾರ ಕೈಗೊಳ್ಳಲು ನಾನು ಹೋರಾಟವನ್ನೇ ಮಾಡಬೇಕಾಯಿತು. ಈ ಸಂಬಂಧದಲ್ಲಿ, ನಾನು ಈ ತನಕ ಯಾವುದೇ ರೀತಿಯ ದೂರು ನೀಡಿಲ್ಲ ಎಂಬುದನ್ನು ಸ್ವತಃ ಪ್ರಧಾನಿಯೂ ಒಪ್ಪುತ್ತಾರೆ ಎಂದು ನಾನು ನಂಬಿದ್ದೇನೆ. ಮಂತ್ರಿಮಂಡಲದೊಳಗೆ ಅಧಿಕಾರಕ್ಕಾಗಿ ನಡೆಯುತ್ತಿದ್ದ ಕಿತ್ತಾಟ ಪರದಾಟಗಳಲ್ಲಿ ನಾನು ಯಾವತ್ತೂ ಪಾಲ್ಗೊಂಡವನೇ ಅಲ್ಲ. ಖಾತೆಗಳು ಖಾಲಿಯಾದಾಗ ಕಸಿದುಕೊಳ್ಳುವ ತಂತ್ರವನ್ನೂ ನಾನು ಮಾಡಿದವನಲ್ಲ. ನಾನು ಸೇವೆಯಲ್ಲಿ ನಂಬಿಕೆ ಇಟ್ಟವನು. ನನ್ನ ಸಾಮರ್ಥ್ಯವನ್ನು ಪರಿಗಣಿಸಿ, ಮಂತ್ರಿಮಂಡಲದ ನಾಯಕನಾದ ಪ್ರಧಾನಿಯು ತೀರ್ಮಾನಿಸಿ ವಹಿಸುವ ಖಾತೆಯಲ್ಲಿ ಸೇವೆ ಸಲ್ಲಿಸುವುದು ನನ್ನ ಕರ್ತವ್ಯ ಎಂದು ನಂಬಿದವನು ನಾನು. ಆದರೆ ನನಗೆ ಅನುಚಿತ ಅನ್ಯಾಯವಾದಾಗ ಮನಸ್ಸಿಗೆ ಹಚ್ಚಿಕೊಳ್ಳದಿರುವುದಂತೂ ಮನುಷ್ಯನಾದವನಿಗೆ ಸಹಿಸಿಕೊಂಡಿರುವುದು ಅಸಾಧ್ಯ.

ಹಿಂದುಳಿದವರಿಗೆ ಅನ್ಯಾಯ : ಸರ್ಕಾರದ ವಿರುದ್ಧ ಅಸಮಾಧಾನವುಂಟಾಗಲು ಕಾರಣವಾದ ಮತ್ತೊಂದು ವಿಚಾರ ಯಾವುದೆಂದರೆ, ಹಿಂದುಳಿದ ವರ್ಗಗಳು ಮತ್ತು ದಲಿತರ ಬಗ್ಗೆ ಸರ್ಕಾರದ ಅಲಕ್ಷ್ಯ ಧೋರಣೆ. ನಮ್ಮ ರಾಜ್ಯಾಂಗವು ಹಿಂದುಳಿದ ಜಾತಿಗಳ ರಕ್ಷಣೆಯ ಬಗ್ಗೆ ಯಾವುದೇ ಕ್ರಮವನ್ನು ಅಳವಡಿಸಲಿಲ್ಲ ಎನ್ನುವುದರ ಬಗ್ಗೆ ನನಗೆ ವಿಷಾದವಾಗುತ್ತದೆ. ರಾಷ್ಟ್ರಪತಿಯು ನೇಮಿಸಬಹುದಾದ ಆಯೋಗದ ಶಿಫಾರಸ್ಸುಗಳನ್ನು ಆಧರಿಸಿ, ಅಂತಹ ರಕ್ಷಣಾಕ್ರಮಗಳನ್ನು ಕೈಗೊಳ್ಳುವ ಜವಾಬ್ದಾರಿಯನ್ನು ಸರ್ಕಾರದ ಕಾರ್ಯಾಂಗಕ್ಕೆ ವಹಿಸಲಾಗಿತ್ತು. ರಾಜ್ಯಾಂಗವನ್ನು ಜಾರಿ ಮಾಡಿ ಒಂದು ವರುಷ ದಾಟಿದೆ. ಆದರೆ, ಹಿಂದುಳಿದ ವರ್ಗಗಳ ಆಯೋಗವನ್ನು ನೇಮಿಸುವುದರ ಬಗ್ಗೆ ಕೂಡ ಸರ್ಕಾರವು ಆಲೋಚಿಸಿಲ್ಲ.

1946ರ ಅವಧಿಯಲ್ಲಿ, ನಾನು ಯಾವುದೇ ಅಧಿಕಾರವನ್ನು ಹೊಂದಿರಲಿಲ್ಲ. ನನಗೂ ಪ್ರಮುಖ ದಲಿತ ನಾಯಕರಿಗೂ ಆತಂಕದ ದಿನಗಳವು. ರಾಜ್ಯಾಂಗಬದ್ಧ ರಕ್ಷಣಾಕ್ರಮಗಳನ್ನು ಒದಗಿಸುವುದಾಗಿ ಭರವಸೆ ನೀಡಿದ್ದ ಬ್ರಿಟಿಷ್ ಸರ್ಕಾರವು ತನ್ನ ವಾಗ್ದಾನದಂತೆ ನಡೆಯಲಿಲ್ಲ. ಮುಂಬರುವ ರಾಜ್ಯಾಂಗ ಸಭೆಯು ಏನು ಮಾಡುತ್ತದೆ ಎಂಬುದರ ಬಗ್ಗೆ ದಲಿತರಿಗೆ ಗೊತ್ತಿರಲಿಲ್ಲ. ಇಂತಹ ಆತಂಕದ ದಿನಗಳಲ್ಲಿ, ದಲಿತರ ಪರಿಸ್ಥಿತಿಯ ಬಗ್ಗೆ ಒಂದು ವರದಿಯನ್ನು ವಿಶ್ವಸಂಸ್ಥೆಗೆ ಅರ್ಪಿಸಲು ಸಿದ್ಧಪಡಿಸಿದೆ. ಆದರೆ, ಆ ವರದಿಯನ್ನು ವಿಶ್ವಸಂಸ್ಥೆಗೆ ಕಳಿಸಲಿಲ್ಲ. ಏಕೆಂದರೆ, ಮುಂಬರುವ ರಾಷ್ಟ್ರೀಯ ಸರ್ಕಾರಕ್ಕೆ ಈ ನಿಟ್ಟನಲ್ಲಿ ಒಂದು ಅವಕಾಶವನ್ನು ಕೊಟ್ಟು ನೋಡಿದ ನಂತರ, ಮುಂದಿನ ಕ್ರಮದ ಬಗ್ಗೆ ಆಲೋಚಿಸುವುದು ಒಳಿತು ಎಂದು ಭಾವಿಸಿದೆ. ದಲಿತರ ಹಿತಾಸಕ್ತಿಗಳನ್ನು ರಕ್ಷಿಸಲು ರಾಜ್ಯಾಂಗದಲ್ಲಿ ಅಳವಡಿಸಿದ ಕ್ರಮಗಳು ನನ್ನ ನಿರೀಕ್ಷೆಗೆ ತಕ್ಕಂತಿರಲಿಲ್ಲ. ಆದ್ದರಿಂದ, ಅವುಗಳ ಬಗ್ಗೆ ನನಗೆ ಅಷ್ಟೊಂದು ಸಮಾಧಾನವಾಗಲಿಲ್ಲ. ಆದರೆ ಸರ್ಕಾರವು ಅವುಗಳನ್ನಾದರೂ ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತರಬಹುದೆಂದು ನಂಬಿ, ಆ ಕ್ರಮಗಳು ಇರುವ ಸ್ಥಿತಿಯಲ್ಲೇ ಅವುಗಳನ್ನು ಒಪ್ಪಿಕೊಂಡೆ. ಆದರೆ ಈಗ ಆಗುತ್ತಿರುವುದೇನು? ಇಂದು ದಲಿತರ ಪರಿಸ್ಥಿತಿಯು ಹೇಗಿದೆ? ನನಗೆ ಗೊತ್ತಿರುವಂತೆ, ಹಿಂದೆ ಇದ್ದದ್ದಕ್ಕಿಂತ ಈಗ ಉತ್ತಮವಾಗೇನೂ ಇಲ್ಲ. ಹಿಂದೆ ಇದ್ದಂತಹ ದೌರ್ಜನ್ಯ, ದಬ್ಬಾಳಿಕೆ, ತಾರತಮ್ಯಗಳೇ ಇಂದಿಗೂ ಇವೆ. ನಿಜ ಹೇಳಬೇಕೆಂದರೆ, ಹಿಂದಿಗಿಂತಲೂ ಭೀಕರವಾಗಿವೆ.

ಜಾತೀವಾದಿ ಪೊಲೀಸು : ದಲಿತರ ವಿರುದ್ಧ ನಡೆದ ಹಿಂದೂಗಳ ದೌರ್ಜನ್ಯ ದಬ್ಬಾಳಿಕೆಗಳ ನೂರಾರು ಘಟನೆಗಳನ್ನು ಪಟ್ಟಿ ಮಾಡಿ ಕೊಡಬಲ್ಲೆ. ದಿಲ್ಲಿ ಮತ್ತು ಸುತ್ತಮುತ್ತಲ ಊರುಗಳಿಂದ ಬರುವ ದಲಿತರು ತಮ್ಮ ಗೋಳಿನ ಕತೆಗಳನ್ನೇ ನನ್ನ ಮುಂದೆ ಬಿಚ್ಚಿಡುತ್ತಾರೆ. ಹಿಂದೂಗಳ ದಬ್ಬಾಳಿಕೆಯ ವಿರುದ್ಧ ಪೊಲೀಸರಿಗೆ ದೂರು ನೀಡಿದರೆ, ದೂರನ್ನೇ ದಾಖಲಿಸದಿದ್ದ ಘಟನೆಗಳಿಗೆ ಲೆಕ್ಕವಿಲ್ಲ. ದಲಿತರು ಅನುಭವಿಸುತ್ತಿರುವ ದೌರ್ಜನ್ಯಗಳಿಗೆ ಸಮನಾದ ನೋವು ಜಗತ್ತಿನಲ್ಲಿ ಬೇರೆಲ್ಲಾದರೂ ಉಂಟೆ

ದಲಿತರ ಹಿತಾಸಕ್ತಿಗಳನ್ನು ರಕ್ಷಿಸಲು ರಾಜ್ಯಾಂಗದಲ್ಲಿ ಅಳವಡಿಸಿದ ಕ್ರಮಗಳು ನನ್ನ ನಿರೀಕ್ಷೆಗೆ ತಕ್ಕಂತಿರಲಿಲ್ಲ. ಆದ್ದರಿಂದ, ಅವುಗಳ ಬಗ್ಗೆ ನನಗೆ ಅಷ್ಟೊಂದು ಸಮಾಧಾನವಾಗಲಿಲ್ಲ. ಆದರೆ ಸರ್ಕಾರವು ಅವುಗಳನ್ನಾದರೂ ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತರಬಹುದೆಂದು ನಂಬಿ, ಆ ಕ್ರಮಗಳು ಇರುವ ಸ್ಥಿತಿಯಲ್ಲೇ ಅವುಗಳನ್ನು ಒಪ್ಪಿಕೊಂಡೆ. ಆದರೆ ಈಗ ಆಗುತ್ತಿರುವುದೇನು? ಇಂದು ದಲಿತರ ಪರಿಸ್ಥಿತಿಯು ಹೇಗಿದೆ? ನನಗೆ ಗೊತ್ತಿರುವಂತೆ, ಹಿಂದೆ ಇದ್ದದ್ದಕ್ಕಿಂತ ಈಗ ಉತ್ತಮವಾಗೇನೂ ಇಲ್ಲ. ಹಿಂದೆ ಇದ್ದಂತಹ ದೌರ್ಜನ್ಯ, ದಬ್ಬಾಳಿಕೆ, ತಾರತಮ್ಯಗಳೇ ಇಂದಿಗೂ ಇವೆ. ನಿಜ ಹೇಳಬೇಕೆಂದರೆ, ಹಿಂದಿಗಿಂತಲೂ ಭೀಕರವಾಗಿವೆ.

ಎಂದು ನಾನು ಸೋಜಿಗಪಡುತ್ತೇನೆ. ನಮ್ಮಷ್ಟು ನೋವು ಅಪಮಾನ ನಿಂದೆಗಳಿಗೆ ಬಲಿಯಾದವರು ಯಾರೂ ಇಲ್ಲ. ಆದರೂ ದಲಿತರಿಗೆ ಯಾವುದೇ ಪರಿಹಾರ ಸಿಗದಿರಲು ಕಾರಣವೇನು? ನಮಗೆ ಹೋಲಿಸಿದಲ್ಲಿ ಮುಸ್ಲಿಮರ ಹಿತರಕ್ಷಣೆ ಮಾಡುವಲ್ಲಿ ಸರ್ಕಾರ ತೋರುತ್ತಿರುವ ಕಾಳಜಿಯನ್ನು ನೋಡಿ. ಪ್ರಧಾನಮಂತ್ರಿಯ ಸಮಯ ಮತ್ತು ಗಮನವೆಲ್ಲವೂ ಮುಸ್ಲಿಮರ ರಕ್ಷಣೆಗಾಗಿಯೇ ಮೀಸಲಾಗಿದೆ. ಇಂಡಿಯಾದ ಯಾವುದೇ ಭಾಗದಲ್ಲಿ, ಯಾವುದೇ ಸಮಯದಲ್ಲಿ ಮುಸ್ಲಿಮರಿಗೆ ಅಗತ್ಯವಾದ ರಕ್ಷಣೆಯನ್ನು ಒದಗಿಸಬೇಕೆಂದು ಒತ್ತಾಯ ಪಡಿಸುವುದರಲ್ಲಿ ನಾನು ಮೊದಲಿಗ. ಈ ವಿಚಾರದಲ್ಲಿ ನಾನು ಯಾರಿಗೂ ಸೊಪ್ಪು ಹಾಕುವವನಲ್ಲ. ಪ್ರಧಾನಮಂತ್ರಿಗೂ ಒಗ್ಗುವವನಲ್ಲ. ಆದರೆ ನಾನು ತಿಳಿದುಕೊಳ್ಳಬೇಕಾದದ್ದು ಏನೆಂದರೆ, ಕೇವಲ ಮುಸ್ಲಿಮರು ಮಾತ್ರ ರಕ್ಷಣೆಗೆ ಪಾತ್ರರೆ? ದಲಿತರು, ಆದಿವಾಸಿಗಳು ಮತ್ತು ಇಂಡಿಯನ್ ಕ್ರೈಸ್ತರಿಗೂ ರಕ್ಷಣೆಯ ಅಗತ್ಯವಿಲ್ಲವೆ? ಈ ಜನಾಂಗಗಳ ವಿಚಾರದಲ್ಲಿ ಪ್ರಧಾನಿಯು ಎಂತಹ ಕಾಳಜಿ ತೋರಿದ್ದಾರೆ? ನನಗೆ ತಿಳಿದಿರುವಂತೆ, ಯಾವ ಕಾಳಜಿಯನ್ನೂ ತೋರಿಸಿಲ್ಲ. ಮುಸ್ಲಿಮರಿಗಿಂತ ಹೆಚ್ಚಿನ ರಕ್ಷಣೆಯ ಅಗತ್ಯ ಈ ಜನಾಂಗಗಳಿಗೆ ಜರೂರಾಗಿ ಬೇಕಿದೆ.

ಮೀಸಲಾತಿ ಮೋಸ : ದಲಿತರ ಬಗ್ಗೆ ಸರ್ಕಾರವು ತೋರಿರುವ ಅಸಡ್ಡೆಯ ವಿರುದ್ಧ ನನ್ನ ಸಿಟ್ಟನ್ನು ಅದುಮಿಟ್ಟುಕೊಳ್ಳಲು ನನಗೆ ಸಾಧ್ಯವಾಗಲಿಲ್ಲ. ಒಮ್ಮೆ, ದಲಿತರ ಸಾರ್ವಜನಿಕ ಸಭೆಯೊಂದರಲ್ಲಿ, ನನ್ನೊಳಗೆ ಕುದಿಯುತ್ತಿದ್ದ ಅತೃಪ್ತಿಯನ್ನು ನಾನು ಹೊರಚೆಲ್ಲಿದೆ. ಸರ್ಕಾರಿ ಸೇವೆಯಲ್ಲಿ ದಲಿತರಿಗಾಗಿ ಕಾದಿಟ್ಟ 12.5% ಮೀಸಲಾತಿಯಿಂದ ಯಾವುದೇ ಉಪಯೋಗವಾಗಿಲ್ಲ ಎಂದು ಹೇಳಿದೆ. ಆಗ ನನ್ನ ಆರೋಪದಲ್ಲಿ ಸತ್ಯಾಂಶವಿದೆಯೇನು ಎಂದು ಅಂದಿನ ಗೃಹ ಸಚಿವರನ್ನು ಪ್ರಶ್ನಿಸಲಾಯಿತು. ಆ ಸಚಿವರು ಕೂಡಲೇ ಯಾವುದೇ ಅಳುಕಿಲ್ಲದೆ, 'ನನ್ನ ಆರೋಪವು ಆಧಾರ ರಹಿತವಾದ ಸುಳ್ಳು' ಎಂದು ಹೇಳಿಬಿಟ್ಟರು. ನಂತರ, ಅವರಿಗೆ ಏನನಿಸಿತೋ (ಬಹುಶಃ ತಮ್ಮ ಆತ್ಮತೃಪ್ತಿಗಾಗಿ) ಅವರು ಎಲ್ಲಾ ಸರ್ಕಾರಿ ಇಲಾಖೆಗಳಿಗೆ ಒಂದು ಸುತ್ತೋಲೆ ಕಳಿಸಿ, ಎಷ್ಟು ಮಂದಿ ದಲಿತ ನೌಕರರು ಸರ್ಕಾರಿ ಸೇವೆಯಲ್ಲಿದ್ದಾರೆ ಎಂಬುದನ್ನು ವರದಿ ಮಾಡಲು ಆದೇಶಿಸಿದರು. ಈ ವಿಚಾರವು ನನಗೂ ತಿಳಿಯಿತು. ಅಚ್ಚರಿಯೇನೆಂದರೆ, ಬಹುತೇಕ ಎಲ್ಲಾ ಇಲಾಖೆಗಳಿಂದಲೂ, "ಇಲ್ಲ" ಎಂಬ ಉತ್ತರವೇ ಬಂತು. ಗೃಹಮಂತ್ರಿಯು ನೀಡಿರಬಹುದಾದ ಉತ್ತರದ ಬಗ್ಗೆ ನಾನು ಏನನ್ನೂ ಹೇಳಬೇಕಾದ ಅಗತ್ಯವೇ ಇಲ್ಲ.

ಜನಾಂಗದ ಏಳಿಗೆಯೇ ಸರ್ವಸ್ವ : ನಾನು ಬಾಲಕನಾಗಿದ್ದ ದಿನದಿಂದಲೂ, ನನಗೆ ಜನುಮಕೊಟ್ಟ ಜನಾಂಗದ ಏಳಿಗೆಗಾಗಿ ನನ್ನನ್ನು ನಾನು ಸಮರ್ಪಿಸಿಕೊಂಡಿದ್ದೇನೆ. ನನ್ನ ಹಾದಿಯಲ್ಲಿ ನನಗೆ ಯಾವುದೇ ಆಮಿಷಗಳು/ಪ್ರಲೋಭನೆಗಳು ಇರಲಿಲ್ಲವೆಂದೇನೂ ಅಲ್ಲ. ನಾನು ಕೇವಲ ನನ್ನ ಏಳಿಗೆಯನ್ನಷ್ಟೇ ನೋಡಿಕೊಂಡಿದ್ದರೆ, ನಾನು ಏನನ್ನು ಬೇಕಾದರೂ ಸಾಧಿಸುತ್ತಿದ್ದೆ ಮತ್ತು ಬಯಸಿದಂತೆ ಆಗುತ್ತಿದ್ದೆ. ನಾನು ಕಾಂಗ್ರೆಸ್ ಪಕ್ಷವನ್ನು ಸೇರಿದ್ದಲ್ಲಿ, ಆ ಪಕ್ಷದ ಅತ್ಯುನ್ನತ ಸ್ಥಾನವನ್ನು ಪಡೆಯುತ್ತಿದ್ದೆ. ಆದರೆ, ನಾನು ಮೊದಲೇ ಹೇಳಿದಂತೆ, ದಲಿತ ಜನಾಂಗದ ಏಳಿಗೆಗಾಗಿ ನಾನು ನನ್ನನ್ನು ಸಮರ್ಪಿಸಿಕೊಂಡೆನು. "ನೀನು ಬಯಸಿದ ಗುರಿಯನ್ನು ಮುಟ್ಟಬೇಕಾದರೆ ನೀನು ಸಂಕುಚಿತ ಮನಸ್ಸಿನವನಾಗಿರುವುದೇ ಉತ್ತಮ" ಎಂಬ ಗಾದೆ ಮಾತಿಗೆ ತಕ್ಕಂತೆ ನಾನು ನಡೆದುಕೊಂಡೆನು. ಹೀಗೆ ನನ್ನ ಸರ್ವಸ್ವವೂ ನನ್ನ ಜನಾಂಗದ ಏಳಿಗೆಯೇ ಆಗಿರುವಾಗ, ನನ್ನ ಜನಾಂಗವನ್ನು ಸಂಪೂರ್ಣ ಭಿಕಾರಿ ಸ್ಥಿತಿಗೆ ದೂಡುವಂತಹ ಪರಿಸ್ಥಿತಿ ಉಂಟಾದಾಗ, ನನಗೆ ಎಷ್ಟು ಅಗಾಧವಾದ ಮನೋವೇದನೆ ಉಂಟಾಗಿರಬಹುದು ಎಂಬುದನ್ನು ನೀವೇ ಊಹಿಸಿ.

ವಕ್ರ ವಿದೇಶಾಂಗ ನೀತಿ : ಸರ್ಕಾರದ ಕಾರ್ಯವೈಖರಿಯ ಬಗ್ಗೆ ಕೇವಲ ಅಸಮಾಧಾನ ಮಾತ್ರವಲ್ಲದೆ, ಆತಂಕವನ್ನೂ ತಂದಂತಹ ಮೂರನೆಯ ವಿಚಾರ ಯಾವುದೆಂದರೆ, ನಮ್ಮ ದೇಶದ ವಿದೇಶಾಂಗ ನೀತಿ. ನಮ್ಮ ದೇಶದ ವಿದೇಶಾಂಗ ನೀತಿಯನ್ನು ಮತ್ತು ಅದಕ್ಕೆ ಅನುಸಾರವಾಗಿ ಇತರ ದೇಶಗಳನ್ನು ಜಾಗರೂಕತೆಯಿಂದ ಗಮನಿಸಿದವರು ಯಾರೇ ಆಗಲಿ, ಆ ದೇಶಗಳ ಧೋರಣೆಗಳಲ್ಲಿ ಆದ ಬದಲಾವಣೆಯನ್ನು ಅರಿಯದಿರಲು ಸಾಧ್ಯವೇ ಇಲ್ಲ. ಆಗಸ್ಟ್ 15, 1947ರಂದು, ಸ್ವತಂತ್ರ ದೇಶವಾಗಿ ನಾವು ಜೀವನ ಆರಂಭಿಸಿದಾಗ, ನಮಗೆ ಕೆಡುಕಾಗಬೇಕೆಂದು ಬಯಸಿದಂತಹ ದೇಶವೇ ಇರಲಿಲ್ಲ. ಜಗತ್ತಿನ ಪ್ರತಿಯೊಂದು ದೇಶವೂ ನಮ್ಮ ಸ್ನೇಹಿತನಾಗಿತ್ತು. ಆದರೆ, ಇಂದು ಕೇವಲ ನಾಲ್ಕು ವರ್ಷಗಳಲ್ಲಿ ನಮ್ಮ ಸ್ನೇಹಿತರೆಲ್ಲರೂ ನಮ್ಮ ಕೈ ಬಿಟ್ಟಿದ್ದಾರೆ. ನಮ್ಮೊಂದಿಗೆ ಒಬ್ಬ ಸ್ನೇಹಿತರೂ ಇಲ್ಲ. ನಾವು ಎಲ್ಲರನ್ನೂ

ದೂರಮಾಡಿಕೊಂಡಿದ್ದೇವೆ. ವಿಶ್ವಸಂಸ್ಥೆಯಲ್ಲಿ ನಮ್ಮ ಕೂಗನ್ನು ಅನುಮೋದಿಸಲು ಒಂದು ದೇಶವೂ ನಮ್ಮ ಜತೆಗಿಲ್ಲ. ನಮ್ಮಷ್ಟಕ್ಕೆ ನಾವೇ ಗುಣಿ ತೋಡಿಕೊಂಡಿದ್ದೇವೆ. ನಮ್ಮ ವಿದೇಶಾಂಗ ನೀತಿಯ ಬಗ್ಗೆ ಆಲೋಚಿಸಿದಾಗ, ಬಿಸ್‌ಮಾರ್ಕ್ ಮತ್ತು ಬರ್ನಾರ್ಡ್‌ಷಾರವರು ಹೇಳಿದ ಮಾತುಗಳು ನನಗೆ ನೆನಪಾಗುತ್ತವೆ. "ರಾಜಕೀಯ ಎಂಬುದು ನಮ್ಮ ಆದರ್ಶಗಳನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವ ಆಟವಲ್ಲ. ರಾಜಕೀಯ ಎಂಬುದು ಸಾಧ್ಯತೆಗಳನ್ನು ಸಾಧಿಸುವ ಆಟ" ಎಂದು ಬಿಸ್‌ಮಾರ್ಕ್ ಹೇಳಿದ್ದಾರೆ. ತೀರ ಇತ್ತೀಚೆಗೆ ಬರ್ನಾರ್ಡ್‌ಷಾ ಹೇಳಿದ್ದಾರೆ : "ಒಳ್ಳೆಯ ಆದರ್ಶಗಳು ಇರುವುದು ಒಳ್ಳೆಯದೇ. ಆದರೆ ಅತಿ ಒಳ್ಳೆಯತನವು ಆಗಾಗ್ಗೆ ಅಪಾಯಕಾರಿ ಎಂಬುದನ್ನು ನಾವು ಮರೆಯಕೂಡದು" ಜಗತ್ತಿನ ಮಹಾನ್ ವ್ಯಕ್ತಿಗಳ ಸಾಲಿಗೆ ಸೇರಿದ ಈ ಇಬ್ಬರ ವಿವೇಕಯುತ ಮಾತಿಗೆ ನಮ್ಮ ವಿದೇಶಾಂಗ ನೀತಿಯು ತದ್ವಿರುದ್ಧವಾಗಿದೆ.

ಅಸಾಧ್ಯವಾದ ಆದರ್ಶವನ್ನು ಸಾಧಿಸುವ ಸಾಹಸ ಹಾಗೂ ಅತಿ ಒಳ್ಳೆಯವರಾಗುವ ಅಸಾಧ್ಯವಾದ ನೀತಿಯನ್ನು ನೆಚ್ಚಿಕೊಂಡು, ಸೈನ್ಯಕ್ಕಾಗಿ ವಿಪರೀತ ಖರ್ಚು ಮಾಡಿರುವುದರಿಂದಾಗಿ ನಮ್ಮ ಆದಾಯ ಮತ್ತು ಸಂಪನ್ಮೂಲಗಳು ಬತ್ತಿಹೋಗಿವೆ. ಹಸಿವಿನಿಂದ ಕಂಗಾಲಾಗಿರುವ ಲಕ್ಷಾಂತರ ಹೊಟ್ಟೆಗಳಿಗೆ ಅನ್ನ ನೀಡುವುದಕ್ಕೆ ಅಸಮರ್ಥರಾಗಿದ್ದೇವೆ. ನಮ್ಮ ದೇಶವನ್ನು ಬಲವಾದ ಕೈಗಾರಿಕಾ ನಾಡನ್ನಾಗಿ ಪರಿವರ್ತಿಸಲಾಗದೆ ಸೋತಿದ್ದೇವೆ.

ಮಿಲಿಟರಿ ದುಂದು ವೆಚ್ಚ : ನಮ್ಮ ದೇಶದ 350 ಕೋಟಿ ರೂಪಾಯಿ ವಾರ್ಷಿಕ ಆದಾಯದಲ್ಲಿ, 180 ಕೋಟಿ ರೂಪಾಯಿಗಳನ್ನು ಸೈನ್ಯದ ಖರ್ಚಿಗಾಗಿ ಸುರಿಯುತ್ತಿದ್ದೇವೆ. ಇಂತಹ ಅನಾವಶ್ಯಕವಾದ ದುಂದುವೆಚ್ಚವು ಜಗತ್ತಿನ ಬೇರಾವ ದೇಶದಲ್ಲೂ ನಡೆಯುತ್ತಿಲ್ಲ. ನಾವು ರೂಪಿಸಿಕೊಂಡಿರುವ ವಿದೇಶಾಂಗ ನೀತಿಯ ನೇರ ಪರಿಣಾಮವೇ ಈ ದುಂದು ವೆಚ್ಚವಾಗಿದೆ. ಸೈನ್ಯಕ್ಕಾಗಿ ನಾವು ಮಾಡುತ್ತಿರುವ ಇಡೀ ಖರ್ಚನ್ನು ನಾವು ಭರಿಸಬೇಕಿದೆ. ಯಾವುದೇ ತುರ್ತು ಸಂದರ್ಭವು ತಲೆಯೆತ್ತಿದಲ್ಲಿ, ನಮ್ಮ ಬೆಂಬಲಕ್ಕೆ ಬರುವಂತಹ ಮಿತ್ರರು ಯಾರೂ ಇಲ್ಲ.

ಕಾಶ್ಮೀರ ಕಗ್ಗಂಟಿಗೆ ಪರಿಹಾರ : ಪಾಕಿಸ್ತಾನದೊಂದಿಗೆ ನಮಗಿರುವ ತಿಕ್ಕಾಟವೂ ಸಹ ನಮ್ಮ ವಿದೇಶಾಂಗ ನೀತಿಯಿಂದ ಉಂಟಾಗಿದೆ. ಇದರ ಬಗ್ಗೆ ನನಗೆ ತೀವ್ರ ಅಸಮಾಧಾನವುಂಟಾಗಿದೆ. ಪಾಕಿಸ್ತಾನದೊಂದಿಗೆ ನಮ್ಮ ಸಂಬಂಧವು ಹದಗೆಡಲು ಎರಡು ಕಾರಣಗಳಿವೆ. ಒಂದನೆಯದು, ಕಾಶ್ಮೀರ ಸಮಸ್ಯೆ, ಎರಡನೆಯದು, ಪೂರ್ವ ಬಂಗಾಳದಲ್ಲಿ ನಮ್ಮ ಜನರಿಗೆ ಒದಗಿರುವ ದುಸ್ಥಿತಿ. ನನಗೆ ಅನ್ನಿಸುವುದು ಏನೆಂದರೆ, ಕಾಶ್ಮೀರ ಸಮಸ್ಯೆಗಿಂತ ಪೂರ್ವ ಬಂಗಾಳದ ಬಗೆಗೆ ನಾವು ಹೆಚ್ಚು ಕಾಳಜಿ ವಹಿಸಬೇಕಿದೆ. ಪತ್ರಿಕೆಗಳಲ್ಲಿ ಬಂದ ವರದಿಯ ಪ್ರಕಾರ, ಪೂರ್ವ ಬಂಗಾಳದಲ್ಲಿರುವ ನಮ್ಮ ಜನರ ಪರಿಸ್ಥಿತಿಯು ಬಹಳ ಅಸಹನೀಯವಾಗಿದೆ. ಇದನ್ನು ಕಡೆಗಣಿಸಿರುವ ನಾವು ನಮ್ಮ ಸಂಪೂರ್ಣ ಗಮನವನ್ನು ಕಾಶ್ಮೀರದತ್ತ ತಿರುಗಿಸಿದ್ದೇವೆ. ಇಲ್ಲಿಯೂ ಸಹ ನಾನು ಹೇಳುವುದೇನೆಂದರೆ ನಾವು ಕೃತಕವಾದ ವಿಚಾರದ ವಿರುದ್ಧ ಗುದ್ದಾಡುತ್ತಿದ್ದೇವೆ. ಆದರೆ ನನ್ನ ಪ್ರಕಾರ ಯಾರು ಸರಿ ಎಂದು ತೀರ್ಮಾನಿಸುವುದಕ್ಕೆ ಬದಲು ಯಾವುದು ಸರಿ ಎಂಬುದನ್ನು ತೀರ್ಮಾನಿಸಬೇಕಿದೆ ಯಾವುದು ಸರಿ ಎನ್ನುವುದೇ ಮುಖ್ಯ ಪ್ರಶ್ನೆಯಾದಲ್ಲಿ ನನ್ನ ಪ್ರಕಾರ ಕಾಶ್ಮೀರದ ವಿಭಜನೆ ಹಿಂದುಗಳು ಮತ್ತು ಬೌದ್ಧರು ವಾಸಿಸುತ್ತಿರುವ ಕಾಶ್ಮೀರ ಪ್ರದೇಶವನ್ನು ಇಂಡಿಯಾಗೆ ಬಿಟ್ಟುಕೊಡಬೇಕು ಮತ್ತು ಮುಸ್ಲಿಂರು ವಾಸಿಸುತ್ತಿರುವ ಪ್ರದೇಶವನ್ನು ಪಾಕಿಸ್ತಾನಕ್ಕೆ ಬಿಟ್ಟು ಕೊಡಬೇಕು. ಇಂಡಿಯಾದ ವಿಚಾರದಲ್ಲಿ ಅನುಸರಿಸಿದ ಮಾರ್ಗವನ್ನೇ ಇಲ್ಲಿಯೂ ಅನುಸರಿಸಬೇಕು. ಮುಸ್ಲಿಮರು ವಾಸಿಸುವ ಕಾಶ್ಮೀರದ ಬಗ್ಗೆ ನಾವು ನಿಜಕ್ಕೂ ತಲೆ ಕೆಡಿಸಿಕೊಳ್ಳಬೇಕಿಲ್ಲ. ಅದು ಮುಸ್ಲಿಮರಿಗೂ ಪಾಕಿಸ್ತಾನಕ್ಕೂ ಸಂಬಂಧಿಸಿದ ವಿಚಾರ. ಅವರಿಬ್ಬರ ನಡುವೆ ತೀರ್ಮಾನವಾಗಬೇಕಾದ ವಿಚಾರ ಅದು. ಅವರಿಗೆ ತೋಚಿದಂತೆ ಆ ವಿಚಾರವನ್ನು ಅವರು ಪರಿಹರಿಸಿಕೊಳ್ಳಬಹುದು ಅಥವಾ ನಮಗೆ ಸರಿ ಕಂಡಲ್ಲಿ ಕಾಶ್ಮೀರವನ್ನು ಮೂರು ಭಾಗವನ್ನಾಗಿ ಮಾಡಬಹುದು. ಯುದ್ಧ ನಿಷಿದ್ಧ ಪ್ರದೇಶ, ಕಣಿವೆ ಪ್ರದೇಶ ಮತ್ತು ಜಮ್ಮು ಲಡಕ್ ಪ್ರದೇಶ ಮತ್ತು ಕಣಿವೆಯಲ್ಲಿ ಮಾತ್ರ ಜನಾಭಿಪ್ರಾಯ ಸಂಗ್ರಹಿಸೋಣ ಇಂಥಹ ವ್ಯಾಪಕ ಜನಭಿಪ್ರಾಯ ಸಂಗ್ರಹವಾಗುವಲ್ಲಿ ನನಗಿರುವ ಆತಂಕವೇನೆಂದರೆ ಕಾಶ್ಮೀರದ ಹಿಂದೂಗಳನ್ನು ಬೌದ್ಧರನ್ನು ಅವರ ಇಚ್ಛೆಗೆ ವಿರುದ್ಧವಾಗಿ ಅವರನ್ನು ಪಾಕಿಸ್ತಾನಕ್ಕೆ ಎಳೆದುಕೊಳ್ಳುವ ಸಾಧ್ಯತೆ ಇದೆ ಮತ್ತೊಮ್ಮೆ ಪೂರ್ವ ಬಂಗಾಳದಲ್ಲಿ ನಮ್ಮ ಜನರು ಅನುಭವಿಸುತ್ತಿರುವ ಕಷ್ಟಗಳನ್ನೇ ಇಲ್ಲಿಯೂ ಕಾಣಬೇಕಾಗುತ್ತದೆ.

ಪಾಕಿಸ್ತಾನದೊಂದಿಗೆ ನಮಗಿರುವ ತಿಕ್ಕಾಟವೂ ಸಹ ನಮ್ಮ ವಿದೇಶಾಂಗ ನೀತಿಯಿಂದ ಉಂಟಾಗಿದೆ. ಇದರ ಬಗ್ಗೆ ನನಗೆ ತೀವ್ರ ಅಸಮಾಧಾನವುಂಟಾಗಿದೆ. ಪಾಕಿಸ್ತಾನದೊಂದಿಗೆ ನಮ್ಮ ಸಂಬಂಧವು ಹದಗೆಡಲು ಎರಡು ಕಾರಣಗಳಿವೆ. ಒಂದನೆಯದು, ಕಾಶ್ಮೀರ ಸಮಸ್ಯೆ, ಎರಡನೆಯದು, ಪೂರ್ವ ಬಂಗಾಳದಲ್ಲಿ ನಮ್ಮ ಜನರಿಗೆ ಒದಗಿರುವ ದುಸ್ಥಿತಿ.

ಡಮ್ಮಿ ಕ್ಯಾಬಿನೆಟ್ : ನನ್ನ ರಾಜೀನಾಮೆಗೆ ಬಲು ಮಟ್ಟಿಗೆ ಕಾರಣವಾದ ನಾಲ್ಕನೆ ವಿಚಾರದ ಬಗ್ಗೆ ಇದೀಗ ಹೇಳುತ್ತೇನೆ. ನನ್ನ ಮಂತ್ರಿಮಂಡಲಕ್ಕೆ ಎಂತಹ ಅವಸ್ಥೆ ಒದಗಿದೆಯೆಂದರೆ ಕಮಿಟಿಗಳು ಮೊದಲೇ ತೀರ್ಮಾನ ಮಾಡಿರುವ ನಿರ್ಣಯಗಳನ್ನು ದಾಖಲಿಸಿಕೊಳ್ಳುವ ಹಾಗೂ ನೊಂದಾಯಿಸುವ ಕಛೇರಿಯ ಪಾಡು ಮಂತ್ರಿಮಂಡಲಕ್ಕೆ ಒದಗಿದೆ. ಮೊದಲೇ ಹೇಳಿದಂತೆ ಮಂತ್ರಿಮಂಡಲವು ಕಮಿಟಿಗಳ ಮೂಲಕ ನಡೆಯುತ್ತಿದೆ. ನಮ್ಮಲ್ಲಿ ರಕ್ಷಣ ಕಮಿಟಿ ಇದೆ, ವಿದೇಶಾಂಗ ವ್ಯವಹಾರ ಕಮಿಟಿ ಇದೆ. ವಿದೇಶಾಂಗ ವ್ಯವಹಾರ ಸಂಬಂಧಿಸಿದ ಎಲ್ಲಾ ಪ್ರಮುಖ ವಿಚಾರಗಳನ್ನು ಈ ಕಮಿಟಿಯು ನೋಡಿಕೊಳ್ಳುತ್ತದೆ. ಅದೇ ರೀತಿ ರಕ್ಷಣೆಗೆ (ಮಿಲಿಟರಿಗೆ) ಸಂಬಂಧಪಟ್ಟ ವಿಚಾರಗಳನ್ನು ರಕ್ಷಣಾ ಕಮಿಟಿಯು ನಿರ್ವಹಿಸುತ್ತದೆ. ಮಂತ್ರಿಮಂಡಲದ ಸಚಿವರನ್ನೇ ಈ ಕಮಿಟಿಗಳಲ್ಲೂ ಸದಸ್ಯರನ್ನಾಗಿ ನೇಮಿಸಲಾಗಿದೆ. ಈ ಎರಡೂ ಕಮಿಟಿಗಳಿಗೂ ನಾನು ಸದಸ್ಯನಲ್ಲ. ಈ ಕಮಿಟಿಯವರು ಒಂದು ಕಬ್ಬಿಣದ ತೆರೆಯ ಹಿಂದೆ ಕೆಲಸ ಮಾಡುತ್ತಿರುತ್ತಾರೆ. ಈ ಕಮಿಟಿಯ ಸದಸ್ಯರಲ್ಲದವರು ಅವುಗಳಲ್ಲಿ ಭಾಗವಹಿಸುವ ಅವಕಾಶವಿಲ್ಲದಿದ್ದರೂ ಅಲ್ಲಿನ ತೀರ್ಮಾನಗಳನ್ನು ಅನುಮೋದಿಸುವ ಹೊಣೆಯನ್ನು ಹೊರಬೇಕಾಗುತ್ತದೆ. ಬಲು ಅಸಹನೀಯ ಸ್ಥಿತಿ ಇದು.

ಹಿಂದೂ ಮಸೂದೆಯ ಸಾವು : ನಾನು ಅಂತಿಮವಾಗಿ ರಾಜೀನಾಮೆ ನೀಡಬೇಕೆಂಬ ತೀರ್ಮಾನಕ್ಕೆ ಕಾರಣನಾದ ವಿಚಾರಕ್ಕೆ ಇದೀಗ ಬರುತ್ತೇನೆ. ಹಿಂದೂ ಕೋಡ್ ಬಿಲ್‌ಗೆ ಒದಗಿದ ದುಃಸ್ಥಿತಿಯೇ ಆ ವಿಚಾರವಾಗಿದೆ. ಈ ಮಸೂದೆಯನ್ನು ಏಪ್ರಿಲ್ 11, 1947ರಂದು ಸದನದಲ್ಲಿ ಮಂಡಿಸಲಾಯಿತು. ನಾಲ್ಕು ವರ್ಷಗಳು ಹೇಗೋ ಉಸಿರಾಡಿದ ಈ ಮಸೂದೆಯನ್ನು ನಿಷ್ಕರುಣೆಯಿಂದ ಕೊಲ್ಲಲಾಯಿತು. ಇದರಲ್ಲಿ ನಾಲ್ಕು ಅಂಶಗಳನ್ನು ಮಾತ್ರ ಒಪ್ಪಿಕೊಳ್ಳಲಾಯಿತು. ಈ ಮಸೂದೆಯ ಸಾವಿಗೆ ಅಳುವವರೂ ಇರಲಿಲ್ಲ. ಹಾಡುವವರೂ ಇರಲಿಲ್ಲ. ಮಂಡಿಸಿ ಒಂದು ಪೂರ್ಣ ವರ್ಷ ಕಳೆದರೂ ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಒಪ್ಪಿಸುವ ವಿಚಾರದ ಬಗ್ಗೆ ಸರ್ಕಾರ ತಲೆಕೆಡಿಸಿಕೊಳ್ಳಲೇ ಇಲ್ಲ. ಏಪ್ರಿಲ್ 9, 1948ರಂದು ಈ ಮಸೂದೆಯನ್ನು ಸೆಲೆಕ್ಟ್‌ಕಮಿಟಿಗೆ ಒಪ್ಪಿಸಲಾಯಿತು. ನಂತರ ಆ ಮಸೂದೆಯ ಮೇಲಿನ ವರದಿಯನ್ನು ಆಗಸ್ಟ್ 12, 1948ರಂದು ಸದನದ ಮುಂದೆ ತರಲಾಯಿತು. ಅದೇ ತಿಂಗಳು 31ರಂದು ಅದನ್ನು ಚರ್ಚೆಗೆ ಪರಿಗಣಿಸುವಂತೆ ನಾನು ನಿಲುವಳಿ ಮಂಡಿಸಿದೆ. ನಾನು ಮುಂದಿಟ್ಟ ಕಾರಣಕ್ಕಾಗಿ ಅದನ್ನು ಮಾತ್ರ ಚರ್ಚೆಯ ಅಜೆಂಡಾದಲ್ಲಿ ಸೇರಿಸಲಾಗಿತ್ತು. ಅದರ ಮೇಲೆ ಚರ್ಚೆಯನ್ನು ಆರಂಭಿಸಲು ಅವಕಾಶ ದೊರೆತದ್ದು ಫೆಬ್ರವರಿ 1949ರ ಅಧಿವೇಶನದಲ್ಲಿ ಆಗಲೂ ಸಹ ನಿರಂತರ ಚರ್ಚೆಯಂತೂ ನಡೆಯಲೇ ಇಲ್ಲ. ಇಡೀ ಚರ್ಚೆಯು ಹತ್ತು ತಿಂಗಳ ದೀರ್ಘ ಕಾಲಾವಧಿಯವರೆಗೂ ನಡೆಯಿತು. ಫೆಬ್ರವರಿಯಲ್ಲಿ ನಾಲ್ಕು ದಿನಗಳು ಮಾರ್ಚ್‌ನಲ್ಲಿ ಒಂದು ದಿನ ಮತ್ತು ಏಪ್ರಿಲ್‌ನಲ್ಲಿ ಎರಡು ದಿನಗಳು ಇದಾದ ನಂತರ ಡಿಸೆಂಬರ್‌ನಲ್ಲಿ 19ರಂದು ಒಂದು ದಿನ ಚರ್ಚೆ ನಡೆಸಲಾಯಿತು. ಆ ದಿನ ನಾನು ಮಂದಿಟ್ಟ ನಿಲುವಳಿ (Motion)ಯನ್ನು ಒಪ್ಪಿಕೊಂಡ ಸದನವು ಕಮಿಟಿಯು ನೀಡಿದ ವರದಿಯ ಮೇಲೆ ಚರ್ಚೆ ಆರಂಭಿಸಲು ಪರಿಗಣಿಸಿತು. 1950ರಲ್ಲಿ ಹಿಂದೂ ಮಸೂದೆಯ ಬಗ್ಗೆ ಚರ್ಚಿಸಲು ಅವಕಾಶವೇ ಇರಲಿಲ್ಲ. ಮತ್ತೆ ಇದರ ಬಗ್ಗೆ ಚರ್ಚೆ ಆರಂಭವಾದದ್ದು ಫೆಬ್ರವರಿ 5, 1951ರಂದು ಮಸೂದೆಯ ಒಂದೊಂದು ಅಂಶದ ಬಗ್ಗೆಯೂ ಚರ್ಚೆ

ನಡೆಯಿತು. ಕೇವಲ ಮೂರು ದಿನಗಳನ್ನು ಮಾತ್ರ ಚರ್ಚೆಗೆ ನಿಗಧಿ ಮಾಡಲಾಗಿತ್ತು. ಫೆಬ್ರವರಿ 5, 6 ಮತ್ತು 7 ನಂತರ ಮಸೂದೆಯನ್ನು ಕೊಳೆಯಲು ಬಿಡಲಾಯಿತು.

ಎಡಬಿಡಂಗಿ ಪ್ರಧಾನಿ : ಈ ಪಾರ್ಲಿಮೆಂಟ್ ಅವಧಿಯಲ್ಲಿ ಇದು ಕೊನೆಯ ಅಧಿವೇಶನವಾಗಿದೆ ಆದ್ದರಿಂದ ಹಿಂದೂ ಮಸೂದೆಯು ಇದೇ ಪಾರ್ಲಿಮೆಂಟ್‌ನಲ್ಲಿ ಜಾರಿಗೊಳಿಸಬೇಕೋ ಅಥವಾ ಮುಂಬರುವ ಹೊಸ ಪಾರ್ಲಿಮೆಂಟ್ ತೀರ್ಮಾನಕ್ಕೆ ಬಿಡಬೇಕೋ ಎನ್ನುವುದನ್ನು ಮಂತ್ರಿಮಂಡಲವು ನಿರ್ಧರಿಸಬೇಕಾಗಿತ್ತು. ಈ ಮಸೂದೆಯನ್ನು ಇದೇ ಪಾರ್ಲಿಮೆಂಟ್‌ನಲ್ಲಿ ಜಾರಿಮಾಡಬೇಕೆಂದು ಮಂತ್ರಿಮಂಡಲವು ಅವಿರೋಧವಾಗಿ ತೀರ್ಮಾನ ಕೈಗೊಂಡಿತು. ಸೆಪ್ಟೆಂಬರ್ 17, 1951ರಂದು, ಮತ್ತೊಮ್ಮೆ ಒಂದೊಂದು ಅಂಶಗಳನ್ನೂ ಪರಿಶೀಲಿಸಿ ಚರ್ಚೆ ಕೈಗೊಳ್ಳಲು ಮಸೂದೆಯ ಮೇಲೆ ಚರ್ಚೆ ನಡೆಯುತ್ತಿರುವಾಗ, ಪ್ರಧಾನ ಮಂತ್ರಿಯು ಒಂದು ಹೊಸ ಸಲಹೆ ನೀಡಿದರು. ಈಗ ಇರುವ ಕಾಲಾವಧಿಯಲ್ಲಿ, ಇಡೀ ಮಸೂದೆಯನ್ನು ಅಂಗೀಕರಿಸುವುದು ಅಸಾಧ್ಯವಾಗಿದ್ದು, ಮಸೂದೆಯು ವ್ಯರ್ಥವಾಗುವ ಸಾಧ್ಯತೆ ಇದೆ. ಆದಕಾರಣ, ಮಸೂದೆಯ ಒಂದು ಭಾಗವನ್ನು ಮಾತ್ರ ಚರ್ಚೆಗೆ ತಂದು, ಅದನ್ನು ಮಾತ್ರ ಕಾಯಿದೆ ಮಾಡುವುದು ಒಳಿತು ಎಬುದು ಅವರ ಸಲಹೆ ಆಗಿತ್ತು. ಇದನ್ನು ಕೇಳಿ ನಾನು ದಂಗಾಗಿ ಹೋದೆ. ಆದರೂ ಈ ಸಲಹೆಗೆ ಒಪ್ಪಿಕೊಂಡೆ. "ಎಲ್ಲವೂ ಕಳೆದು ಹೋಗುವ ಸಂಭವವಿದ್ದಾಗ, ಅಲ್ಪವನ್ನಾದರೂ ಉಳಿಸಿಕೊಳ್ಳುವುದು ಒಳಿತು" ಎಂಬ ಗಾದೆ ಮಾತೇ ಇದೆಯಲ್ಲ. ಮಸೂದೆಯಲ್ಲಿರುವ 'ವಿವಾಹ ಮತ್ತು ವಿಚ್ಛೇದನ ವಿಭಾಗವನ್ನು ಮಾತ್ರ ಚರ್ಚೆಗೆ ತೆಗೆದುಕೊಳ್ಳುವಂತೆ' ಪ್ರಧಾನಿಯವರು ಸೂಚಿಸಿದರು. ಅದರಂತೆಯೇ, ಮುರುಕಲಾದ ಮಸೂದೆಯ ಮೇಲೆ ಚರ್ಚೆ ನಡೆಯತೊಡಗಿತು. ಎರಡು ಮೂರು ದಿನಗಳ ನಂತರ ಚರ್ಚೆ ನಡೆಯುತ್ತಿರುವಾಗ, ಪ್ರಧಾನಿಯು ಮತ್ತೊಂದು ಕ್ಯಾತೆಯೊಂದಿಗೆ ಬಂದರು. ಈ ಬಾರಿ, ಮದುಮೆ ಮತ್ತು ವಿಚ್ಛೇದನ ಭಾಗವನ್ನು ಸೇರಿದಂತೆ; ಇಡೀ ಮಸೂದೆಯನ್ನು ಕೈಬಿಡುವಂತೆ ಪ್ರಧಾನಿಯ ಒತ್ತಾಯವಾಗಿತ್ತು. ಇದಂತೂ ನನಗೆ ಸಹಿಸಲಾಗದ ಆಘಾತವಾಗಿತ್ತು. ನಾನು ದಿಘ್ಮೂಢನಾದೆ. ನನ್ನ ಬಾಯಿಂದ ಮಾತುಗಳೇ ಹೊರಡಲಿಲ್ಲ. ಈ ತೇಪೆಗೊಂಡ ಮಸೂದೆಯನ್ನು ಕೈಬಿಡಲು, ಸಮಯದ ಅಭಾವವೇ ಕಾರಣ ಎಂಬ ನೆಪವನ್ನು ಒಪ್ಪಿಕೊಳ್ಳಲು ನಾನು ಸಿದ್ಧನಿರಲಿಲ್ಲ. ನನಗೆ ಚೆನ್ನಾಗಿ ಗೊತ್ತು ಸದನದ ಇತರ ಪ್ರಭಾವಿ ಸದಸ್ಯರಿಗೆ ತಾವುಗಳು ಮಂಡಿಸಿದ ಮಸೂದೆಗಳಿಗೆ ಆದ್ಯತೆ ಸಿಗಬೇಕಾಗಿದ್ದರಿಂದ, ಹಿಂದೂ ಮಸೂದೆಯನ್ನು ಕೈಬಿಡುವಂತೆ ಒತ್ತಾಯಿಸಲಾಗಿತ್ತು. ಸಾಕಷ್ಟು ಸವಕಲಾದ ಹಿಂದೂ ಮಸೂದೆಗೆ ಹೋಲಿಸಿದಲ್ಲಿ ಬನಾರಸ್ ಯೂನಿರ್ವಸಿಟಿ ಮಸೂದೆಯಾಗಲೀ ಅಥವಾ ಪತ್ರಿಕಾ ಮಸೂದೆಯಾಗಲೀ, ಆದ್ಯತೆ ಪಡೆಯುವುದು ಹೇಗೆಂಬುದು ನನಗೆ ಅರ್ಥವಾಗುತ್ತಿಲ್ಲ. ಕಾಯಿದೆಯ ಪುಸ್ತಕದಲ್ಲಿ, ಅಲಿಘಡ ಯೂನಿರ್ವಸಿಟಿ ಮತ್ತು ಬನಾರಸ್ ಯೂನಿವರ್ಸಿಟಿಯ ಆಗುಹೋಗುಗಳನ್ನು ನಿಯಂತ್ರಿಸುವ ಕಾನೂನುಗಳಿಗೆ ಕೊರತೆಯೇನಿಲ್ಲ. ಇದೇ ಅಧಿವೇಶನದಲ್ಲಿ, ಈ ಮಸೂದೆಗಳನ್ನು ಅಂಗೀಕರಿಸಿದ್ದಲ್ಲಿ, ಈ ಯೂನಿರ್ವಸಿಟಿಗಳು ಹಾಳಾಗಿ ಹೋಗುತ್ತಿರಲಿಲ್ಲ. ಅದೇ ರೀತಿ ಪತ್ರಿಕಾ ಮಸೂದೆಗೂ ಯಾವುದೇ ಅವಸರವಿರಲಿಲ್ಲ. ಪತ್ರಿಕೆಗೆ ಸಂಬಂಧಿಸಿದ ಕಾನೂನು ಈಗಾಗಲೇ ಜಾರಿಯಲ್ಲಿದ್ದು, ಈ ಮಸೂದೆಯನ್ನು ನಿಧಾನವಾಗಿ ಅಂಗೀಕರಿಸಬಹುದಿತ್ತು. ಪ್ರಧಾನಮಂತ್ರಿಯವರು ಪ್ರಾಮಾಣಿಕರೇ ಇರಬಹುದು. ಆದರೆ, ಹಿಂದೂ ಮಸೂದೆಯನ್ನು ಅಂಗೀಕರಿಸಿ, ಕಾಯಿದೆಯನ್ನಾಗಿಸುವಲ್ಲಿ ಅಗತ್ಯವಾದ ಗಟ್ಟಿತನ ಮತ್ತು ಕಾಳಜಿ ಅವರಿಗಿಲ್ಲ.

> **ಯಾವುದು ಸರಿ ಎನ್ನುವುದೇ ಮುಖ್ಯ ಪ್ರಶ್ನೆಯಾದಲ್ಲಿ ನನ್ನ ಪ್ರಕಾರ ಕಾಶ್ಮೀರದ ವಿಭಜನೆ ಹಿಂದುಗಳು ಮತ್ತು ಬೌದ್ಧರು ವಾಸಿಸುತ್ತಿರುವ ಕಾಶ್ಮೀರ ಪ್ರದೇಶವನ್ನು ಇಂಡಿಯಾಗೆ ಬಿಟ್ಟುಕೊಡಬೇಕು ಮತ್ತು ಮುಸ್ಲಿಂರು ವಾಸಿಸುತ್ತಿರುವ ಪ್ರದೇಶವನ್ನು ಪಾಕಿಸ್ತಾನಕ್ಕೆ ಬಿಟ್ಟು ಕೊಡಬೇಕು. ಇಂಡಿಯಾದ ವಿಚಾರದಲ್ಲಿ ಅನುಸರಿಸಿದ ಮಾರ್ಗವನ್ನೇ ಇಲ್ಲಿಯೂ ಅನುಸರಿಸಬೇಕು. ಮುಸ್ಲಿಮರು ವಾಸಿಸುವ ಕಾಶ್ಮೀರದ ಬಗ್ಗೆ ನಾವು ನಿಜಕ್ಕೂ ತಲೆ ಕೆಡಿಸಿಕೊಳ್ಳಬೇಕಿಲ್ಲ. ಅದು ಮುಸ್ಲಿಮರಿಗೂ ಪಾಕಿಸ್ತಾನಕ್ಕೂ ಸಂಬಂಧಿಸಿದ ವಿಚಾರ. ಅವರಿಬ್ಬರ ನಡುವೆ ತೀರ್ಮಾನವಾಗಬೇಕಾದ ವಿಚಾರ ಅದು.**

ಸಂವಿಧಾನ ವಿರೋಧಿಗೆ ಬಡ್ತಿ : ಹಿಂದೂ ಮಸೂದೆಯ ವಿಚಾರದಲ್ಲಿ, ನಾನು ಅಸಾಧ್ಯವಾದ ಮಾನಸಿಕ ಹಿಂಸೆಯನ್ನು ಅನುಭವಿಸಬೇಕಾಯಿತು. ಮಸೂದೆಯನ್ನು ಸದನದಲ್ಲಿ ಚರ್ಚೆ-ಅನುಮೋದನೆಗೆ ಬಿಟ್ಟಾಗ, ಪ್ರಧಾನಿಯು ಸದಸ್ಯರಿಗೆ ಮತ ಚಲಾಯಿಸುವ ಸ್ವಾತಂತ್ರ್ಯಕೊಟ್ಟರು. ಪಕ್ಷದ ಚರಿತ್ರೆಯಲ್ಲಿ ಎಂದೂ ನಡೆದಿರದ ಘಟನೆಯಿದು. ಅದರ ಬಗ್ಗೆ ನಾನು ಹೆಚ್ಚು ತಲೆಕೆಡಿಸಿಕೊಳ್ಳಲಿಲ್ಲ. ಆದರೆ ಪಕ್ಷದ ವತಿಯಿಂದ ನಾನು ಎರಡು ಬಗೆಯ ಸಹಕಾರವನ್ನು ಎದಿರು ನೋಡುತ್ತಿದ್ದೆ. ಒಂದನೆಯದಾಗಿ, ಪಕ್ಷದ ವತಿಯಿಂದ ಚರ್ಚೆಗೆ ಸಮಯವನ್ನು ನಿಗಧಿ ಪಡಿಸಬೇಕಿತ್ತು ಮತ್ತು ಸಾಕಷ್ಟು ಸಮಯ ಹಾಗೂ ಚರ್ಚೆ ಆದ ಬಳಿಕ, ಪಕ್ಷದ ಮುಖ್ಯ ಸಚೇತಕರು ಚರ್ಚೆಯನ್ನು ಮುಕ್ತಾಯಗೊಳಿಸುವಂತೆ ಸೂಚಿಸಬೇಕಿತ್ತು. ಈ ಕೆಲಸ ಆಗಿದ್ದಲ್ಲಿ, ಮಸೂದೆಯು ಅಂಗೀಕಾರವಾಗಿ ಹೊರಬರುತ್ತಿತ್ತು. ಆದರೆ ಇಂತಹ ಯಾವುದೇ ಮುಂಜಾಗ್ರತೆಯ ಸೂಚನೆಗಳು ಪಕ್ಷದಿಂದ ಬರಲಿಲ್ಲ. ಸಂಸದೀಯ ವ್ಯವಹಾರಗಳ ಸಚಿವರೇ ಪಕ್ಷದ ಮುಖ್ಯ ಸಚೇತಕರಾಗಿದ್ದರು. ಈ ಮನುಷ್ಯನ ವರ್ತನೆಯಂತೂ ಅತಿ ವಿಚಿತ್ರವಾಗಿತ್ತು. ಹಿಂದೂ ಮಸೂದೆಗೆ ಈ ವ್ಯಕ್ತಿಯು ಪರಮವೈರಿಯಾಗಿದ್ದನು. ಚರ್ಚೆಯನ್ನು ಮುಕ್ತಾಯ ಗೊಳಿಸುವಂತೆ ಸೂಚಿಸಬೇಕಿದ್ದ ಸಂದರ್ಭದಲ್ಲಿ ಈತನು ಸದನದಲ್ಲೇ ಇರಲಿಲ್ಲ. ಮಸೂದೆಯಲ್ಲಿನ ಕೇವಲ ಒಂದು ಅಂಶದ ಮೇಲೆಯೇ ದಿನಗಟ್ಟಲೆ ಗಂಟೆಗಟ್ಟಲೆ ಚರ್ಚೆ ನಡೆದು ಕಾಲಹರಣವಾಯಿತು. ಮುಖ್ಯ ಸಚೇತಕನಾದ ಈ ವ್ಯಕ್ತಿಯು ಸರ್ಕಾರದ ಸಮಯವನ್ನು ಅತಿ ಪ್ರಯೋಜನಕಾರಿಯಾಗಿ ಬಳಸಿ, ಸರ್ಕಾರಿ ಕೆಲಸಗಳೆಲ್ಲವನ್ನೂ ಸುಗಮವಾಗಿ ನಿಭಾಯಿಸಬೇಕಿತ್ತು. ಆದರೆ ಹಿಂದೂ ಮಸೂದೆಯ ಮೇಲೆ ಚರ್ಚೆ ನಡೆಯುತ್ತಿದ್ದಾಗ, ಈ ವ್ಯಕ್ತಿಯು ವ್ಯವಸ್ಥಿತವಾಗಿ ಸದನದಿಂದ ತಪ್ಪಿಸಿಕೊಳ್ಳುತ್ತಿದ್ದನು. ಪ್ರಧಾನಿಗೆ ದ್ರೋಹ ಬಗೆಯುವ ಇಂತಹ ಮುಖ್ಯ ಸಚೇತಕನನ್ನೂ ಹಾಗೂ ಇಂತಹ ದ್ರೋಹಿ ಮುಖ್ಯ ಸಚೇತಕನಿಗೆ ಅತಿ ನಿಷ್ಠನಾಗಿರುವ ಇಂತಹ ಪ್ರಧಾನಿಯನ್ನು ನಾನೆಲ್ಲೂ ಇದುವರೆವಿಗೂ ಕಂಡಿಲ್ಲ. ಈ ಮುಖ್ಯ ಸಚೇತಕನಿಗೆ ಇಂತಹ ಸಂವಿಧಾನ ವಿರೋಧಿ ಸ್ವಭಾವವಿದ್ದರೂ, ಆತನು ಪ್ರಧಾನಿಗೆ ಡಾರ್ಲಿಂಗ್ ಆಗಿದ್ದಾನೆ. ಇವನು ಇಂತಹ ಪರಮದ್ರೋಹಿಯಾಗಿದ್ದರೂ ಪಕ್ಷದಲ್ಲಿ ಆತನಿಗೆ ಬಡ್ತಿ ನೀಡಲಾಗಿದೆ. ಇಂತಹ ಉಸಿರುಕಟ್ಟಿಸುವ ಸನ್ನಿವೇಶದಲ್ಲಿ ಮುಂದುವರೆಯುವುದು ಅಸಾಧ್ಯ.

ದುರ್ಬಲ ವಿರೋಧ : ಹಿಂದೂ ಮಸೂದೆಯು ಸದನದ ಅಂಗೀಕಾರ ಪಡೆಯದೆ ಸೋಲಲು, ವಿರೋಧ ಪಕ್ಷವು ಪ್ರಬಲವಾಗಿದ್ದದ್ದೇ ಕಾರಣ ಎಂದು ಹೇಳಲಾಗಿದೆ. ವಿರೋಧ ಪಕ್ಷವು ಎಷ್ಟು ಪ್ರಬಲವಾಗಿತ್ತು? ಅವರಿಂದ ಯಾವ ಪ್ರಮಾಣದ ವಿರೋಧವಿತ್ತು? ಈ ಮಸೂದೆಯನ್ನು ಆಡಳಿತ ಪಕ್ಷದೊಳಗಡೆಯೇ ಹಲವು ಬಾರಿ ಚರ್ಚಿಸಲಾಗಿತ್ತು. ಆ ನಂತರ ವಿರೋಧಪಕ್ಷಗಳ ಮುಂದೆ ತರಲಾಗುತ್ತಿತ್ತು. ಪ್ರತಿ ಬಾರಿಯೂ ವಿರೋಧಿಗಳನ್ನು ಬಾಯಿತೆರೆಯಲಾಗದಂತೆ ತೆಪ್ಪಗಾಗಿಸಲಾಗಿದೆ. ಕಳೆದ ಬಾರಿ, ಮಸೂದೆಯನ್ನು ಪಕ್ಷದೊಳಗಡೆಯೇ ತೆಗೆದುಕೊಂಡಾಗ, 120 ಮಂದಿ ಪೈಕಿ ಕೇವಲ 20 ಮಂದಿ ಮಾತ್ರ ವಿರೋಧಿಸಿದ್ದರು. ಅದರ ಬಗ್ಗೆ ಚರ್ಚೆ ಆರಂಭಿಸಿದಾಗ, 31/2 ಗಂಟೆಗಳ ಅವಧಿಯಲ್ಲಿ 44 ಭಾಗಗಳನ್ನು ಅಂಗೀಕರಾಮಾಡಲಾಗಿತ್ತು. ಇದನ್ನು ನೋಡಿದಾಗ, ಮಸೂದೆಯ ಬಗ್ಗೆ ಪಕ್ಷದೊಳಗಡೆಯೇ ಎಂತಹ ದುರ್ಬಲವಾದ ವಿರೋಧವಿತ್ತು ಎಂಬುದು ತಿಳಿಯುತ್ತದೆ. ಸದನದೊಳಗಡೆ ಮಸೂದೆಯನ್ನು ಚರ್ಚೆಗೆ ತಂದಾಗ, ಕೇವಲ ಮೂರು ಭಾಗಗಳ 2, 3 ಮತ್ತು 4 ಬಗ್ಗೆ ಮಾತ್ರ ಭಿನ್ನಾಭಿಪ್ರಾಯಗಳು ಕಂಡು ಬಂದಿದ್ದವು. ಪ್ರತಿ ಬಾರಿಯೂ ಮಸೂದೆಯ ಪರ ಅದ್ಭುತ ಬಹುಮತ ದೊರಕಿತ್ತು. ಮಸೂದೆಯ ಜೀವಾಳವಾದ 4ನೇ ಭಾಗಕ್ಕೂ ಸಹ ಪ್ರಚಂಡ ಬಹುಮತ ದೊರಕಿತ್ತು.

ಸಮಯ ಅಭಾವದಿಂದಾಗಿ ಮಸೂದೆಯನ್ನು ಕೈಬಿಡಲಾಯಿತೆಂದು ಪ್ರಧಾನಿಯು ನೀಡುತ್ತಿರುವ

ಸಬೂಬನ್ನು ನಾನು ಒಪ್ಪುವುದಿಲ್ಲ. ನಾನು ರಾಜೀನಾಮೆ ಸಲ್ಲಿಸಬೇಕಾಗಿ ಬಂದ ಅನಿವಾರ್ಯ ಪರಿಸ್ಥಿತಿಯ ಬಗ್ಗೆ ಈ ದೀರ್ಘ ಹೇಳಿಕೆಯನ್ನು ಏಕೆ ನೀಡಬೇಕಿತ್ತೆಂದರೆ, ನಾನು ಅನಾರೋಗ್ಯದ ನಿಮಿತ್ತ ಮಂತ್ರಿಮಂಡಲದಿಂದ ಹೊರನಡೆಯುತ್ತಿರುವುದಾಗಿ ಕೆಲವರು ಹೇಳುತ್ತಿದ್ದರು. ಇಂತಹ ಎಲ್ಲಾ ಊಹಾಪೋಹಗಳನ್ನು ನಾನು ಅಲ್ಲಗೆಳೆಯುತ್ತೇನೆ. ಅನಾರೋಗ್ಯದ ನೆಪದಲ್ಲಿ ಕರ್ತವ್ಯವನ್ನು ತಪ್ಪಿಸಿಕೊಳ್ಳುವವನು ನಾನಲ್ಲ.

ನನ್ನ ರಾಜೀನಾಮೆಯ ಸಕಾಲಿಕವಲ್ಲವೆಂದೂ ಕೆಲವರು ಹೇಳಬಹುದು. ವಿದೇಶಾಂಗ ನೀತಿಯ ಬಗ್ಗೆ ನನಗೆ ಅಸಮಾಧಾನ ಉಂಟಾಗಿದ್ದಲ್ಲಿ ಅಥವಾ ದಲಿತ ಮತ್ತು ಹಿಂದುಳಿದ ವರ್ಗಗಳನ್ನು ಅಲಕ್ಷಿಸಿರುವುದರ ಬಗ್ಗೆ ನನಗೆ ಬೇಸರವಾಗಿದ್ದಲ್ಲಿ, ನಾನು ಬಲು ಹಿಂದೆಯೇ ಪದವಿಯಿಂದ ಇಳಿಯಬೇಕಿತ್ತು ಎಂದು ಹೇಳಬಹುದು. ಈ ಆರೋಪವು ಮೇಲ್ನೋಟಕ್ಕೆ ನಿಜವೆಂತಲೇ ಕಾಣಬಹುದು. ಆದರೆ, ನಾನು ಬಲು ಹಿಂದೆಯೇ ರಾಜೀನಾಮೆ ಕೊಡದಿರಲು ಕಾರಣಗಳಿವೆ. ಮೊದಲನೆಯದಾಗಿ, ಮಂತ್ರಿಮಂಡಲದ ಸದಸ್ಯನಾಗಿ ನನ್ನ ಬಹುಪಾಲು ಸಮಯವು ರಾಜ್ಯಾಂಗವನ್ನು ಸಿದ್ಧಪಡಿಸುವುದರಲ್ಲೇ ಕಳೆದುಹೋಯಿತು. ಜನವರಿ 25, 1950ರ ತನಕ ಸಂವಿಧಾನದಲ್ಲೇ ನಾನು ತಲ್ಲೀನನಾಗಿದ್ದೆ. ಆ ನಂತರ, ಪ್ರಜಾಪ್ರತಿನಿಧಿ ಮಸೂದೆ ಮತ್ತು ಡಿಲಿಮಿಟೇಶನ್ ಆರ್ಡರ್‌ಗಳನ್ನು ಸಿದ್ಧಪಡಿಸುವುದರಲ್ಲಿ ಮುಳುಗಿದ್ದೆ. ನಮ್ಮ ವಿದೇಶಾಂಗ ನೀತಿಯ ಬಗ್ಗೆ ಆಲೋಚಿಸುವುದಕ್ಕೂ ನನಗೆ ಸಮಯವಿರಲಿಲ್ಲ. ಈ ಕೆಲಸಗಳನ್ನೆಲ್ಲಾ ಅರ್ಧದಲ್ಲೇ ಕೈಬಿಟ್ಟು ಹೋಗಲು ನನಗೆ ಇಷ್ಟವಿರಲಿಲ್ಲ.

ಮಾತು ತಪ್ಪಿದ ಪ್ರಧಾನಿ: ಎರಡನೆಯಾದಿಗ, ಹಿಂದೂ ಸಂಹಿತೆ ಮಸೂದೆಗಾಗಿಯೇ ನಾನು ಅಧಿಕಾರದಲ್ಲಿ ಉಳಿಯುವುದು ಅನಿವಾರ್ಯವಾಗಿತ್ತು. ಕೆಲವರ ಪ್ರಕಾರ, ಹಿಂದೂ ಮಸೂದೆಗಾಗಿಯೆ ನಾನು ಅಧಿಕಾರದಲ್ಲಿ ಮುಂದುವರಿಯುವುದು ಸರಿ ಎನಿಸಿರಲಿಲ್ಲ. ಆದರೆ ಈ ವಿಚಾರದಲ್ಲಿ ನನ್ನ ಆಲೋಚನೆಯು ವಿಭಿನ್ನವಾಗಿದೆ. ಹಿಂದೂ ಸಮಾಜಕ್ಕೆ ಒಂದು ನೀತಿ ಸಂಹಿತೆಯನ್ನು ತರುವುದು ಈ ನಾಡಿನ ಶಾಸಕಾಂಗ ಚರಿತ್ರೆಯಲ್ಲಿ ಅತಿದೊಡ್ಡ ಸಾಮಾಜಿಕ ಸುಧಾರಣೆಯಾಗಿ ಪರಿಣಮಿಸುತ್ತಿತ್ತು. ಇಂಡಿಯಾದ ಶಾಸಕಾಂಗವು ಜಾರಿಮಾಡಿರುವ ಯಾವುದೇ ಕಾನೂನುಗಳಾಗಲೀ ಅಥವಾ ಮುಂದೆ ಜಾರಿಮಾಡಲಿರುವ ಕಾಯಿದೆ ಕಾನೂನುಗಳಾಗಲೀ, ಹಿಂದೂ ನೀತಿ ಸಂಹಿತೆ ಮಸೂದೆಗೆ ಹೋಲಿಸಲಾಗದು. ಈ ಸಂಹಿತೆಗೆ ಅಂತಹ ಚಾರಿತ್ರಿಕ ಪ್ರಾಮುಖ್ಯತೆಯಿದೆ. ವರ್ಗಭೇದ ಮತ್ತು ಲಿಂಗಬೇಧಗಳು ಹಿಂದೂ ಸಮಾಜದ ಜೀವಾಳ. ಆ ಬೇಧಗಳನ್ನು ಹಾಗೆಯೇ ಉಳಿಸಿಟ್ಟು ಕೇವಲ ಆರ್ಥಿಕ ಸುಧಾರಣೆಗೆ ಕಾನೂನುಗಳನ್ನು ಮಾಡುತ್ತಾ ಹೋಗುವುದು ನಮ್ಮ ಸಂವಿಧಾನವನ್ನು ಲೇವಡಿ ಮಾಡಿದಂತೆಯೇ ಸರಿ. ಸಗಣಿಯ ತೊಪ್ಪೆಯ ಮೇಲೆ ಅರಮನೆ ಕಟ್ಟಿದಂತಹ ವಿಪರ್ಯಾಸವಿದು. ಹಿಂದೂ ಸಂಹಿತೆಗೆ ನಾನು ಅಷ್ಟೊಂದು ಮಹತ್ವ ನೀಡಿದ್ದೆ. ಮಂತ್ರಿಮಂಡಲದೊಂದಿಗೆ ಇದ್ದ ನನ್ನ ಎಲ್ಲಾ ಭಿನ್ನಾಭಿಪ್ರಾಯಗಳನ್ನೂ ಬದಿಗೊತ್ತಿ, ಈ ಸಂಹಿತೆಗಾಗಿ ನಾನು ಸಚಿವನಾಗಿ ಮುಂದುವರಿದಿದ್ದೆ. ಆದಕಾರಣ, ನಾನೇನಾದರೂ ತಪ್ಪು ಕೆಲಸ ಮಾಡಿದ್ದಲ್ಲಿ ಅದು ಒಂದು ಮಹಾನ್ ಒಳ್ಳೆಯ ಕೆಲಸವನ್ನು ನೆರವೇರಿಸುವುದಕ್ಕಾಗಿ ಅಷ್ಟೆ. ಅಡ್ಡಗಾಲು ಹಾಕುವ ವಿರೋಧಿಗಳ ತಂತ್ರಗಳನ್ನು ನಿಭಾಯಿಸಲು, ನನಗೆ ಅಂತಹ ಭರವಸೆಯ ನೆಲೆಯೇ ಇರಲಿಲ್ಲವೆ? ಈ ನಿಟ್ಟನಲ್ಲಿ, ಸದನದಲ್ಲಿ ಪ್ರಧಾನಿಯವರು ನೀಡಿದ ಮೂರು ಮುಖ್ಯ ಹೇಳಿಕೆಗಳನ್ನು ಇಲ್ಲಿ ಹೇಳುತ್ತಿದ್ದೇನೆ.

ನವೆಂಬರ್ 28, 1949ರಂದು ಪ್ರಧಾನಿಯು ಕೆಳಕಂಡ ಭರವಸೆ ನೀಡಿದ್ದರು.

"ಹಿಂದೂ ಮಸೂದೆಯನ್ನು ಜಾರಿಮಾಡಲು ಸರ್ಕಾರವು ಬದ್ಧವಾಗಿದೆ. ಅದನ್ನು ಕಾರ್ಯರೂಪಕ್ಕೆ ತರುತ್ತೇವೆ."

"ಸರ್ಕಾರವು ಮಸೂದೆಯನ್ನು ಅಂಗೀಕರಿಸುವತ್ತ ಹೆಜ್ಜೆ ಹಾಕುತ್ತದೆ. ಯಾವುದೇ ಕ್ರಮವನ್ನು ಒಪ್ಪುವುದು ಅಥವಾ ಬಿಡುವುದು ಸದನಕ್ಕೆ ಬಿಟ್ಟ ವಿಷಯ. ಸರ್ಕಾರವು ಒಂದು ಮುಖ್ಯಕ್ರಮವನ್ನು ಕೈಗೊಂಡಾಗ, ಸದನವು ಅದನ್ನು ತಿರಸ್ಕರಿಸಬಹುದು. ಆಗ, ಸದನವು ಆ ಸರ್ಕಾರವನ್ನೇ ತಿರಸ್ಕರಿಸುತ್ತದೆ. ಸರ್ಕಾರವು ಉರುಳಿ ಹೋಗುತ್ತದೆ. ಆಮೇಲೆ, ಆ ಜಾಗದಲ್ಲಿ ಮತ್ತೊಂದು ಸರ್ಕಾರ ಬರುತ್ತದೆ. ಈಗ ನಾವು ಕೈಗೊಂಡಿರುವ ಕ್ರಮವು ಬಹಳ ಪ್ರಮುಖವಾದದ್ದು ಎಂದು ಈ ಸರ್ಕಾರವು ಭಾವಿಸುತ್ತದೆ. ನಾವು ಕೈಗೊಂಡಿರುವ ನಿಲುವಿನಿಂದಾಗಿ ನಮ್ಮ ಸರ್ಕಾರವು ಉಳಿಯಲೂಬಹುದು, ಉರುಳಲೂ ಬಹುದು.

ಮತ್ತೆ ಡಿಸೆಂಬರ್ 19, 1949ರಂದು, ಪ್ರಧಾನಮಂತ್ರಿ ಹೇಳಿದರು.

"ಈ ಮಸೂದೆಗೆ ನಾವು ಯಾವುದೇ ಪ್ರಾಮುಖ್ಯತೆ ನೀಡಿಲ್ಲವೆಂದು ಈ ಸದನವು ಯಾವ ಕಾರಣಕ್ಕೂ ತಿಳಿಯಕೂಡದು. ಏಕೆಂದರೆ, ನಾವು ಈ ಮಸೂದೆಗೆ ಭಾರಿ ಮಹತ್ವ ನೀಡಿದ್ದೇವೆ. ಈ ಮಸೂದೆಯಲ್ಲಿರುವ ಯಾವುದೋ ಒಂದು ಅಂಶ ಮಾತ್ರ ಮುಖ್ಯವಲ್ಲ. ಇಲ್ಲಿನ ಆರ್ಥಿಕ ಸಾಮಾಜಿಕ ಸಮಸ್ಯೆಗಳತ್ತ ಒಂದು ಮೂಲಭೂತ ಪ್ರಯತ್ನ ಇಲ್ಲಿ ನಡೆದಿದೆ. ಆದ್ದರಿಂದಲೇ ಈ ಮಸೂದೆಗೆ ಭಾರಿ ಮಹತ್ವ ನೀಡಿದ್ದೇವೆ. ನಾವು ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿದ್ದೇವೆ.

ಒಂದು ದೀರ್ಘ ಪಯಣದಲ್ಲಿ, ಇದು ಕೇವಲ ಮೊದಲ ಹಂತ. ಈ ಪಯಣದಲ್ಲಿ ಹಲವಾರು ಹಂತಗಳಿವೆ. ಸಮಾಜದ ಮುನ್ನಡೆಗಾಗಿ, ಆರ್ಥಿಕ ಸ್ವಾತಂತ್ರ್ಯ, ಸಾಮಾಜಿಕ ಸ್ವಾತಂತ್ರ್ಯ ಮುಂಚಾದ ಹಲವು ಹಂತಗಳನ್ನು ದಾಟಬೇಕಿದೆ. ಇವೆಲ್ಲದರ ಬಗ್ಗೆ ಒಂದು ಸಮಗ್ರ ಮುನ್ನಡೆಯನ್ನು ಸಾಧಿಸಬೇಕಿದೆ."

ಸೆಪ್ಟೆಂಬರ್ 26, 1951ರಂದು, ಪ್ರಧಾನಿಯವರು ನೀಡಿದ ಮತ್ತೊಂದು ಹೇಳಿಕೆ ಹೀಗಿದೆ. "ಈಗ ನಮಗೆ ಇರುವ ಸಾಧ್ಯತೆಗಳ ನಡುವೆಯೇ ಈ ಮಸೂದೆಯನ್ನು ಮುಂದೊಯ್ಯುವುದರಲ್ಲಿ ನಮಗಿರುವ ಕಾಳಜಿಯ ಬಗ್ಗೆ ಯಾವ ಅನುಮಾನವನ್ನೂ ಇಟ್ಟುಕೊಳ್ಳಕೂಡದೆಂದು ನಾನು ಸದನಕ್ಕೆ ಮತ್ತೊಮ್ಮೆ ಭರವಸೆ ನೀಡುವ ಅಗತ್ಯವಿಲ್ಲ. ಸಾಧ್ಯವಾದಲ್ಲಿ, ಇದೇ ಪಾರ್ಲಿಮೆಂಟ್‌ನಲ್ಲಿ ಈ ಮಸೂದೆಯನ್ನು ನಾವು ಅಂಗೀಕರಿಸುತ್ತೇವೆ. ಅಲ್ಲಿಯತನಕ ಈ ಮಸೂದೆಯನ್ನು ಮುಂದೂಡಲ್ಪಟ್ಟಿದೆ ಎಂದು ಮಾತ್ರ ನಾವು ಹೇಳುತ್ತೇವೆ."

ಮಸೂದೆಯನ್ನು ಕೈಬಿಟ್ಟ ಮೇಲೆ, ಪ್ರಧಾನಿಯವರು ನೀಡಿದ ಹೇಳಿಕೆಯಿದು, ಪ್ರಧಾನಿಯವರ ಈ ಘೋಷಣೆಗಳನ್ನು ಯಾರು ತಾನೇ ನಂಬದಿರಲು ಸಾಧ್ಯ? ಪ್ರಧಾನಿಯವರು ತಮ್ಮ ವಾಗ್ದಾನಗಳಿಗೆ ತಕ್ಕಂತೆ ನಡೆಯಲಿಲ್ಲವೆಂದರೆ, ಅದು ನನ್ನ ತಪ್ಪಲ್ಲ. ನಾನು ಮಂತ್ರಿಮಂಡಲದಿಂದ ಹೊರನಡೆಯುತ್ತಿರುವುದರಿಂದ, ಈ ದೇಶದಲ್ಲಿ ಯಾರೂ ತಲೆಕೆಡಿಸಿಕೊಳ್ಳದಿರಬಹುದು. ಆದರೆ ನನಗೆ ನಾನು ಪ್ರಾಮಾಣಿಕನಾಗಿರಬೇಕು. ಆದ್ದರಿಂದಲೇ ನಾನು ಹೊರನಡೆಯಬೇಕಿದೆ. ನಾನು ಹೊರ ನಡೆಯುವುದಕ್ಕೆ ಮೊದಲು, ನಾನು ಮಂತ್ರಿಮಂಡಲದಲ್ಲಿ ಇರುವ ತನಕ ನನಗೆ ನೀಡಿದ ಸಹಕಾರ ಸೌಜನ್ಯಗಳಿಗಾಗಿ ನನ್ನ ಎಲ್ಲಾ ಜತೆಗಾರರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ಇನ್ನೂ ತನಕ ಪಾರ್ಲಿಮೆಂಟ್ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿಲ್ಲವಾದ್ದರಿಂದ ನನ್ನೊಟ್ಟಿಗೆ ಮುಂದುವರಿಯುತ್ತಿರುವ ಇತರ ಸದಸ್ಯರಿಗೂ ನಾನು ಅಭಾರಿಯಾಗಿದ್ದೇನೆ. ●

ಹಿಂದೂ ಸಮಾಜಕ್ಕೆ ಒಂದು ನೀತಿ ಸಂಹಿತೆಯನ್ನು ತರುವುದು ಈ ನಾಡಿನ ಶಾಸಕಾಂಗ ಚರಿತ್ರೆಯಲ್ಲಿ ಅತಿದೊಡ್ಡ ಸಾಮಾಜಿಕ ಸುಧಾರಣೆಯಾಗಿ ಪರಿಣಮಿಸುತ್ತಿತ್ತು. ಇಂಡಿಯಾದ ಶಾಸಕಾಂಗವು ಜಾರಿಮಾಡಿರುವ ಯಾವುದೇ ಕಾನೂನುಗಳಾಗಲೀ ಅಥವಾ ಮುಂದೆ ಜಾರಿಮಾಡಲಿರುವ ಕಾಯಿದೆ ಕಾನೂನುಗಳಾಗಲೀ, ಹಿಂದೂ ನೀತಿ ಸಂಹಿತೆ ಮಸೂದೆಗೆ ಹೋಲಿಸಲಾಗದು. ಈ ಸಂಹಿತೆಗೆ ಅಂತಹ ಚಾರಿತ್ರಿಕ ಪ್ರಾಮುಖ್ಯತೆಯಿದೆ. ವರ್ಗಭೇದ ಮತ್ತು ಲಿಂಗಬೇಧಗಳು ಹಿಂದೂ ಸಮಾಜದ ಜೀವಾಳ. ಆ ಬೇಧಗಳನ್ನು ಹಾಗೆಯೇ ಉಳಿಸಿಟ್ಟು ಕೇವಲ ಆರ್ಥಿಕ ಸುಧಾರಣೆಗೆ ಕಾನೂನುಗಳನ್ನು ಮಾಡುತ್ತಾ ಹೋಗುವುದು ನಮ್ಮ ಸಂವಿಧಾನವನ್ನು ಲೇವಡಿ ಮಾಡಿದಂತೆಯೇ ಸರಿ. ಸಗಣಿಯ ತೊಪ್ಪೆಯ ಮೇಲೆ ಅರಮನೆ ಕಟ್ಟಿದಂತಹ ವಿಪರ್ಯಾಸವಿದು.

ಜಲಸಂಪನ್ಮೂಲ ನಿರ್ವಹಣೆ : ಅಂಬೇಡ್ಕರ್ ನೀತಿ



ಸಂವಿಧಾನ ನಿರ್ಮಾಪಕರಲ್ಲಿ ಮುಖ್ಯಸ್ಥರಾಗಿ ಅಂಬೇಡ್ಕರರು ನಿರ್ವಹಿಸಿದ ಪಾತ್ರವನ್ನು ವ್ಯಾಪಕವಾಗಿ ಸ್ಮರಿಸಲಾಗುತ್ತಿದೆ. ಆದರೆ, ನೀರಾವರಿ, ವಿದ್ಯುಚ್ಛಕ್ತಿ ಉತ್ಪಾದನೆ ಹಾಗೂ ಜಲಸಂಪನ್ಮೂಲ ಯೋಜನೆ ಕುರಿತಂತೆ ಅವರು ತೋರಿದ ದೂರದೃಷ್ಟಿಯ ನಿಲುವು ಅನೇಕರಿಗೆ ತಿಳಿದಿಲ್ಲ. ಕರ್ನಾಟಕ-ತಮಿಳುನಾಡುಗಳ ನಡುವೆ ಕಾವೇರಿ ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ಎದ್ದಿರುವ ಭಾರಿ ವಿವಾದದ ಹಿನ್ನೆಲೆಯಲ್ಲಿ ಅಂಬೇಡ್ಕರರ ಈ ಚಿಂತನೆ ಅಪಾರ ಮಹತ್ವ ಪಡೆಯುತ್ತದೆ. ವೈಸರಾಯ್ ಮಂತ್ರಿಮಂಡಲದಲ್ಲಿ ಶ್ರಮ, ನೀರಾವರಿ ಹಾಗೂ ವಿದ್ಯುಚ್ಛಕ್ತಿ ಖಾತೆಯ ಸಚಿವರಾಗಿ ಅಂಬೇಡ್ಕರರು ಮಂಡಿಸಿದ ವಿಚಾರಧಾರೆ, ತಾಳಿದ ನಿಲುವು ಹಾಗೂ ಕೈಗೊಂಡ ತೀರ್ಮಾನಗಳು ಇಂದಿನ ಸಂದರ್ಭದಲ್ಲಿ ಮಾರ್ಗದರ್ಶಕವಾಗಬಲ್ಲವು.

○ ಪಿ. ಅಬ್ರಹಾಂ   ಅನು : ಮುಂಗ್ಲೂರ ವಿಜಯ

ಸಂವಿಧಾನ ನಿರ್ಮಾಪಕರಲ್ಲಿ ಮುಖ್ಯಸ್ಥರಾಗಿ ಅಂಬೇಡ್ಕರರು ನಿರ್ವಹಿಸಿದ ಪಾತ್ರವನ್ನು ವ್ಯಾಪಕವಾಗಿ ಸ್ಮರಿಸಲಾಗುತ್ತಿದೆ. ಆದರೆ, ನೀರಾವರಿ, ವಿದ್ಯುಚ್ಛಕ್ತಿ ಉತ್ಪಾದನೆ ಹಾಗೂ ಜಲಸಂಪನ್ಮೂಲ ಯೋಜನೆ ಕುರಿತಂತೆ ಅವರು ತೋರಿದ ದೂರದೃಷ್ಟಿಯ ನಿಲುವು ಅನೇಕರಿಗೆ ತಿಳಿದಿಲ್ಲ. ಕರ್ನಾಟಕ-ತಮಿಳುನಾಡುಗಳ ನಡುವೆ ಕಾವೇರಿ ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ಎದ್ದಿರುವ ಭಾರಿ ವಿವಾದದ ಹಿನ್ನೆಲೆಯಲ್ಲಿ ಅಂಬೇಡ್ಕರರ ಈ ಚಿಂತನೆ ಅಪಾರ ಮಹತ್ವ ಪಡೆಯುತ್ತದೆ. ವೈಸರಾಯ್ ಮಂತ್ರಿಮಂಡಲದಲ್ಲಿ ಶ್ರಮ, ನೀರಾವರಿ ಹಾಗೂ ವಿದ್ಯುಚ್ಛಕ್ತಿ ಖಾತೆಯ ಸಚಿವರಾಗಿ ಅಂಬೇಡ್ಕರರು ಮಂಡಿಸಿದ ವಿಚಾರಧಾರೆ, ತಾಳಿದ ನಿಲುವು ಹಾಗೂ ಕೈಗೊಂಡ ತೀರ್ಮಾನಗಳು ಇಂದಿನ ಸಂದರ್ಭದಲ್ಲಿ ಮಾರ್ಗದರ್ಶಕವಾಗಬಲ್ಲವು.

ಕರ್ನಾಟಕ ಮತ್ತು ತಮಿಳುನಾಡು ಸರ್ಕಾರಗಳು ಪರಸ್ಪರರ ಮೇಲೆ ದೋಷಾರೋಪಣೆ ಮಾಡುತ್ತಿವೆ; ಪ್ರತಿಭಟನಾ ಪಾದಯಾತ್ರೆಗಳು ಒಂದೆಡೆ, ಜನಜಾಗೃತಿಗಾಗಿ ಸಭೆ-ಸಮಾವೇಶಗಳು ಇನ್ನೊಂದೆಡೆ ನಡೆದಿವೆ; ಬಂದ್‌ಗಳು-ಪ್ರತಿಬಂದ್‌ಗಳೂ ಆಯೋಜಿಸಲ್ಪಡುತ್ತಿವೆ; ಕೋರ್ಟ್ ಮೊಕದ್ದಮೆಗಳು, ಕೋರ್ಟ್ ನಿಂದನೆಗಳೂ ಕಾಣಿಸಿಕೊಂಡಿವೆ; ರಾಜ್ಯಗಳ ನಡುವಣ ಬಾಂಧವ್ಯಕ್ಕೆ ಗಂಡಾಂತರ ಬಂದೊದಗಿದೆ; ಒಕ್ಕೂಟ ಸ್ವರೂಪ ವ್ಯವಸ್ಥೆಗೂ ಪೆಟ್ಟು ಬೀಳುವಂತಾಗಿದೆ-ಇಷ್ಟಾದಾಗ್ಯೂ ಕಾವೇರಿ ಜಲ ವಿವಾದ ಇತ್ಯರ್ಥವಾಗಿಲ್ಲ.

ಕಾವೇರಿ ವಿವಾದ ಅತ್ಯಂತ ಜಟಿಲ ಸ್ವರೂಪ ಪಡೆಯುತ್ತಿವೆ. ಎರಡೂ ರಾಜ್ಯಗಳ ಜನತೆಯಲ್ಲಿ ಭಾವೋದ್ರೇಕವನ್ನು ಸೃಷ್ಟಿಸಲಾಗುತ್ತಿದೆ. ಜನರನ್ನು ಪರಸ್ಪರರ ಮೇಲೆ ಎತ್ತಿ ಕಟ್ಟುವ ಪ್ರಯತ್ನಗಳು ನಡೆದಿವೆ. ಕನ್ನಡಿಗರು ತಮಿಳರನ್ನು ಹಾಗೆಯೇ ತಮಿಳರು ಕನ್ನಡಿಗರನ್ನು ದ್ವೇಷಿಸುವ ಮಟ್ಟಕ್ಕೂ ಹೋಗಿದ್ದಾರೆ. ಉಭಯತ್ರರಿಗೂ ಒಪ್ಪಿಗೆಯಾಗುವ ರೀತಿಯಲ್ಲಿ ಕಾವೇರಿ ವಿವಾದ ಬಗೆಹರಿಯುವ ಯಾವ ಸೂಚನೆಗಳೂ ಕಾಣುತ್ತಿಲ್ಲ. ವಿವಾದ ಇತ್ಯರ್ಥಕ್ಕಾಗಿ ಹಲವು ರೀತಿಯ ಪ್ರಯತ್ನಗಳು ನಡೆದಿದ್ದರೂ, ಒಂದೂ - ಭಾಗಶಃ ಕೂಡ- ಯಶಸ್ವಿಯಾಗಿಲ್ಲ. ಕೇಂದ್ರ ಜಲ ಆಯೋಗ, ಕಾವೇರಿ ಜಲ ವಿವಾದ ಟ್ರಿಬ್ಯುನಲ್ (ಇದು 1990ರಲ್ಲಿ ರಚನೆಯಾಯಿತು; ಜೂನ್ 1991ರಲ್ಲಿ ಮಧ್ಯಕಾಲೀನ ತೀರ್ಪು ನೀಡಿತು; ಅಂತಿಮ ತೀರ್ಪು ಇನ್ನೂ ಹೊರಬೀಳಬೇಕಾಗಿದೆ), ಕಾವೇರಿ ಮಾನಿಟರಿಂಗ್ ಕಮಿಟಿ, ಪ್ರಧಾನಿ ನೇತೃತ್ವದಲ್ಲಿನ ಕಾವೇರಿ ನದಿ ಪ್ರಾಧಿಕಾರ ಹೀಗೆ ಎಲ್ಲಾ ವೇದಿಕೆಗಳ ಮೂಲಕವೂ ವಿವಾದ ಇತ್ಯರ್ಥಗೊಳಿಸುವ ಪ್ರಯತ್ನಗಳು ನಡೆದಿವೆ; ಆದರೆ ಎಲ್ಲವೂ ಬಹುಮಟ್ಟಿಗೆ ವ್ಯರ್ಥವಾಗಿವೆ. ಪ್ರತಿದಿನ 1.25 tmcft ನೀರನ್ನು ಬಿಡಬೇಕೆಂದು ಸೆಪ್ಟೆಂಬರ್ 3, 2002ರಂದು ಸುಪ್ರೀಂ ಕೋರ್ಟು ನೀಡಿದ ತೀರ್ಪು, 0.80 tmcft ನೀರನ್ನು ಪ್ರತಿದಿನ ಬಿಡಬೇಕೆಂದು ಕಾವೇರಿ ನದಿ ಪ್ರಾಧಿಕಾರ ಕೈಗೊಂಡ ಗೊತ್ತುವಳಿ ಅನುಷ್ಠಾನಕ್ಕೆ ಬರಲಿಲ್ಲ; ತೀರ್ಪು-ಗೊತ್ತುವಳಿ ಎರಡನ್ನೂ ಉಲ್ಲಂಘಿಸಲಾಯಿತು.

ಸಮಸ್ಯೆಯನ್ನು ನಿರ್ವ್ಯಾಮೋಹದಿಂದ ಅರ್ಥ ಮಾಡಿಕೊಳ್ಳುವಲ್ಲಿ ಉಭಯ ರಾಜ್ಯ ಸರ್ಕಾರಗಳೂ ವಿಫಲವಾಗಿವೆ. ಕಷ್ಟ ಪರಿಸ್ಥಿತಿಯಲ್ಲಿ ನೆರೆಯವರಿಗೆ ನೆರವಾಗಬೇಕೆಂಬ ಉದಾತ್ತ ಗುಣಸ್ವಭಾವ ಕಾಣೆಯಾಗಿದೆ. ಗರಿಷ್ಠ ಲಾಭ ಗಿಟ್ಟಿಸಿಕೊಳ್ಳಬೇಕೆಂಬ ಮನೋಭಾವದ ಕೈಮೇಲಾಗಿದೆ. ಸದ್ಭಾವನೆ, ನೆರೆರಾಜ್ಯಗಳೊಂದಿಗೆ ಭ್ರಾತೃತ್ವವರ್ಧನೆ ಮುಂತಾದ ನೀತಿಗಳಿಗೆ ಹಿನ್ನಡೆ ಉಂಟಾಗಿದೆ.

ಈ ಮಧ್ಯೆ ಜಲ ವಿವಾದ ಇತ್ಯರ್ಥಕ್ಕಾಗಿ ಹಲವು ರೀತಿಯ ಸಲಹೆಗಳು ಕೇಳಿ ಬಂದಿವೆ. ಕಾವೇರಿ ವಿವಾದವನ್ನು ಕಾರಣವಾಗಿಟ್ಟುಕೊಂಡು, ದೇಶಾದ್ಯಂತ ಇರುವ ಎಲ್ಲಾ ಜಲವಿವಾದಗಳನ್ನು ಇತ್ಯರ್ಥಪಡಿಸುವಂಥ ಒಂದು ಸೂತ್ರವನ್ನು ಸಿದ್ಧಪಡಿಸುವ ದಿಕ್ಕಿನಲ್ಲೂ ಚಿಂತನೆ ಸಾಗಿದೆ. ದೇಶದ ಎಲ್ಲಾ ನದಿಗಳು ರಾಷ್ಟ್ರೀಯ ಸೊತ್ತು ಎಂದು ಘೋಷಿಸಬೇಕೆಂಬ ಸಲಹೆಯೂ ಬಂದಿದೆ. ಬಹುತೇಕ ಜನರ ನೆನಪಿನಾಳದಲ್ಲಿ ಹೂತು ಹೋಗಿದ್ದ ಗಂಗಾ-ಕಾವೇರಿ ನದಿಗಳ ಜೋಡಣೆ ಮಾತಿಗೆ ಚಾಲನೆ ಬಂದೊದಗಿದೆ.

ಈ ಹಂತದಲ್ಲಿ ನಾವು ಅಂಬೇಡ್ಕರರನ್ನು ನೆನಪಿಸಿಕೊಳ್ಳುವ ಅವಶ್ಯಕತೆ ತುರ್ತಾಗಿ ಇದೆ ಎಂದರೆ ಯಾರಿಗಾದರೂ ಆಶ್ಚರ್ಯವಾದೀತು. ಕಾವೇರಿ ಜಲ ವಿವಾದಕ್ಕೂ ಅಂಬೇಡ್ಕರರಿಗೂ ಯಾವ ಸಂಬಂಧವಿದೆ ಎಂಬ ಪ್ರಶ್ನೆಯೂ ಎದ್ದೀತು. ಇದು ಬಹುಮಟ್ಟಿಗೆ ನಿಜವೇ. ಏಕೆಂದರೆ ನಮ್ಮ ತಿಳುವಳಿಕೆಯೇ ಅಷ್ಟಿದೆ. ಸಂವಿಧಾನ ನಿರ್ಮಾತೃ, ಸಮಾನತೆ ಮತ್ತು ಸಾಮಾಜಿಕ ನ್ಯಾಯ ಪಡೆದುಕೊಳ್ಳಲು ಹೋರಾಡಿದ ಧೀಮಂತ ಎಂದಷ್ಟೇ ನಮಗೆ ಅಂಬೇಡ್ಕರ್ ಗೊತ್ತಿರುವುದು. ಆ ಮೇರು ಮುತ್ಸದ್ದಿ ಹತ್ತು ಹಲವು ಪ್ರಶ್ನೆಗಳ ಬಗ್ಗೆ ತಮ್ಮದೇ ಆದ ಅಭಿಪ್ರಾಯವನ್ನು, ವಾದವನ್ನು, ನಿಲುವನ್ನು ಹೊಂದಿದ್ದರು ಎಂಬುದನ್ನು ನಾವು ಅವಗಣನೆ ಮಾಡಿದ್ದೇವೆ. ಆರ್ಥಿಕ ಯೋಜನೆ, ವಿದ್ಯುಚ್ಛಕ್ತಿ ಮತ್ತು ಜಲ ಸಂಪನ್ಮೂಲ ಯೋಜನೆ, ದೇಶದ ಅಭಿವೃದ್ಧಿ, ನೀರಾವರಿ ವ್ಯವಸ್ಥೆಯ ಪ್ರಗತಿಗಳಂಥ ವಿಚಾರಗಳ ಬಗ್ಗೆಯೂ ಅಂಬೇಡ್ಕರ್ ಅಪೂರ್ವವಾದ ದೃಷ್ಟಿಕೋನ ಹೊಂದಿದ್ದರೆಂಬುದನ್ನು ನಾವು ಇನ್ನಾದರೂ ಮನಗಾಣಬೇಕು. ಅಂಬೇಡ್ಕರರ ಗೊತ್ತಿಲ್ಲದ ಮುಖಗಳ ಪರಿಚಯವನ್ನು ಸಮಾಜಕ್ಕೆ

ಮಾಡಿಕೊಡುವುದೂ, ನಮ್ಮ ತುರ್ತು ಕರ್ತವ್ಯಗಳಲ್ಲಿ ಒಂದಾಗಿದೆ.

ಜಲ ವಿವಾದ ಎನ್ನುವುದು ಕಾವೇರಿ ನದಿಗೆ ಮಾತ್ರವೇನೂ ಸಂಬಂಧಪಟ್ಟಿರುವುದಿಲ್ಲ. ಗೋದಾವರಿ, ಕೃಷ್ಣಾ, ನರ್ಮದಾ ಮುಂತಾದ ನದಿಗಳ ನೀರನ್ನು ಹಂಚಿಕೆ ಮಾಡಿಕೊಳ್ಳುವ ವಿಚಾರದಲ್ಲೂ ಕೂಡ ವಿವಾದಗಳೇ ಇದ್ದವು. ಆದರೆ ಈವರೆಗಿನ ಯಾವ ಜಲವಿವಾದಗಳೂ ಕಾವೇರಿ ಜಲವಿವಾದದಷ್ಟು ಗಂಭೀರ ಸ್ವರೂಪ ತಾಳಿದ್ದಿಲ್ಲ. ಕಾನೂನು ಮತ್ತು ವ್ಯವಸ್ಥೆ ಸಮಸ್ಯೆಯನ್ನು ನಿರ್ಮಾಣ ಮಾಡಿದ್ದಲ್ಲ; ರಾಜ್ಯಗಳ ಜನರ ಭಾವನೆಗಳನ್ನು ಕೆರಳಿಸಿರಲಿಲ್ಲ; ಅಸಂತೋಷವನ್ನು, ದ್ವೇಷವನ್ನು ನಿರ್ಮಿಸಿದ್ದಲ್ಲ; ಭಾರತದ ಒಕ್ಕೂಟ ಸ್ವರೂಪಕ್ಕೇ ಸವಾಲೆಸೆಯುವಷ್ಟು ಉಗ್ರ ರೂಪವನ್ನು ತಾಳಿ ನಿಂತಿದ್ದಿಲ್ಲ- ಲಭ್ಯವಿರುವ ಎಲ್ಲಾ ಚಿಂತನೆಗಳನ್ನು-ಈ ಗಂಭೀರ ಪರಿಸ್ಥಿತಿಯ ಹಿನ್ನೆಲೆಯನ್ನು ಪರಿಗಣಿಸಿ, ನಾವು ಪರಿಶೀಲನೆಗೆ ಎತ್ತಿಕೊಳ್ಳಬೇಕಾಗುತ್ತದೆ. ವೈಸ್‌ರಾಯ್ ಸರ್ಕಾರದಲ್ಲಿ ಶ್ರಮ, ನೀರಾವರಿ ಮತ್ತು ವಿದ್ಯುಚ್ಛಕ್ತಿ ಖಾತೆಯ ಸದಸ್ಯ (ಕ್ಯಾಬಿನೆಟ್ ಮಂತ್ರಿ)ರಾಗಿದ್ದಾಗ ಅಂಬೇಡ್ಕರರು ಮಂಡಿಸಿದ ಚಿಂತನೆಯನ್ನು ಹಾಗೂ ಕೈಗೊಂಡ ನಿರ್ಣಯಗಳನ್ನು ಪರಿಶೀಲಿಸುವುದು ಸಹಕಾರಿಯಾಗುತ್ತದೆ. ತಮ್ಮ ಈ ಚಿಂತನೆಯನ್ನು ಅಂಬೇಡ್ಕರ್ ವ್ಯಕ್ತಪಡಿಸಿದ್ದು 1942-46ರ ನಡುವೆಯಾದರೂ ಅಲ್ಲಿನ ಒಳನೋಟಗಳನ್ನು ಪರಿಗಣಿಸುವ ಅವಶ್ಯಕತೆ ಇಂದಿಗೂ ಕಾಣುತ್ತದೆ.

ಸಾಮಾನ್ಯವಾಗಿ ಇತರ ಎಲ್ಲಾ ಕ್ಷೇತ್ರಗಳನ್ನು ಒಂದು ರಾಜ್ಯದ ಹಿತದೃಷ್ಟಿಯಿಂದ ಅಭಿವೃದ್ಧಿಪಡಿಸಲು ನಾವು ಚಿಂತನೆ ಮಾಡಬಹುದಾಗಿದೆ. ಆದರೆ ನೀರಿನ ಅಭಿವೃದ್ಧಿ ಮತ್ತು ಹಂಚಿಕೆ ವಿಚಾರದಲ್ಲಿ ಹೀಗೆ ಮಾಡಲು ಸಾಧ್ಯವಿಲ್ಲ. ಏಕೆಂದರೆ ನೀರು ಅನೇಕ ಬಾರಿ ಒಂದೇ ರಾಜ್ಯಕ್ಕೆ ಸೇರಿದುದಾಗಿರುವುದಿಲ್ಲ. ಅದು ಅನೇಕ ರಾಜ್ಯಗಳಲ್ಲಿ ಹರಿದು ಸಾಗಿರುತ್ತದೆ. ನೀರು ಹರಿದು ಸಾಗುವ ಪ್ರದೇಶದ ಸಾಮಾಜಿಕ-ಆರ್ಥಿಕ ಪರಿಸ್ಥಿತಿಯಲ್ಲೂ ಅಪಾರ ವ್ಯತ್ಯಾಸ ಇರುವ ಸಾಧ್ಯತೆ ಇರುತ್ತದೆ. ಈ ಪ್ರದೇಶಗಳ ಹಿತಾಸಕ್ತಿಗಳು ಕೆಲವೊಮ್ಮೆಯಾದರೂ ಪರಸ್ಪರರಿಗೆ ವಿರುದ್ಧವಾಗಿರಬಹುದಾದ ಸಾಧ್ಯತೆಯೂ ಇರುತ್ತದೆ. ನೀರಿನ ಅಭಿವೃದ್ಧಿ ಮತ್ತು ನೀರಿನ ಹಂಚಿಕೆಗೆ ಸಂಬಂಧಪಟ್ಟಂತೆ ಏಳುವ ವಿವಾದವನ್ನು ಬಗೆಹರಿಸುವಾಗ ಈ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು, ಒಟ್ಟಾರೆ ದೇಶದ ಹಿತದೃಷ್ಟಿಯಿಂದ-ಬಹುಜನಸಂಖ್ಯೆಯ ಹಿತದೃಷ್ಟಿಯಿಂದ- ವಿವಾದವನ್ನು ಬಗೆಹರಿಸುವುದು ಮುತ್ಸದ್ದಿ ನೀತಿಯಾಗುತ್ತದೆ. ಅಂಬೇಡ್ಕರ್ ಇಂಥ ನೀತಿಯನ್ನು ಮಂಡಿಸಿದರು; ದೇಶಹಿತವನ್ನು ಪರಿಗಣಿಸಿ, ಬಹುಜನಸಂಖ್ಯೆಯ ಹಿತಕ್ಕಾಗಿ, ಲಭ್ಯವಿರುವ ನೀರಿನ ಗರಿಷ್ಠ ಬಳಕೆಯನ್ನು ಮಾಡಿಕೊಳ್ಳಬೇಕೆಂಬ ಮಾರ್ಗವೇ ಯೋಗ್ಯ ಎಂಬುದು ಅಂಬೇಡ್ಕರರ ನಿಲುವಾಗಿತ್ತು.

ವೈಸ್‌ರಾಯ್ ಸರ್ಕಾರವಿದ್ದ ಕಾಲದಲ್ಲಿ (1935ರ ಕಾಯ್ದೆ ಪ್ರಕಾರ) ನೀರಾವರಿಯು ಸಂಪೂರ್ಣವಾಗಿ ರಾಜ್ಯಗಳಿಗೆ ಸೇರಿದ ವಿಷಯವಾಗಿತ್ತು. ಕೇಂದ್ರ ಸರ್ಕಾರ

ವಿವಾದಗಳಲ್ಲಿ ಮಧ್ಯಸ್ಥಿಕೆ ವಹಿಸಿ, ಸಲಹೆ ನೀಡಬಹುದಾಗಿತ್ತು. ಅಷ್ಟೇ, ಈ ಬಗ್ಗೆ ತಮ್ಮ ಅಭಿಮತ ವ್ಯಕ್ತಪಡಿಸಿದ ಅಂಬೇಡ್ಕರ್, ಒಕ್ಕೂಟ ಸ್ವರೂಪ ವ್ಯವಸ್ಥೆ ಇರುವ ಎಲ್ಲಾ ರಾಷ್ಟ್ರಗಳು ಅನುಭವದಿಂದ ಕಂಡುಕೊಂಡಿರುವಂತೆ, ಇಡೀ ದೇಶಕ್ಕೆ ಸಂಬಂಧಪಟ್ಟ ಹಾಗೆ ಒಂದು ಸಾಮಾನ್ಯ ಜಲನೀತಿಯನ್ನು ಹೊಂದುವುದು ದೇಶದ ಹಿತದೃಷ್ಟಿಯಿಂದ ಶ್ರೇಯಸ್ಕರ ಎಂದು ಅಭಿಪ್ರಾಯಪಟ್ಟರು. ಈ ಕುರಿತು ಸಂವಿಧಾನದಲ್ಲಿ ಅಗತ್ಯ ಮಾರ್ಪಾಡು ಮಾಡುವುದಕ್ಕಿಂತ, ರಾಜ್ಯಗಳು ತಮ್ಮ ಹೊಣೆಗಾರಿಕೆಯನ್ನು ಅರಿತುಕೊಂಡು ರಾಜ್ಯಗಳ ಹಿತಕ್ಕಿಂತ ದೇಶಹಿತವೇ ಪ್ರಧಾನವೆಂದು ಪರಿಗಣಿಸುವುದನ್ನು ರೂಢಿಸಿಕೊಳ್ಳುವುದೇ ಉತ್ತಮ ಎಂದೂ ಅವರು ಸೂಚಿಸಿದ್ದರು. ಅಂಬೇಡ್ಕರರ ಈ ನಿಲವಿನಿಂದಾಗಿಯೇ, ಕೇಂದ್ರ ಸರ್ಕಾರವು ಜಲ ಸಂಪನ್ಮೂಲ ಕುರಿತು ಸಮರ್ಥ ಯೋಜನೆಗೆ ಒಳಪಡಿಸಲು ನಿರ್ಧರಿಸಿತು; ನೀರು ಸಮರ್ಪಕವಾಗಿ ನಿರ್ವಹಣೆಯಾಗುವುದು ಅತ್ಯಗತ್ಯ ಎಂಬುದು ಇಡೀ ದೇಶಕ್ಕೆ ಮನದಟ್ಟಾಯಿತು. ಇಡೀ ದೇಶದ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಜಲ ಸಂಪನ್ಮೂಲ ನಿರ್ವಹಣೆಯ ಸ್ವರೂಪವನ್ನು, ಜಲ ವಿವಾದಗಳಿಗೆ ಪರಿಹಾರಗಳನ್ನು ಅಖಿಲ ಭಾರತ ಮಟ್ಟದಲ್ಲಿ ರೂಪಿಸಬೇಕೆಂಬುದನ್ನು ಒಪ್ಪಿಕೊಳ್ಳಲಾಯಿತು.

1944ರಲ್ಲಿ ಅಂಬೇಡ್ಕರ್ ರೂಪಿಸಿದ ಅಖಿಲ ಭಾರತ ಜಲ ಸಂಪನ್ಮೂಲ ನಿರ್ವಹಣಾ ನೀತಿಯನ್ನು ಅನುಷ್ಠಾನಗೊಳಿಸುವಲ್ಲಿ ಕೇಂದ್ರ ಸರ್ಕಾರ ಹೆಚ್ಚಿನ ಪಾತ್ರವನ್ನು ವಹಿಸಿತು. ಇದು ಆ ಕಾಲದಲ್ಲಿದ್ದ 1935ರ ಕಾಯ್ದೆಗೆ ವಿಪರೀತವಾಗಿತ್ತು. ಆಗ ಅಂಬೇಡ್ಕರ್ "ಜಲ ಸಂಪನ್ಮೂಲಗಳ ಅಭಿವೃದ್ಧಿಗಾಗಿ ಅಖಿಲ ಭಾರತ ಮಟ್ಟದಲ್ಲಿ ಸಮಗ್ರವಾದ ನೀತಿಯೊಂದು ರೂಪಿತವಾಗಿಲ್ಲ; ಈ ಹಿನ್ನೆಲೆಯಲ್ಲಿ ದೇಶದ ಜಲ ಸಂಪನ್ಮೂಲಗಳು ದೇಶದ ಸಮಗ್ರ ಹಿತದೃಷ್ಟಿಯಿಂದ ಬಳಕೆಯಾಗುವಂಥ ನೀತಿಯನ್ನು ರೂಪಿಸಲು ಭಾರತ ಸರ್ಕಾರ ಮುಂದಾಗಿದೆ" ಎಂದು ಅಭಿಪ್ರಾಯ ಮಂಡಿಸಿದ್ದರು.

ಜಲ ಸಂಪನ್ಮೂಲಗಳ ಅಭಿವೃದ್ಧಿ ಮತ್ತು ಜಲ ಹಂಚಿಕೆ ವಿಚಾರದಲ್ಲಿ, ರಾಜ್ಯಗಳ ಹಿತವನ್ನು ನೋಡುವುದಕ್ಕಿಂತ ಸಮಗ್ರ ದೇಶದ ಹಿತವನ್ನು ನೋಡುವುದು ಸಮುಚಿತ ಎಂಬುದು ಅಂಬೇಡ್ಕರರ ಬಲವಾದ ನಿಲುವಾಗಿತ್ತು. ನದಿಗಳು ಯಾವುದೇ ರಾಜ್ಯಗಳಲ್ಲಿ ಹುಟ್ಟಿ ಹರಿದು, ಸಮುದ್ರ ಸೇರಿದರೂ ಅವುಗಳು ವಾಸ್ತವವಾಗಿ ಇಡೀ ದೇಶದ ಆಸ್ತಿ ಎಂದೂ, ಆ ನೀರಿನ ಬಳಕೆಯನ್ನು ಮಾಡಿಕೊಳ್ಳುವಾಗ ಒಂದು ಪ್ರದೇಶದ ಹಿತದೃಷ್ಟಿಯನ್ನು ನೋಡುವುದಕ್ಕಿಂತ ಸಮಗ್ರ ದೇಶದ ಹಿತದೃಷ್ಟಿಯಿಂದ ನೋಡಬೇಕೆಂದೂ ಅವರು ಪ್ರತಿಪಾದಿಸಿದರು. ಕಾವೇರಿ ನದಿ ನೀರಿನ ಹಂಚಿಕೆಯ ವಿಚಾರದಲ್ಲಿ ಎದ್ದಿರುವ ವಿವಾದದಲ್ಲಿ ನಮಗೆ ಇಂದಿಗೂ ಆದರ್ಶಪ್ರಾಯವಾಗಿರುವ ಒಂದು ನೀತಿಯನ್ನು ಐವತ್ತು ವರ್ಷ ಮುಂಚೆಯೇ ಅಂಬೇಡ್ಕರ್ ಪ್ರತಿಪಾದಿಸಿದ್ದರು ಎಂಬುದನ್ನು ನಾವು ಮನದಟ್ಟು ಮಾಡಿಕೊಳ್ಳಬೇಕಾಗಿದೆ.

'ಪ್ರತಿಯೊಂದು ಜಲ ಸಂಪನ್ಮೂಲವು ಅಚ್ಚುಕಟ್ಟು ಪ್ರದೇಶದ ಸಮಗ್ರ ಜನತೆಯ ಅಭ್ಯುದಯಕ್ಕಾಗಿ ಬಳಕೆಯಾಗಬೇಕೆಂಬ ಅಂಶದತ್ತ ಪ್ರಾಂತೀಯ ಸರ್ಕಾರಗಳು ಆದ್ಯ ಗಮನ ನೀಡಬೇಕೆಂದು ಕೇಂದ್ರ ಸರ್ಕಾರ ಅಪೇಕ್ಷಿಸುತ್ತದೆ' ಎಂದು ಅಂಬೇಡ್ಕರ್ ಸಂಸತ್ತಿನಲ್ಲಿ ನುಡಿದಿದ್ದರು. ಪ್ರಾಂತೀಯ ಸರ್ಕಾರಗಳು ಕೇವಲ ನೀರಿನ ಹಂಚಿಕೆ ಮಾಡಿದರಷ್ಟೇ ಸಾಲದು, ನದಿ ನೀರಿನ ಹಂಚಿಕೆಯ ಪ್ರಯೋಜನವು ಅಚ್ಚುಕಟ್ಟು ಪ್ರದೇಶಕ್ಕಾಗುವುದನ್ನು ಪ್ರಾಂತೀಯ ಸರ್ಕಾರಗಳು ಖಾತ್ರಿಪಡಿಸಿಕೊಳ್ಳಬೇಕೆಂದೂ ಅವರು ಒತ್ತಿ ಹೇಳಿದ್ದರು.

ಆ ಹಂತದಲ್ಲಿ 1935ರ ಕಾಯ್ದೆಯನ್ನು ವಿಮರ್ಶಿಸಲೂ ಅಂಬೇಡ್ಕರರು ಹಿಂಜರಿಯಲಿಲ್ಲ. ರೇಲ್ವೆಯನ್ನು ಕೇಂದ್ರೀಯ ವಿಷಯವೆಂದೂ, ವಾಟರವೇಯನ್ನು (ನದಿಗಳು) ರಾಜ್ಯಗಳಿಗೆ ಸೇರಿದ ವಿಷಯವೆಂದೂ ವಿಭಾಗಿಸಿದ ಕ್ರಮವನ್ನು ಅವರು ಟೀಕಿಸಿದ್ದರು. ಈ ರೀತಿಯ ವಿಭಾಗೀಕರಣದಿಂದ ಹಲವಾರು ಪ್ರಮಾದಗಳು ಜರುಗಲು ಅವಕಾಶವಾಗಿದೆ ಎಂದು ಹೇಳಿದ್ದ ಅವರು, "ಒಂದು ಪ್ರಾಂತ ತನಗೆ ನೀರಾವರಿ ಹಾಗೂ ವಿದ್ಯುಚ್ಛಕ್ತಿಯನ್ನು ಪಡೆದುಕೊಳ್ಳಲು ತನ್ನಲ್ಲಿನ ಜಲ ಸಂಪನ್ಮೂಲವನ್ನು ಬಳಸಿಕೊಳ್ಳಲು ಬಯಸುತ್ತದೆ; ಆದರೆ ಯಾವ ಜಾಗದಲ್ಲಿ ಅಣೆಕಟ್ಟು ಕಟ್ಟಲು ಸಾಧ್ಯವಿದೆಯೋ ಅದು ಇನ್ನೊಂದು ಪ್ರಾಂತ್ಯದಲ್ಲಿ ಇದ್ದರೆ, ಆ ಪ್ರಾಂತ್ಯಕ್ಕೆ ಅಣೆಕಟ್ಟನ್ನು ಕಟ್ಟಲು ಯಾವುದೇ ಕಾರಣದಿಂದಾದರೂ ಇಷ್ಟವಿಲ್ಲದಿದ್ದರೆ, ಮೊದಲಿನ ಪ್ರಾಂತ್ಯಕ್ಕೆ ನೀರಾವರಿಯನ್ನು ಮತ್ತು ವಿದ್ಯುಚ್ಛಕ್ತಿಯನ್ನು ಪಡೆದುಕೊಳ್ಳಲು ಸಾಧ್ಯವಾಗುವುದಿಲ್ಲ. (ತನ್ನ ನೆಲದಲ್ಲಿ ಅಣೆಕಟ್ಟು ಕಟ್ಟುವುದರಿಂದ ಗಮನಾರ್ಹ ಪ್ರಮಾಣದಲ್ಲಿ ಭೂಮಿ ಮುಳುಗಡೆಯಾಗುವುದನ್ನು ಅರಿತ ಪ್ರಾಂತೀಯ ಸರ್ಕಾರ, ಮುಳುಗಡೆ ಪ್ರದೇಶದಲ್ಲಿನ ಜನತೆಗೆ ಪುನರ್ವಸತಿ ಕಲ್ಪಿಸುವುದು ತನಗೆ ಸಾಧ್ಯವಾಗುವುದಿಲ್ಲ ಎಂಬ ಕಾರಣಕ್ಕೂ ಅಣೆಕಟ್ಟು ಕಟ್ಟುವುದನ್ನು ಸಮ್ಮತಿಸದಿರುವ ಸಾಧ್ಯತೆ ಇದೆ.) ಜಲ ಸಂಪನ್ಮೂಲವು ರಾಜ್ಯಗಳ

ವ್ಯಾಪ್ತಿಯಲ್ಲಿ ಸೇರ್ಪಡೆಯಾಗಿರುವ ಕಾರಣಕ್ಕೆ, ಇಂಥ ಸಂದರ್ಭಗಳಲ್ಲಿ ಕೇಂದ್ರ ಸರ್ಕಾರ ಯಾವ ರೀತಿಯಲ್ಲೂ ಪರಿಣಾಮಕಾರಿಯಾದ ಪಾತ್ರವನ್ನು ವಹಿಸಲು ಸಾಧ್ಯವಾಗುವುದಿಲ್ಲ. ರಾಜ್ಯಗಳು ಪರಸ್ಪರರಿಗೆ ವ್ಯತಿರಿಕ್ತವಾದ ನಿಲವನ್ನೇ ತಾಳುವುದನ್ನು ಕೇಂದ್ರ ಸರ್ಕಾರ ನೋಡುತ್ತ ನಿಲ್ಲಬೇಕಾಗುತ್ತದೆ. ರಾಜ್ಯಗಳು ಪ್ರಾಂತೀಯ ಸ್ವಾಯತ್ತತೆ ಹಾಗೂ ತಮ್ಮ ಹಿತಾಸಕ್ತಿಗಳನ್ನು ಮುಂದೆ ಮಾಡಿ, ಇಂಥ ಅಸಹಕಾರದ ನಿಲುವನ್ನು ಮುಂದುವರೆಸಬಹುದು" ಎಂದು ಎಚ್ಚರಿಕೆ ನೀಡಿದ್ದರು.

ರಾಷ್ಟ್ರೀಯ ಜಲ ಸಂಪನ್ಮೂಲಗಳು ರಾಜ್ಯಗಳಿಗೆ ಸೇರಿದ ವಿಷಯವೆಂದು ತೀರ್ಮಾನಿಸಿರುವ ಕಾರಣಕ್ಕೆ, ಈ ಸಂಬಂಧದಲ್ಲಿ ರಾಷ್ಟ್ರೀಯ ನೀತಿಯೊಂದನ್ನು ರೂಪಿಸಲು ಹಿಂಜರಿಯುವುದು ಸೂಕ್ತವಲ್ಲ ಎಂಬು ಅಂಬೇಡ್ಕರರು ಸ್ವಾತಂತ್ರ್ಯಪೂರ್ವ ಕಾಲದಲ್ಲೇ ಸ್ಪಷ್ಟಪಡಿಸಿದ್ದರು. ರಾಜ್ಯಗಳ ನಡುವೆ ಇರಬಹುದಾದ ಜಲ ವಿವಾದಗಳನ್ನು ಬಗೆಹರಿಸಲು ಕೇಂದ್ರ ಸರ್ಕಾರವು ದೇಶಹಿತದ ದೃಷ್ಟಿಯಿಂದ ಸಲಹೆ ನೀಡಿದರೂ, ಈ ವಿಷಯವು ಸಂಪೂರ್ಣವಾಗಿ ರಾಜ್ಯಗಳಿಗೆ ಸೇರಿದ್ದಾಗಿರುವ ಕಾರಣಕ್ಕೆ, ರಾಜ್ಯಗಳ ಅಭಿಪ್ರಾಯವೇ ಮಹತ್ವ ಪಡೆದು ಬಿಡುತ್ತದೆ; ಅವುಗಳೂ ದೇಶಹಿತಕ್ಕಿಂತ ತಮ್ಮ ರಾಜ್ಯಹಿತವನ್ನು ಪ್ರಧಾನವಾಗಿ ಪರಿಗಣಿಸುವ ಸಾಧ್ಯತೆ ಇದೆ ಎಂದು ಅಂಬೇಡ್ಕರರು ಮುನ್ಸೂಚನೆ ನೀಡಿದ್ದರು. ಸ್ವತಂತ್ರ ಭಾರತಕ್ಕೆ ಸಂವಿಧಾನವನ್ನು ರೂಪಿಸುವ ಸಮಯದಲ್ಲಿ ಅಂತರರಾಜ್ಯ ಜಲವಿವಾದಗಳನ್ನು ಬಗೆಹರಿಸಿಕೊಳ್ಳಲು ಅನುವು ಮಾಡಿಕೊಡಲಾಗಿದ್ದು, ಅಂಬೇಡ್ಕರರು ಮುನ್ಸೂಚನೆಯಿಂದಾಗಿಯೇ ಎಂಬುದು ಗಮನಾರ್ಹ.

ಅಚ್ಚುಕಟ್ಟು ಪ್ರದೇಶದ ಸಮಗ್ರ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಜಲ ಸಂಪನ್ಮೂಲದ ನಿರ್ವಹಣೆಯನ್ನು ಮಾಡುವ ದೃಷ್ಟಿಯಿಂದ, ಅಂತರರಾಜ್ಯ ಜಲ ವಿವಾದಗಳಿರುವ ಎಲ್ಲಾ ಪ್ರದೇಶಗಳಲ್ಲಿ, ಕೇಂದ್ರ ಸರ್ಕಾರಕ್ಕೆ ಗರಿಷ್ಠ ಅಧಿಕಾರವಿರುವ 'ಸ್ವತಂತ್ರ ಜಲ ಪ್ರಾಧಿಕಾರ'ಗಳನ್ನು ರಚಿಸಬೇಕೆಂಬುದು ಅಂಬೇಡ್ಕರ್ ಸಲಹೆಯಾಗಿತ್ತು. ಅಂಬೇಡ್ಕರ್ ಪ್ರತಿಪಾದಿಸಿದ ಜಲ ನೀತಿಯ ಕೇಂದ್ರ ಬಿಂದುಗಳೆಂದರೆ, ಲಭ್ಯವಿರುವ ಎಲ್ಲಾ ಜಲ ಸಂಪನ್ಮೂಲದ ಗರಿಷ್ಠ ಬಳಕೆ, ಸಮಗ್ರ ಪ್ರದೇಶಕ್ಕೆ ಅದರ ಬಳಕೆ ಮತ್ತು ಅಚ್ಚುಕಟ್ಟು ಪ್ರದೇಶವು ಸಂಪದ್ಭರಿತವಾಗುವುದರ ಪ್ರಯೋಜನವು ಆ ಭಾಗದ ಸಮಸ್ತ ಜನತೆಗೆ ಲಭ್ಯವಾಗಬೇಕು ಎಂಬುದು. ಕೇವಲ ಪ್ರಾಂತದ ಹಿತವನ್ನು ಮಾತ್ರವಲ್ಲದೇ ಇಡೀ ದೇಶದ ಹಿತವನ್ನು ಪರಿಗಣಿಸಿ ಒಂದು ನಿಲುವನ್ನು ತಾಳಬೇಕೆಂಬ ಹಿನ್ನೆಲೆಯಲ್ಲಿ, ಜಲ ಸಂಪನ್ಮೂಲ ನಿರ್ವಹಣೆಯಲ್ಲಿ ಹಾಗೂ ಜಲ ವಿವಾದ ಇತ್ಯರ್ಥ ಪ್ರಕರಣಗಳಲ್ಲಿ ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ಅಧಿಕಾರ ಇರಬೇಕೆಂಬುದು ಅಂಬೇಡ್ಕರರ ಆಗ್ರಹವಾಗಿತ್ತು. ನೀರಾವರಿ ವ್ಯವಸ್ಥೆಯನ್ನು ವಿಸ್ತರಿಸುವ ವಿಷಯದಲ್ಲೂ ಕೂಡ ರಾಜ್ಯಗಳಿಗಿಂತ ಹೆಚ್ಚಿನ ಅಧಿಕಾರವು ಕೇಂದ್ರಕ್ಕೆ ಇರಬೇಕೆಂದೂ, ಹೀಗಾದಾಗಲೇ ನೀರಾವರಿಯ ಪ್ರಯೋಜನ ಒಂದು ರಾಜ್ಯಕ್ಕೆ ಮಾತ್ರ ಲಭ್ಯವಾಗಿ ಪ್ರಾದೇಶಿಕ ವಿಷಮತೆಗೆ ಅವಕಾಶಕೊಡುವ ಪರಿಸ್ಥಿತಿ ನಿರ್ಮಾಣವಾಗುವುದನ್ನು ತಪ್ಪಿಸಬಹುದಾಗಿದೆ ಎಂದೂ ಅವರು ಅಭಿಪ್ರಾಯಪಟ್ಟರು.

ಅಂಬೇಡ್ಕರರು ಮಂಡಿಸಿದ ಅಖಿಲ ಭಾರತ ಮಟ್ಟದ ಜಲ ಸಂಪನ್ಮೂಲ ಅಭಿವೃದ್ಧಿ ಮತ್ತು ನಿರ್ವಹಣಾ ನೀತಿಗೆ ಮುಖ್ಯವಾಗಿ ಮೂರು ಆಯಾಮಗಳಿವೆ. 1. ಅಂತರ ರಾಜ್ಯಗಳ ನಡುವೆ ಇರುವ ನದಿಗಳಿಗೆ ಸಂಬಂಧಿಸಿದ ಯೋಜನೆಗಳ ಉಸ್ತುವಾರಿ ನೋಡಿಕೊಳ್ಳಲು ಹಾಗೂ ಇವುಗಳ ಮೇಲೆ ನಿಯಂತ್ರಣ ಹೊಂದಲು 'ನದಿ ಕಣಿವೆ ಪ್ರಾಧಿಕಾರ' ರಚಿಸಬೇಕು. 2. ಯಾವುದೇ ನದಿ ಕಣಿವೆ ಅಚ್ಚುಕಟ್ಟು, ಪ್ರಾಂತೀಯ ಹಾಗೂ ಬಹು ಉದ್ದೇಶಿತ ಅಭಿವೃದ್ಧಿ ಸಾಧಿಸುವಂತೆ ರೂಪುಗೊಂಡಿರಬೇಕು. 3. ಕೇಂದ್ರಮಟ್ಟದಲ್ಲಿ ಪರಿಣತರನ್ನೊಳಗೊಂಡ ಉನ್ನತ ತಾಂತ್ರಿಕ ಪ್ರಾಧಿಕಾರಗಳ ರಚನೆಯಾಗಬೇಕು. ಬಹು ಕ್ಷೇತ್ರೀಯ ನದಿಕಣಿವೆ ಅಭಿವೃದ್ಧಿ ಪ್ರಾಧಿಕಾರಗಳ ಮುಖಾಂತರ ಬಹೋದ್ದೇಶಿತ ಯೋಜನೆಗಳನ್ನು ಸಮಗ್ರ ಯೋಜನೆಯಡಿ ತರುವ ಮೂಲಕ ಅಂತರರಾಜ್ಯ ನದಿ ನೀರಿನ ಹಂಚಿಕೆಯನ್ನು ಹಾಗೂ ನಿರ್ವಹಣೆಯನ್ನು ಉತ್ತಮ ರೀತಿಯಲ್ಲಿ ಮಾಡಲು ಸಾಧ್ಯವಿದೆ ಎಂಬುದು ಅಂಬೇಡ್ಕರರಿಗೆ ಖಚಿತವಾಗಿ ಮನದಟ್ಟಾಗಿತ್ತು.

ಇಡೀ ರಾಷ್ಟ್ರವು ಸಮಗ್ರವಾಗಿ ಅಭಿವೃದ್ಧಿ ಹೊಂದುವುದನ್ನು ಖಾತ್ರಿಪಡಿಸಿಕೊಳ್ಳಲು ಮತ್ತು ನದಿಗಳ ನೀರನ್ನು ಹಂಚಿಕೆ ಮಾಡಿಕೊಳ್ಳುವಲ್ಲಿ ರಾಜ್ಯಗಳ ನಡುವೆ ಉದ್ಭವವಾಗುವ ಸಮಸ್ಯೆಗಳನ್ನು ಬಗೆಹರಿಸಲು ಮುಂದಾಗುವುದು ಕೇಂದ್ರ ಸರ್ಕಾರದ ಜವಾಬ್ದಾರಿ ಎಂದು ಅಂಬೇಡ್ಕರರು ಒತ್ತಿ ಹೇಳಿದರು. ರಾಜ್ಯಗಳ ನಡುವಣ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಆಯಾ ರಾಜ್ಯ ಸರ್ಕಾರಗಳು ನಡೆಸುವ ಪ್ರಯತ್ನಗಳಿಗಿಂತ, ಕೇಂದ್ರ ಸರ್ಕಾರವು ಮಧ್ಯ ಪ್ರವೇಶಿಸಿ ನಡೆಸುವ ಪ್ರಯತ್ನಗಳಿಗೆ ಹೆಚ್ಚಿನ ಪ್ರಯೋಜನ ಲಭ್ಯವಾಗುತ್ತದೆ ಎಂಬುದನ್ನು ಅಂಬೇಡ್ಕರರ ಇಂಗಿತವಾಗಿತ್ತು.

ನೀರಿನ ಹಂಚಿಕೆ ಕುರಿತಂತೆ, ಆಯಾ ರಾಜ್ಯಗಳು ಮತ್ತು ಕೇಂದ್ರದ ನಡುವೆ ಒಪ್ಪಂದ ಏರ್ಪಡುವುದು ಅಗತ್ಯ. ಈ ಒಪ್ಪಂದವನ್ನು ಜಾರಿಗೊಳಿಸಲು ರಾಜ್ಯಗಳು ಮುಂದಾಗುವುದು, ಕೇಂದ್ರವು ರಚಿಸುವ ಜಲ ಪ್ರಾಧಿಕಾರದ ಮುಂದೆ ಸಂಬಂಧಪಟ್ಟ ರಾಜ್ಯಗಳು ತಮ್ಮ ಅಹವಾಲನ್ನು ಮಂಡಿಸುವುದು ಮತ್ತು ಪ್ರಾಧಿಕಾರ ನೀಡುವ ತೀರ್ಪನ್ನು ರಾಜ್ಯಗಳು ಒಪ್ಪಿ ಅನುಷ್ಠಾನ ಮಾಡುವುದು ಯೋಗ್ಯವಾದ ಕ್ರಮ. ನೀರಿನ ಹಂಚಿಕೆಯಲ್ಲಿ ತಲೆದೋರಬಹುದಾದ ಸಮಸ್ಯೆಗಳ ಇತ್ಯರ್ಥಕ್ಕೆ, ನದಿ ಕಣಿವೆ ಪ್ರಾಧಿಕಾರ (ರಿವರ್ ವ್ಯಾಲಿ ಅಥಾರಿಟಿ) ಮತ್ತು ಕೇಂದ್ರ ಜಲ ಆಯೋಗ (ಅಂಬೇಡ್ಕರರು ಸಲಹೆ ನೀಡಿದ್ದಂತೆ, ಕೇಂದ್ರ ಜಲ ನೀರಾವರಿ ಮತ್ತು ಜಲಮಾರ್ಗ ಬಳಕೆ ಆಯೋಗ ಆ ಹೊತ್ತಿಗಾಗಲೇ ಅಸ್ತಿತ್ವದಲ್ಲಿತ್ತು)ಗಳನ್ನು ಸರ್ವೋಚ್ಚ ತಾಂತ್ರಿಕ ಸಂಸ್ಥೆಗಳನ್ನಾಗಿ ಸ್ಥಾಪಿಸುವುದೂ ಅಗತ್ಯ ಎಂದೂ, ಜಲ ಸಂಪನ್ಮೂಲಗಳ ಮೇಲಣ ಹಕ್ಕಿಗೆ ಸಂಬಂಧಪಟ್ಟಂತೆ, ಪ್ರಾಂತೀಯ ಅಧಿಕಾರವ್ಯಾಪ್ತಿಯನ್ನು ನಿಖರಗೊಳಿಸುವ ಸಂಬಂಧದಲ್ಲಿ ತಲೆದೋರಬಹುದಾದ ಸಮಸ್ಯೆಗಳ ಇತ್ಯರ್ಥಕ್ಕಾಗಿ, ಅಮೆರಿಕಾದಲ್ಲಿ ಜಾರಿಯಲ್ಲಿರುವ ಟೆನ್ನೆಸ್ಸೀ ಕಣಿವೆ ಪ್ರಾಧಿಕಾರ ಮಾದರಿಯನ್ನು ಅನುಸರಿಸುವುದು ಸಮಯೋಚಿತ ಎಂದೂ ಅಂಬೇಡ್ಕರರು ಅಭಿಪ್ರಾಯಪಟ್ಟಿದ್ದರು. ಅಮೆರಿಕಾ ಅಧ್ಯಕ್ಷ ರೂಸ್‌ವೆಲ್ಟ್ ಅವರು, ತಮ್ಮ ಘನತೆ-ಗೌರವ-ವರ್ಚಸ್ಸುಗಳನ್ನು ಪಣಕ್ಕಿಟ್ಟು ಮುಂದಾಗದೇ ಹೋಗಿದ್ದರೆ ಟೆನ್ನೆಸ್ಸೀ ಕಣಿವೆ ಪ್ರಾಧಿಕಾರ ಕೂಡ ರಚನೆಯಾಗುತ್ತಿರಲಿಲ್ಲ ಎಂಬುದನ್ನೂ ಅಂಬೇಡ್ಕರರು ಒತ್ತಿ ಹೇಳಿದರು.

ತಮ್ಮ ನಿಲುವನ್ನು ಕೇಂದ್ರಕ್ಕೆ ಹಾಗೂ ರಾಜ್ಯ ಸರ್ಕಾರಗಳಿಗೆ ಮನಗಾಣಿಸಿಕೊಡುವಲ್ಲಿ ಎದುರಾದ ಸಮಸ್ಯೆಗಳನ್ನು ಅಂಬೇಡ್ಕರರು ಅತ್ಯಂತ ಸಮರ್ಥವಾಗಿ ಎದುರಿಸಿದರು. ಅಪೂರ್ವ ಕಾಳಜಿ ಹಾಗೂ ಕಾರ್ಯಕೌಶಲ್ಯವನ್ನು ತೋರಿದ ಅವರು, ರಾಜಕೀಯವಾಗಿ ಅತ್ಯಂತ ದಿಟ್ಟತನದ ಹಾಗೂ ಜಲ ಸಂಪನ್ಮೂಲ ನಿರ್ವಹಣೆಯಲ್ಲಿ ಅತ್ಯಂತ ವಿನೂತನವಾದ ಸವಾಲನ್ನು ಸ್ವೀಕರಿಸಿ, ಇಡೀ ದೇಶದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಮಾದರಿಯಾಗುವಂಥ ಕ್ರಮವನ್ನು ದೇಶದ ಮುಂದಿಟ್ಟರು; ತಕರಾರು ಮಾಡಿದ ರಾಜ್ಯಗಳೊಂದಿಗೆ ಅಬ್ಬರವಿಲ್ಲದ ಹಾಗೂ ನಿರಂತರವಾದ ಚರ್ಚೆಗಳನ್ನು ನಡೆಸಿದರು; ಸಭೆ-ಸಮಾವೇಶಗಳನ್ನು ವ್ಯವಸ್ಥೆ ಮಾಡಿದರು; ಸಮಸ್ಯೆಗಳನ್ನು-ಆತಂಕಗಳನ್ನು ಆಪ್ತವಾಗಿ ಆಲಿಸಿದರು; ಸಂಶಯಗಳನ್ನು

> **ಜಲ ವಿವಾದ ಎನ್ನುವುದು ಕಾವೇರಿ ನದಿಗೆ ಮಾತ್ರವೇನೂ ಸಂಬಂಧಪಟ್ಟಿರುವುದಿಲ್ಲ. ಗೋದಾವರಿ, ಕೃಷ್ಣಾ, ನರ್ಮದಾ ಮುಂತಾದ ನದಿಗಳ ನೀರನ್ನು ಹಂಚಿಕೆ ಮಾಡಿಕೊಳ್ಳುವ ವಿಚಾರದಲ್ಲೂ ಕೂಡ ವಿವಾದಗಳೇ ಇದ್ದವು. ಆದರೆ ಈವರೆಗಿನ ಯಾವ ಜಲವಿವಾದಗಳೂ ಕಾವೇರಿ ಜಲವಿವಾದದಷ್ಟು ಗಂಭೀರ ಸ್ವರೂಪ ತಾಳಿದ್ದಿಲ್ಲ. ಕಾನೂನು ಮತ್ತು ವ್ಯವಸ್ಥೆ ಸಮಸ್ಯೆಯನ್ನು ನಿರ್ಮಾಣ ಮಾಡಿದ್ದಲ್ಲ; ರಾಜ್ಯಗಳ ಜನರ ಭಾವನೆಗಳನ್ನು ಕೆರಳಿಸಿರಲಿಲ್ಲ; ಅಸಂತೋಷವನ್ನು, ದ್ವೇಷವನ್ನು ನಿರ್ಮಿಸಿದ್ದಲ್ಲ; ಭಾರತದ ಒಕ್ಕೂಟ ಸ್ವರೂಪಕ್ಕೇ ಸವಾಲೆಸೆಯುವಷ್ಟು ಉಗ್ರ ರೂಪವನ್ನು ತಾಳಿ ನಿಂತಿದ್ದಿಲ್ಲ-ಲಭ್ಯವಿರುವ ಎಲ್ಲಾ ಚಿಂತನೆಗಳನ್ನು-ಈ ಗಂಭೀರ ಪರಿಸ್ಥಿತಿಯ ಹಿನ್ನೆಲೆಯನ್ನು ಪರಿಗಣಿಸಿ, ನಾವು ಪರಿಶೀಲನೆಗೆ ಎತ್ತಿಕೊಳ್ಳಬೇಕಾಗುತ್ತದೆ. ವೈಸ್‌ರಾಯ್ ಸರ್ಕಾರದಲ್ಲಿ ಶ್ರಮ, ನೀರಾವರಿ ಮತ್ತು ವಿದ್ಯುಚ್ಛಕ್ತಿ ಖಾತೆಯ ಸದಸ್ಯ (ಕ್ಯಾಬಿನೆಟ್ ಮಂತ್ರಿ)ರಾಗಿದ್ದಾಗ ಅಂಬೇಡ್ಕರರು ಮಂಡಿಸಿದ ಚಿಂತನೆಯನ್ನು ಹಾಗೂ ಕೈಗೊಂಡ ನಿರ್ಣಯಗಳನ್ನು ಪರಿಶೀಲಿಸುವುದು ಸಹಕಾರಿಯಾಗುತ್ತದೆ.**

ದೂರ ಮಾಡಿದರು. ಇಡೀ ದೇಶದ ಸಮಗ್ರ ಅಭಿವೃದ್ಧಿಯ ಕೇಂದ್ರ ಸರ್ಕಾರದ ಜವಾಬ್ದಾರಿಯಾಗಿರುವಷ್ಟೇ ಎಲ್ಲಾ ರಾಜ್ಯಗಳ ಜವಾಬ್ದಾರಿಯೂ ಆಗಿದೆ ಎಂಬುದನ್ನು ಮನದಟ್ಟುಮಾಡಿಕೊಟ್ಟರು.

ಅಂಬೇಡ್ಕರರು ಹಂತಹಂತವಾಗಿ ನಡೆಸಿದ ಹಲವಾರು ಪ್ರಯತ್ನಗಳ ಪರಿಣಾಮವಾಗಿ, ಕೇಂದ್ರ ಸರ್ಕಾರ ಮತ್ತು ಬಿಹಾರ, ಪ. ಬಂಗಾಲ ರಾಜ್ಯ ಸರ್ಕಾರಗಳ ನಡುವೆ, ಪ್ರಾಧಿಕಾರವೊಂದನ್ನು ರಚಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಒಪ್ಪಂದವಾಯಿತು. ಈ ಪ್ರಾಧಿಕಾರದ ತೀರ್ಪಿನಂತೆ ದಾಮೋದರ ಕಣಿವೆ ಯೋಜನೆಯ ರೂಪುರೇಷೆಗಳನ್ನು ಸಿದ್ಧಪಡಿಸುವುದೆಂದು, ಯೋಜನೆಯನ್ನು ಅನುಷ್ಠಾನಗೊಳಿಸುವುದೆಂದು ಹಾಗೂ ನಿರ್ವಹಣೆ ಮಾಡುವುದೆಂದು ಒಪ್ಪಂದಕ್ಕೆ ಬರಲಾಯಿತು. ಸಂವಿಧಾನ ಸಭೆಯಲ್ಲಿ 'ದಾಮೋದರ ಕಾಯ್ದೆ 1948'ನ್ನು ಮಾಡುವ ಮೂಲಕ, ಇಡೀ ಪ್ರಕ್ರಿಯೆಗೆ ಕಾಯ್ದೆಬದ್ಧತೆಯನ್ನು ಒದಗಿಸಲಾಯಿತು. ದೇಶದಲ್ಲಿ ಮೊಟ್ಟಮೊದಲ ಬಾರಿಗೆ ಸಾಧಿಸಲಾದ ಮಹೋನ್ನತ ಸಾಧನೆ ಇದಾಗಿತ್ತು. ಈ ಯೋಜನೆಯ ಅಡಿಯಲ್ಲಿ ಒಟ್ಟು ಐದು ಕಡೆ ಬೃಹತ್ ಅಣೆಕಟ್ಟುಗಳನ್ನು ಮತ್ತು ಬ್ಯಾರೇಜ್‌ಗಳನ್ನು ಕಟ್ಟಲಾಯಿತು; ಐದು ಥರ್ಮಲ್ ಮತ್ತು ಮೂರು ಜಲ ವಿದ್ಯುತ್ ಘಟಕಗಳನ್ನು ಸ್ಥಾಪಿಸಲಾಯಿತು. ಇದರಿಂದಾಗಿ 2760 ಮೆಗಾವ್ಯಾಟ್ ವಿದ್ಯುಚ್ಛಕ್ತಿ ಉತ್ಪಾದನೆಯಾಗಿ 7,00,000 ಹೆಕ್ಟೇರ್ ಭೂಮಿಯು ಕಮಾಂಡ್ ಪ್ರದೇಶವಾಗಿ ಮಾರ್ಪಟ್ಟು, 25,000ಚದರ ಕಿ.ಮೀ. ವ್ಯಾಪ್ತಿಯ ಕ್ಯಾಚ್‌ಮೆಂಟ್ ಪ್ರದೇಶವು ಅನುಕೂಲ ಪಡೆಯಿತು. ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ದಾಮೋದರ್ ಕಣಿವೆ ನಿಗಮದಿಂದಾಗಿ ಆ ಪ್ರದೇಶದಲ್ಲಿ ಸಮಗ್ರ ಅಭಿವೃದ್ಧಿಯನ್ನು ಸಾಧಿಸಲಾಯಿತು. ಈ ಪ್ರಕ್ರಿಯೆಯಲ್ಲಿ ಅಂಬೇಡ್ಕರರ ಅಪೂರ್ವ ಚಿಂತನೆ, ನಿರಂತರ ಪರಿಶ್ರಮ, ಮನಗಾಣಿಸಿ ಕೊಡುವ ಸಾಮರ್ಥ್ಯ, ಕರ್ತೃತ್ವ ಶಕ್ತಿ ಹಾಗೂ ಸಮಗ್ರ ಅಭಿವೃದ್ಧಿ ಕುರಿತಂತೆ ಅವರು ಹೊಂದಿದ್ದ ದೂರದೃಷ್ಟಿಗಳು ವ್ಯಕ್ತಗೊಂಡಿದ್ದವು. ಇದರಿಂದಾಗಿ, ಅಂತರರಾಜ್ಯ ನದಿ ನೀರಿನ ಹಂಚಿಕೆಗೆ ಹಾಗೂ ಇಡೀ ಪ್ರದೇಶದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ನೀರನ್ನು ಬಳಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ತಲೆದೋರಿದ್ದ ಬಿಕ್ಕಟ್ಟನ್ನು ನಿರಾಯಾಸವಾಗಿ ಬಗೆಹರಿಸಿಕೊಳ್ಳುವುದು ಸಾಧ್ಯವಾಯಿತು; ನೀರಾವರಿ ಮತ್ತು ವಿದ್ಯುತ್ ಯೋಜನೆಗಳ ನಿರ್ವಹಣೆ ಮಾಡುವುದಕ್ಕೆ ಹಾಗೂ ಇವುಗಳ ಮೇಲೆ ಹತೋಟಿ ಹೊಂದುವುದಕ್ಕೆ ಪರಸ್ಪರರಿಗೆ ಸಂಬಂಧಿಸಿದ ಸಮಸ್ಯೆಯು ಒಪ್ಪಿಗೆಯಾಗುವಂತೆ ಇತ್ಯರ್ಥವಾಗಿದ್ದವು.

ದಾಮೋದರ ಕಣಿವೆಗೆ ಸಂಬಂಧಿಸಿದಂತೆ ಅಂಬೇಡ್ಕರ್ ತಾಳಿದ್ದ ಧೋರಣೆಯ ಜಾಡಿನಲ್ಲೇ ಸಾಗಿದ ಕೇಂದ್ರ ಸರ್ಕಾರ, ಮುಂದಿನ ವರ್ಷಗಳಲ್ಲಿ ಮಹಾನದಿ, ಕೋಸಿ, ಸೋನೆ, ಭಾಕ್ರಾನಂಗಲ್ ಮತ್ತಿತರ ಯೋಜನೆಗಳನ್ನು ರೂಪಿಸಿತು. ಅನುಷ್ಠಾನಗೊಳಿಸಿತು ಮತ್ತು ನಿರ್ವಹಣೆ ಮಾಡಲಾರಂಭಿಸಿತು. ಇದರಿಂದಾಗಿ ಪಂಜಾಬ್, ಹರಿಯಾಣಾ, ರಾಜಸ್ಥಾನ, ಹಿಮಾಚಲ ಪ್ರದೇಶ ಹಾಗೂ

> **ಜಲ ಸಂಪನ್ಮೂಲಗಳ ಅಭಿವೃದ್ಧಿ ಮತ್ತು ಜಲ ಹಂಚಿಕೆ ವಿಚಾರದಲ್ಲಿ, ರಾಜ್ಯಗಳ ಹಿತವನ್ನು ನೋಡುವುದಕ್ಕಿಂತ ಸಮಗ್ರ ದೇಶದ ಹಿತವನ್ನು ನೋಡುವುದು ಸಮುಚಿತ ಎಂಬುದು ಅಂಬೇಡ್ಕರರ ಬಲವಾದ ನಿಲುವಾಗಿತ್ತು. ನದಿಗಳು ಯಾವುದೇ ರಾಜ್ಯಗಳಲ್ಲಿ ಹುಟ್ಟಿ ಹರಿದು, ಸಮುದ್ರ ಸೇರಿದರೂ ಅವುಗಳು ವಾಸ್ತವವಾಗಿ ಇಡೀ ದೇಶದ ಆಸ್ತಿ ಎಂದೂ, ಆ ನೀರಿನ ಬಳಕೆಯನ್ನು ಮಾಡಿಕೊಳ್ಳುವಾಗ ಒಂದು ಪ್ರದೇಶದ ಹಿತದೃಷ್ಟಿಯನ್ನು ನೋಡುವುದಕ್ಕಿಂತ ಸಮಗ್ರ ದೇಶದ ಹಿತದೃಷ್ಟಿಯಿಂದ ನೋಡಬೇಕೆಂದೂ ಅವರು ಪ್ರತಿಪಾದಿಸಿದರು. ಕಾವೇರಿ ನದಿ ನೀರಿನ ಹಂಚಿಕೆಯ ವಿಚಾರದಲ್ಲಿ ಎದ್ದಿರುವ ವಿವಾದದಲ್ಲಿ ನಮಗೆ ಇಂದಿಗೂ ಆದರ್ಶಪ್ರಾಯವಾಗಿರುವ ಒಂದು ನೀತಿಯನ್ನು ಐವತ್ತು ವರ್ಷ ಮುಂಚೆಯೇ ಅಂಬೇಡ್ಕರ್ ಪ್ರತಿಪಾದಿಸಿದ್ದರು ಎಂಬುದನ್ನು ನಾವು ಮನದಟ್ಟು ಮಾಡಿಕೊಳ್ಳಬೇಕಾಗಿದೆ.**

ದೆಹಲಿ ಪ್ರಾಂತ್ಯಗಳಲ್ಲಿ ಸಮಗ್ರ ಅಭಿವೃದ್ಧಿಯನ್ನು ಸಾಧಿಸುವುದು ಸಾಧ್ಯವಾಯಿತು.

ಸ್ವತಂತ್ರ ಭಾರತದ ಸಂವಿಧಾನದ ಕರಡು ಪ್ರತಿಯನ್ನು ಸಿದ್ಧಪಡಿಸುವುದಕ್ಕೆ ಮುನ್ನ ತಾವು ಹೊಂದಿದ್ದ ಈ ದೃಷ್ಟಿಕೋನದ ಆಶಯವನ್ನು, ಸಂವಿಧಾನ ರಚನಾ ಕಾಲದಲ್ಲೂ ಅಂಬೇಡ್ಕರರು ಮಂಡಿಸಿದರು. ಆದ್ದರಿಂದಲೇ ಸಂವಿಧಾನದಲ್ಲಿ 'ನೀರಾವರಿ' ವಿಷಯವನ್ನೂ ಒಳಗೊಂಡಂತೆ ನಮೂದಿಸಲಾಗಿರುವ 'ನೀರು' ಎಂಬ ವಿಷಯವು, ರಾಜ್ಯಗಳಿಗೆ ನೀಡಲಾದ ಅಧಿಕಾರವ್ಯಾಪ್ತಿಯಲ್ಲಿ ಸಮಾವೇಶಗೊಂಡಿದ್ದರೂ, ಅಂತರರಾಜ್ಯ ನದಿಗಳನ್ನು ಅಭಿವೃದ್ಧಿ ಪಡಿಸುವ ವಿಷಯವನ್ನು ಮಾತ್ರ, ಸಂಸತ್ತಿನಲ್ಲಿ ಕಾಯ್ದೆ ಪಾಸು ಮಾಡುವ ಮೂಲಕ ನಿಯಂತ್ರಿಸಲು, ಕೇಂದ್ರ ಸರ್ಕಾರಕ್ಕೆ ಅವಕಾಶವನ್ನು ಒದಗಿಸಲಾಯಿತು. ದುರದೃಷ್ಟವಶಾತ್, ಕೇಂದ್ರ ಸರ್ಕಾರವು ಸಂವಿಧಾನದಲ್ಲಿ ಕೊಡಮಾಡಲ್ಪಟ್ಟಿರುವ ಈ ಅವಕಾಶವನ್ನು ಇಡೀ ದೇಶದ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಬಳಸಿಕೊಳ್ಳುವಲ್ಲಿ ವಿಫಲವಾಗಿದೆ. ನೀರಿನ ಹಂಚಿಕೆಗೆ ಸಂಬಂಧಿಸಿದಂತೆ ವಿವಿಧ ರಾಜ್ಯಗಳ ನಡುವೆ ವಿವಾದಗಳು ನಿರ್ಮಾಣ ಮಾಡಿರುವ ಭಾವೋದ್ರೇಕವನ್ನು ಸಮರ್ಥವಾಗಿ ಶಮನಗೊಳಿಸುವಲ್ಲಿ ಕೂಡ ಕೇಂದ್ರ ಸರ್ಕಾರ ವಿಫಲಗೊಂಡಿರುವುದು ಶೋಚನೀಯ.

ಅಂತರರಾಜ್ಯ ನದಿ ಯೋಜನೆಗಳ ನಿರ್ವಹಣೆಗಾಗಿ ರಚಿಸಲಾದ ನಿಗಮಗಳು ತಮ್ಮ ಕಾರ್ಯಯೋಜನೆಗಳನ್ನು ಕೈಗೊಂಡಾಗ ಏಳುವ ವಿವಾದಗಳನ್ನು ಬಗೆಹರಿಸಿಕೊಳ್ಳಲಿಕ್ಕಾಗಿ 'ವಿವಾದ ಇತ್ಯರ್ಥ ಸಂಸ್ಥೆ'ಯೊಂದನ್ನು ರೂಪಿಸಿಕೊಳ್ಳುವುದು ಅಗತ್ಯ ಎಂಬುದೂ ಅಂಬೇಡ್ಕರರ ಅಭಿಪ್ರಾಯವಾಗಿತ್ತು. ಈ ಅಭಿಪ್ರಾಯವನ್ನೇ ಸಾಕಾರಗೊಳಿಸುವಂತೆ 1956ರಲ್ಲಿ ಸಂಸತ್ತು 'ಅಂತರರಾಜ್ಯ ಜಲ ವಿವಾದ ಕಾಯ್ದೆ' ಮತ್ತು 'ನದಿ ಮಂಡಳಿ ಕಾಯ್ದೆ'ಗಳನ್ನು ಪಾಸು ಮಾಡಿತು. ಪರಿಣಾಮವಾಗಿ, ಅಂತರರಾಜ್ಯ ಜಲ ವಿವಾದ ಕಾಯ್ದೆಯ ಮೇರೆಗೆ ಟ್ರಿಬ್ಯುನಲ್‌ಗೆ ವಹಿಸಿಕೊಡಲಾದ ಯಾವುದೇ ಅಂತರರಾಜ್ಯ ಜಲ ವಿವಾದ ಪ್ರಕರಣವನ್ನು ಸುಪ್ರೀಂ ಕೋರ್ಟು ಸೇರಿದಂತೆ ಯಾವ ಕೋರ್ಟು ವಿಚಾರಣೆಗೆ ಸ್ವೀಕರಿಸತಕ್ಕದ್ದಲ್ಲ ಎಂಬುದನ್ನು ಕಾಯ್ದೆಬದ್ಧಗೊಳಿಸಲಾಯಿತು. 'ರಾಜ್ಯಗಳ ನಡುವೆ ನೀರಿನ ಬಳಕೆಗೆ, ಹಂಚಿಕೆಗೆ ಹಾಗೂ ನೀರಿನ ಮೇಲೆ ನಿಯಂತ್ರಣ ಹೊಂದುವುದಕ್ಕೆ ಸಂಬಂಧಿಸಿದಂತೆ ಏಳುವ ವಿವಾದಗಳಿಗೆ ಸಂಬಂಧಿಸಿದ ಮೊಕದ್ದಮೆಗಳನ್ನು ಸುಪ್ರೀಂ ಕೋರ್ಟು ಸೇರಿದಂತೆ ಯಾವ ಕೋರ್ಟು ವಿಚಾರಣೆಗೆ ಸ್ವೀಕರಿಸತಕ್ಕದ್ದಲ್ಲವೆಂದು ಸಂಸತ್ತಿನಲ್ಲಿ ಕಾಯ್ದೆ ಮಾಡಬಹುದಾಗಿದೆ' ಎಂದು ಸಂವಿಧಾನದಲ್ಲಿ ಒದಗಿಸಲಾಗಿರುವ ಅವಕಾಶವನ್ನು ಕೇಂದ್ರ ಸರ್ಕಾರ ಇದುವರೆಗೆ ಉಪಯೋಗಿಸಿಕೊಂಡಿಲ್ಲದಿರುವುದು ವಿಷಾದಕರ. ಹೀಗಿದ್ದರೂ ಟ್ರಿಬ್ಯುನಲ್‌ಗಳ ತೀರ್ಪನ್ನು ಅರ್ಥೈಸುವಿಕೆಯ ಹೆಸರಿನಲ್ಲಿ, ಅಂತರರಾಜ್ಯ ಜಲ ವಿವಾದ ಪ್ರಕರಣವನ್ನು ಸುಪ್ರೀಂ ಕೋರ್ಟಿಗೆ ಒಯ್ಯಲಾಗುತ್ತದೆ; ಕೋರ್ಟು ಪ್ರಕರಣವನ್ನುವಿಚಾರಣೆಗೆ ಸ್ವೀಕರಿಸುತ್ತಿದೆ. ಹೀಗಾಗುವುದರಿಂದ, ಯಾವುದು ಆಗಬಾರದೆಂಬುದು ಕಾಯ್ದೆಯ ಆಶಯವಾಗಿತ್ತೋ, ಅದೇ ಆಗುತ್ತಿದೆ. ಅಂದರೆ ಯೋಜನೆಗಳ ಅನುಷ್ಠಾನ ಸ್ಥಗಿತಗೊಳ್ಳುತ್ತಿದೆ; ಜಲ ಸಂಪನ್ಮೂಲಗಳ ಸಂಪೂರ್ಣ ಬಳಕೆ ಸಾಧ್ಯವಾಗದೇ ಹೋಗುತ್ತಿದೆ; ನೀರಿನ ಹಂಚಿಕೆಯಲ್ಲಿ ವ್ಯತ್ಯಾಸ ಉಂಟಾಗಿ, ಪ್ರಾದೇಶಿಕ ಅಭಿವೃದ್ಧಿಗೆ ಧಕ್ಕೆ ಉಂಟಾಗುತ್ತಿದೆ. ಇಂಥ ಪ್ರಕರಣಗಳಿಗೆ ಸಂಬಂಧಿಸಿದಂತೆ ತೀರ್ಪು ಬರಲು ಕಾಲಮಿತಿಯೇನೂ ಇಲ್ಲದ್ದರಿಂದ ಜಲ ವಿವಾದಗಳು ಭುಗಿಲೆದ್ದೇ ಇರುವ ಜ್ವಾಲೆಯಾಗಿ ಉಳಿಯುತ್ತವೆ.

ನದಿ ಮಂಡಳಿ ಕಾಯ್ದೆಯು 1956ರಲ್ಲೇ ಪಾಸಾಗಿದ್ದರೂ, ಅಂತರರಾಜ್ಯ ಜಲ ವಿವಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ದೇಶದ ಯಾವುದೇ ಭಾಗದಲ್ಲಿ ನದಿ ಮಂಡಳಿಗಳನ್ನು ರಚಿಸಲಾಗಿಲ್ಲ. ರಾಷ್ಟ್ರೀಯ ಸಮಗ್ರ ಜಲ ಸಂಪನ್ಮೂಲ ಅಭಿವೃದ್ಧಿ ಆಯೋಗವು ಸಮಗ್ರವಾದ ಮತ್ತು ಪಾಲ್ಗೊಳ್ಳುವಿಕೆಯಾಧಾರಿತವಾದ ನಿರ್ವಹಣಾ ಕಾಯ್ದೆಯೊಂದನ್ನು ರಚಿಸಬೇಕೆಂದು ಶಿಫಾರಸು ಮಾಡಿದ್ದರೂ, ಇಂಥ ಕಾಯ್ದೆ ಇದುವರೆಗೂ ರಚನೆಯಾಗಿಲ್ಲ. ಸರ್ಕಾರ ಈ ವಿಷಯಕ್ಕೆ ಅಗತ್ಯವಾದ ಮಹತ್ವವನ್ನೂ ನೀಡಿರುವುದಿಲ್ಲ. ಇಂಥ ಕಾಯ್ದೆ ಈ ಹೊತ್ತಿಗಾಗಲೇ ಆಗಿದ್ದಿದ್ದರೆ, ಕಾವೇರಿ ಜಲ ವಿವಾದದಂಥ ಪ್ರಕರಣ ಬಂದಾಗ, ತಾತ್ಕಾಲಿಕ ಪರಿಹಾರವನ್ನಾದರೂ ಒದಗಿಸಲು ಸಾಧ್ಯವಾಗುತ್ತಿತ್ತು.

ವಿವಿಧ ಅಂತರರಾಜ್ಯ ಜಲ ವಿವಾದ ಪ್ರಕರಣಗಳಲ್ಲಿ, ಪ್ರತಿ ರಾಜ್ಯವೂ ಕೇವಲ ತನ್ನ ಹಿತ ದೃಷ್ಟಿಯಿಂದ ಮಾತ್ರ ವಾದವನ್ನು ಮಂಡಿಸುತ್ತಿರುವ ಪರಿಣಾಮವಾಗಿ ಸಂಪೂರ್ಣ

ಜಲ ಸಂಪನ್ಮೂಲದ ಸಮಗ್ರ ಬಳಕೆಯು ಸಾಧ್ಯವಾಗುತ್ತಿಲ್ಲ; ಪ್ರಾದೇಶಿಕ ಸಮಾನತೆಯನ್ನು ಸಾಧಿಸಲೂ ಆಗುತ್ತಿಲ್ಲ. ಆದ್ದರಿಂದ ಈಗಲಾದರೂ ಪರಸ್ಪರ ರಾಜ್ಯಗಳು ಸ್ವಹಿತ ಸಾಧನೆಯೊಂದನ್ನೇ ಪ್ರಧಾನವಾಗಿ ಪರಿಗಣಿಸುವ ಪ್ರವೃತ್ತಿಯನ್ನು ಕೈಬಿಟ್ಟು, ಇಡೀ ರಾಷ್ಟ್ರದ ಸಮಗ್ರ ಹಿತವನ್ನು ಕಾಪಾಡುವ ಉದಾರ ದೃಷ್ಟಿ ಹೊಂದಿ, ವಿಶ್ವಾಸ ಪಾತ್ರ ಹಾಗೂ ಜವಾಬ್ದಾರ ನೆರೆರಾಜ್ಯಗಳಾಗಿ ಮುಂದುವರೆಯುವ ವಿವೇಕವನ್ನು ತೋರಬೇಕಾಗಿದೆ.

ನದಿ ನೀರು ಸಮುದ್ರಗಳಿಗೆ ಹರಿದು ಹೋಗುವುದನ್ನು ತಡೆಗಟ್ಟುವ ಬಗ್ಗೆ ಅಂಬೇಡ್ಕರರು ತೀವ್ರ ಕಾಳಜಿ ತೋರಿದ್ದರು. ಈ ದೃಷ್ಟಿಯಿಂದ ಅವರು ಕೃಷ್ಣಾ, ಗೋದಾವರಿ ಮತ್ತು ತಪತಿ ನದಿಗಳನ್ನು ಜೋಡಿಸುವ ಸಲಹೆಯನ್ನು ನೀಡಿದ್ದರು. ಇಂಥ ಸಲಹೆಯನ್ನು ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಮುಂದಿಟ್ಟವರು ಅವರೇ. ಇದೇ ಸಲಹೆಯನ್ನು ಮುಂದೆ ಖ್ಯಾತ ಇಂಜಿನಿಯರ್ ಕೆ.ಎಲ್.ರಾವ್ ಮತ್ತಿತರರು ವ್ಯಾಪಕವಾಗಿ ಚರ್ಚೆಗೊಳಪಡಿಸಿದರು. ಸರ್ದಾರ್ ಸರೋವರ ಯೋಜನೆಯ ಅಡಿಯಲ್ಲಿ ನವಗಾಂ ಕಾಲುವೆ ನಿರ್ಮಾಣವಾಗಿರುವುದು ಇದೇ ಮಾದರಿಯಲ್ಲಿ. ಇದರಿಂದಾಗಿ, ಹೆಚ್ಚುವರಿ ನೀರನ್ನು ನದಿಗೆ ಹೋಗಲು ಬಿಡದೆ, ನೀರಿನ ಕೊರತೆ ಇರುವ ಪ್ರದೇಶಗಳಿಗೆ ಒದಗಿಸಿ ಪ್ರಯೋಜನ ಮಾಡಿಕೊಡಲು ಸಾಧ್ಯವಾಗಿದೆ.

ಇದೇ ಚಿಂತನೆಯ ಮುಂದುವರಿಕೆಯಾಗಿ ಹಿಮಾಲಯ ನದಿಗಳ ಅಭಿವೃದ್ಧಿ ಮತ್ತು ಪೆನಿನ್‌ಷುಲರ್ ನದಿಗಳ ಅಭಿವೃದ್ಧಿ ಎಂಬ ಎರಡು ವಿಭಾಗಗಳನ್ನು ಒಳಗೊಂಡ 'ಜಲ ಸಂಪನ್ಮೂಲಗಳ ಅಭಿವೃದ್ಧಿ ಕುರಿತ ರಾಷ್ಟ್ರೀಯ ದೃಷ್ಟಿಕೋನ' ಎಂಬುದನ್ನು ಕೇಂದ್ರ ಸರ್ಕಾರವು ರೂಪಿಸಿರುವುದೇನೋ ನಿಜ. ಆದರೆ ಇದ್ಯಾವುದೂ ಜಾರಿಗೊಂಡಿಲ್ಲ; ಎಲ್ಲವೂ ಕಾಗದದ ಮೇಲೆಯೇ ಉಳಿದಿದೆ. ಬಳಕೆಯಾಗದೆ ಉಳಿಯುವ ಅಥವಾ ಬಳಕೆ ಮಾಡಿಕೊಳ್ಳಲು ಸಾಧ್ಯವಾಗದ ನೀರನ್ನು ಸಮುದ್ರಕ್ಕೆ ಹರಿಯಗೊಡದೆ, ನೀರಿನ ಅಗತ್ಯ ಇರುವ ಇತರ ಪ್ರದೇಶಗಳಿಗೆ ನೀರನ್ನು ಒದಗಿಸುವುದಕ್ಕೆ ಸಂಬಂಧಪಟ್ಟಂತೆ, ಅಂಬೇಡ್ಕರ್ ಸೂಚಿಸಿದ ಮಾದರಿಯನ್ನು ಅನುಸರಿಸುವ ಘೋಷಣೆಯನ್ನೇನೋ ಸರ್ಕಾರ ಮಾಡಿದೆ; ಇದಕ್ಕಾಗಿ ನದಿಗಳನ್ನು ಜೋಡಣೆ ಮಾಡುವ ಮಾತೂ ಆಗಾಗ ಕೇಳಿ ಬರುತ್ತದೆ. ಆದರೆ ಇದು ವಾಸ್ತವದಲ್ಲಿ ಜಾರಿಗೊಳ್ಳಬೇಕಾದರೆ, ಕೇಂದ್ರ ಸರ್ಕಾರವು ಮತ್ತು ಸಂಬಂಧಪಟ್ಟ ರಾಜ್ಯ ಸರ್ಕಾರಗಳು ಇನ್ನೂ ಹೆಚ್ಚಿನ ಇಚ್ಛಾಶಕ್ತಿಯನ್ನು ತೋರಬೇಕಾಗುತ್ತದೆ. ಆಗಲೇ ಅಂಬೇಡ್ಕರರ ಕನಸು ನನಸಾದೀತು.

ಅಂಬೇಡ್ಕರರು ಸ್ವಾತಂತ್ರ್ಯಪೂರ್ವ ಕಾಲದಲ್ಲೇ ತೋರಿದ ಮುಂದಾಲೋಚನೆಯನ್ನು ಸಾಮೂಯಿಕಗೊಳಿಸಿ, ಅವರ ಚಿಂತನೆಯ ಸಾರವನ್ನು ದೇಶದ ಹಿತದೃಷ್ಟಿಯಿಂದ ಜಾರಿಗೆ ತರುವ ಹೊಣೆಗಾರಿಕೆಯನ್ನು, ನಂತರ ಅಧಿಕಾರಕ್ಕೆ ಬಂದ ಎಲ್ಲಾ ಕೇಂದ್ರ ಸರ್ಕಾರಗಳು ಅತ್ಯಗತ್ಯವಾಗಿ ತೋರಬೇಕಾಗಿತ್ತು; ಹೀಗಾಗಿದ್ದಲ್ಲಿ, ನದಿಗಳ ನೀರಿನ ಸಂಪೂರ್ಣ ಬಳಕೆ ಸಾಧ್ಯವಾಗುತ್ತಿತ್ತು; ಹೆಚ್ಚು ನೀರು ಸಮುದ್ರದ ಪಾಲಾಗುವುದನ್ನು ತಪ್ಪಿಸಬಹುದಾಗಿತ್ತು; ಪ್ರಾದೇಶಿಕ ಅಸಮಾನತೆಯನ್ನು ನಿವಾರಣೆ ಮಾಡಲು ಸಾಧ್ಯವಾಗುತ್ತಿತ್ತು; ಅಂತರ ರಾಜ್ಯ ಜಲ ವಿವಾದಗಳು ಸೃಷ್ಟಿಯಾಗುತ್ತಿರಲಿಲ್ಲ; ನೀರಿನ ಹಂಚಿಕೆ ವಿಚಾರದಲ್ಲಿ ಭಾವೋದ್ರೇಕ ಕೆರಳಿಸುವ ಪ್ರಮೇಯ ಬರುತ್ತಿರಲಿಲ್ಲ; ಸಾಮಾಜಿಕ ಅಸಂತೋಷ, ಅಶಾಂತಿ ಹಿಂಸಾಚಾರ ಹಾಗೂ ದ್ವೇಷ-ಈರ್ಷ್ಯೆಗಳು ಮೂಡುತ್ತಿರಲಿಲ್ಲ.

ಈಗಲೂ ಕಾಲ ಮಿಂಚಿಲ್ಲ; ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು ಹಾಗೂ ಜಾಗೃತ ನಾಗರಿಕರು ಅಂಬೇಡ್ಕರ್ ತಾಳಿದ್ದ ನಿಲುವನ್ನು ಬೆಂಬಲಿಸಿ, ದನಿ ಎತ್ತಬೇಕು. ಜಲ ವಿವಾದಗಳನ್ನು ದೇಶದ ಸಮಗ್ರ ಹಿತ ದೃಷ್ಟಿಯಿಂದ ಬಗೆಹರಿಸುವ ಪರಿಪಕ್ವ ದೃಷ್ಟಿಕೋನವನ್ನು ಬೆಳೆಸಿಕೊಂಡು ದೇಶವನ್ನು ಕಟ್ಟಬೇಕು. ●

ಸೌಜನ್ಯ : ಇಪಿಡಬ್ಯು

ಒಡೆದು ಆಳುವ ನೀತಿಯ ಒಳಸುಳಿಗಳು

(7ನೇ ಪುಟದಿಂದ)

ಅರ್ಥೈಸುವ ಯಾವ ಚಳುವಳಿಯಾಗಲಿ, ರಾಜಕೀಯ ಪಕ್ಷವಾಗಲಿ ಸಮರ್ಥವಾಗಿ ಹೇಳದೇ ಇರುವುದು ನಮ್ಮ ಜನರ ದುರಾದೃಷ್ಟವೇ ಅಥವಾ ಪರಿಸ್ಥಿತಿಯ ವಿಪರ್ಯಾಸವೇ? ತಿಳಿಯುತ್ತಿಲ್ಲ.

ತಲೆ ತಲಾಂತರದ ಕೀಳರಿಮೆಯಲ್ಲಿ ಬಳಲುವ-ಬಳಲುತ್ತಿರುವ ಶೂದ್ರ ದಲಿತ ಶಕ್ತಿಗಳು ತಮಗಿಂತ ಹೀನಸ್ಥಿತಿಯಲ್ಲಿರುವ ಅಲ್ಪಸಂಖ್ಯಾತರ ವಿರುದ್ಧ ಕತ್ತಿ ಮಸಿಯುತ್ತಿರುವ ಈ ಸನ್ನಿವೇಶ ಸಮಯ ಸಾಧಕನ ರೊಟ್ಟಿ ಜಾರಿ ತುಪ್ಪದಲ್ಲಿ ಬೀಳುವ ಸನ್ನಿವೇಶ ಸೃಷ್ಟಿಸಿದೆಯೇ ಹೊರತು ಉಳಿದವರಿಗೆ ಯಾವ ಭಾಗವನ್ನು ತರುವುದಿಲ್ಲ.

ಕೇರಿಗೊಂದು, ದಾರಿಗೊಂದು ಗಣೇಶನ ದೇವಸ್ಥಾನ ಮಾಡುತ್ತ ತಮಗೊಂದು ವ್ಯವಸ್ಥಿತ ಉದ್ಯೋಗವನ್ನು ಸೃಷ್ಟಿಸಿಕೊಳ್ಳುತ್ತಿರುವ ಪುರೋಹಿತ ಶಾಹಿ ವರ್ಗ, ರಾಮ ಮಂದಿರದ ನೆವದಲ್ಲಿ ಧರ್ಮಗಳನ್ನು ಒಡೆಯುವ ಇನ್ನೊಂದು ವರ್ಗ, ಇದರಲ್ಲಿ ಭಾಗವಹಿಸುತ್ತಿರುವ ದಲಿತ ಯುವಕರ ಸಂಖ್ಯೆ ಹೆಚ್ಚಾಗುತ್ತಿರುವುದು ಖಂಡಿತವಾಗಿಯೂ ವಿಪರ್ಯಾಸ.

ದಲಿತರ ಸ್ವಾಭಿಮಾನಕ್ಕೆ ಭಂಗ ತರುವ ಯಾವ ಹಿಂದೂ ಧರ್ಮವನ್ನು ಬಿಟ್ಟು ಬೌದ್ಧ ಧರ್ಮವನ್ನು ಸ್ವೀಕರಿಸಲು ಮುಂದಾದ ಅಂಬೇಡ್ಕರರನ್ನು ಪೂಜಿಸುವ ದಲಿತ ವರ್ಗ ಇಂದು "ಹಿಂದೂವಾದದ" ಅಲೆಗೆ ಸಿಲುಕುತ್ತಿದೆ. ಹಾಗಾದರೆ ಇದಕ್ಕೆ ಕಾರಣಗಳೇನು? ನಮ್ಮ ಇಡೀ ಸಮುದಾಯವನ್ನು ಹೀಗೆ ವಿಭಜಿಸುತ್ತಿರುವ ಶಕ್ತಿ ಯಾವುದು?

ನಮ್ಮ ಮೂಲಭೂತ ಸೌಕರ್ಯಗಳಾದ ಆರ್ಥಿಕ ಸ್ವಾವಲಂಬನೆ, ಶಿಕ್ಷಣ, ಸಾಮಾಜಿಕ ನ್ಯಾಯದಂತಹ ಪರಿಕಲ್ಪನೆಗೆ ವ್ಯತಿರಿಕ್ತವಾಗಿ ಉದಾಹರೀಕರಣವನ್ನು ಉದಾರವಾಗಿ ತಮ್ಮ ಸುಖಭೋಗಗಳಿಗೆ ಉಪಯೋಗಿಸುತ್ತಿರುವ ಈ ಫ್ಯಾಸಿಸ್ಟ್ ಶಕ್ತಿಗಳು "ತೋಗಾಡಿಯಾ", "ನರೇಂದ್ರ ಮೋದಿ" "ಎಲ್.ಕೆ. ಆದ್ವಾನಿ" ಮುರುಳಿ ಮನೋಹರ ಜೋಷಿ"ಯಂತಹ ಸೇನಾಧಿಪತಿಗಳನ್ನು ತನ್ನ ಹಿತರಕ್ಷಣೆಗೆ ಇಟ್ಟಿದೆ.

ಇನ್ನಾದರೂ ನಮ್ಮ ಯುವ ಜನತೆ ತನ್ನಲ್ಲಿನ ನಾಯಕತ್ವದ ಬಗ್ಗೆ ಆಲೋಚಿಸಬೇಕಾದ ಅನಿವಾರ್ಯತೆ ನಮ್ಮೆದುರಿಗಿದೆ. ಬಡವರ ಮಕ್ಕಳ ಬಾಳಂಟರ ಬವಣೆ ಹೆಚ್ಚಾಗುತ್ತಿರುವ ಈ ಸನ್ನಿವೇಶದಲ್ಲಿ ಬೀದಿ ರಂಪವಾಗುತ್ತಿರುವ "ಈ ರಾಮರಾಜ್ಯ"ದ ಸುದ್ದಿ, ಗಾಳಿ ಸುದ್ದಿ, ಹಿಂಸೆಗೆ ಕಡಿವಾಣ ಹಾಕಬೇಕಾಗಿದೆ. ಈ ನಿಟ್ಟಿನಲ್ಲಿ ಜನರನ್ನು "ಎಚ್ಚರಿಸುವ" ಮಾನ್ಯ ಸಚಿವೆಯಾದ "ಮೋಟಮ್ಮ"ನಂತಹವರ ಧ್ವನಿಗೆ ಬೆಂಬಲ ನೀಡಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯ.

ಚಿಕ್ಕಮಗಳೂರಿನಲ್ಲಿ ಮತ್ತೊಮ್ಮೆ "ಬಾಬರಿ ಮಸೀದಿ"ಯಂತಹ ಘಟನೆ ನಡೆಯುವ ಹುನ್ನಾರ ಯಶಸ್ವಿಯಾಗಿ ಮುಂದುವರೆಯುತ್ತಿದೆ. ಭಜರಂಗಿಗಳು, ಭಾಜಪಗಳು ಕರ್ನಾಟಕವನ್ನು "ಗುಜರಾತ್" ಮಾಡಲು ಹೊರಟಿದ್ದಾರೆ. ಸಹಬಾಳ್ವೆಗೆ ಹೆಸರಾದ ಮಲೆನಾಡಿನ ಸೆರಗಿಗೆ ಕೆಂಡ ಇಟ್ಟಿದ್ದಾರೆ. ಇದೆಲ್ಲದರ ನಡುವೆ ನಾಯಕತ್ವದ ಕೊರತೆ, ಸ್ವಾರ್ಥದಿಂದ ಯಾವುದೇ ಪಕ್ಷಗಳೂ ಜನಪರ ನಿಲುವನ್ನು ಎತ್ತಿಹಿಡಿಯಲು ವಿಫಲವಾಗುತ್ತಿವೆ.

ಚಿಕ್ಕಮಗಳೂರಿನಲ್ಲಿ ಮತ್ತೊಮ್ಮೆ "ಬಾಬರಿ ಮಸೀದಿ"ಯಂತಹ ಘಟನೆ ನಡೆಯುವ ಹುನ್ನಾರ ಯಶಸ್ವಿಯಾಗಿ ಮುಂದುವರೆಯುತ್ತಿದೆ. ಭಜರಂಗಿಗಳು, ಭಾಜಪಗಳು ಕರ್ನಾಟಕವನ್ನು "ಗುಜರಾತ್" ಮಾಡಲು ಹೊರಟಿದ್ದಾರೆ. ಸಹಬಾಳ್ವೆಗೆ ಹೆಸರಾದ ಮಲೆನಾಡಿನ ಸೆರಗಿಗೆ ಕೆಂಡ ಇಟ್ಟಿದ್ದಾರೆ. ಇದೆಲ್ಲದರ ನಡುವೆ ನಾಯಕತ್ವದ ಕೊರತೆ, ಸ್ವಾರ್ಥದಿಂದ ಯಾವುದೇ ಪಕ್ಷಗಳೂ ಜನಪರ ನಿಲುವನ್ನು ಎತ್ತಿಹಿಡಿಯಲು ವಿಫಲವಾಗುತ್ತಿವೆ.

ಮುಸ್ಲಿಂ ರಾಜಕೀಯ ನಾಯಕರು ಹಾಗೂ ಧಾರ್ಮಿಕ ಮುಖಂಡರು ತಮ್ಮ ಜನಾಂಗದ ಜನರನ್ನು ಸಮಾಜದ ಮುಖ್ಯವಾಹಿನಿಗೆ ಸೇರಲು ಬೇಕಾದ ಜ್ಞಾನವನ್ನಾಗಲಿ, ವಿದ್ಯೆಯನ್ನಾಗಲಿ ನೀಡದೆ ಇದುವರೆಗೂ ಅವರನ್ನು ತಮ್ಮ ಓಟು ಬ್ಯಾಂಕುಗಳಾಗಿ ಮಾತ್ರ ಬಳಸಿಕೊಳ್ಳುತ್ತಿದ್ದಾರೆ. ಹಿಂದುತ್ವದ ಕೋಮುವಾದ ಅಥವಾ ಅಲ್ಪಸಂಖ್ಯಾತರ ಕೋಮುವಾದ ಯಾವುದೇ ಆಗಲಿ, ಅಂದ ಮೇಲೆ ಆಲೋಚಿಸಿ ಒಡೆದು ಆಳುವ ನೀತಿ ಮತ್ತೊಮ್ಮೆ ಯಶಸ್ವಿಯಾಗುತ್ತಿಲ್ಲವೆ? ಎರಡು ಮಂಗಗಳ ಜಗಳದಲ್ಲಿ ರೊಟ್ಟಿ ಲಾಭವಾಗಿದ್ದು ಯಾರಿಗೆ? ಎನ್ನುವ ಕಥೆ ನಿಮಗೆ ನೆನಪಿರಬೇಕು. ಇದು ಸಮಾಜದ ಬಹುಸಂಖ್ಯಾತರ ನಿದ್ದೆಗೆಡಿಸುವ ಜೊತೆಗೆ ಭಾರತದ "ಬಹುಮುಖಿ" ಸಂಸ್ಕೃತಿಯ ನೆಲೆಗಟ್ಟನ್ನೇ ನಾಶ ಮಾಡಲು ಯತ್ನಿಸುತ್ತಿದೆ. ●

ಸ್ವತಂತ್ರ ರಾಜಕೀಯ ಶಕ್ತಿಯಾಗಿ ದಲಿತರು

ದಲಿತರು ಅಧಿಕಾರ ಶಕ್ತಿಯನ್ನು ಪಡೆಯಲು ಹೋರಾಡಬೇಕಿದೆ. ದಲಿತರ ಹಾಗೂ ಹಿಂದೂಗಳ ನಡುವೆ ಪರಸ್ಪರ ಹಿತಾಸಕ್ತಿಗಳ ಸಂಘರ್ಷವಿದೆ ಎಂಬುದನ್ನು ನಾವು ಮರೆಯಕೂಡದು. ವೈಚಾರಿಕತೆಯು ಬೆಳೆಯುವುದರಿಂದಾಗಿ, ಈ ಸಂಘರ್ಷದ ಕಾವನ್ನು ತಗ್ಗಿಸಬಹುದೇ ವಿನಃ, ಸಂಘರ್ಷದ ಅವಶ್ಯಕತೆಯನ್ನು ಸಂಪೂರ್ಣವಾಗಿ ತೊಡೆದುಹಾಕುವುದು ಅಸಾಧ್ಯ. ಈ ಸಂಘರ್ಷವು ನಡೆದಿರುವುದೇ "ಅಧಿಕಾರ" ಸ್ವಾಧೀನಕ್ಕಾಗಿ. ಒಬ್ಬರ ಹಿತಾಸಕ್ತಿಯು ಮತ್ತೊಬ್ಬರ ಹಿತಾಸಕ್ತಿಯ ಮೇಲೆ ಧಾಳಿ ಮಾಡುವುದಕ್ಕೆ "ಅಧಿಕಾರ"ವೇ ಕಾರಣ. ಇದು ವಾಸ್ತವ ಸಂಗತಿಯಾಗಿರುವಾಗ, ಹಿಂದೂಗಳ 'ಅಧಿಕಾರ ಶಕ್ತಿ'ಯನ್ನು ನಾಶಮಾಡಬೇಕಾದರೆ ನಾವು 'ಅಧಿಕಾರ ಶಕ್ತಿ'ಯನ್ನು ಗಳಿಸಿಕೊಳ್ಳುವುದು ಅನಿವಾರ್ಯವಾಗಿದೆ.

ಮೂಲ : ಡಾ|| ಬಿ.ಆರ್. ಅಂಬೇಡ್ಕರ್ ಅನು : ಎಂ. ಗೋಪಿನಾಥ್



ಸರ್ವಾಧಿಕಾರಿ ವ್ಯವಸ್ಥೆಯ ವಿರುದ್ಧ ಬಂಡೇಳುವುದು ಮತ್ತು ಅದನ್ನು ಕಿತ್ತೊಗೆಯುವುದು ಬಡಜನರ ಸಹಜ ಪ್ರತಿಕ್ರಿಯೆಯಾಗಿದೆ. ಜಗತ್ತಿನ ಎಲ್ಲಾ ದೇಶಗಳಲ್ಲೂ ಕಂಡು ಬಂದಿರುವ ಸಹಜ ಚರಿತ್ರೆಯದು. ಈ ಬಂಡಾಯಗಳ ಗೆಲುವಿಗೆ ಕಾರಣವಾದ ಆಧಾರ-ಸಿದ್ಧಾಂತಗಳನ್ನು ಅರಿಯಲಿಚ್ಛಿಸುವ ವಿದ್ಯಾರ್ಥಿಯು ಖಂಡಿತವಾಗಿಯೂ ಅಚ್ಚರಿಗೊಳ್ಳುತ್ತಾನೆ. ಪುರಾತನ ಕಾಲದಲ್ಲಿ, ಯಾವುದೋ ದೈವೀಕ ಶಕ್ತಿಯ ಭೂಮಿಗಿಳಿದು ಬಂದು ತಮ್ಮನ್ನು ಬಿಡುಗಡೆಮಾಡುತ್ತದೆಂಬ ಭರವಸೆಯು ಬಡಜನರಿಗಿತ್ತು. ಆಧುನಿಕ ಕಾಲದಲ್ಲಿ, ಚಾರಿತ್ರಿಕ, ಭೌತಿಕ ಶಕ್ತಿಗಳು ತಮ್ಮಷ್ಟಕ್ಕೆ ತಾವೇ ಬಲಿಷ್ಟರನ್ನು ಬದಿಗೊತ್ತಿ ದುರ್ಬಲರಿಗೆ ಅವಕಾಶ ಕಲ್ಪಿಸುತ್ತದೆ ಎಂಬ ನಂಬಿಕೆಯು ಬಡಜನರಲ್ಲಿದೆ.

ಬಂಡಾಯಗಾರರು : ದಮನಿತ ಜನಾಂಗಗಳಲ್ಲಿನ ಈ ಮನೋಭಾವದ ಬೆಳಕಿನಲ್ಲಿ ನೋಡಿದಾಗ, ಇಂಡಿಯಾದ ದಲಿತರನ್ನು ನಾವು ನಿಜಕ್ಕೂ ಅಭಿನಂದಿಸಬೇಕಿದೆ. ಹಿಂದೂ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಬಂಡಾಯಗಾರರಾಗಿರುವ ದಲಿತರು, ತಮ್ಮ ಬವಣೆಗಳನ್ನು ನೀಗಿಸಲು, ಯಾವುದೇ ದೈವೀಕ ಶಕ್ತಿಯಾಗಲೀ ಚಾರಿತ್ರಿಕ ಶಕ್ತಿಯಾಗಲೀ ತಮ್ಮ ನೆರವಿಗಿಲ್ಲ ಎಂಬುದನ್ನು ಚೆನ್ನಾಗಿ ಅರಿತಿದ್ದಾರೆ. ಹಿಂದೂ ಸಾಮಾಜಿಕ ವ್ಯವಸ್ಥೆಯು ಕೇವಲ ಎರಡು ಸಂದರ್ಭಗಳಲ್ಲಿ ಮಾತ್ರ ನುಚ್ಚುನೂರಾಗಲು ಸಾಧ್ಯ ಎಂಬುದು ದಲಿತರಿಗೆ ತಿಳಿದಿದೆ. ಮೊದಲನೆಯದಾಗಿ, ಹಿಂದೂ ಸಾಮಾಜಿಕ ವ್ಯವಸ್ಥೆಯ ವಿರುದ್ಧ ನಿರಂತರವಾಗಿ ಆಕ್ರಮಣ ಮಾಡಬೇಕು. ಎರಡನೆಯದಾಗಿ, ಈ ರೀತಿ ನಿರಂತರವಾಗಿ ಆಕ್ರಮಣ ನಡೆಸಬೇಕಾದರೆ, ದಲಿತರು ಹಿಂದೂಗಳಿಂದ ಕ್ರಿಯೆಯಲ್ಲೂ ಆಲೋಚನೆಯಲ್ಲೂ ದೂರ ಉಳಿಯಬೇಕು. ಆದ್ದರಿಂದಲೇ ದಲಿತರು ಪ್ರತ್ಯೇಕ ಮತದಾನ ಪದ್ಧತಿಗಾಗಿ ಹಾಗೂ ಪ್ರತ್ಯೇಕ ಹಳ್ಳಿಗಳ ನಿರ್ಮಾಣಕ್ಕಾಗಿ ಒತ್ತಾಯಿಸುತ್ತಿದ್ದಾರೆ.

ಮೀನಿಗೆ ಕೊಕ್ಕರೆ ಉಪದೇಶ : ಮತ್ತೊಂದು ಕಡೆ ಏನಾಗುತ್ತಿದೆಯೆಂದರೆ, ದಲಿತರು ತಮ್ಮ ವಿಮೋಚನೆಗಾಗಿ ಹಿಂದೂಗಳನ್ನೇ ಅವಲಂಬಿಸಬೇಕೆಂದು ಹಿಂದೂಗಳು ದಲಿತರಿಗೆ ಬುದ್ಧಿ ಮಾತು ಹೇಳುತ್ತಿದ್ದಾರೆ. ಶಿಕ್ಷಣವು ಎಲ್ಲಾ ಕಡೆ ಹರಡುತ್ತಾ ಹೋದರೆ, ಹಿಂದೂಗಳ ನಡತೆಯು ಬದಲಾಗುವುದೆಂದು ದಲಿತರಿಗೆ ಹೇಳಲಾಗಿದೆ. ಸಮಾಜ ಸುಧಾರಕರು ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಮಾಡುತ್ತಿರುವ ಬೋಧನೆಯಿಂದಾಗಿ, ಹಿಂದೂಗಳಲ್ಲಿ ನೈತಿಕ ಪರಿವರ್ತನೆಯಾಗುವುದೆಂದೂ ದಲಿತರಿಗೆ ತಿಳಿಸಲಾಗಿದೆ. ಇಂತಹ ಸುಧಾರಣಾ ಕೆಲಸದಿಂದಾಗಿ ಹಿಂದೂವಿನ ಮನಸಾಕ್ಷಿಯ ಮೇಲೆ ಸತ್ಪರಿಣಾಮ ಆಗುವುದೆಂದೂ ದಲಿತರನ್ನು ನಂಬಿಸಲಾಗಿದೆ. ಆದ ಕಾರಣ, ದಲಿತರು ಹಿಂದೂಗಳ ಸದ್ಭಾವನೆ ಮತ್ತು ಕರ್ತವ್ಯ ಪ್ರಜ್ಞೆಯ ಮೇಲೆ ನಂಬಿಕೆಯಿಡಬೇಕೆಂದು ದಲಿತರಿಗೆ ಉಪದೇಶ ನೀಡಲಾಗಿದೆ. ಆದರೆ ಯಾವ ದಲಿತನೂ ಈ ಗಿಲೀಟು ಮಾತುಗಳನ್ನು ನಂಬಲು ಸಿದ್ಧನಿಲ್ಲ. ಆ ಮಾತುಗಳನ್ನು ನಂಬುವ ದಲಿತನು ಯಾವನಾದರೂ ಇದ್ದಲ್ಲಿ, ಅವನು ಢಂಬಾಚಾರಿಯೇ ಆಗಿರುತ್ತಾನೆ. ಅವನು ಹಿಂದೂಗಳು ಹೇಳುವುದಕ್ಕೆಲ್ಲಾ ತಲೆಯಾಡಿಸುತ್ತಾ, ದಲಿತರಿಗಾಗಿ ಅವರು ಮೀಸಲಿಟ್ಟಿರುವುದನ್ನು ತಾನೊಬ್ಬನೇ ಕಬಳಿಸಲು ಹಿಂದೂಗಳ ಮರ್ಜಿಗಾಗಿ ಕಾಯುತ್ತಿರುವ ಆಷಾಢಭೂತಿಯೇ ಆಗಿರುತ್ತಾನೆ. ತಮಗೆ ಬೇಕಾದದ್ದನ್ನು ಪಡೆಯಲು ಯಾವ ಮಾರ್ಗವನ್ನಾದರೂ ಹಿಡಿಯಲು ತಯಾರಾಗಿರುವ ಅಸಹಾಯಕರನ್ನು ಸುಲಿದು ತಿನ್ನುವ ಭಕ್ಷಕ ವರ್ಗದ ದಲಿತರಿವರು.

ಒಂದು ಎಚ್ಚರಿಕೆ: ತಮ್ಮ ಬೊಗಳೆ ಪ್ರಚಾರಗಳಿಂದ ಅಥವಾ ಬುರುಡೆ ಭರವಸೆಗಳಿಂದ ಹಿಂದೂಗಳು ದಲಿತರನ್ನು ಮೋಸ ಮಾಡಲು ಅಸಾಧ್ಯ. ಆದ ಕಾರಣ, ಅವುಗಳನ್ನು ಟೀಕಿಸುವುದು ಇಲ್ಲಿ ಅನಗತ್ಯ. ಆದರೆ, ಮತ್ತೇರಿಸುವಂತಹ ಈ ಅಪಪ್ರಚಾರವು ಎಷ್ಟು ಪರಿಣಾಮಕಾರಿ ಯಾಗಿದೆಯೆಂದರೆ, ಅಮಾಯಕ ದಲಿತರು ಬಲು ಸುಲಭವಾಗಿ ಸುಳ್ಳಿನ ಬಲೆಯಲ್ಲಿ ಸಿಕ್ಕಿ ಬೀಳುತ್ತಾರೆ. ಆದ ಕಾರಣ, ದಲಿತರಿಗೆ ಒಂದು ಎಚ್ಚರಿಕೆಯನ್ನು ನೀಡುವುದು ಅತ್ಯಗತ್ಯವಾಗಿದೆ. ಸಾಮಾಜಿಕ ನ್ಯಾಯವನ್ನು ಗಳಿಸಲು ಸಾಮಾಜಿಕ ಚಿಂತಕರು ಎರಡು ಮಾರ್ಗಗಳನ್ನು ಅನುಸರಿಸುವುದು ಉಂಟು. ಒಂದನೆಯದು ವಿಚಾರವಾದ ಅಥವಾ ತರ್ಕ (Reason) ಮತ್ತು ಎರಡನೆಯದು ಧರ್ಮ (Religion)

ಸಾಮಾಜಿಕ ಅನ್ಯಾಯ ಮತ್ತು ಮೌಢ್ಯ : ತರ್ಕ ಮಾರ್ಗವನ್ನು ಆರಿಸಿಕೊಂಡ ವಿಚಾರವಾದಿಗಳು, ಅನ್ಯಾಯವನ್ನು ನಿರ್ಮೂಲ ಮಾಡಲು ಬುದ್ಧಿಶಕ್ತಿಯನ್ನು ಹೆಚ್ಚಿಸಬೇಕೆಂದು ಹೇಳಿದರು. ಮಧ್ಯ ಯುಗದಲ್ಲಿ, ಸಾಮಾಜಿಕ ಅನ್ಯಾಯ ಮತ್ತು ಮೂಢನಂಬಿಕೆಗಳು ಪರಸ್ಪರ ಹೆಣೆದುಕೊಂಡಿದ್ದವು. ಆದ ಕಾರಣ, ಮೂಢನಂಬಿಕೆಗಳನ್ನು ಕಿತ್ತೊಗೆದರೆ ಸಾಮಾಜಿಕ ಅನ್ಯಾಯವನ್ನು ನಿರ್ಮೂಲನೆ ಮಾಡಬಹುದೆಂದು ವಿಚಾರವಾದಿಗಳು ನಂಬಿದ್ದು ಸಹಜವೇ ಆಗಿತ್ತು. ಅವರು ಮಾಡಿದ ಯಶಸ್ವೀ ಪ್ರಯೋಗಗಳು ಮತ್ತು ಅವುಗಳ ಫಲಿತಾಂಶಗಳು ಅವರ ನಂಬಿಗೆಯನ್ನು ಮತ್ತಷ್ಟು ಬಲಪಡಿಸಿದವು. ಇದರಿಂದಾಗಿ, ಇಂದಿನ ಶಿಕ್ಷಣ ತಜ್ಞರಲ್ಲಿ, ತತ್ವಜ್ಞಾನಿಗಳಲ್ಲಿ, ಮನೋವಿಜ್ಞಾನಿಗಳಲ್ಲಿ ಮತ್ತು ಸಾಮಾಜಿಕ ವಿಜ್ಞಾನಿಗಳಲ್ಲಿ ಎಂತಹ ನಂಬಿಕೆ ಬೆಳೆದು ಬಂದಿದೆಯೆಂದರೆ, ಶಿಕ್ಷಣ ಮತ್ತು ಪ್ರಿಂಟಿಂಗ್ ತಂತ್ರಜ್ಞಾನವು ಎಲ್ಲೆಡೆ ಹರಡಿ ಬೆಳದಲ್ಲಿ, ಸಾಮಾಜಿಕ ಅನ್ಯಾಯವು ತಾನಾಗಿಯೇ ಅಳಿಯುತ್ತದೆಯಂತೆ. ಏಕೆಂದರೆ,

ಅಂತಹ ಆಧುನಿಕ ಕಾಲದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಜಾಗ್ರುತನಾಗಿರುತ್ತಾನಂತೆ.

ಗೊಡ್ಡು ನಂಬಿಕೆ : ಇಂಡಿಯಾದ ಚರಿತ್ರೆಯಲ್ಲಾಗಲೀ ಅಥವಾ ಯೂರೋಪಿನ ಚರಿತ್ರೆಯಲ್ಲಾಗಲೀ, ಅಂತಹ ಗೊಡ್ಡು ನಂಬಿಕೆಗೆ ಬೆಂಬಲವಾಗಿ ಯಾವುದೇ ಪುರಾವೆಗಳು ಸಿಗುವುದಿಲ್ಲ. ಯೂರೋಪಿನಲ್ಲಿ, ಸಾಮಾಜಿಕ ಅನ್ಯಾಯ-ಅಸಮಾನತೆಗಳಿಗೆ ಗೊಡ್ಡು ಸಂಪ್ರದಾಯಗಳು ಮತ್ತು ಮೂಢನಂಬಿಕೆಗಳೇ ಆಧಾರವಾಗಿದ್ದವು. ಹದಿನೆಂಟನೆ ಶತಮಾನದಲ್ಲಿ, ಈ ಸಂಪ್ರದಾಯಗಳನ್ನೂ ಮೂಢನಂಬಿಕೆಗಳನ್ನೂ ನಿರ್ಮೂಲನೆ ಮಾಡಲಾಯಿತು. ಆದರೂ ಸಹ ಸಾಮಾಜಿಕ ಅನ್ಯಾಯವು ಇಂದಿಗೂ ಉಳಿದಿದೆ. ಮತ್ತು ಮಿತಿ ಮೀರಿ ಬೆಳೆಯುತ್ತಿದೆ. ಇಂಡಿಯಾದಲ್ಲಂತೂ ಇಡೀ ಬ್ರಾಹ್ಮಣ ಸಮುದಾಯವು ಶಿಕ್ಷಣ ಪಡೆದಿದೆ. ಅವರಲ್ಲಿರುವ ಪ್ರತಿಯೊಬ್ಬ ಗಂಡು, ಹೆಣ್ಣು ಮತ್ತು ಮಗುವೂ ಸಹ ವಿದ್ಯಾವಂತರಾಗಿದ್ದಾರೆ. ಆದರೆ, ಎಷ್ಟು ಮಂದಿ ಬ್ರಾಹ್ಮಣರು ಅಸ್ಪೃಶ್ಯತೆಯ ಆಚರಣೆಯನ್ನು ಬಿಟ್ಟಿದ್ದಾರೆ? ಅಸ್ಪೃಶ್ಯತೆಯ ನಂಬಿಕೆಯಿಂದ ಎಷ್ಟು ಬ್ರಾಹ್ಮಣರು ಮುಕ್ತರಾಗಿದ್ದಾರೆ? ಅಸ್ಪೃಶ್ಯತೆಯ ವಿರುದ್ಧ ಸಮರ ಸಾರಲು ಎಷ್ಟು ಬ್ರಾಹ್ಮಣರು ತಯಾರಾಗಿದ್ದಾರೆ? ದಲಿತರು ನಡೆಸುವ ಸಾಮಾಜಿಕ ಅನ್ಯಾಯದ ವಿರುದ್ಧದ ಹೋರಾಟದಲ್ಲಿ ದಲಿತರ ಜತೆಗೂಡಲು ಎಷ್ಟು ಬ್ರಾಹ್ಮಣರು ತಯಾರಾಗಿದ್ದಾರೆ? ಒಂದೇ ಮಾತಿನಲ್ಲಿ ಹೇಳುವುದಾದರೆ, ದಲಿತರ ಹೋರಾಟವನ್ನೇ ತಮ್ಮ ಹೋರಾಟವೆಂದು ತಿಳಿದಿರುವ ಬ್ರಾಹ್ಮಣರ ಸಂಖ್ಯೆ ಎಷ್ಟು? ಕೇವಲ ಬೆರಳೆಣಿಕೆಯಷ್ಟು ಮಂದಿ ಇರಬಹುದು.

ಲಾಭವಿರುವಲ್ಲಿ ತರ್ಕವಿಲ್ಲ : ವಿಚಾರವಂತಿಕೆಯು ಸಾಮಾಜಿಕ ನ್ಯಾಯವನ್ನು ತರುವಲ್ಲಿ ಏಕೆ ವಿಫಲವಾಯಿತು? ಇದಕ್ಕೆ ಉತ್ತರವೇನೆಂದರೆ, ಶೋಷಕ ವರ್ಗವು ಅನುಭವಿಸುತ್ತಿರುವ ಸವಲತ್ತುಗಳಿಗೆ ಯಾವುದೇ ಅಪಾಯವಿಲ್ಲದ ತನಕ ವಿಚಾರವಾದವು ಕೆಲಸ ಮಾಡುತ್ತದೆ. ಆದರೆ ಆ ಸವಲತ್ತುಗಳಿಗೆ ಏನಾದರೂ ಧಕ್ಕೆ ಬಂದ ಕೂಡಲೇ ವಿಚಾರವಾದವು ಸೋತುಹೋಗುತ್ತದೆ. ಅಸ್ಪೃಶ್ಯತೆಯು ಉಳಿಯುವುದರಿಂದಾಗಿ, ಅನೇಕ ಹಿಂದೂಗಳಿಗೆ ಲಾಭವಿದೆ. ಆ ಲಾಭವು ಸಾಮಾಜಿಕ ಮೇಲರಿಮೆಯ ಭಾವನೆಯ ರೂಪವನ್ನು ಪಡೆಯಬಹುದು. ಅಥವಾ ಬಲವಂತವಾಗಿ ಜೀತಕ್ಕೆ ದೂಡುವಂತಹ, ಕಡಿಮೆ ಕೂಲಿ ಕೊಟ್ಟು ಹೆಚ್ಚು ದುಡಿಸಿಕೊಳ್ಳುವ ಹಣಕಾಸಿನ ಲಾಭದ ರೂಪವನ್ನು ಪಡೆಯಬಹುದು. ಒಟ್ಟಿನಲ್ಲಿ, ಹಿಂದೂಗಳಿಗೆ ಅಸ್ಪೃಶ್ಯತೆಯಿಂದ ಲಾಭವಿದೆ ಎನ್ನುವುದು ಸತ್ಯ ಸಂಗತಿ ಆದ ಕಾರಣ, ಲಾಭವಿರುವ ಕಡೆ ತರ್ಕವು ವಿಫಲವಾಗುವುದು ಸಹಜವೇ ಆಗಿದೆ. ಆದ್ದರಿಂದ, ವಿಚಾರವಾದಕ್ಕೆ ಇರುವ ಮಿತಿಗಳನ್ನು ದಲಿತರು ಅರಿಯಬೇಕಿದೆ.

ಧರ್ಮದ ಮಿತಿ : ಧಾರ್ಮಿಕ ಶಕ್ತಿಯಲ್ಲಿ ನಂಬಿಕೆ ಇರುವ ಸಾತ್ವಿಕ ಮಂದಿ ಏನು ಹೇಳುತ್ತಾರೆಂದರೆ, ಮನುಷ್ಯನಲ್ಲಿ ನೈತಿಕ ಒಳನೋಟವನ್ನು ಬೆಳೆಸುವ ಧರ್ಮವು ಆತನು ತನ್ನ ಸಂತೋಷಕ್ಕಾಗಿ ನಡೆಸುವ ಪಾಪಕೃತ್ಯಗಳ ಬಗ್ಗೆ ಆತನನ್ನು

ಶೋಷಕ ವರ್ಗವು ಅನುಭವಿಸುತ್ತಿರುವ ಸವಲತ್ತುಗಳಿಗೆ ಯಾವುದೇ ಅಪಾಯವಿಲ್ಲದ ತನಕ ವಿಚಾರವಾದವು ಕೆಲಸ ಮಾಡುತ್ತದೆ. ಆದರೆ ಆ ಸವಲತ್ತುಗಳಿಗೆ ಏನಾದರೂ ಧಕ್ಕೆ ಬಂದ ಕೂಡಲೇ ವಿಚಾರವಾದವು ಸೋತುಹೋಗುತ್ತದೆ. ಅಸ್ಪೃಶ್ಯತೆಯು ಉಳಿಯುವುದರಿಂದಾಗಿ, ಅನೇಕ ಹಿಂದೂಗಳಿಗೆ ಲಾಭವಿದೆ. ಆ ಲಾಭವು ಸಾಮಾಜಿಕ ಮೇಲರಿಮೆಯ ಭಾವನೆಯ ರೂಪವನ್ನು ಪಡೆಯಬಹುದು. ಅಥವಾ ಬಲವಂತವಾಗಿ ಜೀತಕ್ಕೆ ದೂಡುವಂತಹ, ಕಡಿಮೆ ಕೂಲಿ ಕೊಟ್ಟು ಹೆಚ್ಚು ದುಡಿಸಿಕೊಳ್ಳುವ ಹಣಕಾಸಿನ ಲಾಭದ ರೂಪವನ್ನು ಪಡೆಯಬಹುದು. ಒಟ್ಟಿನಲ್ಲಿ, ಹಿಂದೂಗಳಿಗೆ ಅಸ್ಪೃಶ್ಯತೆಯಿಂದ ಲಾಭವಿದೆ ಎನ್ನುವುದು ಸತ್ಯ ಸಂಗತಿ ಆದ ಕಾರಣ, ಲಾಭವಿರುವ ಕಡೆ ತರ್ಕವು ವಿಫಲವಾಗುವುದು ಸಹಜವೇ ಆಗಿದೆ. ಆದ್ದರಿಂದ, ವಿಚಾರವಾದಕ್ಕೆ ಇರುವ ಮಿತಿಗಳನ್ನು ದಲಿತರು ಅರಿಯಬೇಕಿದೆ.

ಎಚ್ಚರಿಸುತ್ತದೆಯಂತೆ. ಈ ಪ್ರಜ್ಞೆಯ ಫಲವಾಗಿ ಆತನು ತನ್ನ ಸಹಜೀವಿಗಳೊಂದಿಗೆ ನ್ಯಾಯದಿಂದ ವರ್ತಿಸುವ ಕರ್ತವ್ಯ ಪ್ರಜ್ಞೆಯು ಅವನಲ್ಲಿ ಜಾಗೃತವಾಗುತ್ತದಂತೆ. ಧರ್ಮವು ಮಾಡಲೇಬೇಕಾದ ಮೂಲಭೂತ ಪರಿವರ್ತನೆಯ ಕೆಲಸ ಇದೆಂಬುದರ ಬಗ್ಗೆ ಎರಡು ಮಾತಿಲ್ಲ. ಆದರೆ ಧರ್ಮಕ್ಕೂ ಸಹ ತನ್ನದೇ ಆದ ಮಿತಿಗಳಿವೆ. ಒಂದೇ ಸಮುದಾಯದೊಳಗೆ ನ್ಯಾಯವನ್ನು ತರಲು ಮಾತ್ರ ಧರ್ಮವು ಸಹಾಯಮಾಡಬಲ್ಲದು. ಆದರೆ ವಿಭಿನ್ನ ಸಮುದಾಯಗಳ ನಡುವೆ ನ್ಯಾಯವನ್ನು ಸ್ಥಾಪಿಸಲು ಧರ್ಮಕ್ಕೆ ಸಾಧ್ಯವಿಲ್ಲ. ಅಮೇರಿಕಾದಲ್ಲಿ ನೀಗ್ರೋಗಳ ಮತ್ತು ಬಿಳಿಯರ ಮಧ್ಯೆ ನ್ಯಾಯವನ್ನು ಸ್ಥಾಪಿಸುವುದು ಧರ್ಮಕ್ಕೆ ಸಾಧ್ಯವಾಗಲಿಲ್ಲ. ಜರ್ಮನ್ನರ ಮತ್ತು ಫ್ರೆಂಚರ ನಡುವೆ ನ್ಯಾಯವನ್ನು ಸ್ಥಾಪಿಸುವುದು ಧರ್ಮಕ್ಕೆ ಸಾಧ್ಯವಾಗಲಿಲ್ಲ. ಯಾವುದೇ ಎರಡು ರಾಷ್ಟ್ರಗಳ ನಡುವೆ ನ್ಯಾಯವನ್ನು ಸ್ಥಾಪಿಸುವುದರಲ್ಲಿ ಧರ್ಮವು ಸೋತಿದೆ. ನ್ಯಾಯವನ್ನು ಸ್ಥಾಪಿಸಲು ಧರ್ಮವು ಕೊಡುವ ಕರೆಗಿಂತ ತನ್ನ ರಾಷ್ಟ್ರ ಅಥವಾ ಜನಾಂಗದ ಕರೆಯು ಹೆಚ್ಚು ಪ್ರಬಲವಾಗಿದೆ.

ರಾಷ್ಟ್ರಗಳ ನಡುವೆ ಧರ್ಮದ ಸೋಲು : ದಲಿತರು ಎರಡು ವಿಚಾರಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಮೊದಲನೆಯದಾಗಿ, ಸಾಮಾಜಿಕ ನ್ಯಾಯವನ್ನು ಸ್ಥಾಪಿಸುವ ಮಹತ್ಕಾರ್ಯವನ್ನು ಹಿಂದೂ ಧರ್ಮದಿಂದ ನಿರೀಕ್ಷಿಸುವುದು ವ್ಯರ್ಥ ಅಂತಹ ಕಾರ್ಯವನ್ನು ಇಸ್ಲಾಂ ಧರ್ಮದಿಂದ, ಕ್ರೈಸ್ತ ಧರ್ಮದಿಂದ ಹಾಗೂ ಬೌದ್ಧ ಧರ್ಮದಿಂದ ನಿರೀಕ್ಷಿಸಬಹುದು. ಇಡೀ ಹಿಂದೂ ಧರ್ಮವೇ ದಲಿತರ ವಿರುದ್ಧ ಅನ್ಯಾಯ ಮತ್ತು ಅಸಮಾನತೆಗಳನ್ನು ಗಟ್ಟಿಯಾಗಿ ಮೈಗೂಡಿಸಿಕೊಂಡಿದೆ. ಅಂತಹ ಧರ್ಮವು ನ್ಯಾಯಪರಿಪಾಲನೆಯ ಬೋಧನೆ ನೀಡುವುದೆಂದರೆ, ತನ್ನ ವಿರುದ್ಧ ತಾನೇ ಹೋದಂತಾಗುತ್ತದೆ. ಇಂತಹ ಅಸಾಧ್ಯ ಕೆಲಸವು ಸಾಧ್ಯವಾಗುತ್ತದೆ ಎನ್ನುವುದಾದರೆ, ಅದೊಂದು ಪವಾಡವೇ ಸರಿ. ಎರಡನೆಯದಾಗಿ, ನ್ಯಾಯ ಪರಿಪಾಲನೆಗೆ ಹಿಂದೂಧರ್ಮವು ಯೋಗ್ಯವಾಗಿದೆಯೆಂದು ಭಾವಿಸಿದರೂ ನ್ಯಾಯವನ್ನು ನೀಡುವುದು ಆ ಧರ್ಮಕ್ಕೆ ಸಾಧ್ಯವಿಲ್ಲ. ಹಿಂದೂಗಳಲ್ಲೇ ಇರುವ ಸಮಾಜಿಕ ಅಡಚಣೆಗಳಿಗಿಂತ ಹಿಂದೂಗಳಿಗೂ ದಲಿತರಿಗೂ ಇರುವ ಸಾಮಾಜಿಕ ಅಡಚಣೆಯು ಬಹಳ ದೊಡ್ಡದು ಧರ್ಮವು ಎಷ್ಟೇ ಪ್ರಭಾವಶಾಲಿಯಾಗಿರಬಹುದು. ಆದರೆ ಕೇವಲ ಒಂದೇ ಸಮುದಾಯದೊಳಗೆ ಅಥವಾ ಒಂದೇ ರಾಷ್ಟ್ರದೊಳಗೆ ಮಾತ್ರ ಅದು ಪರಿಣಾಮ ಬೀರಬಲ್ಲದು. ಆದರೆ ವಿಭಿನ್ನ ಸಮುದಾಯಗಳೊಳಗೆ ಅಥವಾ ವಿಭಿನ್ನರಾಷ್ಟ್ರಗಳೊಳಗೆ ಇರುವ ಅಡಚಣೆಗಳನ್ನು ಮುರಿಯಲು ಎಂತಹ ಶಕ್ತಿಶಾಲಿ ಧರ್ಮವೂ ವಿಫಲವಾಗುತ್ತದೆ.

ವಿಚಾರವಾದ ಮತ್ತು ಧರ್ಮವನ್ನು ನಂಬುವಂತೆ ಹೇಳುವ ಉಪದೇಶಗಳೊಂದಿಗೆ, ಇನ್ನೂ ಎರಡು ಸಂಗತಿಗಳನ್ನು ನಂಬುವಂತೆ ದಲಿತರಿಗೆ ಹಿಂದೂಗಳು ಬೋಧನೆ ಮಾಡುತ್ತಿದ್ದಾರೆ. ಜಾತಿ ಭೇದಗಳ ಎಲ್ಲೆಯನ್ನು ದಾಟಿರುವ ಶ್ರೀಮಂತ ಹಿಂದೂಗಳ ವಿಶಾಲ ಮನಸ್ಸನ್ನು ನಾವು ನಂಬಬೇಕಂತೆ ಮತ್ತು ದಲಿತರಂತೆ ಬಡವರಾಗಿರುವ ಹಿಂದೂ ಕಾರ್ಮಿಕರ ಸೋದರ ಭಾವನೆಯಲ್ಲಿ ನಾವು ನಂಬಿಕೆಯಿಡಬೇಕಂತೆ.

ಹಿಂದೂಗಳು ದಲಿತರ ಸಂಗಾತಿಗಳಲ್ಲ : ಏನನ್ನು ಬೇಕಾದರೂ ನಂಬಬಹುದು, ಆದರೆ ಶ್ರೀಮಂತ ವರ್ಗಗಳು ಧರ್ಮಪ್ರಭುಗಳಾಗಿರುತ್ತಾರೆಂಬುದನ್ನು ಮಾತ್ರ ನಂಬುವುದು ತಪ್ಪು. ಅವರಿಗೆ ತಮ್ಮದೇ ಆದ ಹಿತಾಸಕ್ತಿಗಳಿರುತ್ತವೆ. ಸಾರ್ವಜನಿಕ ಒಳಿತಿಗಾಗಿ ಅಥವಾ ವಿಶ್ವಮಾನ್ಯ ಮೌಲ್ಯಗಳಿಗಾಗಿ, ಈ ಶ್ರೀಮಂತ ವರ್ಗವು ತನ್ನ ಹಿತಾಸಕ್ತಿಗಳನ್ನು ತ್ಯಾಗ ಮಾಡುತ್ತದೆಯೆಂದು ನಿರೀಕ್ಷಿಸಲಾಗದು. ಇದಕ್ಕೆ ತದ್ವಿರುದ್ಧವಾಗಿ, ಈ ಶ್ರೀಮಂತರು ಸಾರ್ವಜನಿಕ ಹಿತಾಸಕ್ತಿಯ ಎದುರಿನಲ್ಲಿ ತಮ್ಮ ವೈಯಕ್ತಿಕ ಹಿತಾಸಕ್ತಿಗಳನ್ನು ಹೆಚ್ಚಿಸಿಕೊಳ್ಳುವುದರಲ್ಲೇ ಆಸಕ್ತರಾಗಿರುತ್ತಾರೆ. ಅಲ್ಲದೆ, ತಮಗಿರುವ ಹೆಚ್ಚುವರಿ ಸವಲತ್ತು-ಪ್ರತಿಷ್ಠೆಗಳಿಂದಾಗಿ ಸಮಾಜಕ್ಕೆ ಹೆಚ್ಚು ಅನುಕೂಲವಾಗಿದೆಯೆಂದು ತಿಳಿಯುತ್ತಾರೆ. ಮತ್ತು ತಮಗಿರುವ ಸವಲತ್ತುಗಳೂ ಸಹ ಸಮಾಜವು ತಮಗೆ ನ್ಯಾಯಬದ್ಧವಾಗಿ ಸಲ್ಲಿಸಬೇಕಾದ ಕಾಣಿಕೆಯೆಂದೇ ತಿಳಿಯುತ್ತಾರೆ. ಇಂತಹವರು ದಲಿತರಿಗೆ ಸಂಗಾತಿಗಳಾಗುವುದು ಅಸಾಧ್ಯ. ದಲಿತರು ಇತರ ಸಾಮಾನ್ಯ ಹಿಂದೂಗಳೊಂದಿಗೆ ಎದುರಿಸುವ ತಿಕ್ಕಾಟವನ್ನೇ ಶ್ರೀಮಂತ ಹಿಂದೂಗಳ ವಿರುದ್ಧವೂ ಎದುರಿಸಬೇಕಾಗುತ್ತದೆ. ಅವರು ದಲಿತರಿಗೆ ಎಂದಿಗೂ ಸಂಗಾತಿಗಳಾಗುವುದು ಅಸಾಧ್ಯ.

ವಂಚಕ ಕಮ್ಯುನಿಸ್ಟರು : ದಲಿತರು ಹಿಂದೂ ಕಾರ್ಮಿಕರಿಂದ ಸಹಾಯವನ್ನು ನಿರೀಕ್ಷಿಸುವುದೂ ಸಹ ಇದೇ ರೀತಿಯ ವ್ಯರ್ಥ ವಿಶ್ವಾಸವಾಗಿದೆ. ಹಿಂದೂ ಕಾರ್ಮಿಕರೊಂದಿಗೆ ದಲಿತರು ಒಂದುಗೂಡಲು ಇಂಡಿಯಾದ ಕಮ್ಯುನಿಸ್ಟರು ವಿನಂತಿಸಿಕೊಳ್ಳುತ್ತಿದ್ದಾರೆ. ಇತರ ಕಾರ್ಮಿಕರೊಂದಿಗೆ ಹಂಚಿಕೊಳ್ಳಲಾಗದ್ದನ್ನು ತಾನೊಬ್ಬನೇ ಕಬಳಿಸುವ ಸ್ವಾರ್ಥ ಬುದ್ಧಿಯು ಯಾವ ಕಾರ್ಮಿಕನಿಗೂ ಇರುವುದಿಲ್ಲವೆಂದು ಈ ಕಮ್ಯುನಿಸ್ಟರು ವಾದಿಸುತ್ತಿದ್ದಾರೆ. ಆದರೆ ಇದು ಸತ್ಯವೆ? ಯುರೋಪ್ ದೇಶಗಳಲ್ಲೂ ಸಹ, ಎಲ್ಲಾ ಕಾರ್ಮಿಕರೂ ಒಂದೇ ವರ್ಗಕ್ಕೆ ಸೇರಿದವರಲ್ಲ. ಅವರಲ್ಲಿಯೂ ಮೇಲ್ವರ್ಗ ಮತ್ತು ಕೆಳವರ್ಗಗಳೆಂಬ ವಿಭಿನ್ನ ವರ್ಗಗಳಿವೆ. ಈ ವರ್ಗಬೇಧವು ಅವರ ಸಾಮಾಜಿಕ ಧೋರಣೆಯಲ್ಲೂ ಕಾಣಿಸಿಕೊಂಡಿದೆ. ಅವರು ಬಯಸುವ ಸಾಮಾಜಿಕ ಬದಲಾವಣೆಯು ಅವರ ವರ್ಗ ಹಿನ್ನಲೆಗೆ ತಕ್ಕಂತೆಯೇ ಇದೆ. ಮೇಲ್ವರ್ಗದ ಕಾರ್ಮಿಕರು ಸುಧಾರಕರಾಗಿದ್ದಾರೆ ಮತ್ತು ಕೆಳವರ್ಗದವರು ಕ್ರಾಂತಿಕಾರಿಗಳಾಗಿದ್ದಾರೆ. ಆದ್ದರಿಂದ, ಎಲ್ಲಾ ಕಾರ್ಮಿಕರು ಒಂದೇ ರೀತಿಯಲ್ಲಿದ್ದಾರೆಂದು ಭಾವಿಸುವುದು ತಪ್ಪಾಗುತ್ತದೆ. ಇಂಡಿಯಾದ ಮಟ್ಟಿಗೆ ಈ ರೀತಿ ತಿಳಿಯುವುದಂತೂ ಬಲುದೊಡ್ಡ ತಪ್ಪಾಗುತ್ತದೆ. ಕಾರ್ಮಿಕರೆಲ್ಲರೂ ಒಂದೇ ನೆಲೆಗೆ ಬರುವುದಕ್ಕೆ ಇಲ್ಲಿ ಸಾಧ್ಯತೆಗಳೇ ಕಡಿಮೆಯಾಗಿವೆ. ದಲಿತ-ಕಾರ್ಮಿಕರೆಲ್ಲರೂ ಒಂದೇ ನೆಲೆಗೆ ಬರುವುದಕ್ಕೆ ಇಲ್ಲಿ ಸಾಧ್ಯತೆಗಳೆ ಕಡಿಮೆಯಾಗಿವೆ. ದಲಿತ-ಕಾರ್ಮಿಕರ ಮತ್ತು ಹಿಂದೂ ಕಾರ್ಮಿಕರ ನಡುವೆ ಸಾಮಾಜಿಕ ವೈಷಮ್ಯವಿರುವಾಗ, ಅವರ ನಡುವೆ ಆರ್ಥಿಕ ವಿಚಾರಕ್ಕಾಗಿ (ಸಂಬಳ, ಬೋನಸ್, ವಗೈರೆ) ಹೊಂದಾಣಿಕೆ ಮೂಡುವ ಸಾಧ್ಯತೆಗಳು ಅತ್ಯಲ್ಪ.

ಮರ್ಮತಿಳಿಯುವ ಶಿಕ್ಷಣ : ದಲಿತರು ಯಾವುದಕ್ಕಾಗಿ ಹೋರಾಡಬೇಕು? ಮೊದಲನೆಯದಾಗಿ, ಶಿಕ್ಷಣಕ್ಕಾಗಿ ಹಾಗೂ ಅರಿವಿನ ಪ್ರಚಾರಕ್ಕಾಗಿ ಹೋರಾಡಬೇಕಾಗಿದೆ. ಜನಸಮೂಹದ ನಡುವೆ ವಿಷಗಾಳಿಯಂತೆ ಹರಡಿರುವ ಸುಳ್ಳು ನಂಬಿಕೆಗಳೇ ಸಿರಿವಂತ ವರ್ಗಗಳ ಅಧಿಕಾರಶಕ್ತಿಗೆ ಆಧಾರವಾಗಿವೆ. ಈ ಸುಳ್ಳು ನಂಬಿಕೆಗಳನ್ನೇ ನಾವು 'ಸತ್ಯ'ವೆಂದು ನಂಬಿರುವ ತನಕ ಸರ್ವಾಧಿಕಾರದ ವಿರುದ್ಧ ಪ್ರತಿಭಟಿಸುವುದೂ ಅಸಾಧ್ಯ. ಸರ್ವಾಧಿಕಾರಿಗಳಿಗೆ ಭದ್ರಕೋಟೆಯಂತಿರುವ ಸುಳ್ಳು ನಂಬಿಕೆಗಳು ನಮ್ಮಲ್ಲಿ ಉಳಿದಿರುವ ತನಕ ಯಾವ ಕ್ರಾಂತಿಯೂ ಸಾಧ್ಯವಿಲ್ಲ. ಯಾವುದೇ ಅಸಮಾನತೆಯ ವ್ಯವಸ್ಥೆಯು ಕೆಲವು ಅನೀತಿಯುತ ಸುಳ್ಳುಗಳ ಬಲದಿಂದಲೇ ನಿಂತಿರುತ್ತದೆ. ಆದ್ದರಿಂದ ಯಾವುದೇ ಅನ್ಯಾಯ, ಅಸಮಾನತೆ ಅಥವಾ ಶೋಷಣೆಯನ್ನು ಎದುರಿಸುವುದಕ್ಕೆ ಮೊದಲು, ಅಂತಹ ಶೋಷಣಾ ವ್ಯವಸ್ಥೆಯ ಅಡಿಯಲ್ಲಿರುವ ಅನೀತಿಯುತ ಸುಳ್ಳುಗಳನ್ನು ಬಯಲು ಮಾಡಬೇಕು ಮತ್ತು ಅವುಗಳು ಏತಕ್ಕಾಗಿ ಹುಟ್ಟಿಕೊಂಡಿವೆ ಎಂಬುದನ್ನು ಸ್ಪಷ್ಟವಾಗಿ ಅರಿತುಕೊಳ್ಳಬೇಕು. ಈ ಮರ್ಮವನ್ನು ಅರಿಯುವುದು ಶಿಕ್ಷಣದಿಂದ ಸಾಧ್ಯ.

"ಅಧಿಕಾರ"ದಿಂದ "ಅಧಿಕಾರ"ದ ನಾಶ : ಎರಡನೆಯದಾಗಿ, ದಲಿತರು ಅಧಿಕಾರ ಶಕ್ತಿಯನ್ನು ಪಡೆಯಲು

ಕಲಾಕೃತಿ : ಪೀಟರ್ ಎ. ಲೂಯಿಸ್

ಹೋರಾಡಬೇಕಿದೆ. ದಲಿತರ ಹಾಗೂ ಹಿಂದೂಗಳ ನಡುವೆ ಪರಸ್ಪರ ಹಿತಾಸಕ್ತಿಗಳ ಸಂಘರ್ಷವಿದೆಯೆಂಬುದನ್ನು ನಾವು ಮರೆಯಕೂಡದು. ವೈಚಾರಿಕತೆಯು ಬೆಳೆಯುವುದರಿಂದಾಗಿ, ಈ ಸಂಘರ್ಷದ ಕಾವನ್ನು ತಗ್ಗಿಸಬಹುದೇ ವಿನಃ, ಸಂಘರ್ಷದ ಅವಶ್ಯಕತೆಯನ್ನು ಸಂಪೂರ್ಣವಾಗಿ ತೊಡೆದುಹಾಕುವುದು ಅಸಾಧ್ಯ. ಈ ಸಂಘರ್ಷವು ನಡೆದಿರುವುದೇ "ಅಧಿಕಾರ" ಸ್ವಾಧೀನಕ್ಕಾಗಿ. ಒಬ್ಬರ ಹಿತಾಸಕ್ತಿಯು ಮತ್ತೊಬ್ಬರ ಹಿತಾಸಕ್ತಿಯ ಮೇಲೆ ಧಾಳಿ ಮಾಡುವುದಕ್ಕೆ "ಅಧಿಕಾರ"ವೇ ಕಾರಣ. ಇದು ವಾಸ್ತವ ಸಂಗತಿಯಾಗಿರುವಾಗ, ಹಿಂದೂಗಳ 'ಅಧಿಕಾರ ಶಕ್ತಿ'ಯನ್ನು ನಾಶಮಾಡಬೇಕಾದರೆ ನಾವು 'ಅಧಿಕಾರ ಶಕ್ತಿ'ಯನ್ನು ಗಳಿಸಿಕೊಳ್ಳುವುದು ಅನಿವಾರ್ಯವಾಗಿದೆ.

"ಅಧಿಕಾರ ಶಕ್ತಿ"ಯನ್ನು ಬಳಸುವಾಗ ಅನುಸರಿಸಬೇಕಾದ ನೀತಿ-ಅನೀತಿಯ ಬಗ್ಗೆ ಭಿನ್ನಾಭಿಪ್ರಾಯಗಳಿರಬಹುದು. ಆದರೆ, ನಾವೂ ಸಹ "ಅಧಿಕಾರ ಶಕ್ತಿ"ಯನ್ನು ಗಳಿಸಿಕೊಳ್ಳದೆ ಶತ್ರುವಿನ "ಅಧಿಕಾರಶಕ್ತಿ"ಯನ್ನು ಧ್ವಂಸ ಮಾಡುವುದು ಅಸಾಧ್ಯ ಎನ್ನುವುದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. "ಅಧಿಕಾರ ಶಕ್ತಿ"ಯೆಂಬುದು ಹಣಕಾಸಿನ ಬಲವೇ ಆಗಿರಬಹುದು ಅಥವಾ ಸೇನಾಶಕ್ತಿಯು (ಮಿಲಿಟರಿ ಶಕ್ತಿ), ಇಂದು ಶಕ್ತಿಯೇ ಅಲ್ಲ. ಏಕೆಂದರೆ ಸೇನಾಶಕ್ತಿಯು ಸ್ವತಂತ್ರ ಶಕ್ತಿಯಲ್ಲ. ಕಾರ್ಮಿಕ ವರ್ಗದ ಆರ್ಥಿಕ ಶಕ್ತಿಯು ಎಂತಹ ಶಕ್ತಿಯೆಂಬುದು ಮುಷ್ಕರ ಕಾಲದಲ್ಲಿ ತಿಳಿಯುತ್ತದೆ. ಕಾರ್ಮಿಕ ವರ್ಗದ ಒಂದು ಭಾಗವಾಗಿರುವ ದಲಿತರಿಗೆ ಅದಕ್ಕಿಂತ ಹೆಚ್ಚಿನ ಆರ್ಥಿಕ ಶಕ್ತಿಯಿಲ್ಲ. ಆದರೆ ಕಾರ್ಮಿಕ ವರ್ಗದ ಹಿತವನ್ನು ರಕ್ಷಿಸಲು ಈ ಶಕ್ತಿಯು ಏನೇನೂ ಸಾಲದು. ಕಾರ್ಮಿಕರ ಆರ್ಥಿಕ ಶಕ್ತಿಯನ್ನು ಕಾಯಿದೆಯ ಮೂಲಕ ಕುಗ್ಗಿಸಲಾಗಿದೆ. ಮತ್ತು ಈ ಶಕ್ತಿಯು ಕೋರ್ಟು-ಕಾನೂನು-ಮಿಲಿಟರಿ ಆಡಳಿತಗಳಿಗೆ ಒಳಪಟ್ಟಿದೆ. ಹದ್ದು ಮೀರಿದರೆ, ಈ ಶಕ್ತಿಯ ವಿರುದ್ಧ ಸೇನೆಯನ್ನೂ ಬಳಸಬಹುದಾಗಿದೆ. ಒಟ್ಟು ಕಾರ್ಮಿಕ ವರ್ಗದ ಕತೆ ಇದಾದರೆ, ದಲಿತ-ಕಾರ್ಮಿಕರ ಮುಷ್ಕರ ಶಕ್ತಿಯು ಮತ್ತಷ್ಟು ಶೋಚನೀಯವಾಗಿದೆ.

ಆದ ಕಾರಣ, ದಲಿತರು ಸಾಧ್ಯವಾದಷ್ಟು ರಾಜಕೀಯ ಶಕ್ತಿಯನ್ನು ಗಳಿಸಿಕೊಳ್ಳುವುದು ಅತ್ಯಂತ ಅನಿವಾರ್ಯವಾಗಿದೆ. ಆರ್ಥಿಕ ಮತ್ತು ಸಾಮಾಜಿಕ ವಲಯಗಳಲ್ಲಿ ದಲಿತರಿಗೆ ಸೀಮಿತ ಶಕ್ತಿಯಿರುವುದರಿಂದ, ರಾಜಕೀಯ ವಲಯದಲ್ಲೂ ದಲಿತರಿಗೆ ಅತಿ ಹೆಚ್ಚಿನ ಶಕ್ತಿ ಸಿಗುವುದು ಕಷ್ಟವಾಗಬಹುದು. ಹಿಂದೂಗಳ ಹಿಡಿತದಲ್ಲಿರುವ ವಿಪರೀತ ಸಾಮಾಜಿಕ-ಆರ್ಥಿಕ ರಾಜಕೀಯ ಶಕ್ತಿಗೆ ಹೋಲಿಸಿದಲ್ಲಿ ದಲಿತರು ಗಳಿಸಿಕೊಳ್ಳುವ ರಾಜಕೀಯ ಶಕ್ತಿಯು ಅತ್ಯಲ್ಪ ಪ್ರಮಾಣದ್ದಾಗಿರುತ್ತದೆ.

ಆದರೆ, ಹಿಂದೂಗಳ ಬೆಂಬಲದಿಂದ ದಲಿತರು ರಾಜಕೀಯ ಅಧಿಕಾರವನ್ನು ಪಡೆದಲ್ಲಿ, ಅದೆಷ್ಟೇ ದೊಡ್ಡ ಪ್ರಮಾಣದ ಶಕ್ತಿಯಾಗಿರಲಿ, ಅದರಿಂದ ಯಾವ ಪ್ರಯೋಜನವೂ ಇಲ್ಲ. ಏಕೆಂದರೆ ಹಿಂದೂಗಳ ರಾಜಕೀಯ ಶಕ್ತಿಯು ಅವರ ಅಗಾಧವಾದ ಆರ್ಥಿಕ-ಸಾಮಾಜಿಕ ಹಿತಾಸಕ್ತಿಯನ್ನು ಆಧರಿಸಿದೆ ಮತ್ತು ಹಿಂದೂಗಳ ಆರ್ಥಿಕ ಸಾಮಾಜಿಕ ಹಿತಾಸಕ್ತಿಗಳು ದಲಿತರ ಹಿತಾಸಕ್ತಿಗಳಿಗೆ ತದ್ವಿರುದ್ಧವಾಗಿದೆ. ●

'ಬ್ರಾಹ್ಮಣವಾದ' ಮತ್ತು ದಲಿತ ಸಮಸ್ಯೆ

> **ಕರ್ನಾಟಕದ ಗಾಂಧಿ ಅನುಯಾಯಿಗಳ ಸ್ವರೂಪ ಗುಣ ಲಕ್ಷಣ ಇಂಥ ಗೋರೂರರಿಂದ ತುಂಬ ಚೆನ್ನಾಗಿ ಪ್ರಕಟವಾಗುತ್ತದೆ. ಹರಿಜನೋದ್ಧಾರ ಎಂಬ ಅಸ್ತ್ರ ಹರಿ ಜನರ ವೈರಿಗಳ ಕೈಗೇ ಸಿಕ್ಕುವಂತಾದುದು, ಗಾಂಧಿ ಮಾರ್ಗದ ಅಧ್ಭುತ ವ್ಯಂಗ್ಯ. ಅಂಬೇಡ್ಕರು ಅವರು ಸೃಷ್ಟಿಸಿದ್ದ ನೈತಿಕ ಒತ್ತಡದ ಪರಿಣಾಮವಾಗಿ ವೈದಿಕಶಾಹಿ, ಗಾಂಧಿ ಹರಿಜನರ ಉದ್ಧಾರ ಪ್ರಶ್ನೆ ಎತ್ತಿಕೊಂಡು ದೇಶ ಮಟ್ಟದಲ್ಲಿ ಅಲ್ಲೋಲ ಕಲ್ಲೋಲ ಉಂಟು ಮಾಡಿದ್ದರು. ಸಾಂಪ್ರದಾಯಿಕ ಭಾರತೀಯ ಮನಸ್ಸಿಗೆ ದೊಡ್ಡ ಪೆಟ್ಟು ಕೊಟ್ಟಿದ್ದರು. ಸ್ವತಃ ದಲಿತರಾಗಿ ಬಾಬಾ ಸಾಹೇಬರು ದಲಿತರ ಪ್ರಶ್ನೆ ಎತ್ತಿಕೊಂಡದ್ದಕ್ಕೂ, ಗಾಂಧೀ ಆ ಪ್ರಶ್ನೆಯನ್ನು ಎತ್ತಿಕೊಂಡದ್ದಕ್ಕೂ ಅಂತರವಿತ್ತು.**
>
> **○ ಎಸ್.ಎಸ್. ಹಿರೇಮಠ**

ನವೋದಯ ಕಾಲದ ಬ್ರಾಹ್ಮಣ ಲೇಖಕರ 'ಉದಾರವಾದಿ' ಎಂದು ಹೇಳಲಾಗುವ ದೃಷ್ಟಿಕೋನದ ಒಂದು ನಿದರ್ಶನವನ್ನು "ಶ್ರೀ ರಾಮಾನುಜಾಚಾರ್ಯರೂ ಹರಿಜನರೂ" ಎಂಬ ಗೊರೂರು ರಾಮಸ್ವಾಮಿ ಅಯ್ಯಂಗಾರರ ಲೇಖನದಲ್ಲಿ ಕಾಣಬಹುದು. ಈ ಲೇಖನ 1941ರಲ್ಲಿ ಪ್ರಕಟವಾದ ಮೊಟ್ಟ ಮೊದಲ ಸಂಭಾವನಾ ಗ್ರಂಥದಲ್ಲಿ ಬಂದಿದೆ. ಆ ಗ್ರಂಥದ ಹೆಸರೇ "ಸಂಭಾವನೆ" ಬೆಳ್ಳೂರು ಮೈಲಾರ ಶ್ರೀಕಂಠಯ್ಯನವರಿಗೆ (ಬಿ.ಎಂ.ಶ್ರೀ) ಅವರ ಶಿಷ್ಯರು, ಮಿತ್ರರು ಅರ್ಪಿಸಿದ ಪ್ರಬಂಧ ಸಂಪುಟ. ತ.ಸಾ.ಪ. ಪ್ರಕಟಿಸಿದೆ.

ಮೂಲತಃ ಕಥೆಗಾರರಾದ ಗೊರೂರು ಗಾಂಧಿವಾದಿ ಎಂದು ಖ್ಯಾತರು. ಗಾಂಧಿ ಆಶ್ರಮದಲ್ಲಿ ಕೆಲವು ದಿನ ಇದ್ದು ಬಂದವರು. ಇವರ 'ಗಾಂಧೀತನ'ದ ಒಂದು ಮಾದರಿಯನ್ನು ಬೆಂಗಳೂರಿನ ಬಂಡಾಯದ ಒಂದು ಶಿಬಿರದಲ್ಲಿ ಕಾಣುವ ಅವಕಾಶ ಒದಗಿತ್ತು. ಇದರ ವಿವರಗಳನ್ನು ನಂತರ, ನೋಡುವ.

ಈಗ ಲೇಖನದ ವಿಷಯ. ಕತೆಗಾರ ಗೊರೂರು ತಾವು ಮೇಲುಕೋಟೆಯಲ್ಲಿ ಕಂಡ ಜಾತ್ರೆಯ ವಿವರಗಳನ್ನು ಕೊಟ್ಟಿದ್ದಾರೆ. 'ಮೇಲುಕೋಟೆ'ಯ ಜಾತ್ರೆಯಲ್ಲಿ ಜನರು 'ಅಮೃತಪಾನ' ಮಾಡಿದವರಂತೆ ಉತ್ಸಾಹದಿಂದ ತಿರುಗುತ್ತಿದ್ದರಂತೆ. ಅಲ್ಲಿಯ ವೈದಿಕ ಮಹಾಶಯರ 'ತೇಜಸ್ಸನ್ನು' "ಠೀವಿಯನ್ನು" ನೋಡಿದರೆ "ನಮಗೇ ಭಯವಾಗುವಾಗ", "ಬ್ರಾಹ್ಮಣರಿಂದ ನಾಲ್ಕು ಮಾರು ಆರು ಮಾರು ದೂರದಲ್ಲಿರಬೇಕಾದ ಆದಿ ಕರ್ನಾಟಕರ, ಆದಿ ದ್ರಾವಿಡರ ಎದೆ ನಡುಗುವುದರಲ್ಲಿ ಸಂದೇಹವೇನು?" ಎನ್ನುತ್ತಾರೆ. ಈ ಬ್ರಾಹ್ಮಣರು ಹೇಳುವ ತಮಿಳು ವೇದ, ಸಂಸ್ಕೃತ ವೇದ ಕೇಳಿದರೆ, "ಇದೇ ಬ್ರಹ್ಮ ಸಭೆಯಂತೆ ತೋರುತ್ತಿರುವುದು".

ಹೀಗೆ ಯಾದವಗಿರಿ (ಮೇಲುಕೋಟೆ) ನಂದನವನವಾಗಿದೆ. ರಂಭೆ, ಊರ್ವಶಿ, ಮೇನಕೆ, ರತಿಯರಂತೆ ಸ್ತ್ರೀಯರಿದ್ದರೆ "ಎಲ್ಲೆಲ್ಲೂ ಆನಂದ" (ಪು.ತಿ.ನ. ಅವರ ಪ್ರಸಿದ್ಧ ಪದ್ಯವೊಂದು ಇಂಥದೇ ಇದೆ) ಆದರೆ "ಹಾ! ಇದೇನು? ದೂರದಲ್ಲಿ ಹರಕು ಬಟ್ಟೆಗಳನ್ನು ತೊಟ್ಟು ಬಾಡಿದ ಮುಖವುಳ್ಳವರಾಗಿ ಈ ಕಡೆಯೇ ಆಶೆಯಿಂದ ದೈನ್ಯದಿಂದ ನೋಡುತ್ತಿರುವ ಇವರು ಯಾರು? ಈ ಗಂಡಸರ ಮುಖದಲ್ಲಿ ಯಾಕೆ ಕಳೆಯಿಲ್ಲ? ಈ ಮಕ್ಕಳ ಮುಖದಲ್ಲಿ ಯಾಕೆ ನಗುವಿಲ್ಲ? ಈ ಹೆಂಗಸರಿಗೆ ಯಾಕೆ ಹೊಸ ಸೀರೆಗಳಿಲ್ಲ?" ವೈದಿಕರು ಇವರನ್ನು "ಮೃಗಗಳನ್ನು ನೋಡುವಂತೆ" ನೋಡುತ್ತ ಕೋಪಗೊಂಡರು. ದೇವಸ್ಥಾನದ ಪಾರುಪತ್ತೆಗಾರರು ಇವರ ಹತ್ತಿರ ಬಂದು "ಇವೊತ್ತು ಯಾಕೆ ಬಂದಿರಿ? ನೀವು ಬರಬೇಕಾದುದು ನಾಳೆ" ಎಂದರು. ಆದಿ ಕರ್ನಾಟಕರು "ಗೊತ್ತು ಬುದ್ಧಿ ನಾಳೆ. ಆದರೆ ಇವೊತ್ತು ದೂರದಿಂದ ನೋಡೋಣವೆಂದು ಬಂದೆವು. ನೆಂಟರು ಬಂದಿದ್ದರು", ಎಂದರು. ಪಾರುಪತ್ತೆಗಾರರು "ನೆಂಟರೋ, ಪಂಟರೋ ದೂರದಿಂದ ತಾನೆ ನೀವು ಯಾಕೆ ನೋಡಬೇಕು? ನಿಮಗೆ ಮೂರು ದಿನ ಕೊಟ್ಟದ್ದು ಮೊದಲು ತಪ್ಪು" ಎಂದರು. ಆದಿ ಕರ್ನಾಟಕರು "ಹಾಗೆ, ಹೇಳಬೇಡ ಬುದ್ಧಿ ವರುಷಕ್ಕೆ ಮೂರು ದಿನ ನಮ್ಮಪ್ಪನ್ನ ನೋಡದಿದ್ದರೆ ನಾವು ಬದುಕುತೇವಾ?" ಎಂದರು. ಪಾರುಪತ್ತೆಗಾರರು "ಬದುಕದೇ ಸಾಯುವುದಕ್ಕೆ ನಿಮಗೆ ಆಗಿರುವುದೇನು?" ಎಂದರು.

ಹೇಸಿಗೆ ಬರುವ ಮೇಲ್ ಜಾತಿಯ ನೀಚ ಮನಸ್ಸುಗಳ ಚಿತ್ರಣ ಇದಕ್ಕಿಂತ "ಸುಂದರ"ವೇನಿರಲಾರದು. ಎಷ್ಟೊಂದು ನಿರ್ಭಿಡೆಯಿಂದ ತಮ್ಮ ಕೃತ್ಯವನ್ನು ಬಯಲು ಗಿಡುತ್ತಿದ್ದಾರೆ ನೋಡಿ ಅಯ್ಯಂಗಾರರು! ನಗ್ನ ಸತ್ಯವನ್ನು, ವಾಸ್ತವ ಚಿತ್ರವನ್ನು ಬಿಡಿಸಿಡುತ್ತಿರುವುದಕ್ಕೆ ಅವರಿಗೆ ನಾವು ಕೃತಜ್ಞರಾಗಿರಬೇಕು. ರಾಮಾನುಜಾಚಾರ್ಯರು ಕೊಟ್ಟ ಈ ಮೂರು ದಿನಗಳ ಪರವಾನಿಗೆಯನ್ನೆ ತಪ್ಪೆನ್ನುತ್ತಿರುವ ಈ ಪಾರು ಪತ್ತೆಗಾರ ಮಹಾಶಯನ ಧಿಮಾಕನ್ನು ಗಮನಿಸಿ.

ಮರುದಿನ ಈ ಲೇಖಕ ಕಲ್ಯಾಣಿಗೆ ಹೋಗುತ್ತಾನೆ. ಅಲ್ಲಿ ಬ್ರಾಹ್ಮಣ ಪುರುಷ, ಸ್ತ್ರೀಯರ ಜತೆ ಹರಿಜನರೂ ಸಂಭ್ರಮದಿಂದ ಸ್ನಾನ ಮಾಡುತ್ತಿರುವ ದೃಶ್ಯ. 10 ಸಾವಿರಕ್ಕೂ ಹೆಚ್ಚು ಕರಿ ಜನರು ಸೇರಿದ್ದರೆಂದು ದಾಖಲಿಸುತ್ತಾರೆ. "ಜಗತ್ತಿನ ಹರಿಜನರೆಲ್ಲಾ ಇಲ್ಲಿ ಸೇರಿದಂತೆ ಕಾಣುತ್ತದೆ".

ವೈದಿಕರ ಮುಖಗಳಲ್ಲಿ ನಿನ್ನೆ ಕಂಡ ತಿರಸ್ಕಾರ ಈಗ ಇಲ್ಲ. ಅವರ ಮಗ್ಗುಲಲ್ಲೇ ಹರಿಜನರು ಕಲ್ಯಾಣಿಯಲ್ಲಿ ಸ್ನಾನ ಮಾಡಿ ನಾಮ ಧರಿಸುತ್ತಿದ್ದಾರೆ. ದೇವಸ್ಥಾನದ ಒಳಗೆ ಪ್ರವೇಶಿಸುವುದಕ್ಕೆ ಇಂದು ಅವರಿಗೆ ಮುಕ್ತ ಅವಕಾಶ. 2 ಫರ್ಲಾಂಗ್ ದೂರ ನಿಂತು ನೋಡಲಿಕ್ಕೂ ಧೈರ್ಯವಿಲ್ಲದ ಈ ದೇವಸ್ಥಾನ ಇಂದು "ತಡೆಯುವವರು ಯಾರೂ ಇಲ್ಲ" ಅರ್ಚಕ ಅವರ ಕೈಯಿಂದ ಹಣ್ಣು ಕಾಯಿ ತೆಗೆದುಕೊಳ್ಳುತ್ತಾನೆ. ಅವರಿಗೆ ದೇವರ ತೀರ್ಥ ಕೊಡುತ್ತಾನೆ. ಎರಡಾಣೆ, ನಾಕಾಣೆ ಹಾಕಿದವರ ಕೊರಳಿಗೆ "ಭಗವಂತನ ಮಾಲೆ ಹಾಕುತ್ತಾನೆ".

ಇದು ಒಂದು ಚಿತ್ರ. ಇನ್ನೊಂದು ರಥೋತ್ಸವದ್ದು. ಹರಿಜನರು ಬರದೆ ನರಸಿಂಹಸ್ವಾಮಿ ರಥ ಮುಲುಕಲಾರದು. ಹರಿಜನರು ಬರುವುದು ತಡವಾಗುತ್ತಿದೆ ಎಂದು ದೇಗುಲದ ಧರ್ಮದರ್ಶಿ ಹೊಲಗೇರಿಗೆ ಹೋಗಿ ("ಉಳಿದ ಕಾಲದಲ್ಲಿ ಅವನನ್ನು ಹೊಲಗೇರಿಗೆ ಸೇರಿಸುವುದಿಲ್ಲ. ಆದರೆ ಈವೊತ್ತು ಯಾವ ನಿಯಮವೂ ಇಲ್ಲ") ಹೊಲೆಯರ ಕೈಹಿಡಿದೆಳೆಯುತ್ತ ಕರೆ ತರುತ್ತಾನೆ. ಅವರು ವಾದ್ಯದ ಸಮೇತ ಮೆರವಣಿಗೆಯಲ್ಲಿ ಬರುತ್ತಾರೆ. ರಥದ ಸುತ್ತ ಮೂರು ಸುತ್ತು ಪ್ರದಕ್ಷಿಣೆ ಹಾಕುತ್ತಾರೆ". "ಆವೊತ್ತಿನ ಮಟ್ಟಿಗೆ ಎಲ್ಲರಂತೆ ಹರಿಜನರೂ ಮನುಷ್ಯರೇ".

ಎಂಥ ಪ್ರತಿಷ್ಠೆ, ಜಂಭ ನೋಡಿ ಈ ವರ್ಣನೆಯಲ್ಲಿ. "ಅವರೂ ಮನುಷ್ಯರೇ?" ಎಂದು ಒಪ್ಪಿಕೊಳ್ಳಲಿಕ್ಕೂ ಈ ಜನ ಸರ್ವಥಾ ತಯ್ಯಾರಿಲ್ಲ! ಹಾಗೆಂದು ನಾಚಿಕೆ ಬಿಟ್ಟು ಬರೆಯುತ್ತಾರೆ ಕೂಡ. "ಆಗಿನ ಸಮಾಜ ಸ್ಥಿತಿಯಲ್ಲಿ ಹರಿಜನರನ್ನು ಮನುಷ್ಯರೆಂದೇ ಯಾರೂ ಪರಿಗಣಿಸಿರಲಿಲ್ಲ".

ಗೊರೂರರಿಗೆ "ರಾಮಾನುಜಾಚಾರ್ಯರು ಮನುಷ್ಯ ಸಮಾಜಕ್ಕೆ ಮಾಡಿದ ಮಹದುಪಕಾರವಾಗಿ ಈ ಹರಿಜನೋದ್ಧಾರ" ಕಾಣಿಸುತ್ತದೆ. ಹರಿಜನರು ಸ್ವತಃ ತಾವು ಮನುಷ್ಯರೆಂದೇ ಒಪ್ಪಿಕೊಂಡಿರಲಿಲ್ಲವೆಂದು ಅಪ್ಪಣೆ ಕೊಡಿಸುತ್ತಾರೆ ಗೊರೂರು. ಹರಿಜನರ ಮಾರಿ ಜಾತ್ರೆ, ಕೋಣ, ಕುರಿ, ಬಲಿಗಳನ್ನು ಗೇಲಿ ಮಾಡುತ್ತ, ಅವರ ರಣದೇವತೆ 'ಲಂಚೆ ಕೋರ ದೇವತೆ' ಎಂದು ಹೀಯಾಳಿಸುತ್ತಾರೆ. "ಅನೇಕ ಶತಮಾನಗಳಿಂದ ನಡೆದು ಬಂದ ಪದ್ಧತಿಗಳನ್ನು ಬದಲಿಸಲು ಸಣ್ಣಪುಟ್ಟ ಸುಧಾರಕರಿಂದ ಸಾಧ್ಯವಿಲ್ಲ. ಆಚಾರ್ಯರಾಗಿರಬೇಕು" ಎಂದು ಹೇಳುತ್ತ ರಾಮಾನುಜರನ್ನು ಗಾಂಧಿ ರವೀಂದ್ರರ ಜತೆ ಹೋಲಿಸಿ ಲೇಖನ ಮುಗಿಸುತ್ತಾರೆ.

ಬೆಂಗಳೂರಿನಲ್ಲಿ ಬಂಡಾಯ ಸಂಘಟನೆ ಏರ್ಪಡಿಸಿದ್ದ ಒಂದು ಸಭೆಯಲ್ಲಿ (1985?) ಗೊರೂರು ಭಾಷಣಕಾರರು.

ಚರ್ಚೆಗೆ ಅವಕಾಶವಿದ್ದುದರಿಂದ ನಾನು "ಇಷ್ಟೆಲ್ಲ ಹೇಳುತ್ತೀರಿ ಜುಟ್ಟು ಏಕೆ ಬಿಟ್ಟಿದ್ದೀರಿ?" ಎಂದು ಕೇಳಿದೆ. "ಹಜಾಮ ಕೈತಪ್ಪಿ ಬಿಟ್ಟಿದ್ದಾನೆ" ಎಂದು ನಗಾಡಿದರು. ಜನಿವಾರದ ಬಗೆಗೂ ಇಂಥದೇ ತಮಾಷೆಯಲ್ಲಿ ತೇಲಿ ಹೋಗಿದ್ದರು.

ಕರ್ನಾಟಕದ ಗಾಂಧಿ ಅನುಯಾಯಿಗಳ ಸ್ವರೂಪ ಗುಣ ಲಕ್ಷಣ 'ಇಂಥ' ಗೊರೂರರಿಂದ ತುಂಬ ಚೆನ್ನಾಗಿ ಪ್ರಕಟವಾಗುತ್ತದೆ. ಹರಿಜನೋದ್ಧಾರ ಎಂಬ ಅಸ್ತ್ರ ಹರಿಜನರ ವೈರಿಗಳ ಕೈಗೇ ಸಿಕ್ಕುವಂತಾದುದು, ಗಾಂಧಿ ಮಾರ್ಗದ ಅದ್ಭುತ ವ್ಯಂಗ್ಯ. ಅಂಬೇಡ್ಕರ್ ಅವರು ಗಾಂಧಿಯವರನ್ನು ಟೀಕಿಸುತ್ತಿದ್ದುದರಲ್ಲಿ ಅರ್ಥವಿದೆ ಎಂದು ಈ ಬಗೆಯ ಹಿನ್ನೆಲೆಯಿಂದ ಸ್ಪಷ್ಟ.

ಗೊರೂರು ಮೇಲೆ ಹೇಳಿದ ಲೇಖನದಲ್ಲಿ ಬರೆಯುತ್ತಾರೆ-"ಶಂಕರಾಚಾರ್ಯರ ಬುದ್ಧಿಶಕ್ತಿಯೂ, ರಾಮಾನುಜರ ಹೃದಯ ವೈಶಾಲ್ಯವೂ ಇರುವ ಧರ್ಮವೇ ನಿಜವಾದ ಧರ್ಮ, ಎಂದು ಪಾಶ್ಚಾತ್ಯರು ಒಬ್ಬರು ಹೇಳಿರುವುದು ನಿಜ" ಇಂಥ 'ಬ್ರಾಹ್ಮಣಿಸಂ' ನವೋದಯ ಕಾಲದ ಒಂದು ಚಿಕ್ಕ ಮಾದರಿ.

ಅಂಬೇಡ್ಕರು ಅವರು ಸೃಷ್ಟಿಸಿದ್ದ ನೈತಿಕ ಒತ್ತಡದ ಪರಿಣಾಮವಾಗಿ ವೈದಿಕಶಾಹಿ, ಗಾಂಧಿ ಹರಿಜನರ ಉದ್ಧಾರ ಪ್ರಶ್ನೆ ಎತ್ತಿಕೊಂಡು ದೇಶ ಮಟ್ಟದಲ್ಲಿ ಅಲ್ಲೋಲ ಕಲ್ಲೋಲ ಉಂಟು ಮಾಡಿದ್ದರು. ಸಾಂಪ್ರದಾಯಿಕ ಭಾರತೀಯ ಮನಸ್ಸಿಗೆ ದೊಡ್ಡ ಪೆಟ್ಟು ಕೊಟ್ಟಿದ್ದರು. ಸ್ವತಃ ದಲಿತರಾಗಿ ಬಾಬಾ ಸಾಹೇಬರು ದಲಿತರ ಪ್ರಶ್ನೆ ಎತ್ತಿಕೊಂಡದ್ದಕ್ಕೂ, ಗಾಂಧೀ ಆ ಪ್ರಶ್ನೆಯನ್ನು ಎತ್ತಿಕೊಂಡದ್ದಕ್ಕೂ ಅಂತರವಿತ್ತು.

ಗಾಂಧಿ ಬ್ರಾಹ್ಮಣರನ್ನು ಮೊದಲು ಮಾಡಿಕೊಂಡು ತುಂಬ ವಿಸ್ತಾರವಾದ ಜನ ಸಮುದಾಯದ ಮೇಲೆ ಪ್ರಭಾವ ಬೀರಿದ್ದರು. ಬ್ರಿಟೀಷರ ವಿರುದ್ಧದ ಹೋರಾಟದ ಪ್ರಬಲ ಕಾರಣವನ್ನು ಇಟ್ಟುಕೊಂಡು ಅವರು ಹೂಡಿದ್ದ ನಾಟಕದ ಬೇರೆ ಬೇರೆ ದೃಶ್ಯಗಳಿವು. ಇಂಥವುಗಳ ಬಗ್ಗೆ ಗಾಂಧಿ ಬೆಂಬಲಿಗರಲ್ಲಿಯೇ ಸಹಮತವಿರಲಿಲ್ಲ. ಆದರೆ ಈ ವೈರುಧ್ಯಗಳು ಸ್ವಾರಸ್ಯಕರ. ಚರಿತ್ರೆಯ ವಿದ್ಯಾರ್ಥಿಗೆ ಅಧ್ಯಯನ ಯೋಗ್ಯ ವಸ್ತು.

ರಾಮಾನುಜರು (ಕ್ರಿ.ಶ. 1130) ತಮ್ಮ ಕಾಲದಲ್ಲಿ, ತಮ್ಮ ಜೀವನದಲ್ಲಿ, ಯಾವ ಸಂದರ್ಭ ಸನ್ನಿವೇಶಗಳಲ್ಲಿ ಶ್ರೀ ವೈಷ್ಣವ ಮತವನ್ನು ಸಮಾಜವನ್ನು ಕಟ್ಟಿ ಬೆಳೆಸಿದರೆಂಬುದೇ ಮುಖ್ಯವಾಗಿ ಬಿಟ್ಟಿದೆ. ಇತರ ಜಾತಿ ಸಮುದಾಯಗಳ ಜತೆ ಅವರ ಸಂಬಂಧವೂ ಅಷ್ಟೇ ಮುಖ್ಯ. ಗೊರೂರು ಪ್ರಸ್ತಾಪಿಸಿರುವ ರಾಮಾನುಜಾಚಾರ್ಯರ ಜತೆ ಬಂದ "ಕೀಳುಜಾತಿ"ಗಳ ಕುರಿತು ಇಲ್ಲಿ ಸ್ವಲ್ಪ ವಿವರಿಸಬೇಕಿದೆ.

ಮೇಲುಕೋಟೆಯಲ್ಲಿ ಚೆಲುವ ನಾರಾಯಣಸ್ವಾಮಿ ದೇಗುಲದ ಜತೆ ರಾಮಾನುಜಾಚಾರ್ಯರ ಸಂಬಂಧ ಚಾರಿತ್ರಿಕ ಘಟನೆ. ಮೂಲ ವಿಗ್ರಹವನ್ನು ಜನ ಬಚ್ಚಿಟ್ಟಿದ್ದರೆಂದೂ ಪಂಚಲೋಹದ ವಿಗ್ರಹವನ್ನು ದಾಳಿಕಾರರು ಒಯ್ದಿದ್ದರೆಂದೂ, ಹೊಯ್ಸಳ ವಿಷ್ಣುವರ್ಧನನ ನೆರವಿನಿಂದ

ಮನದ ಬಾಗಿಲು

ನಿಮ್ಮ ಮನೆ ಬಾಗಿಲಿಗೆ
ಬಂದು ನಿಂತಿದ್ದೇವೆ
ಕದ ತಟ್ಟಲು ಕೈ
ಹಿಂಜರಿಯುತ್ತಿದೆ.

ದೇವರ ಮಕ್ಕಳೆಂದು
ಕರೆಸಿಕೊಂಡವರು
ನಿಮಗಾಗಿ ಏನನ್ನಾದರೂ
ಮಾಡುತ್ತೇವೆ.

ಓಡಾಡುವ ಕಾಲುಗಳಿಗೆ
ಕಡಿವಾಣ ಹಾಕಿದಿರಿ,
ಈಗ ಕಡಿವಾಣದ ಬಿಗಿಯಿಂದ
ಕಾಲಿಗೆ ಇನ್ನೂ ಬಲ ಬಂದಿದೆ.

ನಮ್ಮ ನೆರಳಿಗೂ
ಗೋಡೆ ಕಟ್ಟಿ ಗರ್ವಪಟ್ಟಿರಿ
ತಲೆಯ ಮೇಲೆ ನಾವು
ಬೇರೆ ಸೂರ್ಯನ ಬಾಡಿಗೆಗೆ ತಂದಿದ್ದೇವೆ.
ಅವನ ಬೆಳಕಲ್ಲಿ ಈಗ
ನೀವೂ ತೋಯುತ್ತಿದ್ದೀರಿ.

ತಾಳಿಕೊಂಡಿದೆ ಕನಸು
ತಾಳಿಕೊಂಡಿದೆ ಕಾಲ
ತಾಳಿಕೊಂಡಿದೆ ಪ್ರೀತಿ

ಈಗ, ಆಕಾಶವನ್ನೇ ಭಿತ್ತಿ ಮಾಡಿ
ಒಡಲ ಕೆಂಪನ್ನೇ ಬಣ್ಣ ಮಾಡಿ
ನೆಲದಲ್ಲಿ ಹಸಿರು ಬಿತ್ತುತ್ತಿದ್ದೇವೆ

ನಿಮ್ಮ ಮನೆ ಬಾಗಿಲಿಗೆ
ಬಂದು ನಿಂತಿದ್ದೇವೆ
ಕದ ಮುರಿಯುವ ಮೊದಲೇ
ಒಳಗೆ ಬನ್ನಿ ಎನ್ನಿ.

⃠ ಆರತಿ ಎಚ್.ಎನ್.

ಹೊಸ ದೇಗುಲ ನಿರ್ಮಿಸಿ ಹುತ್ತದಲ್ಲಿದ್ದ ಚಲುವನಾರಾಯಣ ವಿಗ್ರಹವನ್ನು ರಾಮಾನುಜರು ಮತ್ತೆ ಪ್ರತಿಷ್ಠಾಪಿಸಿದರೆಂದೂ, ಆದರೆ ಉತ್ಸವ ಮೂರ್ತಿಯನ್ನು ದೆಹಲಿ ಸುಲ್ತಾನನ ಮಗಳಿಂದ ತರಬೇತಿ ಇತ್ತೆಂದೂ 'ಕತೆ' ಇದೆ. ರಾಮಾನುಜರಿಗೆ ಹರಿಜನರು ಸಹಾಯ ಮಾಡಿದ್ದರಿಂದ ಈ ಮೂರ್ತಿಯನ್ನು ತಲು ಸಾಧ್ಯವಾಯಿತಂತೆ. 'ದೊರೆ'ಯ ಮಗಳು ಈ ವಿಗ್ರಹದಲ್ಲೇ ಮನಸ್ಸಿಟ್ಟಿದ್ದರಿಂದ ಅದು ಅಗಲಿದಾಗ ಪ್ರಾಣ ಬಿಟ್ಟಳಂತೆ. ಆ 'ಯವನ' 'ಹುಡುಗಿ' ಬೀಬಿ ನಾಚ್ಚಿಯಾರ್ ಆಗಿ ಈಗಲೂ ದೇವರ ಪಕ್ಕದಲ್ಲಿದ್ದು ಪೂಜೆಗೊಳ್ಳುತ್ತಿರುವಳು. ನೆರವು ನೀಡಿದ ಹರಿಜನರನ್ನು "ತಿರುಕುಲತ್ತಾರ್" (ಶ್ರೇಷ್ಠ ಕುಲದವರು) ಎಂದು ಗೌರವಿಸಿ ರಾಮಾನುಜರು ವರ್ಷದಲ್ಲಿ ಮೂರು ದಿನ ದೇಗುಲ ಪ್ರವೇಶಕ್ಕೆ ಅವಕಾಶ ಕಲ್ಪಿಸಿದರು.

ರಾಮಾನುಜರ ಜೀವನದಲ್ಲಿ ದಲಿತರ ಪಾತ್ರ ಇದಿಷ್ಟೇ ಅಲ್ಲ. ಇವರು ತುಂಬ ಗೌರವಿಸುತ್ತಿದ್ದ 12 ಜನ ವಿಷ್ಣು ಭಕ್ತರಲ್ಲಿ (ಆಳ್ವಾರರು) ಕೆಲವರು "ಕೀಳು" ಕುಲದವರೂ ಇದ್ದಾರೆ. ಉದಾ : ತಿರುಪ್ಪಾಣಿ, ಶ್ರೀರಂಗದ ರಂಗನಾಥ ದೇಗುಲದ ಎದುರು ಗುಡಿಸಲು ಕಟ್ಟಿಕೊಂಡಿದ್ದು ಭಕ್ತಿಗೀತೆ ಹಾಡುತ್ತಿದ್ದ ಪರಮಭಕ್ತ. ದೇವರ ಪೂಜಾರಿ ಲೋಕ ಸಾರಂಗ ಮುನಿಗೆ ಹಾದಿ ಬಿಡದಿರಲು ಆತ ಕಲ್ಲು ಒಗೆದಾಗ ತಿರುಪಾಣಿಯ ತಲೆ ಒಡೆಯಿತು. ದೇವರು ಕನಸಿನಲ್ಲಿ ಬಂದು ಹೇಳಿದ್ದರಿಂದ ಲೋಕಸಾರಂಗಮುನಿ ತಿರುಪಾಣಿಯನ್ನು ಹೆಗಲ ಮೇಲೆ ಹೊತ್ತು ದೇಗುಲದ ಏಳು ಪ್ರಾಕಾರ ಸುತ್ತಿ ಬರುತ್ತಾನೆ.

ಈ ರಂಗನಾಥ ದೇಗುಲ ಕಟ್ಟಿಸಿದವನೇ ಕಳ್ಳರ ಕುಲದ ತಿರುಮಂಗೈ ಆಳ್ವಾರ್. ನಮ್ಮಾಳ್ವಾರ್ (ಶಠಗೋಪ) ವಿಳ್ಳಾಳ ಜಾತಿಯವರು. ಇವರ ಶಿಷ್ಯ ಮಧುರ ಕವಿ

ಬ್ರಾಹ್ಮಣ. ತಿರುಮಳಿಕ್ಕೆ ಆಳ್ವಾರರ ಜಾತಿ ಗೊತ್ತಾಗಿಲ್ಲ. ರಾಮಾನುಜರ ಐವರು ಗುರುಗಳಲ್ಲಿ ಒಬ್ಬರು ಕಾಂಚೀ ಪೂರ್ಣರು ಬ್ರಾಹ್ಮಣರಲ್ಲ. 'ಕೀಳು' ಜಾತಿಯವರು. ಅರಣ್ಯದಲ್ಲಿ ದಾರಿ ತೋರಿ ಕಾಂಚಿಗೆ ರಾಮಾನುಜರನ್ನು ತಂದು ಬಿಟ್ಟವರು. ಬೇಡ ಬೇಡತಿಯರು. ರಾಮಾನುಜರು ಕೊನೆಯ ದಿನಗಳಲ್ಲಿ ಪಟ್ಟಣಿ ಪೆರುವಾಳ್ ಎಂಬ ಕೆಳಜಾತಿಯವನ ಗುಡಿಸಲಿಗೆ ಹೋಗಿ ಪ್ರಭುರ ಸಂಗೀತ ಕೇಳುತ್ತಿದ್ದರು.

ಈ ಹಿನ್ನೆಲೆ ರಾಮಾನುಜರ ಮತ್ತು ದಲಿತರ ಸಂಬಂಧ ಆಕಸ್ಮಿಕವೆಂದು ಸೂಚಿಸಲಾರವು. ಜಾತಿನಿಷ್ಠ ಕರ್ಮಠ ವೈದಿಕ ಸಮಾಜ ಸತ್ಯಗಳನ್ನು ಸಂಪೂರ್ಣ ಮುಚ್ಚಿಹಾಕಲಿಕ್ಕಾಗದೆ ಇಷ್ಟಾದರೂ ಕತೆ ಮತ್ತು ಆಚರಣೆಗಳನ್ನು ಉಳಿಸಿಕೊಂಡು ಬಂದಿದೆ. ಆದರೆ 'ಆಧುನಿಕ' ಕಾಲದ ಬ್ರಾಹ್ಮಣರ ಧೋರಣೆಯ ಕ್ರೌರ್ಯಕ್ಕೆ ಗೊರೂರರ ಬರಹವೇ ಸಾಕ್ಷಿ. ರಾಮಾನುಜರ ಕಾಲದಲ್ಲಿದ್ದ ಪ್ರಗತಿಪರತೆಯ ಕನಿಷ್ಠ ದೃಷ್ಟಿಯೂ 'ಆಧುನಿಕ' ಎನಿಸಿಕೊಂಡ ಕಾಲದ ಅವರ ಅನುಯಾಯಿಗಳಲ್ಲಿ ಕಂಡು ಬರದೇ ಇರುವುದು ಚರಿತ್ರೆಯ ಗತಿಶೀಲತೆಯಲ್ಲಿ ಜಡತನ ಅಥವಾ ಮೊಂಡುತನಕ್ಕೆ ಸಾಕ್ಷಿಯಲ್ಲವೇ?

ಇದು ಶ್ರೀ ವೈಷ್ಣವ ಅಷ್ಟೇ ಅಲ್ಲ ಎಲ್ಲ ಮೇಲ್ ಜಾತಿ ಸಮಾಜಗಳಿಗೂ ಅನ್ವಯಿಸುವ ಮಾತು. 12ನೇ ಶತಮಾನದ ಕರ್ನಾಟಕದ 'ಕ್ರಾಂತಿಕಾರಕ'ವೆಂಬಂಥ ಕಾಯಕ ಜೀವಿಗಳ ಚಟುವಟಿಕೆ ಎಲ್ಲಿ? 19-20ನೇ ಶತಮಾನದ ಸಂಪ್ರದಾಯ ಶೀಲ ಮತ್ತು ಜಡವಾಗಿದ್ದ ವೀರಶೈವ ಎಲ್ಲಿ?

ಗೊರೂರರ ಉದಾರವಾದಿ ನಿಲುವು ಅವರು ಹಳ್ಳಿಯಲ್ಲಿದ್ದುದರಿಂದ, ಬಹು ಜಾತಿ ಜನ ಸಮುದಾಯದಲ್ಲಿ ಅನಿವಾರ್ಯವಾಗಿ ಒಡನಾಡ ಬೇಕಿದ್ದುದರಿಂದ ಬಂದುದು. 1938ರಲ್ಲಿ ಅವರು "ಹಳ್ಳಿಯ ಹಾಡುಗಳು" ಸಂಗ್ರಹಿಸಿದರು. ಅದಕ್ಕೆ ಬರೆದ ಮುನ್ನುಡಿಯಲ್ಲಿ ಅವರು ತಮ್ಮ ಮೇಲ್ಜಾತಿ ಒಣ ಪ್ರತಿಷ್ಠೆಗೆ ಸವಾಲಿನಂತಿರುವ ಜನರ ಜ್ಞಾನವನ್ನು ಕಂಡು ಬೆರಗಾಗುತ್ತಾರೆ. ಮುಕ್ತ ಮನಸ್ಸಿನಿಂದ (ಆದರೆ ಕೆಲವು ತಪ್ಪು ಗ್ರಹಿಕೆಗಳೂ ಇವೆ) ಜನರ ಕಾವ್ಯವನ್ನು ವಿಮರ್ಶಿಸುತ್ತಾರೆ. "ಅತ್ಯಂತ ಅವಿದ್ಯಾವಂತನ 'ಜ್ಞಾನ ವಿವೇಕ'ವೆಂದು ಕರೆಯುತ್ತಾರೆ. ತಮಾಷೆ ಎಂದರೆ ಈ ಜ್ಞಾನವನ್ನು ವೇದಕ್ಕೆ ಹೋಲಿಸಲು "ಬ್ರಾಹ್ಮಣಿಸಂ" ಈ ತ್ರಿಪದಿ ವೇದಕ್ಕೆ ಜೀವನವೇ ದೇವತೆ, ಹೆಣ್ಣುಗಳೇ ಋಷಿಗಳು. ಇದೇ ಕಾಂತಾ ಸಮ್ಮಿತಿ", "ನಮ್ಮ ದೇಶದ ಬೆನ್ನೆಲುಬಿನಂತಿರುವ, ನಮ್ಮ ಕಟ್ಟಡದ ಅಡಿಗಲ್ಲಿನಂತೆ". ಇಲ್ಲಿ ಚರಿತ್ರೆಯ, ಮಾನವ ಜೀವನ ವಿಕಾಸದ ವೈಜ್ಞಾನಿಕ ಗ್ರಹಿಕೆ ಏನಿಲ್ಲ, ನಿಜ. ಆದರೆ 'ಜಾನಪದ'ಕ್ಕೆ ಬಂದಾಗ ಇಂಥ ಬ್ರಾಹ್ಮಣ ಪಂಡಿತರು, ಲೇಖಕರು ದಿಗ್ಭ್ರಮಿತರಾಗುವುದು, ನವೋದಯ ಕಾಲದ ಕನ್ನಡ ಲೇಖಕರ ಅಧ್ಯಯನ ಸಂದರ್ಭದ ಕುತೂಹಲದಿಂದ. ಇದು ರಾಜಸೇವಾಸಕ್ತ 'ಬಿ.ಎಂ.ಶ್ರೀ.', 'ದ.ರಾ.ಬೇಂದ್ರೆ. ಆಡಳಿತಶಾಹಿ ಉನ್ನತಾಧಿಕಾರಿಯಾಗಿದ್ದ ಮಾಸ್ತಿ ಅವರಂಥ ಇತರ ಪ್ರಮುಖ ಲೇಖಕರಲ್ಲಿ ಪ್ರಾರಂಭವಾಯಿತು. ಈ ಹಿನ್ನಲೆ- ಗೋರೂರರಿಗೂ ಇದೆ. ●

ನೀವಿನ್ನೂ ಸಂವಾದದ ಸಂಗಾತಿಯಾಗಿಲ್ಲವೇ?

ಪ್ರಿಯ ಓದುಗರೇ,

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನ ವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ಅಭಿವ್ಯಕ್ತಿ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

ಚಂದಾ ವಿವರ

ಬಿಡಿ ಪ್ರತಿ : ಹತ್ತು ರೂಪಾಯಿಗಳು (ರೂ. 10/-)

ವಾರ್ಷಿಕ : ಒಂದು ನೂರು ರೂಪಾಯಿಗಳು (ರೂ. 100/-)

ಆಜೀವ : ಐದು ಸಾವಿರ ರೂಪಾಯಿಗಳು (ರೂ. 5,000/-)

ಚಂದಾ ಹಣವನ್ನು ಅಂಚೆ ಮೂಲಕ ಕಳುಹಿಸುವವರು

ಡಿಡಿ, ಎಂ.ಓ. ಮೂಲಕ ಮಾತ್ರ ಕಳುಹಿಸಬೇಕು

ಚಂದಾ ಕಳಿಸಬೇಕಾದ ವಿಳಾಸ : ಸಂವಾದ ಮಾಸ ಪತ್ರಿಕೆ

ಬಾಬಾಸಾಹೇಬ್ ಅಂಬೇಡ್ಕರ್ ಸ್ಮಾರಕ ಕೇಂದ್ರ

ಅಂಚೆ ಪೆಟ್ಟಿಗೆ ಸಂಖ್ಯೆ : 9143, ಹೇರೋಹಳ್ಳಿ

ಮಾಗಡಿರಸ್ತೆ, ವಿಶ್ವನೀಡಂ ಅಂಚೆ, ಬೆಂಗಳೂರು - 560 091

ಡಾ|| ಅಂಬೇಡ್ಕರ್ ಜೀವನದ ಪ್ರಮುಖ ಘಟನೆಗಳು

1891	ಏಪ್ರಿಲ್ 14	ಮಧ್ಯಪ್ರದೇಶದ ಮಹು ಗ್ರಾಮದಲ್ಲಿ ಸುಬೇದಾರ್ ರಾಮ್‌ಜಿ ಸಕ್ಪಾಲ್ ಮತ್ತು ಭೀಮಾಬಾಯಿಯವರ 14ನೇ ಪುತ್ರರಾಗಿ ಜನನ
1906		ರಮಾಬಾಯಿಯವರೊಂದಿಗೆ ವಿವಾಹ
1908	ಜನವರಿ	ಎಲ್ಫಿನ್‌ಸ್ಟನ್ ಕಾಲೇಜಿಗೆ ಪ್ರವೇಶ
1913	ಜುಲೈ	ನ್ಯೂಯಾರ್ಕ್‌ನ ಕೊಲಂಬಿಯಾ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗಕ್ಕೆ ಪ್ರವೇಶ
1917		ಕೊಲಂಬಿಯಾ ವಿಶ್ವವಿದ್ಯಾಲಯದಿಂದ ಪಿಹೆಚ್‌ಡಿ ಪದವಿ ಸ್ವೀಕಾರ
1917	ಜುಲೈ	ಬರೋಡಾದ ಗಾಯಕ್ವಾಡ ಮಹಾರಾಜರ ಕಾರ್ಯದರ್ಶಿಯಾಗಿ ಅಧಿಕಾರ ಸ್ವೀಕಾರ.
1918	ನವೆಂಬರ್	ಬಾಂಬೆ ಸಿಡೆನಹ್ಯಾಮ್ ಕಾಲೇಜಿನ ರಾಜಕೀಯ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾಗಿ ಸೇವೆ ಆರಂಭ
1920	ಜನವರಿ 31	'ಮೂಕನಾಯಕ' ಮರಾಠಿ ವಾರಪತ್ರಿಕೆ ಆರಂಭ
1920	ಸೆಪ್ಟೆಂಬರ್	ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ಗೆ ಪುನರ್ ಪ್ರವೇಶ
1924	ಜುಲೈ 20	ಶಿಕ್ಷಣ, ಸಂಘಟನೆ, ಹೋರಾಟ ತತ್ವಗಳ ಮೇಲೆ 'ಬಹಿಷ್ಕೃತ ಹಿತಕಾರಿಣಿ ಸಭಾ' ಸ್ಥಾಪನೆ
1927	ಮಾರ್ಚ್ 20	'ಚೌಡರ್‌ಕೆರೆ' ನೀರಿನ ಹಕ್ಕಿಗಾಗಿ ಮಹಾಡ್‌ನಲ್ಲಿ ಸತ್ಯಾಗ್ರಹ ಆರಂಭ
1927	ಏಪ್ರಿಲ್ 20	'ಬಹಿಷ್ಕೃತ ಭಾರತ' ಮರಾಠಿ ಪಾಕ್ಷಿಕದ ಪ್ರಕಟಣೆ
1930	ಮಾರ್ಚ್	ನಾಸಿಕ್‌ನ ಕಾಳರಾಮ ದೇವಾಲಯ ಪ್ರವೇಶದ ಮೂಲಕ 'ದೇವಸ್ಥಾನ ಪ್ರವೇಶ ಚಳುವಳಿ'ಗೆ ಚಾಲನೆ
1930-32		ಭಾರತದ ಅಸ್ಪೃಶ್ಯರ ಪರವಾಗಿ ಲಂಡನ್ನಿನ ದುಂಡು ಮೇಜಿನ ಪರಿಷತ್ತಿಗೆ ಪ್ರತಿನಿಧಿಯಾಗಿ ಆಯ್ಕೆ
1932	ಸೆಪ್ಟೆಂಬರ್	ಐತಿಹಾಸಿಕ 'ಪೂನಾ ಒಪ್ಪಂದ'ಕ್ಕೆ ಸಹಿ
1925	ಮೇ 26	ಪತ್ನಿ ರಮಾಬಾಯಿಯವರ ನಿಧನ
	ಅಕ್ಟೋಬರ್ 13	ನಾಸಿಕ್‌ನಲ್ಲಿ 'ಯಾಹೋಲಾ ಸಮಾವೇಶ'. ಹಿಂದೂವಾಗಿ ಹುಟ್ಟಿದ್ದೇನೆ, ಹಿಂದೂವಾಗಿ ಸಾಯಲಾರೆ ಎಂಬ ಘೋಷಣೆ.
1936	ಆಗಸ್ಟ್	'ಸ್ವತಂತ್ರ ಕಾರ್ಮಿಕ ಪಕ್ಷ'ದ ಸ್ಥಾಪನೆ
1940	ಮೇ	'ಮಹರ್ ಪಂಚಾಯಿತಿ' ಸ್ಥಾಪನೆ
1941	ಜನವರಿ	ಸೇನೆಯ ಮಹರ್ ಬೆಟಾಲಿಯನ್‌ಗೆ ಮಹರ್ ಜನಾಂಗದವರ ನೇಮಕ ಕುರಿತು ಸಮಾಲೋಚನೆ
1942	ಏಪ್ರಿಲ್	ನಾಗಪುರದಲ್ಲಿ 'ಅಖಿಲ ಭಾರತ ನಿಮ್ನ ಜಾತಿಗಳ ಒಕ್ಕೂಟ' ಸ್ಥಾಪನೆ
1944	ಜೂನ್	'ಕಾಂಗ್ರೆಸ್ ಮತ್ತು ಗಾಂಧೀಜಿ ಅಸ್ಪೃಶ್ಯತೆಗಾಗಿ ಏನು ಮಾಡಿದ್ದಾರೆ?' ಪುಸ್ತಕ ಪ್ರಕಟ.
1947	ಏಪ್ರಿಲ್ 29	ಸಂವಿಧಾನ ರಚನಾ ಸಭೆಯಲ್ಲಿ 'ಅಸ್ಪೃಶ್ಯತಾ ನಿಷೇದ'ಕ್ಕಾಗಿ 17ನೇ ವಿಧಿಯನ್ನು ಪಾಸು ಮಾಡಿದರು.
	ಆಗಸ್ಟ್ 15	ಸ್ವತಂತ್ರ ಭಾರತದ ಮೊದಲ ಕಾನೂನು ಮಂತ್ರಿಯಾಗಿ ನೆಹರೂ ಮಂತ್ರಿ ಮಂಡಲ ಸೇರ್ಪಡೆ ಮತ್ತು ಕಾನೂನು ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿ ಆಯ್ಕೆ.
1948	ಏಪ್ರಿಲ್ 15	ಡಾ|| ಶಾರದಾ ಕಬೀರ್ (ಸವಿತಾ)ರವರ ಜತೆಗೆ 2ನೇ ಬಾರಿಗೆ ವಿವಾಹ
	ಅಕ್ಟೋಬರ್	ಅಸ್ಪೃಶ್ಯತೆಯ ಉಗಮ ಕುರಿತ 'ಅಸ್ಪೃಶ್ಯರು' ಗ್ರಂಥ ಬಿಡುಗಡೆ
1950	ಡಿಸೆಂಬರ್	ಕೊಲಂಬೋದಲ್ಲಿ 'ವಿಶ್ವ ಬೌದ್ಧ ಸಮಾವೇಶ'ದಲ್ಲಿ ಪಾಲ್ಗೊಂಡದ್ದರು.
1951	ಫೆಬ್ರವರಿ 5	ಕಾನೂನು ಮಂತ್ರಿಯಾಗಿ ಸಂಸತ್ತಿನಲ್ಲಿ 'ಹಿಂದೂಕೋಡ್ ಬಿಲ್' ಮಂಡನೆಯ ಪ್ರಸ್ತಾಪ.
	ಸೆಪ್ಟೆಂಬರ್ 9	ಹಿಂದೂ ಕೋಡ್ ಬಿಲ್ ಮಂಡನೆಗೆ ಅವಕಾಶ ಸಿಗದಿದ್ದುದಕ್ಕಾಗಿ ಮಂತ್ರಿ ಮಂಡಲದಿಂದ ಹೊರ ಬಂದಿದ್ದು.
1952	ಜನವರಿ	ಭಾರತದ ಮೊಟ್ಟ ಮೊದಲ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧೆ ಮತ್ತು ಸೋಲು.
1953	ಏಪ್ರಿಲ್	ಭಾಂಡಾರ ಕ್ಷೇತ್ರದ ಉಪ ಚುನಾವಣೆಯಲ್ಲಿ ಸ್ಪರ್ಧೆ ಮತ್ತು ಸೋಲು.
1956	ಫೆಬ್ರವರಿ	'ಬುದ್ಧ ಮತ್ತು ಅವನ ಧರ್ಮ' ಹಾಗೂ 'ಪ್ರಾಚೀನ ಭಾರತದ ಕ್ರಾಂತಿ ಪ್ರತಿಕ್ರಾಂತಿ' ಎಂಬ ಪುಸ್ತಕಗಳ ಬರವಣಿಗೆ.
1956	ಅಕ್ಟೋ 14	ತಮ್ಮ ಕೋಟ್ಯಾಂತರ ಬೆಂಬಲಿಗರೊಂದಿಗೆ ನಾಗಪುರದ 'ದೀಕ್ಷಾ ಭೂಮಿ'ಯಲ್ಲಿ ಬೌದ್ಧ ಧರ್ಮ ಸ್ವೀಕಾರ.
1956	ಡಿಸೆಂಬರ್ 6	ನವದೆಹಲಿಯ ತಮ್ಮ 26 ಅಲ್‌ಪುರ್ ರಸ್ತೆಯ ನಿವಾಸದಲ್ಲಿ ದೇಹ ತ್ಯಾಗ.
1956	ಡಿಸೆಂಬರ್ 7	ಬಾಂಬೆಯ ದಾದರ್‌ನಲ್ಲಿ ಅಂತ್ಯ ಸಂಸ್ಕಾರ 'ಚೈತ್ಯ ಭೂಮಿ'ಯೆಂದೇ ಪ್ರಸಿದ್ಧಿ.
1991		ಭಾರತ ಸರ್ಕಾರದಿಂದ ಮರಣೋತ್ತರ 'ಭಾರತ ರತ್ನ' ಪುರಸ್ಕಾರ.

ಡಾ|| ಅಂಬೇಡ್ಕರ್ ಮತ್ತು 'ದಲಿತ' ಐಡೆಂಟಿಟಿ

ಕೆಲವು ಟಿಪ್ಪಣಿಗಳು

ಡಾ. ಅಂಬೇಡ್ಕರವರು ಪ್ರತಿಪಾದಿಸಿರುವ ಬೌದ್ಧ ಪರಂಪರೆಯನ್ನು ವರ್ತಮಾನದ ಬಹುರೂಪಿ ನೆಲೆಗಳಲ್ಲಿ, ಬಹುರೂಪಿಯಾಗಿ ಕಟ್ಟಿಕೊಡುವ ಜರೂರು ನಮ್ಮ ಮುಂದೆ ಇದೆ. "ಆಧುನಿಕತೆ" ಧರ್ಮ ವಿರೋಧಿ ಎನ್ನುವ ಕುತರ್ಕವನ್ನು ಬಿಟ್ಟು, ಬೌದ್ಧ ಪರಂಪರೆಯನ್ನು ಬೌದ್ಧಿಕವಾಗಿ ನಿರೂಪಿಸುವ ಮತ್ತು ಗೊಡ್ಡು ಸಂಪ್ರದಾಯಗಳಿಗೆ ಕಟ್ಟುವ ಪ್ರವೃತ್ತಿಗಳ ಬಗ್ಗೆ ಎಚ್ಚರಿಕೆ ಅಗತ್ಯ. ಅಂದರೆ ಆಧುನಿಕತೆಯ ಮಿತಿಗಳನ್ನು ಸಲೀಸಾಗಿ ನಿರ್ವಹಿಸಬಲ್ಲುದೆಂದರೆ ಡಾ. ಅಂಬೇಡ್ಕವರು ಪ್ರತಿಪಾದಿಸಿರುವ ಬೌದ್ಧ ಪರಂಪರೆಯಲ್ಲಿರುವ "ಪ್ರಾತಿತ್ಯ ಸಮುತ್ಪಾದ" ಅಂದರೆ ಚರಿತ್ರೆಯನ್ನು ಅರ್ಥೈಸುವ ಹೊಸ ಬಗೆಯ ಓದು. ನೆನಪಿನ ಹುತ್ತವನ್ನು ಅಗೆಯುವ ನೂತನ ಆಯುಧ. ಸಮುದಾಯ ಮತ್ತು ವ್ಯಕ್ತಿ ಐಡೆಂಟಿಟಿಯನ್ನು ನಿರೂಪಿಸುವ 'ಪ್ರಕ್ರಿಯಾತ್ಮಕ' ಸಿದ್ಧಾಂತ.

○ ಡಿ. ಡೊಮಿನಿಕ್

ರಾಷ್ಟ್ರಮಟ್ಟದಲ್ಲಿ ಈ ಹಿಂದೆ ಆದ ಎರಡು ಮುಖ್ಯ ಘಟನೆಗಳ ಮೂಲಕ ಈ ಲೇಖನ ಆರಂಭಿಸಲಿಚ್ಛಿಸುತ್ತೇನೆ. ಈ ಎರಡೂ ಘಟನೆಗಳನ್ನು ಸಾರ್ವಜನಿಕ ನೆನಪಿನಾಳದಿಂದ ಹೊರಗೆಳೆದು, ಪ್ರಸ್ತುತ ಸಂದರ್ಭದ ಸವಾಲುಗಳನ್ನು ಸೂಕ್ಷ್ಮವಾಗಿ ಗ್ರಹಿಸಲು ಪ್ರಯತ್ನಿಸಲಾಗಿದೆ : 'ಒಂದು, ಮಂಡಲ್ ವರದಿ ಜಾರಿಯಾದಾಗ ನಡೆದ ಮೀಸಲಾತಿ ವಿರೋಧಿ ಗಲಭೆಗಳಲ್ಲಿ ಎಲ್ಲಾ ಕಡೆ 'ದಲಿತ' ಸಮುದಾಯದ ವ್ಯಕ್ತಿಗಳನ್ನು ಹಿಂಸೆಗೆ ಗುರಿಪಡಿಸಲಾಗುತ್ತದೆ. ದುರಂತವೆಂದರೆ ಮಂಡಲ್ ವರದಿಯಿಂದ 'ದಲಿತ' ಸಮುದಾಯಗಳಿಗೆ ಏನು ಉಪಯೋಗವಿರಲಿಲ್ಲ. ಬದಲು ಅದು ಇತರ ಹಿಂದುಳಿದ ಜಾತಿ-ಪಂಗಡಗಳಿಗೆ ಮೀಸಲಾತಿ ನೀಡಿತ್ತು. ಕಾರಣ ಈಗಾಗಲೇ ಸಂವಿಧಾನಾತ್ಮಕವಾಗಿ 'ದಲಿತ' ಸಮುದಾಯಗಳು ಮೀಸಲಾತಿಯನ್ನು ಪಡೆದಾಗಿತ್ತು. ಹಾಗಿದ್ದರೂ, ಮಂಡಲ್ ವರದಿ 'ದಲಿತ ಪರ'ವೆಂದು ಗ್ರಹಿಸಿದ್ದು ಏಕೆ? ಅವರ ವಿರುದ್ಧ ಹಿಂಸೆ ನಡೆದದ್ದು ಏಕೆ? ಈ ಪ್ರಶ್ನೆಗಳನ್ನು ಅರ್ಥೈಸಲು ಭಾರತೀಯ ನಾಗರೀಕ ಸಮಾಜಕ್ಕೆ ಬೌದ್ಧಿಕ ಗರ ಬಡಿದಿದೆ ಎಂದು ಹೇಳಬಹುದೇ? 'ನಮ್ಮ' 'ಸಾರ್ವತ್ರಿಕ ಐಡೆಂಟಿಟಿ' ಬಿಕ್ಕಟ್ಟನ್ನು ನಿವಾರಿಸಿಕೊಳ್ಳಲು ಒಂದು ಸಮುದಾಯದ ಮೇಲೆ 'ಗೂಬೆ' ಕೂರಿಸುತ್ತದೆಯೆಂದು ನನ್ನ ಭಾವನೆ. ಹಾಗೆ ಮಾಡಿ ಹಿಂಸೆಯನ್ನು 'ರಿಚುವಲ್' ಆಗಿ ಆಚರಿಸಿ, ತನ್ನತನವನ್ನು ಕಾಯ್ದುಕೊಳ್ಳುತ್ತದೆ ಮತ್ತು ಅಸಹಾಯಕತೆಯನ್ನು ಹಾಗೂ ಶಕ್ತಿ-ಹೀನತೆಯನ್ನು ಮತ್ತೊಂದರ ಮೇಲೆ ಸ್ಥಿರೀಕರಿಸುತ್ತದೆ. ಈ ಸಂಗತಿಯನ್ನು ಮುಂದೆ ಚರ್ಚಿಸೋಣ.

ಎರಡನೆಯ ಘಟನೆಯೆಂದರೆ, 'ಬ್ರಾಹ್ಮಣ', ಮತಾಂಧ ಬುದ್ಧಿಜೀವಿ ಅರುಣ್‌ಶೌರಿ ಹಿಂದುತ್ವ ರಾಜಕಾರಣಕ್ಕೆ ಬಲವಾದ ಬುನಾದಿ ಹಾಕಿದ್ದು 'ವರ್ಷಿಪಿಂಗ್ ಫಾಲ್ಸ್‌ಗಾಡ್ಸ್' (Worshippine False Gods) ಕೃತಿಯ ಮೂಲಕ. ಈ ಕೃತಿ ಅಂತಿಮವಾಗಿ ಡಾ. ಅಂಬೇಡ್ಕರವರ ಚಿಂತನೆಗಳಿಗೆ ಮಸಿ ಬಳಿಯಲು ಪ್ರಯತ್ನಿಸಿತ್ತು. ಹುಸಿ ತರ್ಕ ಮತ್ತು ಬರವಣಿಗೆಯ ಜಾಣ್ಮೆಯ ಮೂಲಕ ಸಾರ್ವಜನಿಕ ಬದುಕಿನಲ್ಲಿರುವ ಕಪಟತನವನ್ನು ಮುಚ್ಚಿಡಲು ಹೆಣಗಿದಂತೆ ಭಾಸವಾಗುತ್ತದೆ. ಆದರೆ, ಹೀಗೆ ಮಾಡುವಾಗ ಈ ಸಾರ್ವತ್ರಿಕ ಬದುಕನ್ನು ಒಂದು ಕೋಮಿನ ಹಿತಾಸಕ್ತಿಗೆ ಪೂರಕವಾಗಿ ಒಂದು ಕೇಂದ್ರ-ಅಧಿಕಾರ-ಸ್ಥಾನವನ್ನು ಸ್ಥಾಪಿಸಲಾಗುತ್ತದೆ... ಈ ಕೃತಿಗೆ ವ್ಯಾಪಕ ಪ್ರತಿರೋಧಗಳು ವ್ಯಕ್ತವಾಗಿವೆ ನಿಜ. ಆದರೆ ಬರಹದ ಮೂಲಕ ಅದು 'ಅನ್ಯಾಯ'ವನ್ನು 'ನ್ಯಾಯ'ವೆಂಬಂತೆ ಪ್ರತಿನಿಧಿಸಿದ್ದು ಈ ಪ್ರಜಾಪ್ರಭುತ್ವ ದೇಶದಲ್ಲೇ! ಅಂದರೆ ಇಲ್ಲಿ ಏನೂ ಆಗಬಹುದೆಂಬ ಭ್ರಮೆ ಸಾಮಾನ್ಯೀಕೃತ ವಾಸ್ತವವಾಗುತ್ತದೆ. ಇಂಥ ವಾಸ್ತವವನ್ನು ಛಿದ್ರೀಕರಿಸುವುದು ಹೇಗೆ? ಇದಕ್ಕೆ ಬೇಕಾದ ಪರಿಕಲ್ಪನೆಗಳ ಸ್ಪಷ್ಟತೆಯನ್ನು ಪಡೆಯಲು ತುಂಬಾ ಹಿಂದೆ ನಡೆದ ಮತ್ತೊಂದು ಘಟನೆಯೊಡನೆ ಮುಖಾಮುಖಿಯಾಗೋಣ. ಚೈತನ್ಯ ಶಾಲಿ ಬುದ್ಧ ತನ್ನ ಅಂತಿಮ ಪಯಣಕ್ಕೆ ಸಿದ್ಧನಾಗುತ್ತಿದ್ದಾನೆ. ದುಃಖತಪ್ತ ಶಿಷ್ಯ ಆನಂದ ತಬ್ಬಲಿಯಾಗಿದ್ದಾನೆ. ಅಸಹಾಯಕತೆ ಅವನನ್ನು ಸುತ್ತುವರೆಯುತ್ತದೆ. ಆಗ ಬುದ್ಧ ಹೇಳುತ್ತಾನೆ, "ನಿನಗೆ ನೀನೇ ದೀಪ". ಬೌದ್ಧ ಪರಂಪರೆಯ ಈ ಗ್ರಹೀತ ಇವತ್ತಿನ ಬದಲಾಗುತ್ತಿರುವ, ಆಗುತ್ತಿರುವ ವಾಸ್ತವ ಸಂಗತಿಗಳಿಗೆ ಕನ್ನಡಿ. ವ್ಯಕ್ತಿ-ಸಮುದಾಯಗಳ ಐಡೆಂಟಿಟಿ, ಬದುಕಿನ ಮರ್ಮ, ಬದಲಾವಣೆಯನ್ನು ಅರಿಯಲು ನಡೆಸುವ ಪ್ರಯತ್ನ ಇವುಗಳಿಗೆ ಪ್ರತಿಯೊಬ್ಬರೂ ಪ್ರತ್ಯೇಕ ಬುದ್ಧರಾಗಿ ನಿರ್ವಾಣ ಸಾಧಿಸಲು, ಅಂತಿಮವಾಗಿ "ಬೋಧಿಸತ್ವ"ವನ್ನು ಇಲ್ಲೇ ಕಾಣಬೇಕಾಗುತ್ತದೆಯೆಂದು ಬೌದ್ಧ ಪರಂಪರೆ ವಿವರಿಸುತ್ತದೆ. ಈ ಗ್ರಹೀತದ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನ ಕೆಲವು ಸವಾಲುಗಳನ್ನು ಬಾಹ್ಯೀಕರಿಸಲು ಪ್ರಯತ್ನಿಸುತ್ತದೆ.

'ರಾಷ್ಟ್ರ'ವೆಂದು ಪರಿಗಣಿತವಾದ ಭಾರತ, ಆಧುನಿಕತೆಗೆ ತನ್ನನ್ನು ತೆರೆದುಕೊಂಡಾಗ, ಸಾರ್ವತ್ರಿಕವಾಗಿ ಚಲಾವಣೆಗೆ ತಂದ 'ಭಾರತೀಯ ಪ್ರಜೆ'ಯ ಪರಿಕಲ್ಪನೆ ಒಂದು ಏಕೀಕೃತ ವ್ಯಕ್ತಿಯನ್ನು ಸಂಘಟಿಸುತ್ತದೆ. ಈ ವ್ಯಕ್ತಿ ಆಧುನಿಕ ಶಿಕ್ಷಣ ಪಡೆದು, ಆಧುನಿಕ ನಾಗರೀಕ ಪ್ರಜೆಯಾಗಲು ತನ್ನನ್ನು ತಾನು ಸಂಘಟಿಸಿಕೊಳ್ಳತೊಡಗುತ್ತಾನೆ/ಳೆ. ಹೀಗೆ ಸಂಘಟಿತರಾಗುವಾಗ ತನ್ನ ಹಿಂದಿನ ಸಮುದಾಯಿಕ ಬದುಕು ಒಂದೆಡೆ ಪುನರ್ ಸಂಘಟಿತಗೊಂಡು, ಆಧುನಿಕ ಶಿಕ್ಷಣ ಮತ್ತು ಬದಲಾದ ಬದುಕಿನ ರೀತಿಗಳ ಹಿನ್ನೆಲೆಯಲ್ಲಿ ಪ್ರತಿಯೊಂದು ಸಮುದಾಯವೂ ಸಹ ವಸಾಹತ್ತು ರೂಪಿಸಿಕೊಟ್ಟ ತರ್ಕದಲ್ಲೇ ತನ್ನ ಗತಕಾಲದ ಇತಿಹಾಸವನ್ನು ಕಟ್ಟುತ್ತದೆ. ಹೀಗೆ ಮಾಡುವ ಪ್ರಕ್ರಿಯೆಗಳಲ್ಲಿ ಸಾರ್ವಜನಿಕವಾಗಿ ಸಾಮುದಾಯಿಕ ಸಂಘಟನೆಗಳು ತಲೆಯೆತ್ತುತ್ತವೆ. ಅಂತಹದರಲ್ಲಿ ಮೊದಲಿಗೆ ಬಂದವೆಂದರೆ ಬ್ರಾಹ್ಮಣ ಸಂಘಟನೆಗಳು ಮತ್ತು ಮುಸ್ಲಿಂ ಸಂಘಟನೆಗಳು. ಇವುಗಳಿಗೆ ಪ್ರತ್ಯಕ್ಷವಾಗಿ ಕಂಡ ಮಾದರಿಗಳೆಂದರೆ ಯೂರೋಪಿನ ಕ್ರಿಶ್ಚಿಯನ್ ಸಮುದಾಯಗಳು ಅಥವಾ ಭಾರತದಂತಹ ಭೌಗೋಳಿಕ ಪ್ರದೇಶಗಳಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿದ ಬಿಳಿ ಗಂಡಸಿನ ಮಾದರಿಗಳೇ ಕ್ರಿಶ್ಚಿಯನ್ ಆಗಿ ಕಾಣತೊಡಗಿದವು. ಇದನ್ನೇ ಆಧುನಿಕತೆಯ ಬಿಂಬಗಳನ್ನಾಗಿಯೂ ಪ್ರತಿಪಾದಿಸಲಾಗಿತ್ತು.

ಆದರೆ ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿಯೆಂದರೆ ಪುರುಷ ಪ್ರಾಧಾನ್ಯತೆಯನ್ನೇ

ಪ್ರತಿಪಾದಿಸುತ್ತಿದ್ದ "ಸಂಸ್ಕೃತ ಪರಂಪರೆ" ಒಂದೆಡೆ ಯುರೋಪಿನ ಓರಿಯಂಟಲಿಸ್ಟ್ ವಿದ್ವಾಂಸರು ಹಾಕಿಕೊಟ್ಟ ಕ್ರಮದಲ್ಲೇ ಒಂದು ಭವ್ಯವಾದ ಪ್ರಾಚೀನತೆಯನ್ನು ಕಟ್ಟಿಕೊಂಡು, ಆಧುನಿಕತೆಯ ಎಲ್ಲಾ ಅವಕಾಶಗಳನ್ನು ಕಬಳಿಸಲಾರಂಭಿಸುತ್ತದೆ. ಇದು ಅನೇಕ ಬಾರಿ ಪಾಶ್ಚಾತ್ಯ ನಾಗರೀಕತೆಯ ಪ್ರಾಚೀನ 'ಆರ್ಯ' ಭವ್ಯ ಪರಪರೆಯೆಂದೇ ಗ್ರಹಿಸಲಾಗುತ್ತದೆ.

ಇನ್ನೊಂದೆಡೆ ಹೀಗೆ ನಿರೂಪಣೆಗೊಂಡ "ಸಂಸ್ಕೃತ" ಪಠ್ಯಕೇಂದ್ರಿತ ಭವ್ಯ ಪರಂಪರೆಯನ್ನು ನಿಜವಾದ, ಎಲ್ಲಾ ಸಮುದಾಯಗಳ ಪರಂಪರೆಯೆಂದು ಆಗಷ್ಟೇ ತಲೆಯೆತ್ತಿ ನಿಂತ "ಮುದ್ರಣ" ಕ್ಯಾಪಿಟಲಿಸಂನ ಮೂಲಕ ಮತ್ತು ಶಾಲಾ ಪಠ್ಯಗಳ ಮೂಲಕ ಪ್ರಚಾರ ಮಾಡಲಾಗುತ್ತದೆ. ಇದು ಬಹಳ ಸೆಕ್ಯುಲರ್ ವಿಧಾನಗಳಲ್ಲೇ ಆಯಿತೆನ್ನುವುದನ್ನು ಗಮನಿಸಿದ ಇವರ ಸುಧಾರಣಾವಾದಿಗಳು ಅದನ್ನು ಒಂದಷ್ಟು ರಿಪೇರಿ ಮಾಡಿ, ತೇಪೆ ಹಚ್ಚಿ, ಹೊಸದಾಗಿ ಉದಯಿಸಿದ ರಾಷ್ಟ್ರದ ಭಾರತೀಯ ಸಂಸ್ಕೃತಿ"ಯೆಂದು ಬಿಂಬಿಸುತ್ತಾರೆ. ಅಂದರೆ ವ್ಯಕ್ತಿವಾದವೇ ಸಮುದಾಯವಾದವಾಗಿ ಸ್ವಯಂ ತಂತ್ರವಾದಿ (ಲಿಬರಲಿಸಂ) ನೆಲೆಗಳಲ್ಲಿ ಎಲ್ಲವನ್ನು ನಿರ್ದಿಷ್ಟ ಆತ್ಮವಾದಿ (Absolute) ಸಂಗಾತಿಗಳನ್ನಾಗಿ ಜನರಿಗೆ ಕಟ್ಟಿಕೊಡಲಾಗುತ್ತದೆ. ಇದೇ ಮೌಲ್ಯಗಳು 'ಸಂಸ್ಕೃತ' ಪರಂಪರೆಯ ಮೌಲ್ಯಗಳೆಂದೂ ಪ್ರಚಾರ ಪಡೆಯುತ್ತವೆ. ಇಂಥ ಸಂಕೀರ್ಣ ಸಂದರ್ಭವನ್ನು ಡಾ. ಅಂಬೇಡ್ಕರ್ ಹೇಗೆ ಎದುರಿಸಿದರು ಎಂಬ ವಿಷಯವನ್ನು ಕೂಲಂಕುಷವಾಗಿ ವಿವರಿಸಿಕೊಳ್ಳ ಬೇಕಾಗುತ್ತದೆ. ಏಕೆಂದರೆ, ಬಹುರೂಪಿ ಸಮುದಾಯಗಳು ಏಕಕಾಲದಲ್ಲಿ ಆಧುನಿಕ ಪ್ರಕ್ರಿಯೆಗಳನ್ನು ಹೇಗೆ ಸ್ವಾಗತಿಸಿದವು ಎನ್ನುವಾಗ, ಯಾರಿಗೆ ಅಕ್ಷರ ಜ್ಞಾನ ಮೊದಲಿಗೆ ದೊರೆಯಿತು ಎಂಬ ಅಂಶದ ಮೇಲೆ ಅದು ನಿರ್ಧಾರವಾಯಿತು. ಹಾಗೇ ನಿರ್ಧಾರವಾಗುವಾಗ ಆಯಾ ಸಮುದಾಯಗಳ ಗಂಡಸರೇ ಮೊದಲಿಗರಾಗಿ, ಆಧುನಿಕ ಪ್ರಜ್ಞೆಯನ್ನು ತಮ್ಮ ಸಮುದಾಯಗಳಿಗೆ ಕಟ್ಟಿಕೊಡಲು ತೊಡಗುತ್ತಾರೆ. ಪುನಃ ಇಲ್ಲಿ ಏಕಾತ್ಮಕವಾಗಿ "ವಿರೋಧ" ಅಥವಾ "ವೈರುಧ್ಯ"ಗಳಲ್ಲೇ ನಡೆಯುತ್ತದೆ. ಅಂದರೆ ಭಾರತೀಯ ಚರಿತ್ರೆಯೆಂದರೆ ಎಲ್ಲಾ ಸಮುದಾಯಗಳ ಚರಿತ್ರೆಯನ್ನು ಹೊರತುಪಡಿಸಿದ, ಸಂಸ್ಕೃತ ಪ್ರಧಾನ ವೇದ-ಬ್ರಾಹ್ಮಣ ಚರಿತ್ರೆಯಾಗುತ್ತದೆ. ಅಥವಾ ಅದನ್ನು ವಿರೋಧಿಸಿದಲ್ಲಿ ಅಬ್ರಾಹ್ಮಣ ಚರಿತ್ರೆ ಅಥವಾ ಸಂಸ್ಕೃತ ವೇದಗಳಲ್ಲಿ ಬರುವ "ಶೂದ್ರ" ಪರಿಭಾಷೆಯಲ್ಲೇ ಎಲ್ಲಾ ಸಮುದಾಯಗಳನ್ನು ಏಕೀಕರಿಸುವಾಗ ನೂರಾರೂ ಪ್ರಯತ್ನಗಳು ನಡೆಯುತ್ತವೆ.

ಈ ಪ್ರಕ್ರಿಯೆಗೆ ಒಂದು ಅಪವಾದವೆಂಬಂತೆ ಆ ಸಂದರ್ಭದಲ್ಲಿ ಮುದ್ರಣಗೊಂಡ ಎಲ್ಲಾ ಸಂಸ್ಕೃತ ಪಠ್ಯಗಳನ್ನು ಡಾ|| ಅಂಬೇಡ್ಕರ್‌ರವರು ಎರಡು ಚೌಕಟ್ಟುಗಳಲ್ಲಿ ಅಧ್ಯಯನಕ್ಕೊಳಪಡಿಸುತ್ತಾರೆ. ಒಂದು ತಾವು ವಿದೇಶಗಳಲ್ಲಿ ನೇರವಾಗಿ ಅಧ್ಯಯನ ಮಾಡಿದ ತಾತ್ವಿಕ ಚೌಕಟ್ಟುಗಳು ಮತ್ತು ಭೇಟಿಮಾಡಿದ ವಿದ್ವಾಂಸರ ಮೂಲಕ ಸಂಸ್ಕೃತ ಪಠ್ಯಗಳ ವಿಚಾರ ಶೂನ್ಯತೆಯನ್ನು ಬಯಲಿಗೆಳೆದದ್ದು. ಎರಡು ಈ ಪಠ್ಯಗಳಲ್ಲಿನ

"ಸಂಸ್ಕೃತ" ಪಠ್ಯಕೇಂದ್ರಿತ ಭವ್ಯ ಪರಂಪರೆಯನ್ನು ನಿಜವಾದ, ಎಲ್ಲಾ ಸಮುದಾಯಗಳ ಪರಂಪರೆಯೆಂದು ಆಗಷ್ಟೇ ತಲೆಯೆತ್ತಿ ನಿಂತ "ಮುದ್ರಣ" ಕ್ಯಾಪಿಟಲಿಸಂನ ಮೂಲಕ ಮತ್ತು ಶಾಲಾ ಪಠ್ಯಗಳ ಮೂಲಕ ಪ್ರಚಾರ ಮಾಡಲಾಗುತ್ತದೆ. ಇದು ಬಹಳ ಸೆಕ್ಯುಲರ್ ವಿಧಾನಗಳಲ್ಲೇ ಆಯಿತೆನ್ನುವುದನ್ನು ಗಮನಿಸಿದ ಇವರ ಸುಧಾರಣಾವಾದಿಗಳು ಅದನ್ನು ಒಂದಷ್ಟು ರಿಪೇರಿ ಮಾಡಿ, ತೇಪೆ ಹಚ್ಚಿ, ಹೊಸದಾಗಿ ಉದಯಿಸಿದ ರಾಷ್ಟ್ರದ ಭಾರತೀಯ ಸಂಸ್ಕೃತಿ"ಯೆಂದು ಬಿಂಬಿಸುತ್ತಾರೆ. ಅಂದರೆ ವ್ಯಕ್ತಿವಾದವೇ ಸಮುದಾಯವಾದವಾಗಿ ಸ್ವಯಂ ತಂತ್ರವಾದಿ (ಲಿಬರಲಿಸಂ) ನೆಲೆಗಳಲ್ಲಿ ಎಲ್ಲವನ್ನು ನಿರ್ದಿಷ್ಟ ಆತ್ಮವಾದಿ (Absolute) ಸಂಗಾತಿಗಳನ್ನಾಗಿ ಜನರಿಗೆ ಕಟ್ಟಿಕೊಡಲಾಗುತ್ತದೆ. ಇದೇ ಮೌಲ್ಯಗಳು 'ಸಂಸ್ಕೃತ' ಪರಂಪರೆಯ ಮೌಲ್ಯಗಳೆಂದೂ ಪ್ರಚಾರ ಪಡೆಯುತ್ತವೆ.

ಸಂಗತಿಗಳನ್ನು ಬೌದ್ಧ ಪರಂಪರೆ ಪಠ್ಯಗಳೊಂದಿಗೆ ಮುಖಾಮುಖಿಯಾಗಿಸಿ ಇಲ್ಲಿನ ಮೂಲನಿವಾಸಿಗಳ ಚರಿತ್ರೆಯನ್ನು "ನಾಗಾ ಜನಾಂಗ"ದ ಚರಿತ್ರೆಯೆಂದು ನಿರೂಪಿಸಿದ್ದು. ಹೀಗೆ ಮಾಡುವಾಗ ಡಾ. ಅಂಬೇಡ್ಕರವರು ತಮ್ಮ ಸಮುದಾಯದ ಬಾಲ್ಯದ ನೆನಪುಗಳು ಹಾಗೂ ಮಹಾತ್ಮಫುಲೆಯವರ ಸುಧಾರಣಾ ಕ್ರಮಗಳಿಂದ ಬಹಳಷ್ಟು ಪ್ರಭಾವ-ಪ್ರೇರಣೆಗಳಿಗೆ ಒಳಗಾಗಿದ್ದರೆಂಬುದನ್ನು ಮರೆಯುವಂತಿಲ್ಲ. ಅಲ್ಲದೆ ಅವರ ಸಮಕಾಲೀನ ಸಂದರ್ಭದಲ್ಲೇ ಇದ್ದಂತಹ ಬುಡಕಟ್ಟು ಪಂಗಡಗಳ ಹೋರಾಟಗಳು ಎಡಪಂಥೀಯ ಹೋರಾಟಗಳು, ರೈತಾಪಿ ಜನರ ಚಳುವಳಿಗಳು. ಹೀಗೆ ಅನೇಕ ಆಂದೋಲನಗಳು ಬ್ರಿಟಿಷ್ ಭಾರತದುದ್ದಗಲಕ್ಕೂ ವ್ಯಾಪಿಸಿದ್ದವು. ಅಂತಹ ಸಂಕೀರ್ಣತೆಯಲ್ಲಿ ಡಾ. ಅಂಬೇಡ್ಕರವರು ನಿರೂಪಿಸಿದ ಚಾರಿತ್ರಿಕ ಅಧ್ಯಯನಗಳು ಅಂದಿನ ಅಧ್ಯಯನ ಶಿಸ್ತುಗಳಲ್ಲೇ ನಿರೂಪಣೆಗೊಂಡರೂ ಸಹ, ತಳಸ್ತರದ ಬದುಕನ್ನು ಆಧುನಿಕತೆಯತ್ತ ಚಲಿಸಲು ಅಗತ್ಯವಾದ ತಳಹದಿಯನ್ನಂತೂ ಹಾಕಿದವು. ಆದರೆ, ತಮ್ಮ ಅಧ್ಯಯನದ ಅಂದರೆ ಅಂದಿನ 'ಆಧುನಿಕತೆ'ಯೊಳಗೆ ಇದ್ದ ಮಿತಿಗಳನ್ನು ಮೀರಲು, 'ಲಿಬರಲ್ ಪಾರ್ಲಿಮೆಂಟರಿ' ವ್ಯವಸ್ಥೆಯೊಳಗಿದ್ದುಕೊಂಡೇ, ಅತ್ಯಗತ್ಯವಾದ ಮತ್ತೊಂದು ಜೀವಂತ ಪರಂಪರೆಯನ್ನು ಚಲಾವಣೆಗೆ ತಂದರು. ಅದೇ ಬೌದ್ಧ ಪರಂಪರೆ. ಆದ್ದರಿಂದಲೇ ಡಾ. ಅಂಬೇಡ್ಕರ್‌ರವರನ್ನು 'ಆಧುನಿಕ ಬುದ್ಧ' ಎಂದು ಕರೆಯುವುದು. ಅನೇಕ ಬಾರಿ ಡಾ. ಅಂಬೇಡ್ಕರವರನ್ನು "ಆಧುನಿಕ ಮನು" ಎಂದು ಕರೆದು ಬ್ರಾಹ್ಮಣೀಕರಿಸುವ ಪ್ರವೃತ್ತಿಯನ್ನು ಅನೇಕರು ಮಾಡುವುದನ್ನು ಇನ್ನು ಮುಂದೆಯಾದರು ನಿಲ್ಲಿಸಬೇಕು. ಆದ್ದರಿಂದ ಡಾ. ಅಂಬೇಡ್ಕರವರು ಪ್ರತಿಪಾದಿಸಿರುವ ಬೌದ್ಧ ಪರಂಪರೆಯನ್ನು ವರ್ತಮಾನದ ಬಹುರೂಪಿ ನೆಲೆಗಳಲ್ಲಿ, ಬಹುರೂಪಿಯಾಗಿ ಕಟ್ಟಿಕೊಡುವ ಜರೂರು ನಮ್ಮ ಮುಂದೆ ಇದೆ. "ಆಧುನಿಕತೆ" ಧರ್ಮ ವಿರೋಧಿ ಎನ್ನುವ ಕುತರ್ಕವನ್ನು ಬಿಟ್ಟು, ಬೌದ್ಧ ಪರಂಪರೆಯನ್ನು ಬೌದ್ಧಿಕವಾಗಿ ನಿರೂಪಿಸುವ ಮತ್ತು ಗೊಡ್ಡು ಸಂಪ್ರದಾಯಗಳಿಗೆ ಕಟ್ಟುವ ಪ್ರವೃತ್ತಿಗಳ ಬಗ್ಗೆ ಎಚ್ಚರಿಕೆ ಅಗತ್ಯ. ಅಂದರೆ ಆಧುನಿಕತೆಯ ಮಿತಿಗಳನ್ನು ಸಲೀಸಾಗಿ ನಿರ್ವಹಿಸಬಲ್ಲುದೆಂದರೆ ಡಾ. ಅಂಬೇಡ್ಕವರು ಪ್ರತಿಪಾದಿಸಿರುವ ಬೌದ್ಧ ಪರಂಪರೆಯಲ್ಲಿರುವ "ಪ್ರಾತಿತ್ಯ ಸಮುತ್ಪಾದ" ಅಂದರೆ ಚರಿತ್ರೆಯನ್ನು ಅರ್ಥೈಸುವ ಹೊಸ ಬಗೆಯ ಓದು. ನೆನಪಿನ ಹುತ್ತವನ್ನು ಅಗೆಯುವ ನೂತನ ಆಯುಧ. ಸಮುದಾಯ ಮತ್ತು ವ್ಯಕ್ತಿ ಐಡೆಂಟಿಟಿಯನ್ನು ನಿರೂಪಿಸುವ 'ಪ್ರಕ್ರಿಯಾತ್ಮಕ' ಸಿದ್ಧಾಂತ.

ಈ ಮೇಲಿನ ಪರಿಕಲ್ಪನಾ ವಿಧಾನದಿಂದ ಇನ್ನು ಮುಂದಿನ ಟಿಪ್ಪಣಿಗಳನ್ನು ಗಮನಿಸಬೇಕಾಗುತ್ತದೆ.

'ಏಕರೂಪಿಯಾಗಿ ಅಂಬೇಡ್ಕರವರ ಸಿದ್ಧಾಂತವನ್ನು ವ್ಯಕ್ತಿತ್ವವನ್ನು ನಿರೂಪಿಸುವುದನ್ನು ಪ್ರಶ್ನೆ ಮಾಡಬೇಕಾಗಿದೆ. ಅಂದರೆ ಯಾವುದೇ ಸಂಗತಿ ಅನೇಕ ಆಯಾಮಗಳಲ್ಲಿ ಅರ್ಥೈಸಬಹುದಾಗಿದೆ. ನಿದರ್ಶನಕ್ಕೆ ಜಾತಿ ಪದ್ಧತಿಯನ್ನು ತೆಗೆದುಕೊಳ್ಳೋಣ. ಇಂದಿಗೂ ಅದನ್ನು ಸಂಸ್ಕೃತ ಪರಪಂರೆಯು ನಿರೂಪಿಸಿಕೊಟ್ಟ 'ಏಕರೂಪಿ' ಸತ್ಯದಲ್ಲಿ ನೋಡಬೇಕಿಲ್ಲ. 4 ವರ್ಣಗಳಲ್ಲೇ ಎಲ್ಲಾ ಸಮುದಾಯಗಳನ್ನು ತುರುಕಿಬಿಟ್ಟು, ತುರುಕಲಾಗದ ಸಮುದಾಯಗಳನ್ನು ಪಂಚಮ ಎಂದೋ ಚಾಂಡಾಳ ಎಂದೊ, ಉಪಜಾತಿಯೆಂದೋ ಕರೆಯಲಾಗುತ್ತದೆ. ಇದನ್ನು ಬಿಟ್ಟು ಬೌದ್ಧ ಗ್ರಹೀತದ ಪ್ರಕಾರ ಇದೊಂದು ವ್ಯವಹಾರಿಕ ಬದುಕಿಗೆ ನೆರವಾಗುವ ಸತ್ಯವೆಂದು ನೋಡಬೇಕಾಗುತ್ತದೆ. ಅಂದರೆ ನೂರಾರು ಸಮುದಾಯಗಳಾದ ಕೊರವ, ಇರುಳಿಗ, ಹೊಲೆಯ, ಪಂಬದ, ಮಾದಿಗ, ಕೊರಗ, ಕೊರಮ, ಕೊರಚ....ಮುಂತಾದವುಗಳ ಮೂಲಕ "ಸಂಸ್ಕೃತ ಪರಂಪರೆ" ಕಟ್ಟಿಕೊಂಡಿರುವ ಜಾತಿ ಪದ್ಧತಿಯನ್ನು ಧಿಕ್ಕರಿಸಿ, ಬಹುರೂಪಿಯಾಗಿ ಜಾತಿ ಪದ್ಧತಿಯನ್ನು ವ್ಯಾಖ್ಯಾನಿಸಬಹುದಾಗಿದೆ. ಆ ಮೂಲಕ ಹಿಂದುತ್ವವನ್ನು ತಿರಸ್ಕರಿಸಬಹುದು. ಅಂದರೆ "ಭಿನ್ನತೆ"ಯನ್ನು ಬಹುರೂಪಿ ನೆಲೆಗಳಲ್ಲಿನ ಸಾಮಾಜಿಕ ನ್ಯಾಯ"ವನ್ನಿಟ್ಟು ವ್ಯಾಖ್ಯಾನಿಸಬೇಕಾಗುತ್ತದೆ.

2. ಭಾರತೀಯ ಇಂದಿನ ಭೌಗೋಳಿಕ ಸಂದರ್ಭದಲ್ಲಿ ಮೂಡಿ ಬಂದಿರುವ "ದಲಿತ" ಚಳುವಳಿಯ ಹಿನ್ನಲೆಯಲ್ಲಿ

ವ್ಯಾಖ್ಯಾನಿತವಾಗಿರುವ ಬಹುರೂಪಿ ನೆಲೆಗಳನ್ನು ಉಳಿಸಿಕೊಳ್ಳುತ್ತಲೇ, ಲಿಬರಲ್ ಲಕ್ಷಣಗಳಿಂದ ಹೊರಬರಬೇಕಾಗುತ್ತದೆ. ಅನೇಕ ಸಲ ವಿದ್ವಾಂಸರು ಮತ್ತು ಕಾರ್ಯಕರ್ತರು ತಮ್ಮ ಮೂಗಿನ ನೇರಕ್ಕೆ ಅಂದರೆ ತಮ್ಮ ಓದಿನ ಮಿತಿ ಮತ್ತು ಅನುಭವದ ಮಿತಿಯಲ್ಲೇ ಡಾ. ಅಂಬೇಡ್ಕರವರನ್ನು ಅರ್ಥೈಸುತ್ತಾರೆ. ಆದ್ದರಿಂದ ಅಂಬೇಡ್ಕರೋತ್ತರ ಕಾಲಘಟ್ಟದಲ್ಲಿ ಚಲಾವಣೆಯಲ್ಲಿರುವ 'ಸಂವಿಧಾನ ಶಿಲ್ಪಿ', 'ಆಧುನಿಕ ಮನು', 'ಬೋಧಿಸತ್ವ', 'ಸಂವಿಧಾನ ಪಟು', 'ವಿಮೋಚಕ', 'ಅಸ್ಪೃಶ್ಯತಾ ನಾಯಕ', 'ಲಿಬರಲ್ ಪ್ರಜಾಪ್ರಭುತ್ವವಾದಿ', 'ಕಮ್ಯುನಿಸ್ಟ್ ವಿರೋಧಿ', 'ಸಾಮಾಜಿಕ ಚಿಕಿತ್ಸಕ', 'ಮಹಾಪುರುಷ', 'ದೈವ'...ಹೀಗೆ ಅನೇಕ ಪರಿಕಲ್ಪನೆಗಳು ಅಲ್ಪ ಓದಿನ ಮತ್ತು ವರ್ತಮಾನದ ಐಡಿಯಾಲಜಿಕಲ್ ಚೌಕಟ್ಟಿನಲ್ಲಿ ಬಂದ ಅವು ಅನೇಕ ಸಲ ಗ್ರಾಹಕ ಸಂಸ್ಕೃತಿಯ ಮತ್ತು ಯಾಜಮಾನ್ಯ ಅಧಿಕಾರ ಸಂಬಂಧಗಳಲ್ಲಿ ಬಂಧಿತವಾಗಿರುತ್ತವೆ ಎಂಬುದನ್ನು ಮರೆಯುವಂತಿಲ್ಲ. ಡಾ. ಅಂಬೇಡ್ಕರವರು ಬೌದ್ಧ ಪರಪಂರೆಯ "ಅನಿತ್ಯವಾದ" ಅಥವಾ "ಕ್ಷಣಿಕವಾದ"ವನ್ನು ಮೈಗೂಡಿಸಿಕೊಂಡಿದ್ದರೆಂಬುದನ್ನು ಅರಿತು, ಆಯಾ ಭೌಗೋಳಿಕ, ಸಾಂಸ್ಕೃತಿಕ ಸಂದರ್ಭಕ್ಕೆ ತಕ್ಕಂತೆ ಮೇಲಿನ ರೂಪಕಗಳನ್ನು ಅನುವಾರಿಸಿಕೊಳ್ಳುವುದು ಒಳಿತೆಂದು ನನ್ನ ಭಾವನೆ ಹೀಗಾದಾಗ 'ಸ್ಥಿರತೆ' ಮುಖ್ಯವಾಗಿದೆ "ಆಗುವಿಕೆ" ಮುಖ್ಯವಾಗುತ್ತದೆ. ಈ ನಿರಂತರತೆಯಲ್ಲಿ ಐಡೆಂಟಿಟಿಯ ಸಾಧ್ಯತೆಯನ್ನು ವಿವರಿಸಿಕೊಳ್ಳಬಹುದು.

3. ಭಾರತದ 'ರಾಷ್ಟ್ರ' ಉದಯವಾದಾಗ 'ಸಂಸ್ಕೃತ ಪರಂಪರೆ' ನಿರೂಪಿಸಿಕೊಟ್ಟಂತಹ ಚರಿತ್ರೆಯ ಮೂಲಕ ತಳಸ್ತರದ ಸಮುದಾಯಗಳ ಚರಿತ್ರೆಯನ್ನು ತಿರಸ್ಕರಿಸಲಾಗುತ್ತದೆ. ಅಂದರೆ ನಮಗೆ ಬೇಕಾದ 'ಗತ'ಕಾಲದ ಚರಿತ್ರೆಯನ್ನು ಕಟ್ಟುವಾಗ ಈ ಹಿಂದೆ ಸೂಚಿಸಿದ ಮೇರೆಗೆ 'ಶೋಷಣೆ'ಯನ್ನು ವಿವರಿಸುವ ಮತ್ತು 'ಸಾಮಾಜಿಕ ನ್ಯಾಯ'ವನ್ನು ವರ್ತಮಾನದಲ್ಲಿ ಸಾಕಾರಗೊಳಿಸಿಕೊಳ್ಳುವ ವಿಧಾನಗಳೊಳಗಿನ ತಾತ್ವಿಕ ಪರಿಕಲ್ಪನೆಗಳನ್ನು ಪ್ರಶ್ನಿಸಿಕೊಳ್ಳಬೇಕಾಗಿದೆ. ಉದಾಹರಣೆಗೆ 'ಏಕರೂಪಿ ಕಾಲ'ವನ್ನು ಗಡಿಯಾರದ ಮೂಲಕ ಗುರುತಿಸಿಕೊಳ್ಳುವಾಗ ಅದರ 'ರಾಜಕೀಯ ಧೋರಣೆ'ಗಳನ್ನು ತಳಸ್ತರ ಸಮುದಾಯಗಳಲ್ಲಿ ಪರಿಕಲ್ಪಿತವಾಗಿರುವ ಕಾಲದೊಂದಿಗಿಟ್ಟು ಅರ್ಥೈಸಬೇಕಾಗುತ್ತದೆ. ಹಾಗೆಯೇ 'ಸರಳ-ಸರಳಾತ್ಮಕ' ಚಾರಿತ್ರಿಕ 'ಪ್ರಗತಿ' ಕಲ್ಪನೆಯನ್ನು ಬದುಕಿನ ಜ್ಞಾನ ಮೀಮಾಂಸೆಗೆ ಅನುವಾದಿಸಿಕೊಳ್ಳಬೇಕಾಗುತ್ತದೆ. ಹೀಗೆ ಮಾಡುವಾಗ ಬ್ರಾಹ್ಮಣ್ಯದ "ಯುಗ/ಶಕೆ"ಗಳ ಪರಿಕಲ್ಪನೆಯನ್ನು ಬಿಡಬೇಕಾಗುತ್ತದೆ. ಅನೇಕ ಬಾರಿ ನಾವೆಲ್ಲಾ "ಪರಿಣಾಮ"ವಾದಿಗಳಾಗಿ ಬಿಡುತ್ತೇವೆ. ಅದನ್ನೇ 'ಸತ್ಯ'ವೆಂದೂ, ಸಿದ್ಧಾಂತವೆಂದು ಪ್ರಮಾಣೀಕರಿಸುವುದನ್ನು ಬಿಟ್ಟು, ಆ ಪರಿಣಾಮಗಳು ಎಲ್ಲಿಂದ, ಯಾಕೆ ಮತ್ತು ಯಾರ ಮೇಲೆ ಪ್ರಯೋಗವಾಗಿವೆ ಎಂಬುದನ್ನು ಗಮನಿಸಬೇಕಾಗುತ್ತದೆ. ಆದ್ದರಿಂದ 'ಶೋಷಣೆ' ಎಂಬ ಬೇತಾಳ ನಮ್ಮನ್ನು ನುಂಗಿದಾಗಲೂ ತಪ್ಪಿಸಿಕೊಳ್ಳುವ ತಂತ್ರ/ಜಾಣ್ಮೆ ನಮಗಿದೆ ಎಂಬುದನ್ನು ಮರೆಯುವಂತಿಲ್ಲ. 'ಶೋಷಕ'ನು ಇಂದು 'ಏಕರೂಪಿ' ನೆಲೆಗಳಲ್ಲಿ ಕಾಣಿಸಿಕೊಳ್ಳುವುದಿಲ್ಲ.

ಭಾರತದ 'ರಾಷ್ಟ್ರ' ಉದಯವಾದಾಗ 'ಸಂಸ್ಕೃತ ಪರಂಪರೆ' ನಿರೂಪಿಸಿಕೊಟ್ಟಂತಹ ಚರಿತ್ರೆಯ ಮೂಲಕ ತಳಸ್ತರದ ಸಮುದಾಯಗಳ ಚರಿತ್ರೆಯನ್ನು ತಿರಸ್ಕರಿಸಲಾಗುತ್ತದೆ. ಅಂದರೆ ನಮಗೆ ಬೇಕಾದ 'ಗತ'ಕಾಲದ ಚರಿತ್ರೆಯನ್ನು ಕಟ್ಟುವಾಗ ಈ ಹಿಂದೆ ಸೂಚಿಸಿದ ಮೇರೆಗೆ 'ಶೋಷಣೆ'ಯನ್ನು ವಿವರಿಸುವ ಮತ್ತು 'ಸಾಮಾಜಿಕ ನ್ಯಾಯ'ವನ್ನು ವರ್ತಮಾನದಲ್ಲಿ ಸಾಕಾರಗೊಳಿಸಿಕೊಳ್ಳುವ ವಿಧಾನಗಳೊಳಗಿನ ತಾತ್ವಿಕ ಪರಿಕಲ್ಪನೆಗಳನ್ನು ಪ್ರಶ್ನಿಸಿಕೊಳ್ಳಬೇಕಾಗಿದೆ. ಉದಾಹರಣೆಗೆ 'ಏಕರೂಪಿ ಕಾಲ'ವನ್ನು ಗಡಿಯಾರದ ಮೂಲಕ ಗುರುತಿಸಿಕೊಳ್ಳುವಾಗ ಅದರ 'ರಾಜಕೀಯ ಧೋರಣೆ'ಗಳನ್ನು ತಳಸ್ತರ ಸಮುದಾಯಗಲಲ್ಲಿ ಪರಿಕಲ್ಪಿತವಾಗಿರುವ ಕಾಲದೊಂದಿಗಿಟ್ಟು ಅರ್ಥೈಸಬೇಕಾಗುತ್ತದೆ.

4. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹರಿಜನ-ಗಿರಿಜನ, ನಿಮ್ನ ಜಾತಿ-ಪಂಗಡಗಳೆನ್ನುವಾಗ, 'ಆಧುನಿಕ' ಸರ್ಕಾರ-ಪ್ರಭುತ್ವ ಆಡಳಿತಾತ್ಮಕವಾಗಿ ಒಂದು ಸಾರ್ವತ್ರಿಕ ಐಡೆಂಟಿಟಿಯನ್ನು ಎಲ್ಲಾ ತಳಸ್ತರದ ಸಮುದಾಯಗಳಿಗೆ ಆರೋಪಿಸುತ್ತಾ, ಆ ಸಮುದಾಯಗಳ ನಿಜವಾದ ಐಡೆಂಟಿಟಿ ಪದ-ಭಾಷೆಗಳನ್ನು ತಿರಸ್ಕರಿಸಿ, ಕೀಳರಿಮೆಯನ್ನು ಸ್ಥಾಪಿಸಲಾಗುತ್ತದೆ. ಆದ್ದರಿಂದ ಮೇಲಿನ ಪರಿಕಲ್ಪನೆಗಳು ಆಡಳಿತ ಕಛೇರಿಗಳಲ್ಲಿ ಬಳಸುವಾಗ, ಬಳಸುವ ವ್ಯಕ್ತಿ ಮತ್ತು ಆ ವ್ಯಕ್ತಿ ಪ್ರತಿನಿಧಿಸುತ್ತಿರುವ ಪ್ರಭುತ್ವ ಶಕ್ತಿಗಳನ್ನು ಪ್ರಶ್ನಿಸಬೇಕಾಗುತ್ತದೆ. ಡಾ|| ಅಂಬೇಡ್ಕರವರು 'ಮೀಸಲಾತಿ'ಯನ್ನು ಪ್ರತಿಪಾದಿಸುವಾಗ ಅವರು ಪ್ರತಿಪಾದಿಸಿದ 'ಸಂಖ್ಯಾವಾರು' ಪರಿಕಲ್ಪನೆಯನ್ನು ನಾವು ಸೂಕ್ಷ್ಮವಾಗಿ ಪರಿಗಣಿಸಬೇಕಾಗುತ್ತದೆ. ಆ ಮೂಲಕ ವ್ಯಕ್ತಿ ಕೇಂದ್ರದಿಂದ ಸಮುದಾಯ ಕೇಂದ್ರದತ್ತ ಚಲಿಸಿ, ಪ್ರಭುತ್ವದ ಇನ್ನೊಂದು ಮುಖವಾದ ಖಾಸಗೀ ಕ್ಷೇತ್ರಗಳತ್ತ ಸಾಗಬೇಕಾಗುತ್ತದೆ. ಅಲ್ಲದೆ ಈ ಆಡಳಿತಾತ್ಮಕ ಪದಗಳು ತಳಸ್ತರದ ಸಮುದಾಯಿಕ ಬದುಕಿನ ಕ್ರಮಗಳನ್ನು ಪ್ರಭುತ್ವದ ಅಧಿಕಾರಕ್ಕೆ ಪೂರಕವಾಗಿ ಏಕರೂಪಿ ಬದುಕನ್ನಾಗಿ ಸ್ಥಾಪಿಸಲು ಯಜಮಾನ್ಯ ಶಕ್ತಿಗಳು ಪ್ರಯತ್ನಿಸುತ್ತಿರುತ್ತವೆ. ಆದ್ದರಿಂದ, ಈ ಆಡಳಿತಾತ್ಮಕ ಪದಗಳೇ ಐಡೆಂಟಿಟಿಯಾಗಿ, ನಮ್ಮ ಕುಟುಂಬಗಳಲ್ಲಿ ಜೀವಿಸುವ ಬಳಿ, ಕುಲ ಸಂಬಂಧಗಳಲ್ಲಿನ ಸತ್ವವನ್ನು ಕಳೆದುಕೊಳ್ಳುತ್ತೇವೆ. ಅಲ್ಲಿನ ಐಡೆಂಟಿಟಿ ಸಾಧ್ಯತೆಗಳತ್ತ ವಿಮರ್ಶಾತ್ಮಕ ಗಮನ ಅಗತ್ಯ.

5. "ದಲಿತ" ಪದ ಬಳಕೆಯಲ್ಲಿ ಏಕವ್ಯಕ್ತಿ ಪರಿಕಲ್ಪನೆಯಾಗಿ, ಸಮುದಾಯಗಳನ್ನು ಪ್ರತಿನಿಧಿಸುವ ಪರಿಕಲ್ಪನೆಯಾಗಿ ಇಂದು ಬಳಕೆಯಾಗುತ್ತಿದೆ. ಹೀಗಾಗಲು ನಡೆದು ಬಂದಿರುವ ಚಾರಿತ್ರಿಕ ಸಂಗತಿಗಳನ್ನು ಗಮನಿಸುವಾಗ ಅದು ಅನೇಕ ಬಾರಿ 'ಸ್ವಯಂ ತಂತ್ರವಾದಿ' ನೆಲೆಗಳಿಂದಲೇ ನಿರೂಪಿತವಾಗಿದೆ. ಅದಕ್ಕಿರುವ ರಾಜಕೀಯ-ಸಾಂಸ್ಕೃತಿಕ ಆಯಾಮ (ರಾಜಕೀಯ ಪಕ್ಷದ ಪರಿಭಾಷೆ ಅಲ್ಲ)ವನ್ನು ಗಮನಿಸಿ, ಅದನ್ನು ಹಾಗೆಯೇ ಬಳಸಬೇಕಾಗುತ್ತದೆ. ಏಕೆಂದರೆ ವರ್ತಮಾನದ ಸಂದರ್ಭದಲ್ಲಿ ಅದು ಏಕರೂಪಿ 'ಐಡೆಂಟಿಟಿ'ಯನ್ನು ಕಟ್ಟುವ ಪದವಾಗಲು ಬಯಸುತ್ತದೆ. ಇದು ಸಾಧ್ಯವಿಲ್ಲ. ಬಹುರೂಪಿ ಸಾಮುದಾಯಿಕ ಐಡೆಂಟಿಟಿಗಳನ್ನು ಅದು ಜೀರ್ಣಿಸಿಕೊಳ್ಳುವ ಸಾಧ್ಯತೆಗಳೇ ಹೆಚ್ಚಾಗಿವೆ. ಆದ್ದರಿಂದ ಅದು ಸೂಚಿಸುವ "ವಿಮೋಚನಾ ಆಶಯ"ವನ್ನು ಆಯಾ ಜಾಗಕ್ಕೆ ಮತ್ತು ಸಮುದಾಯಕ್ಕೆ ಅನುವಾದಿಸಿಕೊಳ್ಳಬೇಕಾಗುತ್ತದೆ. ಅಲ್ಲದೆ ಆ ಪದವನ್ನು ಬಯ್ಗುರಿಯಾಗಿ, ಬ್ರಾಹ್ಮಣ್ಯಕ್ಕೆ ವಿರುದ್ಧವಾಗಿ ನಿಲ್ಲಿಸುವಾಗ ಅದೊಂದು ರಾಜಕೀಯ ತಂತ್ರಗಾರಿಕೆಯಾಗಿ ಬಳಸುವುದು ಸೂಕ್ತವೆಂದು ನನ್ನ ಭಾವನೆ. ಲಿಬರಲ್ ವಿದ್ಯಾರ್ಥಿಗಳಾದ

ನಮಗೆ ಅದೊಂದು ಐಕ್ಯ ಪರಿಕಲ್ಪನೆಯಾಗಿ, ಸಾಮಾಜಿಕ ನ್ಯಾಯದ ಪರಿಭಾಷೆಯಾಗಿಯೂ ಕಾಣುತ್ತದೆ. ಹಾಗೆಯೇ ಅದು ನಿರ್ದಿಷ್ಟ ಜಾತಿ ಸೂಚಕ ಪದವಾಗಿ ಬ್ರಾಹ್ಮಣೀಕರಣಕ್ಕೊಳಗಾಗಿ ಬಿಡುತ್ತದೆ. ಈ ಅಪಾಯದಿಂದ ಅದು ಮುಕ್ತವಾಗಬೇಕಾಗುತ್ತದೆ. ಅದಕ್ಕಾಗಿ ತಳಸ್ತರದ ಸಮುದಾಯಗಳೆಲ್ಲಾ ತಮ್ಮ ತಮ್ಮ ಬೇಡಿಕೆಗಳನ್ನು ಸಾರ್ವಜನಿಕವಾಗಿ ಪ್ರತಿಪಾದಿಸುವಾಗ ಆ ಪದವನ್ನು ಒಂದು ರಾಜಕೀಯ ಪರಿಭಾಷೆಯಾಗಿ ಬಳಸುತ್ತಾ, ತಮ್ಮ ಸಮುದಾಯದೊಳಗೇ ಐಡೆಂಟಿಟಿಯನ್ನು ಕಟ್ಟುವಾಗ, ಅದರಾಚೆ ಬಂದು ನಿಂತು, ತಮ್ಮೊಳಗಿನ 'ಸಾಂಸ್ಕೃತಿಕ' ಬದುಕಿನ ಮೂಲಕವೇ ಗುರುತಿಸಿಕೊಳ್ಳುವ ಕ್ರಿಯೆ ಬಹಳ ಮುಖ್ಯವೆನಿಸುತ್ತದೆ.

6. ಯಶಸ್ಸು 'ಸಾಧನೆ', ಪರಿಕಲ್ಪನೆಗಳು ಸಾಮುದಾಯಿಕ ಐಡೆಂಟಿಟಿಯನ್ನು ನಿರುಪಿಸುತ್ತಾವಾದರೂ 'ಶ್ರೇಣೀಕೃತ' ವ್ಯವಸ್ಥೆ ನೀಡುವ ಯಶಸ್ಸು, ಸಾಧನೆ, ಪರಿಕಲ್ಪನೆಗಳನ್ನು ಬಿಟ್ಟು, ಬಹುರೂಪಿ ನೆಲೆಗಳ ಯಶಸ್ಸು, ಸಾಧನೆಗಳನ್ನು ನಮ್ಮೊಳಗಿನಿಂದಲೇ ತಯಾರಿಸಬೇಕಾಗುತ್ತದೆ. ಯಶಸ್ಸು-ಸಾಧನೆಗಳನ್ನು ವೈಯಕ್ತಿಕವಾಗಿ ನಿರೂಪಿಸುವಾಗ, ಆ ವ್ಯಕ್ತಿಯ ಹಿಂದಿರುವ ಸಾಮುದಾಯಿಕ, ಸಾಂಸ್ಕೃತಿಕ ನೆಲೆಗಳನ್ನೂ ಸಹ ವಿವರಿಸಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ ಡಾ|| ಅಂಬೇಡ್ಕರರವರನ್ನು 'ತಳಸ್ತರ ಸಮುದಾಯಗಳ ನೇತಾರ' ಎಂದು ಹೇಳುವಾಗ, ದಕ್ಷಿಣ ಭಾರತದಲ್ಲಿ ಈ ಸಮುದಾಯಗಳನ್ನು ಅಂಬೇಡ್ಕರ್ ರೊಡನೆ ದುಂಡು ಮೇಜಿನ ಪರಿಷತ್ತಿನಲ್ಲಿ ಪ್ರತಿಪಾದಿಸಿದ ರೆಟ್ಟೈ ಮಲೈ ಶ್ರೀನಿವಾಸನ್‌ರನ್ನೂ ಮರೆಯುವಂತಿಲ್ಲ.

ಕೊನೆಯದಾಗಿ ಐಡೆಂಟಿಟಿಯನ್ನು ನಿರೂಪಿಸುವಾಗ ವರ್ತಮಾನದಲ್ಲಿ ಅದು ಯಾವುದರಿಂದ ಪ್ರೇರಿತಗೊಳ್ಳುತ್ತಿದೆ ಎನ್ನುವಾಗ, ಅದರ ರಾಜಕಾರಣದ ಎಚ್ಚರಿಕೆ ಅತ್ಯಗತ್ಯ. ಅದು ಕೇವಲ ಭಿನ್ನತೆಗಳನ್ನಷ್ಟೆ ನಿರೂಪಿಸದೆ, ಆ ಭಿನ್ನತೆಗಳೊಳಗಿನ ಅಧಿಕಾರ-ಸಂಬಂಧಗಳನ್ನು ಹಾಗೆಯೇ ಉಳಿಸಿಕೊಳ್ಳುವ ಸಾಧ್ಯತೆಗಳೂ ಇವೆ. ಇದನ್ನು ಗ್ರಹಿಸಲು "ಶತ್ರು" ಅಥವಾ "ಅನ್ಯ" ನೀಡುವ ನಿರ್ದೇಶನಗಳೇ "ನನ್ನ" ಮತ್ತು "ನಮ್ಮ" ಐಡೆಂಟಿಗಳು ಎಂಬುದನ್ನು ಬಿಡಬೇಕಾಗುತ್ತದೆ. ಇದನ್ನು ವಿವರಿಸಲು ಗಾಂಧೀಜಿ ಬಳಸಿದ 'ಹರಿಜನ' ಪದವನ್ನು ತೆಗೆದುಕೊಳ್ಳೋಣ. ಇದು ನಾಜೂಕಿನ ಮುಖವಾಡವಾಗಿ, ಅದೇ ಎಲ್ಲಾ ತಳಸ್ತರದ ಸಮುದಾಯಗಳ ಐಡೆಂಟಿಯಾಗಿಯೂ ಕಾಣಿಸುತ್ತದೆ. ಇದು 'ಹೊರಗಿನದ್ದು' ಎನ್ನುವುದಕ್ಕಿಂತ ಅದಕ್ಕಿರುವ ಸಾಧ್ಯತೆಗಳು ಮತ್ತು ಅವಕಾಶಗಳು ಕಮ್ಮಿ ಹಾಗೂ ಅಂತಃ ಸತ್ವವನ್ನು ಅರಳಿಸಲು ಸೋಲುತ್ತದೆ. 'ಶತ್ರು' ಅಥವಾ 'ಶೋಷಕ' ಎಂದೂ ಐಡೆಂಟಿಟಿಯನ್ನು ನಿರೂಪಿಸಲಾಗುವುದು.



ಕಲಾವಿದ : ಚಂದ್ರಹಾಸ್ ಜೆ.ಜೆ.

(ಈ ಲೇಖನ ಮತ್ತಷ್ಟು ಅಧ್ಯಯನವನ್ನು ಬಯಸುತ್ತದೆ. ಕನಿಷ್ಠವೆಂದರೂ ಈ ಐಡೆಂಟಿಟಿಯನ್ನು ವಿವರಿಸಿಕೊಳ್ಳುವಾಗ 1) ಸ್ವಾತಂತ್ರ್ಯ ಪೂರ್ವದಲ್ಲಿ ನಡೆದ ಅಧ್ಯಯನ ಕ್ರಮಗಳು ಮತ್ತು ಪ್ರಭಾವಿಸಿದ ಚಳುವಳಿಗಳು, 2) ಸ್ವಾತಂತ್ರ್ಯ ನಂತರದಲ್ಲಿ ಬಂದಿರುವ ಅಧ್ಯಯನ ರೂಪಿಕೆಗಳು ಹಾಗೂ ಹೋರಾಟಗಳು ಮತ್ತು ಇತ್ತೀಚಿನ ಆಧುನಿಕೋತ್ತರ ಚಿಂತನ ಕ್ರಮಗಳನ್ನು ಗಮನಿಸಬೇಕಾಗುತ್ತವೆ. ಆದ್ದರಿಂದ ಲೇಖನಕ್ಕೆ ನ್ಯಾಯ ಒದಗಿಸಿರುವ ಸಾಧ್ಯತೆಗಳು ಕಮ್ಮಿಯೆಂದೇ ಹೇಳಬೇಕು). ●



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಪ್ರಕಾಶಕರು/ಲೇಖಕರು ಪ್ರಕಟಿತ ಕೃತಿಯ 2 ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ : 'ಸಂವಾದ' ಮಾಸ ಪತ್ರಿಕೆ ಅಂಚೆ ಪೆಟ್ಟಿಗೆ ಸಂಖ್ಯೆ : 9143,
ಹೇರೋಹಳ್ಳಿ, ಮಾಗಡಿರಸ್ತೆ, ವಿಶ್ವನೀಡಂ ಅಂಚೆ, ಬೆಂಗಳೂರು - 560 091
ದೂರವಾಣಿ : 3287943 / 3281667

ಹಿಂದೂ ಧರ್ಮದ ವಿವರಣೆ

ಪರ್ಷಿಯನ್ನರು 'ಸಿಂಧು'ವನ್ನು ಹಿಂದೆ ಎಂದು ಕರೆದರು. ಕಾರಣ ಪಾರಸಿ ಭಾಷೆಯಲ್ಲಿ 'ಸ'ಕಾರ 'ಹ'ಕಾರವಾಗುತ್ತದೆಂದು ಹೇಳುತ್ತಾರೆ. 'ಹಿಂದೂ' ಎಂದು ಉಚ್ಚರಿಸಲು ಗ್ರೀಕರಿಗೆ ಕಷ್ಟವಾಯಿತಂತೆ. ಆದ್ದರಿಂದ ಅವರು ಅದನ್ನು 'ಇಂಡಸ್' ಎಂದರು. ಈ ಹಿನ್ನೆಲೆಯಲ್ಲಿ ನಮ್ಮ ದೇಶಕ್ಕೆ ಹಿಂದುಸ್ತಾನ ಮತ್ತು ಇಂಡಿಯ ಎಂದು ಹೆಸರಾಯಿತು. ಪರ್ಷಿಯನ್ನರು ಮತ್ತು ಗ್ರೀಕರು ಬರುವುದಕ್ಕೆ ಮುನ್ನ ನಮ್ಮ ಮಾತೃಭೂಮಿಗೆ ಆರ್ಯಾವರ್ತ, ಭರತಖಂಡ, ಭರತವರ್ಷ ಮತ್ತು ಜಂಬೂದ್ವೀಪ ಎನ್ನುವ ಹೆಸರುಗಳಿದ್ದುವೆಂದು ಹಿಂದಿನ ಸಂಸ್ಕೃತ ಗ್ರಂಥಗಳಲ್ಲಿ ಕಂಡು ಬರುತ್ತದೆ. ಅತ್ಯಂತ ಪ್ರಾಚೀನ ಕೃತಿಯಾದ 'ಋಗ್ವೇದ'ದಲ್ಲಿ ಸಪ್ತ ಸಿಂಧುಷು'1 ಎಂಬ ಮಾತು ಬರುತ್ತದೆ; ನಿಜ. ಆದರೆ ಅದು ದೇಶಕ್ಕೆ ಸಂಬಂಧಿಸಿದ ಮಾತಲ್ಲ; ಅದಕ್ಕೆ 'ಏಳು ದಿನಗಳು' ಎಂದು ಅರ್ಥ, ಅಷ್ಟೆ. ಅಂದರೆ 'ಹಿಂದೂ' ಶಬ್ದ ಹಳೆಯ ಕಾಲದ ಯಾವ ಕೃತಿಯಲ್ಲೂ ಸಿಗುವುದಿಲ್ಲ. ವೇದಗಳು, ಉಪನಿಷತ್ತುಗಳು, ರಾಮಾಯಣ, ಮಹಾಭಾರತ ಮತ್ತು ಪುರಾಣಗಳಲ್ಲಿ ಅದು ಕಾಣುವುದಿಲ್ಲ. ಹೀಗಾಗಿ ಅದು ಮೊಟ್ಟಮೊದಲು ಯಾವಾಗ ಪ್ರಯೋಗವಾಯಿತು ಎನ್ನುವುದು ಖಚಿತವಾಗಿ ಗೊತ್ತಿಲ್ಲ. ಆದರೂ 'ಆಕ್ಸ್‌ಫರ್ಡ್' ಇಂಗ್ಲೀಷ್ ಡಿಕ್ಷನರಿ ಆನ್ ಹಿಸ್ಟಾರಿಕಲ್ ಪ್ರಿನ್ಸಿಪಲ್ಸ್. (ಚಾರಿತ್ರಿಕ ತತ್ವಗಳನ್ನು ಆಧರಿಸಿದ ಆಕ್ಸ್‌ಫರ್ಡ್ ಇಂಗ್ಲೀಷ್ ನಿಘಂಟು) 'ಹಿಂದೂ' ಶಬ್ದ 1662ರಲ್ಲಿ ಬಂದಿತೆಂದು ದಾಖಲು ಮಾಡಿದೆ.

ಹಿಂದೂ ಶಬ್ದ ಅನೇಕ ಅರ್ಥಗಳಲ್ಲಿ ಪ್ರಯೋಗವಾಗುತ್ತಿದೆ.

ಮೊದಲನೆಯದಾಗಿ, ಭೌಗೋಳಿಕಾರ್ಥದಲ್ಲಿ, ಸಿಂಧೂ ನದಿಯ ಪ್ರದೇಶ ಹಿಂದೂಸ್ತಾನ, ಹಿಂದೂ ದೇಶವಾಯಿತು. ಹಿಂದೂ ದೇಶದಲ್ಲಿ ಹುಟ್ಟಿ ಬೆಳೆದ ಎಲ್ಲರೂ ಹಿಂದೂಗಳು. ಅವರು ಮುಸ್ಲಿಮರಾಗಿರಬಹುದು. ಕ್ರಿಶ್ಚಿಯನ್ನರಾಗಿರಬಹುದು, ಪರ್ಷಿಯನ್ನರಾಗಿರಬಹುದು ಅಥವಾ ಇನ್ನಾವುದೇ ಜನಾಂಗವಾಗಿರಬಹುದು.

ಎರಡನೆಯದಾಗಿ, ಹಿಂದೂ ಶಬ್ದ ಧಾರ್ಮಿಕ ಅರ್ಥದಲ್ಲಿ ನಿಖರವಾಗಿ ಬಳಕೆಯಾಗುತ್ತಿದೆ. ಜಾತಿ ಪದ್ಧತಿಯ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವವರೆಲ್ಲ ಹಿಂದೂಗಳೆಂದು ಕರೆಯಿಸಿ ಕೊಳ್ಳುತ್ತಾರೆ. ಆದ್ದರಿಂದ ಜಾತಿ ಪದ್ಧತಿಯನ್ನು ಪ್ರತಿಪಾದಿಸುವ ಧರ್ಮ ಹಿಂದೂ ಧರ್ಮ ಎಂದು ಹೆಸರಾಗಿದೆ.

ಮೂರನೆಯದಾಗಿ, ಹಿಂದೂ ಶಬ್ದ ಒಂದೇ ಒಂದು ಧರ್ಮಕ್ಕೆ, ಅಂದರೆ ಬ್ರಾಹ್ಮಣ ಧರ್ಮಕ್ಕೆ ಮಾತ್ರ ಅನ್ವಯವಾಗುತ್ತಿದೆ. ಉಳಿದ ಧರ್ಮಗಳಿಗೆ ಅನ್ವಯವಾಗುತ್ತಿಲ್ಲ. ಏಕೆ? ಬೌದ್ಧಧರ್ಮ, ಜೈನಧರ್ಮ, ಶೈವಧರ್ಮ, ಸಿಖ್ ಧರ್ಮ, ಶಾಕ್ತೇಯ ಧರ್ಮ, ನಾಸ್ತಿಕ ಧರ್ಮ, ವೀರಶೈವ ಧರ್ಮ, ಎಲ್ಲವೂ ಹಿಂದೂ ಧರ್ಮಗಳೇ. ಏಕೆಂದರೆ ಇವುಗಳೆಲ್ಲ ಹಿಂದೂಸ್ತಾನದಲ್ಲಿಯೇ ಉದ್ಭವಿಸಿದೆ. ಹಿಂದೂ ಧರ್ಮದ ನಿಜವಾದ ಹೆಸರು ಬ್ರಾಹ್ಮಣ ಧರ್ಮ: ಅದನ್ನು ವೈದಿಕ ಧರ್ಮ ಎಂತಲೂ ಕರೆಯುತ್ತಾರೆ. ವೇದಗಳ ಆಧಾರದ ಮೇಲೆ ರಚಿತವಾಗಿರುವುದರಿಂದ ಹಿಂದೂಸ್ತಾನದ ಉಳಿದ ಧರ್ಮಗಳು ಜಾತಿಯನ್ನು ವೇದ ಪ್ರಾಮಾಣ್ಯವನ್ನೂ ಒಪ್ಪುವುದಿಲ್ಲ. ಅಸಮಾನತೆಯನ್ನು ಮಾನ್ಯ ಮಾಡುವ ವರ್ಣ ವ್ಯವಸ್ಥೆಗೆ ವೇದವೇ ಮೂಲವಾದ್ದರಿಂದ. ಹಾಗಾಗಿ ಬ್ರಾಹ್ಮಣ ಧರ್ಮ ಅವುಗಳನ್ನು ಅವೈದಿಕ ಧರ್ಮಗಳೆಂದು ಕರೆದಿದೆ.

ನಾಲ್ಕನೆಯದಾಗಿ, ಅಸ್ಪೃಶ್ಯರೆಂದು ಕರೆಯಲ್ಪಡುವ, ಒಂದು ರೀತಿಯಲ್ಲಿ ಹಿಂದೂ ಸಮಾಜದ ಹೊರಗೆ ನೆಲೆಯಾಗಿರುವ, ಜನರೂ ಹಿಂದೂಗಳೇ, ಏಕೆಂದರೆ ಅವರು ಹಿಂದೂ ದೇವರುಗಳಲ್ಲಿ ಬಹಳ ಮುಖ್ಯರಾಗಿರುವ ರಾಮ-ಕೃಷ್ಣ-ಶಿವರನ್ನು ನಂಬಿ ಪೂಜಿಸುತ್ತಾರೆ. ಜೊತೆಗೆ ಮನುಸ್ಮೃತಿ ಐದನೆಯ ವರ್ಣವನ್ನು ಮಾನ್ಯ ಮಾಡುವುದಿಲ್ಲ: "ನಾಸ್ತಿ ತು ಪಂಚಮ: "3 ಪಂಚಮ ಎನ್ನುವುದೇ ಇಲ್ಲ ಎಂದು ಮನು ಸ್ಪಷ್ಟವಾಗಿ ಹೇಳಿದ್ದಾನೆ.- ಆದ್ದರಿಂದ ಅವರೂ ನಾಲ್ಕನೆಯ ವರ್ಣವಾದ ಶೂದ್ರವರ್ಗದಲ್ಲಿ ಸೇರಿದ್ದಾರೆ. ಜಾತಿ ವ್ಯವಸ್ಥೆಯ ಕ್ರೂರ ಸುಲಿಗೆಯ ಕರಾಳ ರೂಪವೇ ಅಸ್ಪೃಶ್ಯತೆ.

ಐದನೆಯದಾಗಿ, ಹೀನರು ಮತ್ತು ದೂಷಣೆಗೆ ಒಳಗಾದವರು ಹಿಂದೂಗಳೆಂದು ಕಾಶ್ಮೀರದ "ತಂತ್ರವಾರ್ತಿಕ" ಗ್ರಂಥ ("ಹೀನಂ ಚ ದೂಷ್ಯಂತ್ಯೇವ ಹಿಂದೂ: ಇತಿ ಉಚ್ಯತೇ") ಹಿಂದೂ ಶಬ್ದಕ್ಕೆ ನೀಡುವ ವ್ಯಾಖ್ಯೆ ಕುತೂಹಲಕರವೂ ಸ್ವಾರಸ್ಯಮಯವೂ ಆಗಿದೆ. 4 ಇದರ ಪ್ರಕಾರ ಹಿಂದೂ ಎಂದು ಕರೆದುಕೊಳ್ಳಲು ಯಾರೂ ಇಷ್ಟಪಡಲಾರರು.

ಹಿಂದೂ ಶಬ್ದ ಒಂದೇ ಒಂದು ಧರ್ಮಕ್ಕೆ, ಅಂದರೆ ಬ್ರಾಹ್ಮಣ ಧರ್ಮಕ್ಕೆ ಮಾತ್ರ ಅನ್ವಯವಾಗುತ್ತಿದೆ. ಉಳಿದ ಧರ್ಮಗಳಿಗೆ ಅನ್ವಯವಾಗುತ್ತಿಲ್ಲ. ಏಕೆ? ಬೌದ್ಧಧರ್ಮ, ಜೈನಧರ್ಮ, ಶೈವಧರ್ಮ, ಸಿಖ್ ಧರ್ಮ, ಶಾಕ್ತೇಯ ಧರ್ಮ, ನಾಸ್ತಿಕ ಧರ್ಮ, ವೀರಶೈವ ಧರ್ಮ, ಎಲ್ಲವೂ ಹಿಂದೂ ಧರ್ಮಗಳೇ. ಏಕೆಂದರೆ ಇವುಗಳೆಲ್ಲ ಹಿಂದೂಸ್ತಾನದಲ್ಲಿಯೇ ಉದ್ಭವಿಸಿದೆ. ಹಿಂದೂ ಧರ್ಮದ ನಿಜವಾದ ಹೆಸರು ಬ್ರಾಹ್ಮಣ ಧರ್ಮ: ಅದನ್ನು ವೈದಿಕ ಧರ್ಮ ಎಂತಲೂ ಕರೆಯುತ್ತಾರೆ. ವೇದಗಳ ಆಧಾರದ ಮೇಲೆ ರಚಿತವಾಗಿರುವುದರಿಂದ ಹಿಂದೂಸ್ತಾನದ ಉಳಿದ ಧರ್ಮಗಳು ಜಾತಿಯನ್ನು ವೇದ ಪ್ರಾಮಾಣ್ಯವನ್ನೂ ಒಪ್ಪುವುದಿಲ್ಲ. ಅಸಮಾನತೆಯನ್ನು ಮಾನ್ಯ ಮಾಡುವ ವರ್ಣ ವ್ಯವಸ್ಥೆಗೆ ವೇದವೇ ಮೂಲವಾದ್ದರಿಂದ. ಹಾಗಾಗಿ ಬ್ರಾಹ್ಮಣ ಧರ್ಮ ಅವುಗಳನ್ನು ಅವೈದಿಕ ಧರ್ಮಗಳೆಂದು ಕರೆದಿದೆ.

ಪ್ರೊ|| ಕೆ.ಎಸ್. ಭಗವಾನ್

ಕೊನೆಯದಾಗಿ, ಸ್ವಾಮಿ ವಿವೇಕಾನಂದರು ಹಿಂದೂ ಶಬ್ದವನ್ನು ಬಹಳ ವಿಶಾಲವಾದ ಅರ್ಥದಲ್ಲಿ ಪ್ರಯೋಗಿಸಿದರು. ಅವರು ಹಿಂದೂ ಧರ್ಮವನ್ನು ಹೊಗಳಿರುವಂತೆಯೇ ಖಂಡಿಸಿದ್ದಾರೆ:

"...ಮಾನವ ಮಹಿಮೆಯನ್ನು ಹಿಂದೂ ಧರ್ಮದಷ್ಟು ಉದಾತ್ತ ವಾಣಿಯಲ್ಲಿ ಪ್ರಪಂಚದ ಬೇರಾವ ಧರ್ಮವೂ ಬೋಧಿಸುವುದಿಲ್ಲ. ಆದರೆ ಬಡ ಬಗ್ಗರ ಮತ್ತು ದೀನದಲಿತರ ಕುತ್ತಿಗೆಯನ್ನು ಹಿಂದೂ ದರ್ಮ ಮೆಟ್ಟಿ ತುಳಿಯುವಂತೆ ಪ್ರಪಂಚದ ಬೇರಾವ ಧರ್ಮವೂ ತುಳಿಯುವುದಿಲ್ಲ. ಇದು ಧರ್ಮದ ತಪ್ಪಲ್ಲವೆಂದು ದೇವರು ನನಗೆ ತೋರಿಸಿದ್ದಾನೆ. ಅದು ಪಾರಮಾರ್ಥಿಕ ಮತ್ತು ವ್ಯವಹಾರಿಕ ಎಂಬ ಸಿದ್ಧಾಂತಗಳ ಹೆಸರಿನಲ್ಲಿ ನಾನಾ ಬಗೆಯ ದಬ್ಬಾಳಿಕೆಯ ಸಾಧನಗಳನ್ನು ಸೃಷ್ಟಿಸುವ ಹಿಂದೂ ಧರ್ಮದ ಪೂಜಾರಿಗಳು, ಜೋಯಿಸರು ಮತ್ತು ಕಪಡಿಗಳದು..."

ವಿವೇಕಾನಂದರು ಹಿಂದೂ ಧರ್ಮವನ್ನು ಹೊಗಳುವಾಗೆಲ್ಲ ವಿಶ್ವ ವ್ಯಾಪಕವಾದ ವೇದಾಂತವನ್ನು ಪ್ರಶಂಸಿಸುತ್ತಾರೆಂದು, ಹಿಂದೂ ಧರ್ಮವನ್ನು ಟೀಕಿಸುವಾಗಲೆಲ್ಲಾ ಜಾತಿ ವ್ಯವಸ್ಥೆಯ ಬ್ರಾಹ್ಮಣ ಧರ್ಮವನ್ನು ಖಂಡಿಸುತ್ತಿದ್ದಾರೆಂದೂ ತಿಳಿಯಬೇಕು. ಇದನ್ನು ವಿವೇಕಾನಂದರು ತಮ್ಮ ಪ್ರಖ್ಯಾತ ಉಪನ್ಯಾಸಗಳಲ್ಲಿ ಪ್ರತ್ಯೇಕಿಸಿದ್ದಾರೆ. ಅವು "ಈಸ್ ವೇದಾಂತ ದಿ ಫ್ಯೂಚರ್ ರಿಲಿಜಿಯನ್?" ಮತ್ತು "ದಿ ಐಡಿಯಲಂ ಆಫ್ ಎ ಯೂನಿವರ್ಸಲ್ ರಿಲಿಜಿಯನ್"

ಸ್ಪಷ್ಟತೆಗೋಸ್ಕರ ಬ್ರಾಹ್ಮಣ ಧರ್ಮವೇ ಬೇರೆ, ಹಿಂದೂ ಧರ್ಮವೇ ಬೇರೆ ಎಂದು ವಿಂಗಡಿಸಿಕೊಳ್ಳಬೇಕು. ಜಾತಿ ವ್ಯವಸ್ಥೆ, ಕೋಮುವಾದ, ಅರ್ಥಹೀನ ಆಚರಣೆಗಳು, ಅರ್ಚಕ ವೃತ್ತಿಯ ದಳ್ಳಾಳಿತನ ಮತ್ತು ಸಣ್ಣ ತನವನ್ನು ಅನುಸರಿಸುವ ಮತವೇ ಬ್ರಾಹ್ಮಣ ಮತ.

ಮನುಷ್ಯರೆಲ್ಲ ಒಂದೇ, ಜಾತಿಯ ಬೇಧಭಾವನೆ ಸಲ್ಲದು, ಎಂದು ಹೇಳುವ ಉಪನಿಷತ್ ಪ್ರಣೀತವಾದ ವೇದಾಂತ ಧರ್ಮವೇ ಮಾನವ ಧರ್ಮ, ಅದೇ ನಿಜವಾದ ಹಿಂದೂ ಧರ್ಮವೆಂದು ಅರಿತು ಆಚರಿಸಬೇಕು.

ವಿವೇಕಾನಂದರ ಮುಂದಿನ ಮಾತನ್ನು ಗಮನಿಸಿ :- ಹಿಂದೂ ಎಂಬ ಶಬ್ದ ಎಲ್ಲ ಅತ್ಯುತ್ತಮವಾದದ್ದನ್ನೂ ಸರ್ವ ಆಧ್ಯಾತ್ಮಿಕ ವಿಷಯಗಳನ್ನೂ ಸೂಚಿಸುವಂತೆ ಮಾಡುವುದು, ಇಲ್ಲವೇ ನಿಂದಾರ್ಹನೂ ಪತಿತನೂ, ಅಪ್ರಯೋಜಕನೂ ಅನಾಗರೀಕರನೂ ಆದ ಮಾನವನೆಂದು ಸೂಚಿಸುವಂತೆ ಮಾಡುವುದು ನಮ್ಮ ಅಧೀನದಲ್ಲಿದೆ"

ಮನುಷ್ಯ ಮನುಷ್ಯರ ನಡುವೆ ಯಾವುದೇ ಭೇದ ಭಾವನೆಯನ್ನು ಮಾಡದ ಕೃತಿರತ್ನಗಳೆಂದರೆ ಉಪನಿಷತ್ತುಗಳು. ಸಂಸ್ಕೃತದಲ್ಲಿರುವ ಉಳಿದ ಸಾಹಿತ್ಯವೆಲ್ಲ, ಐಹಿಕ ಮತ್ತು ಧಾರ್ಮಿಕ ಎರಡೂ ಸೇರಿದಂತೆ, ವಿಶೇಷವಾಗಿ ಸ್ಮೃತಿಗಳೆಲ್ಲ ಶೂದ್ರವರ್ಗವನ್ನು ತುಳಿಯುವುದಕ್ಕೇ ಮೀಸಲಾಗಿವೆ. ಪ್ರಪಂಚದ ಮಹಾ ಕೊಳಕು ಮತ್ತು ಕ್ರೂರ ಕಾನೂನು ಗ್ರಂಥಗಳೆಂದರೆ ಹಾರುವ ಬರೆದಿರುವ ಧರ್ಮಶಾಸ್ತ್ರಗಳು.

ಹೀಗೆ ಹಿಂದೂ ಶಬ್ದ ಬಹಳ ವಿಶಾಲವಾದ ಅರ್ಥದಲ್ಲಿಯೂ ಹಾಗೂ ಸಂಕುಚಿತವಾದ ಅರ್ಥದಲ್ಲಿಯೂ ಬಳಕೆಯಾಗುತ್ತಿದೆ. ಸಂಕುಚಿತ ಅರ್ಥದಲ್ಲಿ ಅದು ಜಾತಿಯನ್ನು ಸೂಚಿಸುತ್ತದೆ. ವಿಶಾಲವಾದ ಅರ್ಥದಲ್ಲಿ ವೇದಾಂತವನ್ನು, ಮಾನವ ಜನಾಂಗವೆಲ್ಲ ಒಂದು ಎಂಬುದನ್ನು ನಿರ್ದೇಶಿಸುತ್ತದೆ. ಜಾತಿಯಿಂದ ದೇಶ ಹಾಳು; ವೇದಾಂತದಿಂದ ಲೋಕೋದ್ಧಾರ.

ಧರ್ಮ ಎಂದರೆ ಜನರನ್ನು ಒಟ್ಟು ಗೂಡಿಸುವುದು ಎಂದು ಅರ್ಥ. 6 ಇಂಗ್ಲೀಷಿನ ರಿಲಿಜಿಯನ್ ಎಂಬ ಶಬ್ದಕ್ಕೂ ಇದೇ ಅರ್ಥವಿದೆ. ಆದರೆ ಜಾತಿಯೇ ಧರ್ಮವಾಗಿರುವ ಬ್ರಾಹ್ಮಣ ಧರ್ಮ ಮನುಷ್ಯರನ್ನು ಜಾತಿಯ ಹೆಸರಿನಲ್ಲಿ ಒಡೆದು ಛಿದ್ರ ಛಿದ್ರ ಮಾಡುತ್ತದೆ. ಎಲ್ಲಾ ಪಂಥವಾದಗಳೂ ಮನುಷ್ಯರನ್ನು ಒಡೆಯುತ್ತವೆ. ಪಂಥವಾದಕ್ಕೆ ಧಿಕ್ಕಾರ!

ಜಾತಿ ಎಂದರೆ ಹುಟ್ಟು. ಮನುಷ್ಯರು ಎಲ್ಲಿ ಹುಟ್ಟುತ್ತಾರೋ ಆ ಸ್ಥಳ ಅಥವಾ ಕುಲದ ಹೆಸರು ಅವರಿಗೆ ಬರುತ್ತದೆ. ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಯಾರು ಯಾರು ಯಾವ ಯಾವ ಕಸುಬು ಮಾಡುತ್ತಾರೋ ಆಯಾ ಕಸುಬಿನ ಹೆಸರು ಅವರಿಗೆ ಪ್ರಾಪ್ತಿಯಾಗಿ ಅದೇ ಜಾತಿಯಾಗಿಬಿಟ್ಟಿದೆ. ಜೊತೆಗೆ ಕುಲದೊಳಗೆ ಮದುವೆ ನಿರಂತರವಾಗಿ ನಡೆಯುತ್ತಿರುವುದರಿಂದ ಅದು ಭದ್ರವಾಗಿರುವಂತೆ ತೋರುತ್ತದೆ. ಸಗೋತ್ರ ವಿವಾಹ ಮತ್ತು ಕುಲ ಕಸುಬುಗಳನ್ನು ತಪ್ಪಿಸಿದರೆ ಜಾತಿ ಪದ್ಧತಿ ತಳಪಾಯವಿಲ್ಲದ ಮನೆಯಂತೆ ಬಿದ್ದು ಹೋಗುವುದರಲ್ಲಿ ಅನುಮಾನವಿಲ್ಲ.

ಅದನ್ನು ಇನ್ನು ವೈಜ್ಞಾನಿಕವಾಗಿ ನೋಡೋಣ; ಮಾನವ ಜನಾಂಗವನ್ನು ಸ್ಥೂಲವಾಗಿ ಮೂರು ವಿಭಾಗ ಮಾಡಿದ್ದಾರೆ. ಕಕೇಶಿಯ ಜನಾಂಗ, ಮಂಗೋಲಿಯಾ ಜನಾಂಗ ಮತ್ತು ನೀಗ್ರೋ ಜನಾಂಗ; ಇದನ್ನು ಆಯಾ ಜನರ ತಲೆಬುರುಡೆಯ ಅಳತೆ, ಕೂದಲಿನ ರಚನೆ, ಮೈಬಣ್ಣ, ಮೂಗಿನ ಉದ್ದ, ಮುಖದ ಆಕಾರ ಮುಂತಾದವುಗಳನ್ನು ಆಧಾರವಾಗಿಟ್ಟುಕೊಂಡು ವರ್ಗೀಕರಣ ಮಾಡಲಾಗಿದೆ. ಈ ವಿಭಜನೆಯಿಂದ ಇಂತಿಂಥ ಜನರೆಂದು ನಾವು ನೋಡಿದ ಕೂಡಲೇ ಗುರುತಿಸಬಹುದು.

ಆದರೆ ಭಾರತದಲ್ಲಿ ಯಾರನ್ನೇ ಆಗಲೀ ಬರೀ ನೋಟದಿಂದ ಇಂಥ ಜಾತಿಯವರೆಂದು ಹೇಳಲು ಸಾಧ್ಯವಿಲ್ಲ. ಅದನ್ನು ಕೇಳಿ ತಿಳಿಯಬೇಕು. ಇಲ್ಲ ಅವರೇ ಹೇಳುವುದರಿಂದ ಗೊತ್ತಾಗಬೇಕು. ಆದ್ದರಿಂದ ಹಿಂದೂ ವ್ಯವಸ್ಥೆ ಅತ್ಯಂತ ಅವೈಜ್ಞಾನಿಕ ವ್ಯವಸ್ಥೆ ಮತ್ತು ಅತ್ಯಂತ ಅವೈಚಾರಿಕ ವ್ಯವಸ್ಥೆ.

ಹಿಂದೂ ಮನಸ್ಸಿಗೆ ಏನೇ ತಿಳಿದರೂ ಸಮಾಧಾನವಿಲ್ಲ; ಜಾತಿಯನ್ನು ತಿಳಿಯುವ ತನಕ. ತಿಳಿದುಕೊಂಡರೆ ಎಲ್ಲವನ್ನೂ ತಿಳಿದುಕೊಂಡಷ್ಟು ಅದಕ್ಕೆ ಸಂತೋಷ!

ಬ್ರಾಹ್ಮಣ ಧರ್ಮ ದೇವರಿಗಿಂತ ಜಾತಿಯನ್ನು ನಂಬುತ್ತದೆ. ಮನುಷ್ಯನನ್ನಲ್ಲ. ಭಾರತದ ಇತರ ಎಲ್ಲಾ ಧರ್ಮಗಳೂ ಸಾಮಾನ್ಯವಾಗಿ ನಾಸ್ತಿಕ ಧರ್ಮಗಳು. ಆದರೆ ನಾಸ್ತಿಕವಾದ ಎಂದರೆ ದೇವರನ್ನು ನಂಬದ ವಾದವೆಂದು ಅರ್ಥವಲ್ಲ. ಆದರೆ ನಾಸ್ತಿಕವಾದ ಭಿನ್ನವಾದ ಅರ್ಥದಲ್ಲಿ ಬಳಕೆಯಾಗಿದೆ. ಹಿಂದೂ ಸಾಮಾಜಿಕ ಸಂದರ್ಭದಲ್ಲಿ ನೀವು ದೇವರನ್ನು ನಂಬುತ್ತೀರೋ ಬಿಡುತ್ತೀರೋ ಎನ್ನುವುದು ಮುಖ್ಯವಲ್ಲ. ವಾಸ್ತವವಾಗಿ ಬಹಳ ಮಹತ್ವದ ಸಂಗತಿ ಎಂದರೆ ನೀವು ಚಾತುರ್ ವರ್ಣ ವ್ಯವಸ್ಥೆಯಲ್ಲಿ ನಂಬಿಕೆ ಇಡಬೇಕು; ಅದನ್ನು ಒಪ್ಪಿಕೊಳ್ಳಬೇಕು. ಆಗ ಮಾತ್ರ ನೀವು ಆಸ್ತಿಕ, ಇಲ್ಲವಾದರೆ ನಾಸ್ತಿಕ. ಹೀಗೆ ನಾಸ್ತಿಕತೆ

ಹಿಂದೂ ಶಬ್ದ ಬಹಳ ವಿಶಾಲವಾದ ಅರ್ಥದಲ್ಲಿಯೂ ಹಾಗೂ ಸಂಕುಚಿತವಾದ ಅರ್ಥದಲ್ಲಿಯೂ ಬಳಕೆಯಾಗುತ್ತಿದೆ. ಸಂಕುಚಿತ ಅರ್ಥದಲ್ಲಿ ಅದು ಜಾತಿಯನ್ನು ಸೂಚಿಸುತ್ತದೆ. ವಿಶಾಲವಾದ ಅರ್ಥದಲ್ಲಿ ವೇದಾಂತವನ್ನು, ಮಾನವ ಜನಾಂಗವೆಲ್ಲ ಒಂದು ಎಂಬುದನ್ನು ನಿರ್ದೇಶಿಸುತ್ತದೆ. ಜಾತಿಯಿಂದ ದೇಶ ಹಾಳು; ವೇದಾಂತದಿಂದ ಲೋಕೋದ್ಧಾರ.

ಅಥವ ಆಸ್ತಿಕತೆಯನ್ನು ಮನು ತನ್ನ "ಧರ್ಮಶಾಸ್ತ್ರ"ದಲ್ಲಿ ವಿವರಿಸುತ್ತಾನೆ: "ನಾಸ್ತಿಕೋ ವೇದ ನಿಂದಕ : ನಾಸ್ತಿಕನೆಂದರೆ ವೇದಗಳನ್ನು ಖಂಡಿಸುವನು" ಕಾರಣ ವೇದಗಳು 'ಪುರುಷ ಸೂಕ್ತ'ದ ಮೂಲಕ ಚಾತುರ್ ವರ್ಣ ವ್ಯವಸ್ಥೆಯನ್ನು ವಿಧಿಸುತ್ತವೆ. ವೇದಾಧ್ಯಯನ ಮಾಡಲು ಅಂದರೆ ವಿದ್ಯಾವಂತರಾಗಲು ಶೂದ್ರರಿಗೆ ಹಕ್ಕಿಲ್ಲ ಎಂದು ಸಾಧಿಸಲು ಅಸಂಖ್ಯಾತ ಧರ್ಮಗ್ರಂಥಗಳನ್ನು ಪುರೋಹಿತ ವರ್ಗ ರಚಿಸಿತು. ವಿದ್ಯಾವಂತರಾಗಲು ಶೂದ್ರರು "ವೇದವನ್ನು ಕೇಳಿದರೆ ಕರಗಿಸಿದ ಸೀಸ ಮತ್ತು ಅರಗುಗಳಿಂದ ಅವರ ಕಿವಿಯನ್ನು ಮುಚ್ಚಿಬಿಡಬೇಕು; ವೇದೋಚ್ಚಾರಣೆಯನ್ನು ಮಾಡಿದರೆ ನಾಲಗೆಯನ್ನು ಕತ್ತರಿಸಿ ಹಾಕಬೇಕು; ಕಂಠಪಾಠ ಮಾಡಿ ಹೃದಯ ಸೇರಿಸಿಬಿಟ್ಟಿದ್ದರೆ ಆ ದೇಹವನ್ನೇ ಕತ್ತರಿಸಿ ಎಸೆಯಬೇಕು" (ವೇದಂ ಉಪಶೃಣ್ವತ: ತ್ರಪುಜತುಭ್ಯಾ ಶ್ರೋತ್ರ ಪ್ರತಿ ಪೂರಣಂ ! ವೇದೋಚ್ಚಾರಣೇ ಜಿಹ್ವಾ ಛೇದೋ, ಧಾರಣೇ ಶರೀರ ಬೇಧ : ll) ಎಂದು ತಾಕೀತು ಮಾಡಿತು. ಹೀಗೆ ಕಾನೂನು ನಿರ್ಮಾಪಕರು ಯಾವಾಗಲೂ ತಮ್ಮ ಹಿತವನ್ನು ಕಾಯ್ದುಕೊಳ್ಳುತ್ತಾರೆ. ಹಾಗೂ ಕಾನೂನು ವ್ಯಾಖ್ಯಾನದ ಹಕ್ಕನ್ನೂ ತಮ್ಮಲ್ಲಿಯೇ ಉಳಿಸಿಕೊಳ್ಳುತ್ತಾರೆ. ತಮಗೆ ದುಡಿಯಲು ಬೇಕಾದ ಶ್ರಮಜೀವಿ ವರ್ಗವನ್ನು ಸಂಪೂರ್ಣ ಅಜ್ಞಾನದಲ್ಲೂ ಕತ್ತಲೆಯಲ್ಲೂ ಇಡುವ ಏಕೈಕ ಉದ್ದೇಶದಿಂದ ರಚಿತವಾದ ವಿಪುಲ ಕಾನೂನು ಸಾಹಿತ್ಯ ಕೃತಿಗಳು ಸಂಸ್ಕೃತದಲ್ಲಿವೆ.

ಇವು ಹೆಸರಿಗೆ ಮಾತ್ರ ಧರ್ಮಶಾಸ್ತ್ರಗಳು; ಇವುಗಳಲ್ಲಿ ಧರ್ಮ ಕೊಂಚವೂ ಇಲ್ಲ. ಇವು ಹಾರುವರು ತಮ್ಮ ಪ್ರತಿಷ್ಠೆಗಾಗಿ ಬರೆದುಕೊಂಡ ಜಾತಿವಾದಿ ಗ್ರಂಥಗಳು. ಧರ್ಮಶಾಸ್ತ್ರಗಳಲ್ಲಿ ಮಾನವೀಯತೆ ಇಲ್ಲ. ಸಮಾನತೆ ಇಲ್ಲದ, ಮಾನವೀಯತೆ ಇಲ್ಲದ ಧರ್ಮ ಧರ್ಮವೇ?

ಭಾರತೀಯ ಇತಿಹಾಸಕಾರರು ಭಾರತದಲ್ಲಿ ಗುಲಾಮಗಿರಿ ಇರಲಿಲ್ಲವೆಂದು ಲೋಲುಪ್ತಿಯಿಂದ ಹೇಳಿದರೂ ಕೂಡ, ಚಾತುರ್ ವರ್ಣ ವ್ಯವಸ್ಥೆ ಅಂದರೇ ಗುಲಾಮಗಿರಿ ವ್ಯವಸ್ಥೆ ಎಂಬುದನ್ನು ಮನುಸ್ಮೃತಿಯಿಂದ ಕೊಡುವ ಮುಂದಿನ ಉದ್ಧರಣೆಗಳಿಂದ ಸ್ಪಷ್ಟವಾಗಿ ತಿಳಿಯಬಹುದು. ದೇಶದ ಒಟ್ಟು ಜನಸಂಖ್ಯೆಯ ಶೇಕಡಾ ತೊಂಬತ್ತಕ್ಕಿಂತಲೂ ಹೆಚ್ಚು ಜನರು ಗುಲಾಮ ರಾಗಿದ್ದರೆಂದು ಗಮನಿಸಿದರೆ ಗಾಬರಿಯಾಗುತ್ತದೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಭಾರತದಲ್ಲಿ ಗುಲಾಮಗಿರಿ ಇತ್ತು; ಗುಲಾಮಗಿರಿಯಲ್ಲದೆ ಬೇರೇನೂ ಇರಲಿಲ್ಲ; ಸರ್ವ ಸಾಧಾರಣವಾದ ಸಂಗತಿ ಸಾಮಾನ್ಯವಾಗಿ ವಿಶಿಷ್ಟವಾಗಿ ಕಾಣುವುದಿಲ್ಲ. "ಮನುಸ್ಮೃತಿ"ಯಿಂದ ಉದ್ಧರಣೆಗಳು :

ಏಕಮೇವ ತು ಶೂದ್ರಸ್ಯ ಪ್ರಭುಃ ಕರ್ಮ ಸಮಾದಿಶತ್ ।
ಏತೇಷಾಮೇವ ವರ್ಣಾನಾಂ ಶುಶ್ರೂಷಾಂ ಅನಸೂಯಯಾ ॥ (1-91)

ಶೂದ್ರನಿಗೆ ಒಂದೇ ಕಸುಬನ್ನು ದೇವರು ವಿಧಿಸಿದ್ದಾನೆ. ಅದು ಮೇಲಿನ ಮೂರು ವರ್ಣಗಳನ್ನು ಅಸೂಯೆ ಇಲ್ಲದೆ ಸೇವೆ ಮಾಡುವುದು.

ಶರ್ಮವತ್ ಬ್ರಾಹ್ಮಣಸ್ಯ ಸ್ಯಾತ್ ರಾಜ್ಞೋರಕ್ಷಾ ಸಮನ್ವಿತಂ।
ವೈಶ್ಯಸ್ಯ ಪುಷ್ಟಿ ಸಂಯುಕ್ತಂ ಶೂದ್ರಸ್ಯ ಪ್ರೇಷ್ಯ ಸಂಯುತಂ ॥ (2-32)

ಬ್ರಾಹ್ಮಣನ ಹೆಸರಿನ ಕೊನೆಯ ಭಾಗ ಸಂತೋಷವನ್ನು ಸೂಚಿಸಬೇಕು; ಕ್ಷತ್ರಿಯನ ಹೆಸರು ರಕ್ಷಣೆಯನ್ನು ಸೂಚಿಸಬೇಕು; ವೈಶ್ಯನ ಹೆಸರು ವ್ಯಾಪಾರವನ್ನು ಸೂಚಿಸಬೇಕು; ಶೂದ್ರನ ಹೆಸರು ದಾಸ್ಯವನ್ನು ಸೂಚಿಸಬೇಕು.

ನ ಶೂದ್ರಾಯ ಮತಿಂ ದದ್ಯಾತ್ ॥ (4-80)
ಶೂದ್ರನಿಗೆ ವಿದ್ಯಾಬುದ್ಧಿ ಕೊಡಬಾರದು
ದಾಸ್ಯಂ ಶೂದ್ರಂ ದ್ವಿ ಜನ್ಮನಾಂ ॥ (4-410)
ದ್ವಿಜರ ದಾಸನಾಗಿ ಶೂದ್ರ ಸೇವೆ ಮಾಡಬೇಕು.
ಶೂದ್ರಂ ತು ಕಾರಯೇತದಾಸ್ಯಂ ಕ್ರೀತ ಮಕ್ರೀತಂ ಏವ ವಾ ।
ದಾಸ್ಯಾಯೈವ ಹಿ ಸೃಷ್ಟೋಸೌ ಬ್ರಾಹ್ಮಣಸ್ಯ ಸ್ವಯಂಭುವಾ ॥ (8-413)

ಶೂದ್ರ ಜೀತಕ್ಕಿರಲಿ ಅಥವಾ ಇಲ್ಲದೆ ಇರಲಿ, ಅವನನ್ನು ಸೇವೆ ಮಾಡುವಂತೆ ಬಲವಂತಪಡಿಸಬೇಕು. ಏಕೆಂದರೆ ಶೂದ್ರನನ್ನು ದೇವರು ಸೃಷ್ಟಿಸಿರುವುದೇ ಬ್ರಾಹ್ಮಣನ ಸೇವೆ ಮಾಡುವುದಕ್ಕಾಗಿ.

ನ ಸ್ವಾಮೀನಾ ನಿಸ್ಸೃಷ್ಟೋಪಿ ಶುದ್ರೋ ದಾಸ್ಯಾತ್ ವಿಮುಚ್ಯತೇ ।
ನಿಸರ್ಗ ಜಂ ಹಿ ತತ್ತಸ್ಯ ಕಸ್ತ ಸ್ಮಾತ್ತದ ಪೋಹತಿ ॥ (8-414)

ಶೂದ್ರ ತನ್ನ ಒಡೆಯನ ದಾಸ್ಯದಿಂದ ಬಿಡುಗಡೆ ಪಡೆದರೂ ಅವನಿಗೆ ಬಿಡುಗಡೆ ಇಲ್ಲ; ಏಕೆಂದರೆ ದಾಸ್ಯ ಅವನಿಗೆ ಸ್ವಭಾವತಃ ಬಂದಿದೆ. ಯಾರು ತಾನೇ ಅವನನ್ನು ಬಿಡುಗಡೆ ಮಾಡಲು ಸಾಧ್ಯ?

ವಿಸ್ರಬ್ಧಂ ಬ್ರಾಹ್ಮಣಃ ಶೂದ್ರಾತ್ ದ್ರವ್ಯೋಪಾದಾನಂ ಆಚರೇತ್ ।
ನ ಹಿ ತಸ್ಯಾಸ್ತಿ ಕಿಂಚಿತ್ ಸ್ವಂ ಭರ್ತೃಹಾರ್ಯ ಧನೋಹಿಸಃ ॥ (8-417)

ಬ್ರಾಹ್ಮಣನು ಸಂಶಯಪಡದೆ ಶೂದ್ರನ ಹಣವನ್ನು ಕಿತ್ತುಕೊಳ್ಳಬೇಕು. ಏಕೆಂದರೆ ಶೂದ್ರನಿಗೆ ಸ್ವಂತ ಸಂಪತ್ತೆಂಬುದೇ ಇಲ್ಲ: ಅವನ ಐಶ್ವರ್ಯವೆಲ್ಲವೂ ಬ್ರಾಹ್ಮಣನಿಗೆ ಸೇರತಕ್ಕದ್ದು.

ವಿಪ್ರಣಾಂ ವೇದವಿದುಷಾಂ ಗೃಹಸ್ಥಾನಾಂ ಯಶಸ್ವಿನಾಂ ।
ಶುಶ್ರೂಷೈವ ತು ಶೂದ್ರಸ್ಯ ಧರ್ಮೋ ನೈಶ್ರೇಯಸಃ ವರಃ ॥ (9-334)

ವೇದ ವಿದ್ಯಾ ಸಂಪನ್ನರಾದ ಬ್ರಾಹ್ಮಣರ ಸೇವೆ ಮಾಡುವುದೇ ಶೂದ್ರನಿಗೆ ಸಕಲ ಶ್ರೇಯಸ್ಕರ. ಅದಕ್ಕಿಂತ ಉತ್ತಮೋತ್ತಮ ಧರ್ಮ ಬೇರಿಲ್ಲ.

ಉಚ್ಛಿಷ್ಟಂ ಅನ್ನಂ ದಾತವ್ಯಂ ಜೀರ್ಣಾನಿ ವಸಾನಾನಿ ಚ ।
ಪುಲಾಕಃ ಚೈವ ಧಾನ್ಯಾನಾಂ ಜೀರ್ಣಾಃ ಚೈವ ಪರಿಚ್ಛದಾಃ॥ (10-125)

ಮೇಲು ಜಾತಿಯವರು ತಿಂದುಳಿದ ಎಂಜಲನ್ನು ಕಾಳುಕಡ್ಡಿಯನ್ನು ಶೂದ್ರನಿಗೆ ಕೊಡಬೇಕು. ಅವರ ಹರಿದ ಹಳೆಯ ಬಟ್ಟೆಗಳನ್ನು ಆತ ಉಡಬೇಕು, ಹೊದೆಯಬೇಕು.

ಚಂಡಾಲ ಶ್ವಪಚಾನಾಂ ತು ಬಹಿತ್ ಗ್ರಾಮಾತ್ ಪ್ರತಿಶ್ರಯಃ ।
ಅಪಪಾತ್ರಾಃ ಚ ಕರ್ತವ್ಯಾ ಧನಮೇಷಾಂ ಶ್ವಗರ್ದಭಮ್ ॥
ವಾಸಾಂಸಿ ಮೃತ ಚೇಲಾನಿ ಭಿನ್ನ ಭಾಂಡೇಷು ಭೋಜನಂ ॥
ಕಾಷ್ಣಾಯಸಂ ಅಲಂಕಾರಂ ಪರಿವ್ರಜ್ಯಾ ಚ ನಿತ್ಯಶಃ ॥ (10-51-2)

ಊರ ಹೊರಗೆ ಅಸ್ಪೃಶ್ಯರು ವಾಸ ಮಾಡಬೇಕು. ಒಳ್ಳೆಯ ಪಾತ್ರೆಗಳನ್ನು ಅವರು ಉಪಯೋಗಿಸಬಾರದು. ನಾಯಿ ಕತ್ತೆಗಳೇ ಅವರು ಸೊತ್ತು. ಚಂಡಾಲರು ಹೆಣದ ಬಟ್ಟೆಗಳನ್ನು ತೆಗೆದುಕೊಂಡು ಧರಿಸಬೇಕು. ಒಡೆದ ಮಡಿಕೆಗಳಲ್ಲಿ ಊಟ ಮಾಡಬೇಕು; ಕಬ್ಬಿಣದ ಬಳೆಗಳನ್ನು ತೊಟ್ಟುಕೊಂಡು ಸದಾ ಅಲೆಮಾರಿಗಳಾಗಿರಬೇಕು.

ಯೋ ಲೋ ಭಾತ್ ಅಧರ್ಮೋ ಜಾತ್ಯಾ ಜೀವೇತ್ ಉತ್ಕೃಷ್ಟ ಕರ್ಮಭಿಃ ।
ತಂ ರಾಜಾ ನಿರ್ಧನಂ ಕೃತ್ವಾ ಕ್ಷಿಪ್ರಮೇವ ಪ್ರವಾಸಯೇತ್ (10-96)

ಮೇಲು ಜಾತಿಯವರ ಕೆಲಸ ಮಾಡಲು ಶೂದ್ರ ತಿರಸ್ಕರಿಸಿದರೆ ಅವನ ಆಸ್ತಿ ಪಾಸ್ತಿಯನ್ನು ರಾಜ ಮುಟ್ಟುಗೋಲು ಹಾಕಿಕೊಂಡು ಅವನನ್ನು ಕೂಡಲೇ ದೇಶದಿಂದ ಹೊರಗಟ್ಟಬೇಕು.

ಸ್ವರ್ಗಾರ್ಥ ಮುಭಯಾರ್ಥಂ ವಾ ವಿಪ್ರಾನಾರಾಧಯೇತ ಉಸಃ ।
ಜಾತ ಬ್ರಾಹ್ಮಣ ಶಬ್ದ ಸ್ಯಸಾ ಹಿ ಅಸ್ಯ ಕೃತ ಕೃತ್ಯತಾ ॥
ವಿಪ್ರಸೇವೈವ ಶೂದ್ರಸ್ಯ ವಿಶಿಷ್ಟಂ ಕರ್ಮಕೀರ್ತತ್ಯೇ ।
ಯದತೋಽನ್ಯದ್ಧಿ ಕುರುತೇ ತದ್ಭವತ್ಯಸ್ಯ ನಿಷ್ಫಲಂ : (10, 122-3)

ಸ್ವರ್ಗ ಲಾಭಕ್ಕಾಗಿ ಅಥವಾ ಇಹಪರಗಳ ಸುಖಕ್ಕಾಗಿ ಶೂದ್ರನು ಬ್ರಾಹ್ಮಣನ ಸೇವೆ ಮಾಡಬೇಕು. ಏಕೆಂದರೆ ಅವನು ಹುಟ್ಟನಿಂದಲೆ, ಬ್ರಾಹ್ಮಣನ ಸೇವಕ. ಇದರಿಂದ ಅವನು ಪುಣ್ಯವಂತನಾಗುತ್ತಾನೆ. ಬ್ರಾಹ್ಮಣ ಸೇವೆಯೇ ಶೂದ್ರನಿಗೆ ಅತ್ಯಂತ ಪವಿತ್ರವಾದ ಕೆಲಸವೆಂದು ಶಾಸ್ತ್ರಗಳು ಕೊಂಡಾಡುತ್ತವೆ. ಇದನ್ನು ಬಿಟ್ಟು ಅವನು ಬೇರೆ ಏನೇ ಕೆಲಸ ಮಾಡಿದರೂ ಅವನಿಗೆ ಫಲವಿಲ್ಲ. (ಶಾಸ್ತ್ರಗಳನ್ನು ಬರೆದವರು ಯಾರು? ಬ್ರಾಹ್ಮಣರಲ್ಲವೆ?)

> ಜಾತಿ ಎಂದರೆ ಹುಟ್ಟು. ಮನುಷ್ಯರು ಎಲ್ಲಿ ಹುಟ್ಟುತ್ತಾರೋ ಆ ಸ್ಥಳ ಅಥವಾ ಕುಲದ ಹೆಸರು ಅವರಿಗೆ ಬರುತ್ತದೆ. ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಯಾರು ಯಾರು ಯಾವ ಯಾವ ಕಸುಬು ಮಾಡುತ್ತಾರೋ ಆಯಾ ಕಸುಬಿನ ಹೆಸರು ಅವರಿಗೆ ಪ್ರಾಪ್ತಿಯಾಗಿ ಅದೇ ಜಾತಿಯಾಗಿ ಬಿಟ್ಟಿದೆ. ಜೊತೆಗೆ ಕುಲದೊಳಗೆ ಮದುವೆ ನಿರಂತರವಾಗಿ ನಡೆಯುತ್ತಿರುವುದರಿಂದ ಅದು ಭದ್ರವಾಗಿರುವಂತೆ ತೋರುತ್ತದೆ. ಸಗೋತ್ರ ವಿವಾಹ ಮತ್ತು ಕುಲ ಕಸುಬುಗಳನ್ನು ತಪ್ಪಿಸಿದರೆ ಜಾತಿ ಪದ್ಧತಿ ತಳಪಾಯವಿಲ್ಲದ ಮನೆಯಂತೆ ಬಿದ್ದು ಹೋಗುವುದರಲ್ಲಿ ಅನುಮಾನವಿಲ್ಲ.

ಶಕ್ತೇನಾಪಿ ಹಿ ಶೂದ್ರೇಣ ನ ಕಾರ್ಯೋ ಧನಸಂಚಯಃ ।
ಶೂದ್ರೋ ಹಿ ಧನಮಾಸಾದ್ಯ ಬ್ರಾಹ್ಮಣಾನೇವ ಬಾಧ್ಯತೆ ॥ (10-129)

ಹಣ ಮಾಡುವ ಶಕ್ತಿ ಇದ್ದರೂ ಶೂದ್ರನು ಹಣ ಮಾಡಬಾರದು. ಏಕೆಂದರೆ, ಶೂದ್ರ ಹಣ ಮಾಡಿದರೆ ಬ್ರಾಹ್ಮಣನಿಗೆ ಅದು ಬಾಧೆಯನ್ನು ಉಂಟುಮಾಡುತ್ತದೆ. (ಕಾರಣ, ಅವನು ಹಣವಂತನಾದರೆ ಜೀತಗಾರ ನಾಗುವುದಿಲ್ಲ).

ಬ್ರಾಹ್ಮಣಃ ಸಂಭವೇನೈವ ದೇವಾನಾಮಪಿ ದೈವತಂ ।
ಪ್ರಮಾಣಂ ಚೈವ ಲೋಕಸ್ಯ ಬ್ರಹ್ಮಾತ್ರೈವ ಹಿ ಕಾರಣಂ ॥ (11-84)

ಹುಟ್ಟನಿಂದಲೇ ಬ್ರಾಹ್ಮಣ ದೇವರಿಗೂ ದೇವರಾಗಿದ್ದಾನೆ. ಅವನ ಮಾತು ಲೋಕಕ್ಕೆ ಪ್ರಮಾಣವಾಗಿದೆ. ಅದಕ್ಕೆ ಬ್ರಹ್ಮನೇ ಕಾರಣ.

ಬ್ರಾಹ್ಮಣಸ್ಯ ತಪೋ ಜ್ಞಾನಂ ತಪಃ ಕ್ಷತ್ರಸ್ಯ ರಕ್ಷಣಂ ।
ವೈಶ್ಯಸ್ಯತು ತಪೋ ವಾರ್ತಾಃ ತಪಃ ಶೂದ್ರಸ್ಯ ಸೇವನಂ ॥ (11-235)

ಜ್ಞಾನವೇ ಬ್ರಾಹ್ಮಣನ ತಪಸ್ಸು; ರಕ್ಷಣೆಯೇ ಕ್ಷತ್ರಿಯನ ತಪಸ್ಸು; ಕೃಷಿಯೇ ವೈಶ್ಯನ ತಪಸ್ಸು; ಸೇವೆಯೇ ಶೂದ್ರನ ತಪಸ್ಸು.

ಈ ಉದ್ಧರಣೆಗಳು ಹೀಗೆ ಬ್ರಾಹ್ಮಣ ಎಲ್ಲಾ ಉತ್ತಮಿಕೆಯನ್ನು ತನಗೆ ತಾನೇ ನಿರ್ಲಜ್ಜೆಯಿಂದ ಗರ್ವದಿಂದ ಆರೋಪಿಸಿ ಕೊಂಡಿದ್ದಾನೆಂದು ತೋರಿಸುತ್ತವೆ. ಸ್ವಪ್ರಶಂಸೆ ಸಂಸ್ಕೃತಿ ಹೀನತೆಯ ಲಕ್ಷಣ. ಅವು ಶೂದ್ರನ ಬಗ್ಗೆ ಅವನಿಗಿರುವ ಕ್ರೂರ ದೃಷ್ಟಿಯನ್ನು ಪ್ರಕಟಿಸುತ್ತದೆ. ಇಲ್ಲಿ ಅನುಕರಣಿತವಾಗುವ ಪದಗಳು ದಾಸ್ಯ, ಸೇವೆ, ಶುಶ್ರೂಷೆ, ಜೀತ, ಇತ್ಯಾದಿ. ಆದುದರಿಂದ ವಾಸ್ತವಾರ್ಥದಲ್ಲಿ ಧರ್ಮ ಎಂದರೆ ಗುಲಾಮಗಿರಿ, ಬ್ರಾಹ್ಮಣಧರ್ಮವೆಂದರೆ ಶೂದ್ರರ ಸರ್ವದಮನ, ಬ್ರಹ್ಮಣರ ವೈಭವೀಕರಣ.

ಬದುಕಲು ಆಧಾರವಾದ ಆಸ್ತಿ ಇಲ್ಲದಿದ್ದರೆ, ಆಲೋಚನಾ ಶಕ್ತಿ ಕೆರಳಿಸುವ ವಿದ್ಯೆ ಸಿಗದಿದ್ದರೆ ಮನುಷ್ಯ ಹೇಳಿದಂತೆ ಕೇಳುತ್ತಾನೆಂಬ ಗುಟ್ಟು ಪುರೋಹಿತ ವರ್ಗಕ್ಕೆ ಬಹಳ ಚೆನ್ನಾಗಿ ತಿಳಿದಿತ್ತು. ಆದ್ದರಿಂದ ಪುರೋಹಿತ ವ್ಯಾಘ್ರ ಶೂದ್ರಗೋವನ್ನು ಮನಸಾರೆ ತಿಂದು ತೇಗಿದೆ.

ಲೈಂಗಿಕ ಸುಖ ಪಡೆಯುವ ವಿಷಯದಲ್ಲಿ 'ಮನುಸ್ಮೃತಿ' ಅತ್ಯಂತ ಅನೈತಿಕ ಮಾರ್ಗವನ್ನು ಅನುಸರಿಸಿದೆ. ನೀತಿಯೇ ಧರ್ಮದ ಮೂಲವೆಂದು ಎಲ್ಲರಿಗೂ ಗೊತ್ತು. ಆದರೆ ಮನು ಅನೀತಿಯನ್ನೇ ಧರ್ಮವೆಂದು ಬರೆಯುತ್ತಾನೆ.

ಕನ್ಯಾಂ ಭಜಂತೀಮುತ್ಕೃಷ್ಟಂನ ಕಿಂಚಿದಪಿ ಪಾಪಯೇತ್ ।
ಜ ಘನ್ಯಂ ಸೇನಾಮಾನಾಂ ತು ಸಂಯತಾಂ ವಾಸಯೇದ್ಗೃ ಹೇ ॥ (8-365)

ಮೇಲು ಜಾತಿಯ ಗಂಡಸು ಕೆಳಜಾತಿಯ ಹೆಣ್ಣನ್ನು ಅನುಭೋಗಿಸಿದರೆ ಏನೂ ಶಿಕ್ಷೆಯಿಲ್ಲ; ಕೀಳು ಜಾತಿಯ ಗಂಡನ್ನು ಮೇಲು ಜಾತಿಯ ಹೆಣ್ಣು ಸೇವಿಸಿದರೆ ಅವಳನ್ನು ಮನೆಯಲ್ಲಿ ಬಂದೋಬಸ್ತಿನಲ್ಲಿಡಬೇಕು.

ಉತ್ತಮಾಂ ಸೇವನಾನಸ್ತು ಜಘನ್ಯೋ ವಧಮರ್ಹತಿ ।
ಶುಲ್ಕಂ ದದ್ಯಾತ್ಸೇವಮಾನಃ ಸಮಾಮಿಚ್ಛೇತ್ಪಿತಾದಿಯ ॥ (8-366)

ಉತ್ತಮ ಜಾತಿಯ ಸ್ತ್ರೀಯನ್ನು ಶೂದ್ರನು ಅನುಭವಿಸಿದರೆ ಅವನನ್ನು ಕೊಂದು ಹಾಕಬೇಕು. ಅವಳ ತಂದೆ ಒಪ್ಪಿದರೆ ಶುಲ್ಕ ತೆಗೆದುಕೊಂಡು ಅವನನ್ನು ಕೂಡಿಕೊಳ್ಳಬಹುದು.

ಈ ಕಾರಣದಿಂದಾಗಿ, ಕೆಳಜಾತಿಯ ಹೆಣ್ಣುಗಳ ಮೇಲೆ ಮೇಲಿನವರ ಅತ್ಯಾಚಾರ ನಡೆದರೆ ಪ್ರತಿಭಟನೆ ಆಗಿಲ್ಲದಿರಬಹುದು. ಅಂಥ ಪ್ರತಿಭಟನೆ ಆಗುವುದನ್ನು ತುಂಬಾ ಜಾಣತನದಿಂದ ಬ್ರಾಹ್ಮಣ ಧರ್ಮ ನಿವರಿಸಿದೆ :

ಶೂದ್ರಾಯಾಂ ಬ್ರಾಹ್ಮಣಾಜ್ಞಾತಃ ಶ್ರೇಯಸಾ ಚೇತ್ಪ್ರಜಾಯತೇ ।
ಅಶ್ರೇಯಾನ್ ಶ್ರೇಯಸೀಂ ಜಾತಿಂ ಗಚ್ಛತ್ಯಾ ಸಪ್ತಮಾದ್ಯುಗಾತ್ । (10-64)

ಕೆಳಜಾತಿಯ ಹೆಂಗಸು ಮೇಲು ಜಾತಿಯ ಪುರುಷನ ಸಂಬಂಧದಿಂದ ಏಳು ಸಂತತಿಯನ್ನು ಪಡೆದರೆ ಉಚ್ಛಜಾತಿ ಉಂಟಾಗುವುದು.

ಎಷ್ಟು ಚೆನ್ನಾಗಿ ಪಾಪವನ್ನೇ ಮನು ಪುಣ್ಯವನ್ನಾಗಿ ಪರಿವರ್ತಿಸಿದ್ದಾನೆ. ಧರ್ಮದ ಹೆಸರಿನಲ್ಲಿ ಎಂಥ ಅಧರ್ಮ ಬೋಧನೆ ! ಮನುಧರ್ಮಶಾಸ್ತ್ರದಂಥ ಅಧರ್ಮಶಾಸ್ತ್ರ ಪ್ರಪಂಚದಲ್ಲಿ ಬೇರಿಲ್ಲ.

ಬ್ರಾಹ್ಮಣ ಧರ್ಮ ಬ್ರಾಹ್ಮಣರಿಗೆ ಮಾತ್ರ ಅನುಕೂಲಕರವಾಗಿದೆ; ಇತರರಿಗಲ್ಲ. ಅದು ಮೇಲು ಕೀಳಿನ ಭಾವನೆಯನ್ನು ಬೋಧಿಸುತ್ತದೆ; ಸಹ ಮಾನವರಲ್ಲಿ ಭೇದ ಭಾವ ಬೆಳೆಸುತ್ತದೆ; ಮನುಷ್ಯನನ್ನು ಮನುಷ್ಯನೆಂದು ಪರಿಗಣಿಸುವುದಿಲ್ಲ; ಮನುಷ್ಯ ಮನುಷ್ಯರ ನಡುವೆ ಇರಬೇಕಾದ ಸಮಾನತೆಯನ್ನು ಅದು ಒಪ್ಪುವುದಿಲ್ಲ. ಬ್ರಾಹ್ಮಣರಲ್ಲದವರನ್ನು ಬ್ರಾಹ್ಮಣ ಧರ್ಮ ಮನುಷ್ಯರಂತೆ ನಡೆಸಿಕೊಳ್ಳುವುದಿಲ್ಲ. ಇಂತಿಂಥ ಜಾತಿಗೆ ಸೇರಿದವರೆಂದು ಅವರ ಸ್ಥಾನ ಮಾನ, ಅಂತಸ್ತು ಮತ್ತು ಬೆಲೆಯನ್ನು ನಿಗದಿ ಪಡಿಸುತ್ತದೆ. ಈ ಉಗ್ರತೆ ಈಗ ಬಹುಮಟ್ಟಿಗೆ ಮರೆಯಾದಂತೆ ಕಂಡರೂ, ಹಿಂದೂ ಮನಸ್ಸಿನಲ್ಲಿ ಅದು ಇನ್ನೂ ಸುಳಿದಾಡುತ್ತಿದೆ. ಒಂದು ಕಾಲದಲ್ಲಿ ಭೌತಿಕ ವಾಸ್ತವವಾಗಿದ್ದ ಜಾತಿ ಈಗ ಮಾನಸಿಕ ಸತ್ಯವಾಗಿದೆ. ತಾವು ಜಾತಿ ಪದ್ಧತಿಯನ್ನು ಒಪ್ಪುವುದಿಲ್ಲ. ಸಾಮಾಜಿಕ ಪ್ರತ್ಯೇಕತೆಯನ್ನು ಆಚರಿಸುವುದಿಲ್ಲ ಎಂದು ಹೇಳುವವರೂ ಕೂಡ ತಮ್ಮ ಮಕ್ಕಳ ಮದುವೆಯನ್ನು ಮಾಡುವಾಗ ತುಂಬ ನಿಷ್ಠೆಯಿಂದ ತಮ್ಮ ಜಾತಿಗೇ ಜೋತುಬೀಳುತ್ತಾರೆ. ಅತ್ಯಂತ ಆಧುನಿಕರಾದವರೂ ಸಹಾ ಅತ್ಯಂತ ಸಂಪ್ರದಾಯ ಶರಣರಾಗಿ ಬಿಡುತ್ತಾರೆ.

ಬ್ರಾಹ್ಮಣ ಧರ್ಮ ಅಸಮಾನತೆಯನ್ನು ಆಚರಿಸುತ್ತದೆ. ಅಸಮಾನತೆ ಅಮಾನುಷವಾದುದು. ಮನುಷ್ಯ ಗುಲಾಮನನ್ನು ಇಟ್ಟುಕೊಳ್ಳಬೇಕು ಎನ್ನುವವರೆಗೂ ಅಸಮಾನತೆ ಮುಂದುವರಿಯುತ್ತದೆ. ಕೊನೆಗೆ ಅವನೇ ಗುಲಾಮನಾಗಿಬಿಡುತ್ತಾನೆ. ಇದಕ್ಕೆ ಭಾರತದ ಇತಿಹಾಸ ಸದಾ ಸಾಕ್ಷಿಯಾಗಿದೆ.

ಸೌಜನ್ಯ : ಪಠೋಲಿನ್

ಎಲ್ಲಾ ಬಗೆಯ ಪೌರ ಹಕ್ಕು ಮತ್ತು ಸ್ವಾತಂತ್ರ್ಯಗಳನ್ನು ಬ್ರಾಹ್ಮಣ ಧರ್ಮ ಮೊದಲ ಮೂರು ವರ್ಗಗಳಿಗೆ ಅದರಲ್ಲೂ ಹೆಚ್ಚಾಗಿ ಬ್ರಾಹ್ಮಣರಿಗೆ ನೀಡುತ್ತದೆ; ಶೂದ್ರ ವರ್ಗಕ್ಕೆ ಎಲ್ಲಾ ಹಕ್ಕು ಮತ್ತು ಸವಲತ್ತುಗಳನ್ನು ನಿರಾಕರಿಸುತ್ತದೆ. ಬದುಕು ಮತ್ತು ಸ್ವಾತಂತ್ರ್ಯವನ್ನು ಅನುಭವಿಸಲು ಶ್ರಮಜೀವಿಗಳಿಗೆ ಅವಕಾಶವಿಲ್ಲ. ಬ್ರಾಹ್ಮಣ ಧರ್ಮ ಎಲ್ಲರಿಗಿಂತ ಮೇಲೆ ಹಾರುವವನ್ನು ಕೂರಿಸುತ್ತದೆ ಹಾಗಾಗಿ ಬ್ರಾಹ್ಮಣ ಧರ್ಮ ಅನ್ಯಾಯದ ಧರ್ಮ. ಆದ್ದರಿಂದ ಆತ್ಮ ಗೌರವ ಇರುವ ಪ್ರತಿಯೊಬ್ಬರೂ ಬ್ರಾಹ್ಮಣ ಧರ್ಮವನ್ನು ತಿರಸ್ಕರಿಸುತ್ತಾರೆ.

ಬ್ರಾಹ್ಮಣ ಧರ್ಮದ ಪ್ರಕಾರ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ ಹೆಣ್ಣು ಕೂಡ ಬ್ರಾಹ್ಮಣಳಲ್ಲ. ಆಕೆ ಕೇವಲ ಶೂದ್ರಳು. ಏಕೆಂದರೆ ಅವಳಿಗೆ ಮಂತ್ರೋಪದೇಶವಿಲ್ಲ; ವೇದಾಧ್ಯಯನದ ಅಧಿಕಾರವಿಲ್ಲ. ಪ್ರತಿ ಮಾಸ ಮುಟ್ಟಾಗುವುದರಿಂದ ಅವಳು ಕೊಳಕಿ. ಆದ್ದರಿಂದ ಅದು ಅವಳನ್ನು 'ಪಾಪಯೋನಿ-ಪಾಪ ಮಾಡಿದ ಜನ್ಮ' ಎಂದು ಹೀನಾಯವಾಗಿ ಕಾಣುತ್ತದೆ. ತನ್ನನ್ನು ಹಡೆದ ತಾಯಿಯನ್ನೇ ತುಚ್ಛವಾಗಿ ನೋಡುವಂತೆ ಮಾಡುವ ಧರ್ಮ ಪ್ರಪಂಚದಲ್ಲಿ ಬ್ರಾಹ್ಮಣ ಧರ್ಮ ಒಂದೇ. ಅದು ಅತ್ಯಂತ ಅನಿಷ್ಟ ಧರ್ಮ. ಹೆಣ್ಣನ್ನು ದಾಸಿಯನ್ನಾಗಿ ಭೋಗವಸ್ತುವನ್ನಾಗಿ ಮಾತ್ರ ಅದು ಪರಿಗಣಿಸುತ್ತದೆ: ಗಂಡಿಗೆ ಸಮಾನಳನ್ನಾಗಿ ಅಲ್ಲ, ಅಸಮಾನತೆಯೇ ಬ್ರಹ್ಮಣ ಧರ್ಮದ ಉಸಿರು, ಜೀವ, ಹೃದಯ, ಪ್ರಾಣ. ಪ್ರಪಂಚದ ಎಲ್ಲ ಧರ್ಮಗಳೂ ಸ್ತ್ರೀಯನ್ನು ಸಾಮಾನ್ಯವಾಗಿ ಕೀಳಾಗಿ ಕಂಡಿವೆ. ಕಾರಣ ಎಲ್ಲಾ ಧರ್ಮಗಳ ಸ್ಥಾಪಕರೂ ಗಂಡಸರೇ. ಸಮಾಜ ಸುಧಾರಕರು ಮಾತ್ರ ಹೆಣ್ಣು ಗಂಡಿಗೆ ಸಮಾನಳು ಎಂಬುದನ್ನು ಉಜ್ವಲವಾಗಿ ಪ್ರತಿಪಾದಿಸಿದ್ದಾರೆ; ಅವಳಿಗೆ ಸರಿಸಮನಾದ ಹಕ್ಕು ಬೇಕೆಂದು ಹೋರಾಡಿದ್ದಾರೆ.

ಬ್ರಾಹ್ಮಣ್ಯದ ಟೀಕೆ ಎಂದರೆ ಒಂದು ಜನಾಂಗದ ಟೀಕೆಯಲ್ಲ. ಅದು ಒಂದು ಧೋರಣೆಯ, ಒಂದು ಸಿದ್ಧಾಂತದ, ಒಂದು ಮತದ ಟೀಕೆ ಎಂದು ತಿಳಿಯಬೇಕು. ಬ್ರಾಹ್ಮಣ

ಧರ್ಮ ಬ್ರಾಹ್ಮಣರು ಮೇಲು ಎಂದು ಹೇಳಿ ಅವರನ್ನು ಹೃದಯಹೀನರನ್ನಾಗಿ ಮಾಡಿದೆ; ಬ್ರಾಹ್ಮಣೇತರರು ಕೀಳು ಎಂದು ಹೇಳಿ ಅವರನ್ನು ಸ್ವಾಭಿಮಾನ ಶೂನ್ಯರನ್ನಾಗಿ ಮಾಡಿದೆ. ಹೀಗಾಗಿ ಇಬ್ಬರೂ ಕುಬ್ಜರಾಗಿದ್ದಾರೆ. ಜನ ಕುಬ್ಜರಾದಾಗ ದೇಶ ಕುಬ್ಜವಾಗುತ್ತದೆ. ಇವರೆಲ್ಲ ಮನುಷ್ಯರಾಗಬೇಕಾದರೆ ಅಮಾನುಷವಾದ ಬ್ರಾಹ್ಮಣ ಧರ್ಮವನ್ನು ತ್ಯಜಿಸಬೇಕು.

ಹಿಂದೂ ಮತ್ತು ಮುಸ್ಲೀಮರನ್ನು ವಿಂಗಡಿಸುವುದಕ್ಕಾಗಿ ಇಂಗ್ಲೀಷರು ಮುಸ್ಲೀಮೇತರರನ್ನು ಹಿಂದೂಗಳೆಂದು ಕರೆದರು. ಅವರ ಆಡಳಿತ ಕಾಲದಲ್ಲಿ ದ್ವೈವೀಕರಣವಾಯಿತು. ಆದ್ದರಿಂದಲೇ ಹಿಂದೂಗಳು ಮತ್ತು ಹಿಂದೂ ಧರ್ಮ ಎಂದಾಯಿತು. ಬ್ರಾಹ್ಮಣ ಧರ್ಮವನ್ನು ಬಿಟ್ಟರೆ ಬೇರಾವ ಧರ್ಮದಲ್ಲಿಯೂ ಮನುಷ್ಯನನ್ನು ನುಚ್ಚುನೂರು ಮಾಡುವ ಜಾತಿ ಪದ್ಧತಿ ಇಲ್ಲ.

ಭಾರತೀಯ ತತ್ವಜ್ಞಾನ ಉಪನಿಷತ್‌ಗಳಲ್ಲಿ ಅತ್ಯುನ್ನತ ಶಿಖರಗಳನ್ನು ಮುಟ್ಟಿದೆ. ಭಾರತೀಯ ತತ್ವಜ್ಞಾನದ ಮುಖ್ಯ ಶಾಖೆಗಳೆಲ್ಲ ತಮ್ಮ ಸಿದ್ಧಾಂತಕ್ಕೆ ಆಧಾರಗಳನ್ನು ಅಥವಾ ಪೋಷಣೆಗಳನ್ನು ಉಪನಿಷತ್ತುಗಳಿಂದಲೇ ಪಡೆದಿವೆ. ಉಪನಿಷತ್ತುಗಳು ಮಾತ್ರ ಎಲ್ಲರನ್ನೂ ಮನುಷ್ಯರೆಂದು ಪರಿಗಣಿಸುತ್ತವೆ; ತಾರತಮ್ಯ ಭಾವನೆ ಅವುಗಳಲ್ಲಿ ಕಾಣಿಸುವುದಿಲ್ಲ. "ಯಸ್ತು ಸರ್ವಾಣಿ ಭೂತಾನಿ ಆತ್ಮನ್ಯೇವಾನುಪಶ್ಯತಿ, ಸರ್ವಭೂತೇಷು ಚ ಆತ್ಮಾನಂ ತತೋ ನ ವಿಜುಗುಪ್ಸತೆ 10 - ಯಾರು ಎಲ್ಲಾ ಜೀವಿಗಳನ್ನು ತನ್ನಲ್ಲಿಯೂ ಮತ್ತು ತನ್ನನ್ನು ಎಲ್ಲ ಜೀವಿಗಳಲ್ಲಿಯೂ ಕಾಣುತ್ತಾನೆಯೋ ಅವನು ಅಸಹ್ಯ ಪಡುವುದಿಲ್ಲ" ಉಪನಿಷತ್ತುಗಳು ವೈದಿಕ ದೇವತೆಗಳನ್ನು ಗೇಲಿ ಮಾಡಿವೆ. ಅವುಗಳ ವೈಚಾರಿಕತೆಯ ಗಾಳಿಗೆ ವೇದಗಳು ತೂರಿಹೋದವು. ಉಪನಿಷತ್ ಸಾಹಿತ್ಯವೆಲ್ಲ ಕರ್ಮಕಾಂಡಕ್ಕೂ ಜ್ಞಾನಕಾಂಡಕ್ಕೂ ನಡೆದ ಭಾರಿ ಹೋರಾಟದ ಕಥೆ. ಆ ಹೋರಾಟದಲ್ಲಿ ಜ್ಞಾನಕ್ಕೆ ಸ್ವಾತಂತ್ರ್ಯಕ್ಕೆ ಜಯ ಲಭಿಸಿತು. ಆದ್ದರಿಂದಲೇ ಉಪನಿಷತ್ತುಗಳು ಕರ್ಮಕಾಂಡವನ್ನು ತಿರಸ್ಕರಿಸಿ ಜ್ಞಾನಕಾಂಡವನ್ನು ಪುರಸ್ಕರಿಸಿವೆ. ಜ್ಞಾನಕಾಂಡ ಸಂಪೂರ್ಣವಾಗಿ ಕ್ಷತ್ರಿಯರ ಕೊಡುಗೆ. ಪೂಜೆ ಪುನಸ್ಕಾರ ಯಜ್ಞ ಯಾಗಾದಿಯಾಗಿ ಕರ್ಮ ಕಾಂಡದಲ್ಲೇ ಮುಳುಗಿಹೋಗಿದ್ದ ಹಾರುವ ವರ್ಗಕ್ಕೆ ಕ್ಷತ್ರಿಯರು ಆತ್ಮಜ್ಞಾನವನ್ನು ದಯಪಾಲಿಸಿದರು. ಇದು ಉಪನಿಷತ್ತುಗಳಲ್ಲಿ ಅತ್ಯಂತ ಪ್ರಾಚೀನವೆಂದು ಹೇಳುವ 'ಬೃಹದಾರಣ್ಯಕೋಪನಿಷತ್ ("ಇಯಂ ವಿದ್ಯೇತಃ ಪೂರ್ವಂ ನ ಕಸ್ಮಿಶ್ಚ ಬ್ರಾಹ್ಮಣ ಉವಾಸ- ಈ ವಿದ್ಯೆಯು ಇದಕ್ಕೆ ಮೊದಲು ಯಾವ ಬ್ರಾಹ್ಮಣನಲ್ಲಿಯೂ ಇರಲಿಲ್ಲ") ಮತ್ತು 'ಛಂದೋಗ್ಯೋಪನಿಷತ್'ನಲ್ಲಿ ("ಯಥೇಯಂ ನ ಪ್ರಾಕ್‌ತ್ವತ್ತಃ ಪುರಾ ವಿದ್ಯಾ ಬ್ರಾಹ್ಮಣಾನ್ ಗಚ್ಛತಿ ತಸ್ಮಾತ್ ಉ ಸರ್ವೇಷು ಲೋಕೇಷು ಕ್ಷತ್ರಸ್ಯ ಏವ ಪ್ರಶಾಸನಂ ಅಭೂತ್ ಇತಿ 12- ಈ ವಿದ್ಯೆಯು ನಿನಗಿಂತ ಮೊದಲು ಬ್ರಾಹ್ಮಣರನ್ನು ಸೇರಿರಲಿಲ್ಲ. ಆದುದರಿಂದಲೇ ಹಿಂದೆ ಎಲ್ಲ ಲೋಕಗಳಲ್ಲಿಯೂ ಈ ವಿದ್ಯೆಯ ಅನುಶಾಸನವು ಕ್ಷತ್ರಿಯರಿಗೇ ಸೇರಿತ್ತು") ಎಂದು ದಾಖಲಾಗಿದೆ. ಕರ್ಮಕಾಂಡದಿಂದ ತುಂಬಿಹೋಗಿರುವ ವೇದಗಳನ್ನು ಕೀಳೆಂದು ('ಅಪರಾ') ಉಪನಿಷತ್ತುಗಳು ಪರಿಗಣಿಸುತ್ತವೆ. 13 ವೇದಜ್ಞಾನಕ್ಕಿಂತ ಆತ್ಮಜ್ಞಾನ ದೊಡ್ಡದು ಎಂದು ಅವು ಬೋಧಿಸುತ್ತವೆ. 14 ಕರ್ಮಕಾಂಡವನ್ನು ಅವಿದ್ಯೆ ಎಂದೂ ಜ್ಞಾನಕಾಂಡವನ್ನು ವಿದ್ಯೆ ಎಂದೂ ಅವು ಕರೆಯುತ್ತವೆ. 'ಅವಿದ್ಯೆ'ಯಿಂದ ಭವಬಂಧನ; 'ವಿದ್ಯೆ'ಯಿಂದ ಸಂಸಾರವಿಮೋಚನೆ. ಅಂದರೆ ಉಪನಿಷತ್ತುಗಳು ಬಾಳನ್ನು ಹಳಿಯುವುದಕ್ಕೆ ಬದಲು ಜೀವನ ಪ್ರೀತಿಯನ್ನು ಬೆಳೆಸಿ ಧೈರ್ಯವನ್ನು ಶಕ್ತಿಯನ್ನೂ ನಮ್ಮಲ್ಲಿ ತುಂಬುತ್ತವೆ; ನಮ್ಮನ್ನು ಅತ್ಯಂತ ಎತ್ತರದ ಅನುಭವಗಳಿಗೆ ಕರೆದೊಯ್ಯುತ್ತವೆ.

ಸಾಮಾನ್ಯವಾಗಿ ಎಲ್ಲ ಧರ್ಮಗಳೂ ಕಲ್ಪಿತ ದೇವರ ಮೇಲೆ ಆಧಾರಿತವಾಗಿವೆ; ದೇವರಿಲ್ಲದಿದ್ದರೆ ಧರ್ಮವೇ ಇಲ್ಲ ಎಂಬಷ್ಟರ ಮಟ್ಟಿಗೆ. ಇದಕ್ಕೆ ಬೌದ್ಧಧರ್ಮ ಒಂದು ಅಪವಾದ. ಬ್ರಾಹ್ಮಣ ಧರ್ಮ ಎನ್ನದೆ ತಪ್ಪಾಗಿ ಹಿಂದೂಧರ್ಮವೆಂದು ಕರೆಯುವ ಹಂತದಲ್ಲಿ ಸಾವಿರಾರು ದೇವತೆಗಳಿದ್ದಾರೆ. ಲಕ್ಷಾಂತರ ಗ್ರಾಮದೇವತೆಗಳಿದ್ದಾರೆ.

ಆದರೆ, ಉಪನಿಷತ್ತುಗಳು, ಅವುಗಳನ್ನು ಒಪ್ಪಿಕೊಳ್ಳದೇ ಬ್ರಹ್ಮವನ್ನು ಅಂದರೆ ಅಂತಿಮ ಸತ್ಯವನ್ನು ಅನುಭವವೆಂದು ಒಪ್ಪಿಕೊಂಡು ಮಾನ್ಯ ಮಾಡಿವೆ. ಅವು ನಿಜವಾದ ದೇವರೆಂದು ಸ್ತುತಿಸುವುದು ತಾಯಿ ತಂದೆ ಗುರು ಮತ್ತು ಅತಿಥಿ. "ಮಾತೃ ದೇವೋ ಭವ, ಪಿತೃದೇವೋ ಭವ, ಆಚಾರ್ಯದೇವೋ ಭವ, ಅತಿಥಿದೇವೋ ಭವ 15- ತಾಯಿಯೇ ದೇವರೆಂದು ತಿಳಿ. ತಂದೆಯನ್ನು ದೇವರೆಂದು ತಿಳಿ, ಗುರುವೇ ದೇವರೆಂದು ತಿಳಿ, ಅತಿಥಿಯೇ ದೇವರೆಂದು ತಿಳಿ" ನರಜೀವಿಯನ್ನು ಹೆತ್ತು ಹೊತ್ತು ಸಾಕಿ ಸಲಹಿ ವಿದ್ಯಾಬುದ್ಧಿ ನೀಡಿದ ಪೂಜಾರ್ಹ ವ್ಯಕ್ತಿಗಳನ್ನೇ ಹೊರತು ಕಣ್ಣಿಗೆ ಕಾಣದ ಯಾವ ದೇವರನ್ನೂ ಅವು ಪರಿಗಣಿಸುವುದಿಲ್ಲ. ಅಂದರೆ ಒಳ್ಳೆಯ ವಿಚಾರ, ಸದ್ಭಾವನೆ, ಪವಿತ್ರವಾದ ಪರಮಶ್ರೇಷ್ಠ ಆಲೋಚನೆಯೇ ದೇವರೆಂದು ತಿಳಿಯುವುದು ಸೂಕ್ತ. ಸಮಾನತೆ, ಸ್ವಾತಂತ್ರ್ಯ, ಸಹೋದರತ್ವದ ಸಾಕ್ಷಾತ್ಕಾರವೇ ದೈವಸಾಕ್ಷಾತ್ಕಾರ. ಈ ಮಹದಂಶಗಳನ್ನು ಬೆರಳೆಣಿಕೆಗೆ ಮಾತ್ರ ಸಿಗುವ ಈ ಜಗತ್ತಿನ ಯಾವುದೇ ಮಹಾಪುರುಷನ ದಿವ್ಯ ಜೀವನದಲ್ಲಿ ಕಾಣಬಹುದಾಗಿದೆ. ಹಾಗಾದರೆ ಈ ಬದುಕನ್ನು ಉತ್ತಮಪಡಿಸಿಕೊಳ್ಳಲು ಒಂದು ಅತೀಂದ್ರಿಯ ಅದೃಶ್ಯ ಶಕ್ತಿಯಲ್ಲಿ ನಂಬಿಕೆ ಬೇಡವೆ? ಅದರ ಆರಾಧನೆ ಅಗತ್ಯವಿಲ್ಲವೇ? ಎಂದರೆ ಉಪನಿಷತ್ತುಗಳು ತುಂಬಾ ಸುಲಭವಾಗಿ ತಿಳಿಯುವ ಮಾತುಗಳಲ್ಲಿ ಈ ಸಮಸ್ಯೆಯನ್ನು ಸುಂದರವಾಗಿ ಬಿಡಿಸಿವೆ; ದಾರಿ ತೋರಿಸಿವೆ.

> ಬ್ರಾಹ್ಮಣ ಧರ್ಮದ ಪ್ರಕಾರ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ ಹೆಣ್ಣು ಕೂಡ ಬ್ರಾಹ್ಮಣಳಲ್ಲ. ಆಕೆ ಕೇವಲ ಶೂದ್ರಳು. ಏಕೆಂದರೆ ಅವಳಿಗೆ ಮಂತ್ರೋಪದೇಶವಿಲ್ಲ; ವೇದಾಧ್ಯಯನದ ಅಧಿಕಾರವಿಲ್ಲ. ಪ್ರತಿ ಮಾಸ ಮುಟ್ಟಾಗುವುದರಿಂದ ಅವಳು ಕೊಳಕಿ. ಆದ್ದರಿಂದ ಅದು ಅವಳನ್ನು 'ಪಾಪಯೋನಿ-ಪಾಪ ಮಾಡಿದ ಜನ್ಮ' ಎಂದು ಹೀನಾಯವಾಗಿ ಕಾಣುತ್ತದೆ. ತನ್ನನ್ನು ಹಡೆದ ತಾಯಿಯನ್ನೇ ತುಚ್ಛವಾಗಿ ನೋಡುವಂತೆ ಮಾಡುವ ಧರ್ಮ ಪ್ರಪಂಚದಲ್ಲಿ ಬ್ರಾಹ್ಮಣ ಧರ್ಮ ಒಂದೇ. ಅದು ಅತ್ಯಂತ ಅನಿಷ್ಟ ಧರ್ಮ. ಹೆಣ್ಣನ್ನು ದಾಸಿಯನ್ನಾಗಿ ಭೋಗವಸ್ತುವನ್ನಾಗಿ ಮಾತ್ರ ಅದು ಪರಿಗಣಿಸುತ್ತದೆ: ಗಂಡಿಗೆ ಸಮಾನಳನ್ನಾಗಿ ಅಲ್ಲ, ಅಸಮಾನತೆಯೇ ಬ್ರಾಹ್ಮಣ ಧರ್ಮದ ಉಸಿರು, ಜೀವ, ಹೃದಯ, ಪ್ರಾಣ. ಪ್ರಪಂಚದ ಎಲ್ಲ ಧರ್ಮಗಳೂ ಸ್ತ್ರೀಯನ್ನು ಸಾಮಾನ್ಯವಾಗಿ ಕೀಳಾಗಿ ಕಂಡಿವೆ. ಕಾರಣ ಎಲ್ಲಾ ಧರ್ಮಗಳ ಸ್ಥಾಪಕರೂ ಗಂಡಸರೇ. ಸಮಾಜ ಸುಧಾರಕರು ಮಾತ್ರ ಹೆಣ್ಣು ಗಂಡಿಗೆ ಸಮಾನಳು ಎಂಬುದನ್ನು ಉಜ್ವಲವಾಗಿ ಪ್ರತಿಪಾದಿಸಿದ್ದಾರೆ; ಅವಳಿಗೆ ಸರಿಸಮನಾದ ಹಕ್ಕು ಬೇಕೆಂದು ಹೋರಾಡಿದ್ದಾರೆ.

ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು ।
ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ ॥
ಇಂದ್ರಿಯಾಣಿ ಹಯಾನ್ ಆಹುಃ ವಿಷಯಾನ್ ತೇಷು ಗೋಚರಾನ್ ।
ಆತ್ಮೇಂದ್ರಿಯ ಮನೋಯುಕ್ತಂ ಭೋಕ್ತಾ ಇತ್ಯಾಹುಃ ಮನೀಷಿಣಃ ।
ತಸ್ಯೇಂದ್ರಿಯಾಣಿ ಅವಶ್ಯಾನಿ ದುಷ್ಟಾಶ್ವಾ ಇವ ಸಾರಥೇಃ ॥
ಯಸ್ತು ವಿಜ್ಞಾನವಾನ್ ಭವತಿ ಯುಕ್ತೇನ ಮನಸಾ ಸದಾ ।
ತಸ್ಯೇಂದ್ರಿಯಾಣಿ ವಶ್ಯಾನಿ ಸದಶ್ವಾ ಇವ ಸಾರಥೇಃ ॥

ಆತ್ಮವನ್ನು ರಥಿಯೆಂದೂ ಶರೀರವನ್ನು ರಥವೆಂದೂ ಬುದ್ಧಿಯನ್ನು ಸಾರಥಿಯೆಂದೂ ಮನಸ್ಸನ್ನು ಕಡಿವಾಣವೆಂದೂ ತಿಳಿ. ಇಂದ್ರಿಯಗಳನ್ನು ಕುದುರೆ ಗಳೆಂದೂ ವಿಷಯಗಳನ್ನು ಅವುಗಳ ಮಾರ್ಗಗಳೆಂದು ಹೇಳುತ್ತಾರೆ; ಶರೀರ, ಇಂದ್ರಿಯ, ಮನಸ್ಸು ಇವುಗಳಿಂದ ಕೂಡಿದ ಆತ್ಮನನ್ನು ಸಂಸಾರಿಯೆಂದು ಜ್ಞಾನಿಗಳು ಹೇಳುತ್ತಾರೆ. ಯಾರು ಯಾವಾಗಲೂ ಅಯುಕ್ತವಾದ ಮನಸ್ಸಿನಿಂದ ಕೂಡಿದವನಾಗಿ ಅನಿಪುಣನಾಗಿರುವನೋ ಅವನ ಇಂದ್ರಿಯಗಳು ಸಾರಥಿಯ ತುಂಟ ಕುದುರೆಗಳಂತೆ ವಶವಾಗದೆ ಇರುವುವು. ಯಾರು ಯಾವಾಗಲೂ ಯುಕ್ತ ಮನಸ್ಸಿನಿಂದ ಕೂಡಿದವನಾಗಿ ನಿಪುಣನಾಗಿರುವನೋ ಅವನ ಇಂದ್ರಿಯಗಳು ಸಾರಥಿಯ ಒಳ್ಳೆಯ ಕುದುರೆಗಳಂತೆ ವಶವಾಗಿರುವುವು.

ಬಾಳು ಬೆಳಕಾಗಲು ಸುಖಸಮೃದ್ಧವಾಗಲು ಮನಸ್ಸೇ ಮೂಲ. ಅದನ್ನು ಪಳಗಿಸುವುದೇ ಯೋಗ. ಅದನ್ನು ಸಾಧನೆಯ ಮೂಲಕ ತಿಳಿಯಬೇಕೆಂದು ಅವು ಬೋಧಿಸುತ್ತವೆ :

ಉತ್ತಿಷ್ಠತ ಜಾಗ್ರತ ಪ್ರಾಪ್ಯ ವರಾನ್ ನಿಬೋಧತ ।
ಕ್ಷುರಸ್ಯ ಧಾರಾ ನಿಶಿತಾ ದುರತ್ಯಯಾ ದುರ್ಗಂ ಪಥಃ ತತ್ ಕವಯೋ ವದಂತಿ ॥

ಏಳಿರಿ, ಎಚ್ಚರಗೊಳ್ಳಿರಿ, ಶ್ರೇಷ್ಠರಾದ ಆಚಾರ್ಯರನ್ನು ಹೊಂದಿ ತಿಳಿದುಕೊಳ್ಳಿರಿ,

ಹರಿತವಾದ ಕತ್ತಿಯ ಅಲಗು ದಾಟಲು ಕಷ್ಟವಾಗಿರುವಂತೆ ಆ ಪಥವು ದುರ್ಗಮ ವೆಂದು ಜ್ಞಾನಿಗಳು ಹೇಳುತ್ತಾರೆ.

ಮನುಷ್ಯ ದೇವರನ್ನು ಪೂಜಿಸುವುದು, ಧರ್ಮವನ್ನು ಆಚರಿಸುವುದು ತಾನು ಒಳ್ಳೆಯವನಾಗಬೇಕು ಎಂಬುದಕ್ಕಿಂತ ಹೆಚ್ಚಾಗಿ ತನಗೆ ಸದ್ಗತಿ ಸಿಗಲಿ, ಮುಕ್ತಿ ದೊರಕಲಿ ಎಂಬ ಆಸೆಯೇ ಮುಖ್ಯ ಕಾರಣವಾಗಿದೆ. ಆದರೆ ಇದರಿಂದ ಮೋಕ್ಷ ಲಭಿಸುವುದಿಲ್ಲವೆಂದು ಮಹರ್ಷಿಗಳು ಹೇಳಿದ್ದಾರೆ. ಹಾಗಾದರೆ ಯಾವುದರಿಂದ ಮುಕ್ತಿ ದೊರಕುತ್ತದೆ?

"ಸಮತಾ ಸರ್ವಭೂತೇಷು ಏತನ್ ಮುಕ್ತಸ್ಯ ಲಕ್ಷಣಂ-ಸರ್ವ ಜೀವಿಗಳನ್ನು ಸಮಾನತಾಭಾವದಿಂದ ನೋಡುವುದೇ ಮುಕ್ತನ ಲಕ್ಷಣ". ಅಂಥವರಿಗೆ ಮಾತ್ರ ಮುಕ್ತಿ; ಬೇಧಭಾವ ಎಣಿಸುವವರಿಗಲ್ಲ. ಸಾವಿರ ದೇವರು ಪೂಜಿಸಿದರೂ, ಸಾವಿರ ತೀರ್ಥಯಾತ್ರೆ ಮಾಡಿದರೂ ಮೋಕ್ಷ ಸಿಗುವುದಿಲ್ಲ.

ಉಪನಿಷತ್ತುಗಳಲ್ಲಿ ವ್ಯಕ್ತವಾಗಿರುವ ತತ್ವಜ್ಞಾನ ಯಾವುದು? ಆಸ್ತಿಕತೆಯೇ? ನಾಸ್ತಿಕತೆಯೇ? ಅಜ್ಞೇಯವಾದವೇ? ಅಥವಾ ಶೂನ್ಯವಾದವೇ? ಎಂದು ನಿರ್ಣಯಿಸುವುದು ಬಹಳ ಕಷ್ಟ. ಅದು ಆಸ್ತಿಕವಾದವಲ್ಲ; ಏಕೆಂದರೆ ಯಾವುದೇ ದೇವರನ್ನು ಅಲ್ಲಿ ಸ್ತುತಿಸಿಲ್ಲ. ಅದು ನಾಸ್ತಿಕವಾದವಲ್ಲ; ಕಾರಣ 'ಬ್ರಹ್ಮ'ದ ವಿಷಯ ಬರುತ್ತದೆ; ಆದರೆ ಬ್ರಹ್ಮ ದೇವರಲ್ಲ, ಏಕೆಂದರೆ, ಬ್ರಹ್ಮನಿಗೆ ದೇವಸ್ಥಾನವಲ್ಲ. ಬ್ರಹ್ಮ ಏನೆಂದು ವ್ಯಾಖ್ಯಾನಿಸಲು ಉಪನಿಷತ್ತುಗಳು ನಾನಾ ರೀತಿಯಲ್ಲಿ ಪ್ರಯತ್ನಿಸಿವೆ. "ಅಯಂ ಆತ್ಮಾ ಬ್ರಹ್ಮ-ಈ ಆತ್ಮವೇ ಬ್ರಹ್ಮ"; "ಪ್ರಜ್ಞಾನಂ ಬ್ರಹ್ಮ-ಪ್ರಜ್ಞಾನವೇ ಬ್ರಹ್ಮ"; "ಮಹ ಇತಿ ಬ್ರಹ್ಮ-ಸತ್ಯ ಜ್ಞಾನ ಆನಂತರವೇ ಬ್ರಹ್ಮ"; "ಆನಂದೋ ಬ್ರಹ್ಮತಿ ವ್ಯಜನಾತ್-ಆನಂದವೇ ಬ್ರಹ್ಮ". ಆದ್ದರಿಂದ ಬ್ರಹ್ಮ ಎನ್ನುವುದು ಭೂಮ ಇರಬಹುದು ಅಥವಾ "ಇರುವುದು ಒಂದೆ, ಜ್ಞಾನಿಗಳು ಅದನ್ನು ನಾನಾ ವಿಧವಾಗಿ ಹೇಳುತ್ತಾರೆ" ("ಏಕಂ ಸತ್ ವಿಪ್ರಾ ಬಹುಧಾ ವದಂತಿ"; 'ಏಕಂ ಸಂತಂ ಬಹುಧಾ ಕಲ್ಪಯಂತಿ") ಹಾಗಿದ್ದ ಮೇಲೆ ಉಪನಿಷತ್ತುಗಲು ಅಜ್ಞೇಯವಾದವನ್ನು ಬೋಧಿಸುತ್ತವೆಯೇ? ಏಕೆಂದರೆ ಅವು "ನೇತಿ, ನೇತಿ-ಇದಲ್ಲ ಅದಲ್ಲ" ಎಂದು ಹೇಳುತ್ತವೆ.

ನ ತತ್ರ ಚಕ್ಷುರ್ಗಚ್ಛತಿ ನ ವಾಕ್ ಗಚ್ಛತಿ ನೋ ಮನೋ।
ನ ವಿದ್ಮೋ ನ ವಿಜ್ಞಾನಿಮೋ ಯಥಾ ಏತತ್ ಅನುಶಿಷ್ಯಾತ್ ॥

"ಅಲ್ಲಿಗೆ ಕಣ್ಣು ಹೋಗುವುದಿಲ್ಲ, ವಾಕ್ಕು ಹೋಗುವುದಿಲ್ಲ, ಮನಸ್ಸು ಹೋಗುವುದಿಲ್ಲ; ಅದನ್ನು ನಾವು ಅರಿಯೆವು; ಹೇಗೆ ಇದನ್ನು ತಿಳಿಸಿಕೊಡಬೇಕೋ ಅದನ್ನೂ ನಾವು ಅರಿಯೆವು" ಅದು ಅಜ್ಞೇಯವಾದವೂ ಅಲ್ಲದಿರಬಹುದು. ಏಕೆಂದರೆ ಅತ್ಯಂತ ಶ್ರೇಷ್ಠ ಅನುಭವ ಶೂನ್ಯವೆಂದೂ ನಿರಾಕಾರವೆಂದೂ ಅನಿರ್ವಚನೀಯವೆಂದೂ ಹೇಳಲಾಗಿದೆ. ಶೂನ್ಯವಾದ ನೇತ್ಯಾತ್ಮಕವಲ್ಲ; ಅದು ಸಂಪೂರ್ಣವಾಗಿ ಇತ್ಯಾತ್ಮಕವಾದ ಅನುಭವ.

ನ ತತ್ರ ಸೂರ್ಯೋ ಭಾತಿ
ಚಂದ್ರತಾರಕಂ, ನೇಮಾ
ವಿದ್ಯುತೋ ಭಾಂತಿ ಕುತೋಯಮಗ್ನಿಃ।
ತಮೇವ ಭಾತಂ ಅನುಭಾತಿ ಸರ್ವಂ,
ತಸ್ಯ ಭಾ, ಆ ಸರ್ವಂ ಇದಂ ವಿಭಾತಿ ॥

"ಅಲ್ಲಿ ಸೂರ್ಯ ಬೆಳಗುವುದಿಲ್ಲ, ಚಂದ್ರ ತಾರೆಗಳು ಹೊಳೆಯುವುದಿಲ್ಲ, ಮಿಂಚು ಮಿಂಚುವುದಿಲ್ಲ; ಈ ಅಗ್ನಿ ಎಲ್ಲಿ ಪ್ರಕಾಶಿಸುತ್ತದೆ? ಅದನ್ನೇ ಅನುಸರಿಸಿ ಎಲ್ಲವೂ ಪ್ರಕಾಶಿಸುತ್ತವೆ; ಅದರ ಪ್ರಕಾಶದಿಂದಲೇ ಸರ್ವವೂ ಪ್ರಕಾಶಿ ಸುತ್ತದೆ" ಆದ್ದರಿಂದ ವಾಚಕರು ತಮ್ಮ ಅಭಿರುಚಿಗೆ ತಕ್ಕಂತೆ ತಮಗೆ ಪ್ರಿಯವಾದ ರೀತಿಯಲ್ಲಿ ಉಪ ನಿಷತ್ತುಗಳನ್ನು ಅರ್ಥಮಾಡಿಕೊಳ್ಳಲು ಅವಕಾಶವಿದೆ. ವೇದಗಳು ಶ್ರದ್ಧಾನ್ವಿತ ವಾಗಿದ್ದರೆ ಉಪನಿಷತ್ತುಗಳು ಬುದ್ಧಿ ನಿಯುಕ್ತವಾಗಿವೆ; ಅವುಗಳ ಅಧ್ಯಯನ ಮತ್ತು ಅನು ಷ್ಠಾನದಿಂದ ವ್ಯಕ್ತಿಗೆ "ತತ್ ತ್ವಂ ಅಸಿ - ಅದೇ ನೀನಾಗಿದ್ದೀಯೆ" ಎಂಬ ಮನವರಿಕೆ ಯಾಗುತ್ತದೆ. ಆಗ ಬ್ರಹ್ಮದೇವ ಬ್ರಹ್ಮಾಸ್ಮಿ-ನಾನೇ ಬ್ರಹ್ಮ". ಇದು ಅನುಭೂತಿ.

ಉಪನಿಷತ್ತುಗಳು ನಾಸ್ತಿಕವಾದವನ್ನು ಎತ್ತಿಹಿಡಿಯುತ್ತವೆಂದು ನನ್ನ ತಿಳಿವಳಿಕೆ. ನಾಸ್ತಿಕವಾದವೆ ಅತ್ಯುನ್ನತ ತತ್ವಜ್ಞಾನ. ನಾಸ್ತಿಕವಾದವೆಂದರೆ ಸಂಪೂರ್ಣ ಶಕ್ತಿ. ಶಕ್ತಿಯಿಲ್ಲದವರು ಇತರರನ್ನೋ ಇಲ್ಲ ದೇವರನ್ನೋ ಅವಲಂಬಿಸುತ್ತಾರೆ. ಶಕ್ತಿಯಿಂದ ಸ್ವಾವಲಂಬನೆ; ದೌರ್ಬಲ್ಯ ದಿಂದ ಪರಾವಲಂಬನೆ. ಹಾಗಾಗಿ ಎಲ್ಲರೂ ನಾಸ್ತಿಕರಾಗಲಾರರು. ನಾಸ್ತಿಕವಾದ ಎಲ್ಲಾ ವಾದಕ್ಕಿಂತ ಹೆಚ್ಚಿನ ಜವಾಬ್ದಾರಿಯನ್ನು ಸಂಯಮವನ್ನೂ ಬೇಡುತ್ತದೆ. ಯಾರಿಗೆ ತಮ್ಮಲ್ಲಿ ಆತ್ಮವಿಶ್ವಾಸವಿದೆಯೋ, ಧೈರ್ಯವಿದೆಯೋ, ಉನ್ನತ ಆಲೋಚನಾ ಶಕ್ತಿ ಇದೆಯೋ ವೈಚಾರಿಕತೆ ಇದೆಯೋ ಅವರು ಮಾತ್ರ ನಾಸ್ತಿಕವಾದಿ ಗಳಾಗಬಲ್ಲರು. ಆದ್ದರಿಂದ ನಾಸ್ತಿಕಧರ್ಮ ಎಂದರೆ ಆತ್ಮನಂಬಿಕೆಯ ಧರ್ಮ. ದೈವವಾದದಿಂದ ಬಿಡಿಸಿಕೊಂಡು ಆದರ್ಶವಾದದಲ್ಲಿ ಬೇರೂರಿದ ಜಡವಾದವೇ ನಾಸ್ತಿಕವಾದ; ನಾಸ್ತಿಕವಾದವೇ ಮಾನವತಾವಾದ. ಈ ಅರ್ಥದಲ್ಲಿ ಉಪನಿಷತ್ತುಗಳಲ್ಲಿ ಪ್ರಣೀತವಾಗಿರುವ ಧರ್ಮ ಮಾನವಧರ್ಮ; ಮನುಷ್ಯ ಶಕ್ತಿಯನ್ನು ಪ್ರಚೋದಿಸಿ ಪ್ರವರ್ಧಿಸಿ ಪ್ರಶಂಸಿರುವ ಮಹಾಧರ್ಮ. ದೇವರನ್ನು ಕುರಿತ ಧರ್ಮಕ್ಕಿಂತ ಮನುಷ್ಯರನ್ನು ಕುರಿತ ಧರ್ಮ ನಿಸ್ಸಂದೇಹವಾಗಿ ದೊಡ್ಡದು. ಭಾರತೀಯ ತತ್ವಶಾಸ್ತ್ರದ ಪ್ರಧಾನ ಶಾಖೆಗಳಾದ ನ್ಯಾಯ, ವೈಶೇಷಿಕ, ಪೂರ್ವಮೀಮಾಂಸೆ, ಉತ್ತರ ಮೀಮಾಸೆ, ಸಾಂಖ್ಯ ಮತ್ತು ಯೋಗ ಎಂಬ ಷಡ್ ದರ್ಶನಗಳು ಸಂಪೂರ್ಣವಾಗಿ ನಾಸ್ತಿಕವಾದವೇ ಆಗಿವೆ. ವಿಚಾರಹೀನ ಸ್ಥಿತಿಯಲ್ಲಿ ಮಾತ್ರ ಮನಸ್ಸು ದೇವರನ್ನು ಒಪ್ಪಿಕೊಳ್ಳಬಹುದೆಂದು ಅವು ಘೋಷಿಸುತ್ತವೆ. ಆದ್ದರಿಂದ ವಿಚಾರವೇ ವಿಮೋಚನೆ, ಮುಕ್ತ ಮಾನವನೇ ವಿಶ್ವ ಮಾನವ. ●

ಹಸಿ ಸುಳ್ಳು ಹಬ್ಬಿಸುವ ಪುರೋಹಿತರು

"ಒಂದು ವೇಳೆ ಹಿಂದೂ ರಾಷ್ಟ್ರ ಸ್ಥಾಪಿಸಲ್ಪಟ್ಟರೆ ಅದು ದೇಶಕ್ಕೆ ಬಂದ ಮಹಾ ಆಪತ್ತಾಗಿರುತ್ತದೆ ಹಿಂದೂಗಳೇನೆ ಹೇಳಲಿ ಹಿಂದೂ ಧರ್ಮ ಸ್ವಾತಂತ್ರ್ಯದ ವಿರೋಧಿಯಾಗಿದೆ. ಯಾವುದೆ ಬೆಲೆ ತೆತ್ತಾದರೂ ಹಿಂದೂ ರಾಷ್ಟ್ರ ಸ್ಥಾಪನೆಯಾಗದಂತೆ ತಡೆಯಬೇಕು.

— ಅಂಬೇಡ್ಕರ್

"ಡಾ|| ಬಿ.ಆರ್. ಅಂಬೇಡ್ಕರ್ ಹಿಂದುತ್ವದ ಹೀರೋ, 'ರಾಮಮಂದಿರ ನಿರ್ಮಾಣ ಅವರ ಆಶಯವಾಗಿತ್ತು'. ಅಂಬೇಡ್ಕರ್ ಮತ್ತು ಸಾವರ್ಕರ್ (ಮನುಧರ್ಮದ ಪ್ರತಿಪಾದಕ) ಇಬ್ಬರ ವಿಚಾರಗಳಲ್ಲಿ ವ್ಯತ್ಯಾಸಗಳಿಲ್ಲ ಇವರಿಬ್ಬರು ಹಿಂದೂಗಳು, ಹಿಂದೂ ಧರ್ಮದ ಸುಧಾರಣೆಗಾಗಿ ಶ್ರಮಿಸಿದವರು. ಅಂಬೇಡ್ಕರ್ ಮುಸ್ಲಿಂ ವಿರೋಧಿಯಾಗಿದ್ದರು....ಇತ್ಯಾದಿ ದೇಶಭಕ್ತಿಯ ಹೆಸರಿನಲ್ಲಿ ಬರುತ್ತಿರುವಂತಹ 'ಬ್ರಾಹ್ಮಣ್ಯ ಜಾತಿ ಪಕ್ಷ'ದ (BJP) ವಕ್ತಾರರನೇಕರು ಅಂಬೇಡ್ಕರ್ ಕುರಿತು ಹಸಿ ಸುಳ್ಳುಗಳನ್ನು ಪ್ರಚಾರ ಮಾಡುತ್ತಿದ್ದಾರೆ.

ವರ್ಣಾಶ್ರಮ ಪದ್ಧತಿಯನ್ನು ಹುಟ್ಟು ಹಾಕಿದಂತಹ ಆರ್ಯರ ಚಾತುರ್ವರ್ಣ ಪದ್ಧತಿಯೊಳಗೆ ದಲಿತರು ಅಸ್ಪೃಶ್ಯರು ಬರುವುದೇ ಇಲ್ಲ ಅವರನ್ನ ಪಂಚಮರೆಂದು ಅಸ್ಪೃಶ್ಯರೆಂದು ಹಂದಿನಾಯಿಗಳಿಗಿಂತ ಕೀಳಾಗಿ ಕಂಡದ್ದು ಕಾಣುತ್ತಿರುವುದು ಈಗ ಇತಿಹಾಸ. ಮನು ಕುಲದ ಕಡು ವೈರಿಗಳಾದ ಮನುವಿನ ಅನುಯಾಯಿ ಹಿಟ್ಲರ್‌ನ ಶನಿ ಸಂತಾನದ ಸಂಘ ಪರಿವಾರದವರು ಇಂದು ಅಂಬೇಡ್ಕರ್‌ರವರನ್ನು ಹೆಚ್ಚಾಗಿ ಪ್ರಚಾರ ಮಾಡುತ್ತಾ ಅವರ ಹೆಸರಿನಲ್ಲಿ ದಲಿತ ದಮನಿತನರನ್ನು ಮತ್ತು ಅಂಬೇಡ್ಕರರ ಅನುಯಾಯಿಗಳನ್ನು ಅವರ ಚುನಾವಣೆ ರಾಜಕೀಯಕ್ಕೆ ಬಳಸಿಕೊಳ್ಳುವ ಪಿತೂರಿ ಮಾಡುತ್ತಿದ್ದಾರೆ.

ದೇಶಕ್ಕೆ ಬಂದ ಮಹಾ ಆಪತ್ತು

ಹಿಂದೂ ರಾಷ್ಟ್ರ ಸ್ಥಾಪನೆಯಾದರೆ ಅದು ದೇಶಕ್ಕೆ ಬಂದ ಮಹಾ ಆಪತ್ತು ಎಂದು ಅವರು ತಮ್ಮ ಜೀವಿತ ಕಾಲದಲ್ಲೆ ಅದನ್ನ ಸಾಬೀತು ಪಡಿಸಿದ್ದಾರೆ. ಮೇಲಿನ ಸಾಲುಗಳು ಅಂಬೇಡ್ಕರ್‌ಗೆ ಹಿಂದೂಧರ್ಮದ ಬಗ್ಗೆ ಇದ್ದ ಖಚಿತ ಅಭಿಪ್ರಾಯವನ್ನು ತಿಳಿಸುತ್ತದೆ ಆದರೆ ಜಾಣ ಕುರುಡರಾಗಿರುವಂತಹ BJPಯ ಹಲವು ನಾ(ಲ)ಯಕರು ತಿರುಚಿ, ಹಸಿ ಸುಳ್ಳುಗಳನ್ನು ಬಿತ್ತುತ್ತಾ ಇದ್ದಾರೆ. BJPಯವರು ಇಂದು ಅಂಬೇಡ್ಕರ್ ಬುದ್ಧ, ಬಸವ, ವಿವೇಕಾನಂದರಂತಹ ಹಲವು ದಾರ್ಶನಿಕರ ವಿಚಾರಧಾರೆಗಳನ್ನು ಕೈಬಿಟ್ಟು ಇವರ ಮನಸ್ಸಿಗೆ ಬಂದ ರೀತಿಯಲ್ಲಿ ಇವರು ಹಾಗೆ ಹೇಳಿದ್ದಾರೆ ಹೀಗೆ ಹೇಳಿದ್ದಾರೆ ಎಂದು ತಮ್ಮ ಹಿತಾಸಕ್ತಿಗಳಿಗಾಗಿ ಹಲವರನ್ನು ಬಳಸಿಕೊಳ್ಳುತ್ತಿದ್ದಾರೆ.

ಬಹುದಿನಗಳಿಂದಲೂ ಬ್ರಾಹ್ಮಣಶಾಹಿ ಸಮಾಜ, ಈ ವ್ಯವಸ್ಥೆಯೊಳಗಿನ ಹಲವು ದಾರ್ಶನಿಕರನ್ನು ವೈಚಾರಿಕ ತತ್ವಜ್ಞಾನಿಗಳನ್ನು ನುಂಗಿ ನೀರು ಕುಡಿದಿದೆ. ಇವರ ಕಟ್ಟುಪಾಡುಗಳನ್ನು ಮೀರಿ ಬೆಳೆದಂತಹ ಅನೇಕರನ್ನು ಅವರ ವಿಚಾರಧಾರೆಗಳನ್ನು ಗಾಳಿಗೆ ತೂರಿ ಅವರ ಭಾವಚಿತ್ರಗಳನ್ನು ಮಾತ್ರ ಇಟ್ಟುಕೊಂಡು ಅವರ ಹುಟ್ಟುಹಬ್ಬಗಳನ್ನು ಆಚರಿಸುತ್ತಾ ಅವರನ್ನು ವೈಭವೀಕರಿಸಿ ಪೂಜನೀಯತೆಯಿಂದ ಪೂಜಿಸುವಂತಹ ಮೌಢ್ಯವನ್ನು ಬಹಳ ವ್ಯವಸ್ಥಿತವಾಗಿ ತುಂಬುತ್ತಾ ಬರುತ್ತಿದ್ದಾರೆ. ನಾವೂ ಅದನ್ನೇ ಮಾಡುತ್ತಿದ್ದೇವೆಂದರೆ, ಅದು ಅಂಬೇಡ್ಕರ್ ಮತ್ತು ಅವರಂತಹ ಹಲವು ದಾರ್ಶನಿಕರ ವಿಚಾರಧಾರೆಗಳಿಗೆ ಅವರ ಆಶಯಗಳಿಗೆ ಮಾಡುವ ಅವಮಾನವಲ್ಲದೆ ಮತ್ತೇನು ಅಲ್ಲ ಇದು ಬಹಳ ನೋವು ಮತ್ತು ದುರಂತದ ಸಂಗತಿಯಾಗಿದೆ.

ಹಿಂದೂ ರಾಷ್ಟ್ರ ಸ್ಥಾಪನೆಯಾದರೆ ಅದು ದೇಶಕ್ಕೆ ಬಂದ ಮಹಾ ಆಪತ್ತು ಎಂದು ಅವರು ತಮ್ಮ ಜೀವಿತ ಕಾಲದಲ್ಲೆ ಅದನ್ನ ಸಾಬೀತು ಪಡಿಸಿದ್ದಾರೆ. ಮೇಲಿನ ಸಾಲುಗಳು ಅಂಬೇಡ್ಕರ್‌ಗೆ ಹಿಂದೂಧರ್ಮದ ಬಗ್ಗೆ ಇದ್ದ ಖಚಿತ ಅಭಿಪ್ರಾಯವನ್ನು ತಿಳಿಸುತ್ತದೆ ಆದರೆ ಜಾಣ ಕುರುಡರಾಗಿರುವಂತಹ BJPಯ ಹಲವು ನಾಯಕರು ತಿರುಚಿ, ಹಸಿ ಸುಳ್ಳುಗಳನ್ನು ಬಿತ್ತುತ್ತಾ ಇದ್ದಾರೆ.

○ ಸಣ್ಣಂಗಿ ರಾಜ

ಸ್ವಾಭಿಮಾನಿ ಚೇತನದ ಆಶಯವೇ ಆಗಿತ್ತು.

ದಲಿತ ದಮನಿತರ ಆಶಾಕಿರಣ, ಸ್ವಾಭಿಮಾನದ ಕಿಡಿ, ಹೋರಾಟದ ಚೈತನ್ಯವಾಗಿರುವಂತಹ ಅಂಬೇಡ್ಕರ್‌ರವರು ಈ ಸಮಾಜದ ಕಟ್ಟಕಡೆಯ ಮನುಷ್ಯ; ನೋವು, ಅಸಮಾನತೆ, ಅಸ್ಪೃಶ್ಯತೆ, ಜಾತಿ ತಾರತಮ್ಯಗಳಿಲ್ಲದೆ ಎಲ್ಲರಂತೆ ಸಮಾನತೆಯಿಂದ ಬದುಕಬೇಕೆಂಬ, ಜಾತಿ ವಿನಾಶದ ಕನಸು ಕಂಡಿದ್ದರು.

(50ನೇ ಪುಟಕ್ಕೆ)

ಹಿಂದೂ ವಿವಾಹಗಳ ಸುತ್ತ-4

(ಹಿಂದಿನ ಸಂಚಿಕೆಯಿಂದ)

ಈ ವಾಗಾಡಂಬರದ ಮತ್ತು ಚಮತ್ಕಾರದ-ತರ್ಕಾಭಾಸವು ಈ ಸಂಸ್ಥೆಗಳನ್ನು ಗೌರವಿಸಿದ್ದೇಕೆಂಬುದನ್ನು ಸೂಚಿಸುತ್ತವೆಯಾದರೂ ಅವನ್ನು ಪರಿಪಾಲಿಸುತ್ತಿರುವುದೇಕೆಂಬುದನ್ನು ಮಾತ್ರ ಹೇಳುವುದಿಲ್ಲ. ಅವನ್ನು ಪಾಲಿಸುತ್ತಿರುವುದರಿಂದಲೇ ಅವು ಗೌರವಿಸಲ್ಪಟ್ಟಿವೆಂಬುದು ನನ್ನ ಸ್ವಂತ ವ್ಯಾಖ್ಯಾನವಾಗಿದೆ. 18ನೆಯ ಶತಮಾನದ ವ್ಯಕ್ತಿವಾದದ ಉದಯದ ಬಗೆಗೆ ಸ್ವಲ್ಪ ಪರಿಚಯ ಇರುವ ಯಾರೇ ಆದರೂ ನನ್ನ ಹೇಳಿಕೆಯನ್ನು ಮೆಚ್ಚುತ್ತಾರೆ. ಎಲ್ಲ ಕಾಲದಲ್ಲಿಯೂ, ಚಳುವಳಿಯೇ ಅತ್ಯಂತ ಮುಖ್ಯವಾದದ್ದು; ಅದು ಆಗಿ ಹೋದ ಎಷ್ಟೋ ಕಾಲಾನಂತರ ಅದರ ಸುತ್ತ ಸಿದ್ಧಾಂತಗಳು ಹುಟ್ಟಿಕೊಳ್ಳುತ್ತವೆ. ಅದಕ್ಕೊಂದು ಸಮರ್ಥನೆ ಕೊಡಲೂ ನೈತಿಕ ಬೆಂಬಲ ನೀಡಲೂ ಹುಟ್ಟಿಕೊಳ್ಳುತ್ತವೆ. ಅದೇ ತೆರನಾಗಿ ಈ ಸಂಪ್ರದಾಯಗಳನ್ನು ಉಜ್ವಲವಾಗಿಸುತ್ತಿರುವ ವಾಸ್ತವಾಂಶವೇ ಆ ವೈಭವೀಕರಣ. ಅವುಗಳ ಉಳಿವಿಗೋಸ್ಕರವಾಗಿ ಅನಿವಾರ್ಯವಾಗಿತ್ತೆಂಬುದನ್ನು ಸಾಬೀತುಪಡಿಸುತ್ತದೆಂದು ನಾನು ಒತ್ತಿಹೇಳುತ್ತೇನೆ. ಇವು ಮೊಳಕೆಯೊಡೆದದ್ದೇಕೆಂಬ ಪ್ರಶ್ನೆಗೆ ನನ್ನ ನಿವೇದನೆಯೆಂದರೆ-ಜಾತಿಯ ರಚನೆಗಾಗಿ ಅವುಗಳ ಅಗತ್ಯವಿತ್ತು, ಅವುಗಳ ಗೌರವಾರ್ಥಕ ಸಿದ್ಧಾಂತಗಳು ಇದ್ದುದೂ ಅವುಗಳನ್ನು ಜನಪ್ರಿಯಗೊಳಿಸಲು ಅಥವಾ ಮಾತ್ರೆಗೆ ಲೇಪ ಬಳಿಯಲೆಂದೇ ನಾವು ಹೇಳಬಹುದು, ಏಕೆಂದರೆ ಅಕೃತ ಜನರ ನೈತಿಕ ಪ್ರಜ್ಞೆಗೆ ಅವು ಅಸಹ್ಯಕರವೂ ತಲ್ಲಣಕರವೂ ಆಗಿದ್ದಿರಬೇಕು. ಅದರಿಂದ ಅವರಿಗೆ ಬಹುವಾದ ಮಾಧುರ್ಯ ಬೇಕಿತ್ತು. ಈ ಸಂಪ್ರದಾಯಗಳನ್ನು ಆದರ್ಶವೆಂದು ಪ್ರತಿನಿಧಿಸಲಾಗಿದ್ದರೂ ಸಾರಾಂಶ ರೂಪದಲ್ಲಿ ಅವು ಸಾಧನಗಳ ಸ್ವರೂಪದಲ್ಲಿದ್ದವು. ಆದರೆ ಇದು ನಮ್ಮನ್ನು, ಅವುಗಳಿಂದ ಹರಿಯುವ ಫಲಿತಾಂಶಗಳನ್ನು ಅರ್ಥ ಮಾಡಿಕೊಳ್ಳದಂತೆ, ಕುರುಡಾಗಿಸಬಾರದು. ಸಾಧನಗಳ ಆದರ್ಶೀಕರಣವು ಅಗತ್ಯವೆಂದೂ ಮತ್ತು ಪ್ರಾಯಶಃ ಈ ನಿರ್ದಿಷ್ಟ ವಿಚಾರದಲ್ಲಿ ಅವನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗುವಂತೆ ಚಲನೆಗೊಳಿಸಿರಬಹುದೆಂದೂ ಯಾರು ಬೇಕಾದರೂ ಧಾರಾಳವಾಗಿ ಹೇಳಬಹುದು. ಸಾಧನವನ್ನೇ ಗುರಿಯೆಂದು ಹೇಳುವುದರಿಂದ ಅದು ಅದರ ನಿಜಸ್ವರೂಪವನ್ನು ಮರೆಮಾಡಿಕೊಳ್ಳುವುದರ ಹೊರತು ಬೇರೆ ತೊಂದರೆಯೇನೂ ಇಲ್ಲ; ಅದು ಒಂದು ಸಾಧನ ಮಾತ್ರವೆಂಬ ಅದರ ನಿಜಸ್ವಭಾವವನ್ನೇನೂ ಇದು ಕಿತ್ತು ಹಾಕುವುದಿಲ್ಲ. ಸಾಧನವನ್ನೇ ಗುರಿಯೆಂದು ಕರೆಯುವಂತೆ, ಎಲ್ಲ ಬೆಕ್ಕುಗಳೂ ನಾಯಿಗಳೇ ಎಂದು ನೀವು ಒಂದು ಕಾನೂನು ಹೊರಡಿಸಬಹುದು. ಇದರಿಂದ ಬೆಕ್ಕುಗಳನ್ನು

ಹುಟ್ಟನ್ನು ಕುರಿತ ಪ್ರಶ್ನೆ ಯಾವಾಗಲೂ ನೋವನ್ನುಂಟುಮಾಡುವಂತಹುದು, ದುರ್ದೈವವೆಂದರೆ ಜಾತಿಯ ಅಧ್ಯಯನದಲ್ಲಿ ಅದನ್ನು ಕಡೆಗಣಿಸಲಾಗಿದೆ; ಕೆಲವರು ಅದನ್ನು ಕಂಡೂ ಕಾಣದಂತೆ ಇದ್ದರೆ ಇನ್ನು ಕೆಲವರು ನುಸುಳಿಕೊಂಡಿದ್ದಾರೆ.

ನಾಯಿಗಳನ್ನಾಗಿಸದಂತೆ, ಸಾಧನಗಳ ಸ್ವಭಾವವನ್ನೇನೂ ನೀವು ಮಾರ್ಪಡಿಸಲಾರಿರಿ; ಇದರ ಪರಿಣಾಮವಾಗಿ, ಸತಿ (ಒತ್ತಾಯದ ವೈಧವ್ಯ) ಮತ್ತು ಬಾಲ್ಯವಿವಾಹ-ಇವು ಸರಿಯೆ, ಒಂದು ಜಾತಿಯಲ್ಲಿ ಅದರ ಹೆಚ್ಚುವರಿ ಗಂಡಸು ಹಾಗೂ ಹೆಚ್ಚುವರಿ ಹೆಂಗಸರ ಸಮಸ್ಯೆಯನ್ನು ಪರಿಹರಿಸಲೂ ಮತ್ತು ಸ್ವಜಾತಿ ಪದ್ಧತಿಯನ್ನು ಪಾಲಿಸಲೂ ಮುಖ್ಯವಾಗಿ ಹುಟ್ಟಿಕೊಂಡ ಸಂಪ್ರದಾಯಗಳೆಂದು ನಾನು ಭಾವಿಸಿರುವುದು ಸಮರ್ಥನೀಯವಾಗಿದೆ. ಈ ಸಂಪ್ರದಾಯಗಳ ಹೊರತು ಕಟ್ಟುನಿಟ್ಟಾದ ಸ್ವಜಾತಿ ಪದ್ಧತಿಯನ್ನು ಕಾಪಾಡಲು ಆಗದು; ಸ್ವಜಾತಿ ಪದ್ಧತಿಯಿಂದ ಜಾತಿಯೊಂದು ಮೋಸ.

ಭಾರತದಲ್ಲಿ ಜಾತಿಯ ಸೃಷ್ಟಿ ಮತ್ತು ಸಂರಕ್ಷಣೆಯ ವಿಧಾನವನ್ನು ವಿವರಿಸಿದ್ದಾದ ಮೇಲೆ ಸಹಜವಾಗಿಯೇ ಹುಟ್ಟಿಕೊಳ್ಳುವ ಮುಂದಿನ ಪ್ರಶ್ನೆಯೆಂದರೆ ಅದರ ಉಗಮ ಕುರಿತದ್ದು. ಹುಟ್ಟನ್ನು ಕುರಿತ ಪ್ರಶ್ನೆ ಯಾವಾಗಲೂ ನೋವನ್ನುಂಟುಮಾಡುವಂತಹುದು, ದುರ್ದೈವವೆಂದರೆ ಜಾತಿಯ ಅಧ್ಯಯನದಲ್ಲಿ ಅದನ್ನು ಕಡೆಗಣಿಸಲಾಗಿದೆ; ಕೆಲವರು ಅದನ್ನು ಕಂಡೂ ಕಾಣದಂತೆ ಇದ್ದರೆ ಇನ್ನು ಕೆಲವರು ನುಸುಳಿಕೊಂಡಿದ್ದಾರೆ. ಜಾತಿಯ ಉಗಮ ಎಂಬುದೊಂದುಂಟೇ ಎಂದು ಮತ್ತೆ ಕೆಲವರು ಕಕ್ಕಾಬಿಕ್ಕಿಯಾಗಿದ್ದಾರಲ್ಲದೆ- "ಹುಟ್ಟು' ಎಂಬ ಶಬ್ದದ ಮೋಹವನ್ನು ನಾವು ನಿಯಂತ್ರಿಸಿಕೊಳ್ಳಲು ಆಗದಿದ್ದಲ್ಲಿ 'ಜಾತಿಯ ಹುಟ್ಟುಗಳು' ಎಂಬ ಬಹುವಚನ ರೂಪವನ್ನು ನಾವು ಉಪಯೋಗಿಸುವುದೇ ಕ್ಷೇಮ" ಎಂದೂ ಅವರು ಸೂಚಿಸಿದ್ದಾರೆ. ನನ್ನ ಬಗ್ಗೆ ಹೇಳುವುದಾದರೆ, ಭಾರತ ಜಾತಿಯ ಉಗಮದ ವಿಚಾರದಲ್ಲಿ ನಾನು ತಬ್ಬಿಬ್ಬಾಗುವುದಿಲ್ಲ. ನಾನು ಮೊದಲೇ ಸಾಬೀತು ಪಡಿಸಿರುವಂತೆ, ಜಾತಿಯ ಏಕೈಕ ಲಕ್ಷಣ ಸ್ವಜಾತಿ ಪದ್ಧತಿ. ಜಾತಿಯ ಹುಟ್ಟು ಎಂದು ನಾನು ಹೇಳುವಾಗ, ಸ್ವಜಾತಿ ಪದ್ಧತಿಗಾಗಿ ಕಾರ್ಯ ವಿಧಾನದ ಉಗಮ ಎಂದೇ ನನ್ನ ಅರ್ಥ.

ಒಂದು ಸಮಾಜದಲ್ಲಿನ ವ್ಯಕ್ತಿಗಳು ತಮ್ಮನ್ನು ತಾವು ತೃಣೀಕರಿಸಿಕೊಳ್ಳುವ ಕಲ್ಪನೆಯೊಂದು ಎಷ್ಟು ದೊಡ್ಡದಾಗಿ ಜನಪ್ರಿಯಗೊಳಿಸಲಾಗಿದೆಯೆಂದರೆ-ಅಸಹ್ಯಗೊಳಿಸಲಾಗಿದೆ ಎಂದು ಹೇಳುವವನಿದ್ದೆ-ರಾಜಕೀಯ ಭಾಷಣಗಳಲ್ಲಿ ಅದೊಂದು ಬೃಹತ್ತಾದ ನಯವಂಚನೆಯೇ ಆಗಿದೆ. ವ್ಯಕ್ತಿಗಳ ಕೂಟ ಸಮಾಜವಾಗುತ್ತದೆಂದು ಹೇಳುವುದು ಕ್ಷುಲ್ಲಕವಾದುದು, ಸಮಾಜವು ಯಾವಾಗಲೂ ವರ್ಗಗಳಿಂದ ಕೂಡಿದ್ದಾಗಿದೆ. ವರ್ಗ - ವೈಷಮ್ಯ ಸಿದ್ಧಾಂತವನ್ನು ದೃಢವಾಗಿ ಹೇಳುವುದು ಉತ್ಪ್ರೇಕ್ಷೆಯಾಗಬಹುದು, ಆದರೆ ಒಂದು ಸಮಾಜದಲ್ಲಿ ಖಚಿತವಾದ ವರ್ಗಗಳ ಅಸ್ತಿತ್ವ ಮಾತ್ರ ಖಾತ್ರಿಯಾದುದು. ಅವುಗಳ ಆಧಾರ ಬೇರೆ ಬೇರೆಯಾಗಬಹುದು. ಅವು ಆರ್ಥಿಕ ಅಥವಾ ಬೌದ್ಧಿಕ ಅಥವಾ ಸಾಮಾಜಿಕವಾಗಿರಬಹುದು, ಆದರೆ ಒಂದು ಸಮಾಜದಲ್ಲಿ ಒಬ್ಬ ವ್ಯಕ್ತಿ ಯಾವಾಗಲೂ ಒಂದು ವರ್ಗದ ಸದಸ್ಯ. ಇದು ವಿಶ್ವವ್ಯಾಪಕವಾದ ಸಂಗತಿ. ಆರಂಭದ ಹಿಂದೂ ಸಮಾಜ ಕೂಡ ಈ ನಿಯಮಕ್ಕೊಂದು ಅಪವಾದವಾಗಿರಲಾರದು; ವಾಸ್ತವವಾಗಿ ಅದು, ಅಂದರೆ ಹಿಂದೂ ಸಮಾಜವು ಸಮಯಕ್ಕೆ ಅಪರವಾದವಾಗಿ ಇರಲಿಲ್ಲವೆಂಬ ಸಂಗತಿಯೂ ನಮಗೆ ಗೊತ್ತಿದೆ. ಈ ಸಾಧಾರಣೀಕರಣವನ್ನು ನಾವು ನೆಪಿನಲ್ಲಿಟ್ಟರೆ, ಜಾತಿಯ ಉಗಮ ಕುರಿತ ನಮ್ಮ ಅಧ್ಯಯವು ಬಹುವಾಗಿ ಸುಲಭವಾಗುತ್ತದೆ. ಏಕೆಂದರೆ ತನ್ನನ್ನು ತಾನು ಜಾತಿಯಾಗಿಸಿಕೊಂಡ ವರ್ಗ ಮೊದಲು ಯಾವುದು ಎಂಬುದನ್ನಷ್ಟೇ ಈಗ ನಾವು ನಿರ್ಧರಿಸಬೇಕಾಗಿದೆ. ಹಾಗೆ ಹೇಳುವುದಾದರೆ ವರ್ಗ ಮತ್ತು ಜಾತಿಗಳು ನಮ್ಮ ಪಕ್ಕದ ಬಾಗಿಲಿನ ನೆರೆಹೊರೆಗಳು. ಇವೆರಡನ್ನು ಬೇರೆಯಾಗಿಸಿರುವುದು ಒಂದು ಗೇಣು ಮಾತ್ರ. ಜಾತಿಯೆಂಬುದು ಒಂದು ಪರಿವೇಷ್ಟಿತ ವರ್ಗ.

ಜಾತಿಯ ಹುಟ್ಟನ್ನು ಕುರಿತ ಅಧ್ಯಯನವು-ತನ್ನ ಸುತ್ತ ಈ 'ಪಾಳಿ'ಯನ್ನು ಎಬ್ಬಿಸಿದ ವರ್ಗ ಯಾವುದು? ಎಂಬ ಪ್ರಶ್ನೆಗೆ ಉತ್ತರವನ್ನು ಒದಗಿಸಬೇಕು. ಪ್ರಶ್ನೆಯು ತೀರ

ಅನ್ವೇಷಣಾಶೀಲವೆನಿಸಬಹುದು, ಆದರೆ ಅದು ಪ್ರಸ್ತುತವಾಗಿದೆ. ಇಡೀ ಭಾರತದ ಜಾತಿಗಳ ಜನನ ಮತ್ತು ವಿಕಾಸದ ರಹಸ್ಯವನ್ನು ವಿಶದಪಡಿಸಲು ಈ ಪ್ರಶ್ನೆಗೆ ಸಿಗುವ ಉತ್ತರ ಸಹಾಯಕವಾಗುತ್ತದೆ. ದುರದೃಷ್ಟವೆಂದರೆ ಈ ಪ್ರಶ್ನೆಗೆ ನೇರವಾದ ಉತ್ತರ ನನ್ನ ಅಳವಿನಲ್ಲಿಲ್ಲ. ನಾನೇನಿದ್ದರೂ ಇದಕ್ಕೆ ಅಪರೋಕ್ಷವಾಗಿ ಉತ್ತರಿಸಬಲ್ಲೆ. ಹಿಂದೂ ಸಮಾಜದಲ್ಲೆ ಈಗ ಪ್ರಶ್ನಿಸಲಾಗಿರುವ ಸಂಪ್ರದಾಯಗಳು ರೂಢಿಯಲ್ಲಿದ್ದುವೆಂದು ನಾನು ಮೇಲೆ ಹೇಳಿದ್ದೆನು. ಸಂಗತಿಗಳಿಗೆ ಪ್ರಾಮಾಣಿಕವಾಗಿರುವ ಸಲುವಾಗಿ ಹೇಳಿಕೆಗಳನ್ನು ಅರ್ಹವಾಗಿಸುವುದು ಅಗತ್ಯ, ಏಕೆಂದರೆ ಅದು ಅವುಗಳ ಅಸ್ತಿತ್ವದ ವಿಶ್ವವ್ಯಾಪಕತೆಯನ್ನು ಸಿದ್ಧಪಡಿಸುತ್ತದೆ. ಈ ಸಂಪ್ರದಾಯಗಳು, ಕಟ್ಟುನಿಟ್ಟಾಗಿ ಒಂದು ಜಾತಿಯಲ್ಲಿ ಅಂದರೆ ಬ್ರಾಹ್ಮಣರಲ್ಲಿ ಮಾತ್ರ ದೊರೆಯುತ್ತವೆ. ಹಿಂದೂ ಸಮಾಜದ ಸಾಮಾಜಿಕ ಶ್ರೇಣಿಯಲ್ಲಿ ಅವರು ಅತ್ಯುನ್ನತ ಸ್ಥಾನವನ್ನು ಆಕ್ರಮಿಸಿದ್ದಾರೆ. ಬ್ರಾಹ್ಮಣೇತರ ಜಾತಿಗಳಲ್ಲಿ ಅವುಗಳ ಅಸ್ತಿತ್ವವು (ಬ್ರಾಹ್ಮಣರ ಆಚರಣೆಯ ಮಾದರಿಯಿಂದ) ನಿಷ್ಪನ್ನವಾಗಿದ್ದು, ಅದರ ಆಚರಣೆಯು ಕಟ್ಟುನಿಟ್ಟಾಗಿಯೂ ಇಲ್ಲ, ಪೂರ್ಣವಾಗಿಯೂ ಇಲ್ಲ. ಪ್ರಮುಖವಾದ ಈ ಸಂಗತಿಯು ಬಹುಮುಖ್ಯವೆನಿಸುವ ಅವಲೋಕನಕ್ಕೆ ಆಧಾರವಾಗಿ ನೆರವಾಗಲಿದೆ. ಬ್ರಾಹ್ಮಣೇತರ ಜಾತಿಗಳಲ್ಲಿ ಈ ಸಂಪ್ರದಾಯಗಳಿರುವುದು ನಿಷ್ಪನ್ನವೆಂಬುದಾದರೆ, ಸುಲಭವಾಗಿ ಅದನ್ನು ತೋರಿಸಲೂಬಹುದೂ, ಜಾತಿ

ಸಂಸ್ಥೆಯ ಯಾವ ವರ್ಗ ಯಜಮಾನನೆಂಬುದನ್ನು ಸಾಬೀತುಪಡಿಸಲು ವಾದ ಮಾಡುವ ಅಗತ್ಯವೇ ಇಲ್ಲ. ಬ್ರಾಹ್ಮಣ ವರ್ಗ ಏಕೆ ತನ್ನನ್ನು ಒಂದು ಜಾತಿಯಾಗಿ ಬೇಲಿ ಹಾಕಿಕೊಂಡಿತು ಎಂಬುದು ಬೇರೆಯೇ ಪ್ರಶ್ನೆ. ಅದನ್ನು ಇನ್ನೊಂದು ಸಂದರ್ಭದ ವಿವೇಚನೆಗೆ ಬಿಡಬಹುದು. ಆದರೆ ಈ 'ಅಸಹಜ ಸಂಸ್ಥೆ'ಗೆ ಜನ್ಮದಾತರೂ ಅದನ್ನು ಅಸಹಜ ಮಾರ್ಗಗಳಿಂದ ಸ್ಥಾಪಿಸಿ ಪರಿಪಾಲಿಸಿದವರೂ ಬ್ರಾಹ್ಮಣರೇ ಎಂದು ತೋರಿಸಲು ಈ ಸಂಪ್ರದಾಯಗಳ ಕಟ್ಟುನಿಟ್ಟಾದ ಅನುಸರಣೆ ಮತ್ತು ಎಲ್ಲ ಪ್ರಾಚೀನ ನಾಗರಿಕತೆಗಳಲ್ಲೂ ಸೊಕ್ಕಿನಿಂದ ಭಾವಿಸಿಕೊಂಡ ಪುರೋಹಿತ ವರ್ಗದ ಸಾಮಾಜಿಕ ಪ್ರತಿಷ್ಠೆ ಇವು ಸಾಕು.

ಈಗ ನಾನು ಪ್ರಬಂಧದ 3ನೆಯ ಭಾಗಕ್ಕೆ ಬರುತ್ತೇನೆ. ಇದು ಭಾರತದ ಉದ್ದಗಲಗಳಲ್ಲಿ ಈ ಜಾತಿ ಪದ್ಧತಿಯ ಬೆಳವಣಿಗೆ ಮತ್ತು ಪ್ರಸಾರದ ಪ್ರಶ್ನೆಯನ್ನು ಕುರಿತದ್ದು. ನಾನು ಉತ್ತರಿಸಬೇಕಾದ ಪ್ರಶ್ನೆಯಿದು: ದೇಶದ ಉಳಿದ ಬ್ರಾಹ್ಮಣೇತರರಲ್ಲಿ ಜಾತಿಯೆಂಬ ಸಂಸ್ಥೆ ಹೇಗೆ ಪಸರಿಸಿತು? ಭಾರತದಾದ್ಯಂತ ಜಾತಿಗಳು ದಾಂಗುಡಿಯಿಟ್ಟ ಪ್ರಶ್ನೆಯು ಅದರ ಉಗಮದ ಪ್ರಶ್ನೆಗಿಂತ ನಿಕೃಷ್ಟ ಗತಿಯನ್ನು ಅನುಭವಿಸಿದೆ. ನನಗೆ ಕಾಣುವಂತೆ ಅದಕ್ಕೆ ಮುಖ್ಯ ಕಾರಣವೆಂದರೆ, ಪ್ರಸಾರ ಮತ್ತು ಉಗಮ ಕುರಿತ ಎರಡು ಪ್ರಶ್ನೆಗಳನ್ನು ಪ್ರತ್ಯೇಕಿಸದಿರುವುದು. ಜಾತಿ ಪದ್ಧತಿಯು ದೈವ ನಿಯಾಮಕವಾದ ಒಂದು ನ್ಯಾಯ ನಿಬಂಧನೆಯಾಗಿ ಭಾರತದ ಮುಗ್ಧ ಜನರ ಮೇಲೆ ಹೇರಲ್ಪಟ್ಟುದೆಂದೂ ಅಥವಾ ಭಾರತೀಯರಿಗೇ ವಿಶಿಷ್ಟವಾದ ಸಾಮಾಜಿಕ ಬೆಳವಣಿಗೆಯ ಯಾವುದೇ ಒಂದು ಕಾನೂನಿನಂತೆ ಇದು ಹುಟ್ಟಿಕೊಂಡಿದೆಯೆಂದೂ-ಎಂದು ವಿದ್ವಾಂಸರಲ್ಲಿ ರೂಢಿಯಲ್ಲಿರುವ ಒಂದು ಸಾಮಾನ್ಯ ನಂಬಿಕೆಯೇ ಈ ಸ್ಥಿತಿಗೆ ಕಾರಣ.

(ಮುಂದಿನ ಸಂಚಿಕೆಗೆ)

ಹಸಿ ಸುಳ್ಳು ಹಬ್ಬಿಸುವ ಪುರೋಹಿತರು

(48ನೇ ಪುಟದಿಂದ)

ಈ ಆಶಯಗಳಿಗಾಗಿ ಹಗಲಿರುಳು ಶ್ರಮಿಸಿ ತಮ್ಮ ಜೀವನವನ್ನೆ ತ್ಯಾಗ ಮಾಡಿ ದಮನಿತರ ಬದುಕಿನ ಅತಿಮುಖ್ಯ ಅಗತ್ಯಗಳಾದ ಕುಡಿಯುವ ನೀರು, ದೇವಸ್ಥಾನ ಪ್ರವೇಶಕ್ಕಾಗಿ ಜಾತಿ ದೌರ್ಜನ್ಯಗಳ ವಿರುದ್ಧ ಆರ್ಥಿಕ ಸಮಾನತೆಗಾಗಿ ಶ್ರಮಿಸಿದರು. ಆದರೆ ನಾವು ಅಂಬೇಡ್ಕರ್ ಮತ್ತು ಅಂತಹ ಹಲವರ ವಿಚಾರಧಾರೆಗಳನ್ನು ಬಿಟ್ಟು ನಮಗೂ ಸಮುದಾಯಕ್ಕೂ ಯಾವುದೇ ಸಂಬಂಧ ವಿಲ್ಲವೆಂಬಂತೆ ನೋಡುತ್ತೇವೆ. ಅಸ್ಪೃಶ್ಯ ಜನಾಂಗವೂ ಇಂದಿಗೂ ಅನುಭವಿಸುತ್ತಿರುವ, ನೋವು, ಅವಮಾನ, ಅತ್ಯಾಚಾರ ಸಜೀವ ದಹನ, ಸಾಮೂಹಿಕ ಬಹಿಷ್ಕಾರಗಳನ್ನು ಕಣ್ಣಾರೆ ಕಂಡರೂ ಕಾಣದಂತೆ ಓಡಾಡುತ್ತೇವೆ.

ಬಹು ಜನ ಸಮಾಜವಾದಿ ಪಕ್ಷವು ಸೇರಿದಂತೆ ಹಲವು ಸಂಘ ಸಂಸ್ಥೆಗಳು ಇಂದು ಅಂಬೇಡ್ಕರ್ ಹೆಸರು ಹೇಳುತ್ತವೆ ಆದರೆ ಅವರ ವಿಚಾರಗಳನ್ನು ಮಾತ್ರ ಗಾಳಿಗೆ ತೂರಿವೆ. ಜನ ವಿರೋಧಿ ದಲಿತ, ವಿರೋಧಿ ಹಿಂದೂ ಕೋಮುವಾದಿ ಸಂಘಟನೆಗಳು ಅಂಬೇಡ್ಕರ್‌ರವರ ಹೆಸರನ್ನ ಅವರ ವಿಚಾರಗಳನ್ನ ತಿರುಚುತ್ತಿರುವುದರ ವಿರುದ್ಧ ಯಾರು ಸಹ ಪ್ರತಿಭಟನೆಗೆ ಮುಂದಾಗಲಿಲ್ಲ ಏಕೆ? ಇದು ಏನನ್ನತೋರಿಸುತ್ತದೆ. ವಿನಯ್ ಕಟಿಯಾರ್ ಉತ್ತರ ಪ್ರದೇಶದಲ್ಲೆ ಮಾತನಾಡಿದಾಗ, ಒಂದು ಹೇಳಿಕೆಯನ್ನು ಸಹ ಅಲ್ಲಿನ ಆಳುವ ಸರ್ಕಾರ ನೀಡದೆ ಮೌನ ವಹಿಸಲು ಕಾರಣಗಳೇನು? ನಮ್ಮ ಕರ್ತವ್ಯ ಜವಾಬ್ದಾರಿ ಗಳೇನಾಗಿರಬೇಕು.

ಹೋರಾಟದ ಚೈತನ್ಯ ಮತ್ತು ಪರಿಹಾರ

ದಲಿತರ ಬಿಡುಗಡೆಗಾಗಿ ಎಂಬತ್ತರ ದಶಕದಲ್ಲಿ ಹುಟ್ಟಿಕೊಂಡಂತಹ ದಲಿತ ಚಳುವಳಿ ಹತ್ತು ಹಲವು ಕಾರಣಗಳಿಗಾಗಿ ಒಡೆದು ಹೋಳಾಯಿತು. ಅದರ ವಿವರಗಳು ಇಲ್ಲಿ ಅಗತ್ಯವಿಲ್ಲ. ಡಾ|| ಬಿ.ಆರ್. ಅಂಬೇಡ್ಕರ್‌ರವರು ಒಬ್ಬ ವ್ಯಕ್ತಿಯಾಗಿ ಬಹಳ ಮಹತ್ವದ ಕೊಡುಗೆಗಳನ್ನು ಈ ಸಮಾಜಕ್ಕೆ ನೀಡಿದ್ದಾರೆ. ಹಿಂದೂ ದರ್ಮದಲ್ಲಿನ ಹುಳುಕುಗಳನ್ನು ಜನತೆಗೆ ಎತ್ತು ತೋರಿಸಿದ್ದಾರೆ. ಸ್ವಾತಂತ್ರ್ಯ ಚಳುವಳಿಗಿಂತ ಅಸ್ಪೃಶ್ಯರ ಬಿಡುಗಡೆಯ ಪ್ರಶ್ನೆಯನ್ನು ಅತಿಮುಖ್ಯವಾಗಿವೆ ಎಂದು ತಿಳಿದು ಹೋರಾಡಿದ್ದಾರೆ. ಬಹಳ ಮುಖ್ಯವಾಗಿ ಜಾತಿ ವಿನಾಶವಾಗಬೇಕೆಂದು ಪ್ರತಿಪಾದಿಸಿದಂತಹ ವ್ಯಕ್ತಿ. ನಾವಿಂದು ಆ ನಿಟ್ಟನಲ್ಲಿ ಮುನ್ನಡೆಯಲೇಬೇಕಾಗಿದೆ. ಪ್ರಸ್ತುತ ಸಾಮಾಜಿಕ ಪರಿಸ್ಥಿತಿಯನ್ನು ಅವಲೋಕಿಸಿದರೆ, ಹಿಂದೆಂದೂ ಕಂಡರಿಯದ ರೀತಿಯಲ್ಲಿ ಜಾತಿಯ ದೌರ್ಜನ್ಯಗಳು ನಡೆಯುತ್ತದೆ ಕಾಯುವವರೆ ಕೊಲ್ಲುವ ಕಾಯಕದಲ್ಲಿ ತೊಡಗಿದ್ದಾರೆ. ಜಗತ್ತನ್ನ ತಲ್ಲಣ ಗೊಳಿಸುತ್ತಿರುವ ಜಾಗತೀಕರಣ ದಲಿತರಿಗೆ ಭಿಕ್ಷೆಯ ಪಾತ್ರೆಯನ್ನು ನೀಡಿದೆ. ಖಾಸಗೀಕರಣ ಉದಾರೀಕರಣಗಳು ನಮ್ಮ ಬದುಕನ್ನು ಬರ್ಬರಗೊಳಿಸುತ್ತಿವೆ. ಈ ತ್ರಿಕರಣಗಳಿಂದ ಬಿಡಿಸಿಕೊಳ್ಳುತ್ತಿರುವಂತಹ ಮನುಷ್ಯ ದ್ವೇಷಿ, ಧರ್ಮ ದ್ವೇಷಿ ಕೋಮುವಾದ ಜನತೆಯ ಬದುಕಿಗೆ ಕೊಳ್ಳಿ ಇಡುತ್ತಿದೆ.

ಮಸೀದಿ ಕೆಡವಿ ಮಂದಿರ ಕಟ್ಟಿದ್ದಾಯಿತು ಈಗ ಉತ್ಖನನದ ಅಗೆಯುವ ಕೆಲಸ. ಜನರನ್ನ ಶಾಶ್ವತವಾಗಿ ಮೌಢ್ಯದಲ್ಲಿರಿಸುವ ತಂತ್ರ ಇದಾಗಿದೆ. ಆದ್ದರಿಂದ ಪ್ರಜಾತಂತ್ರದಲ್ಲಿ ನಂಬಿಕೆ ಇರುವವರು ಸಮಾನತೆಯ ಆಶಯಗಳಿಗಾಗಿ ತುಡಿತದಲ್ಲಿರುವವರು ಕೋಮುವಾದಿಗಳ ಕುತಂತ್ರಗಳನ್ನ ಬಯಲುಗೊಳಿಸಿ ಅಂಬೇಡ್ಕರ್‌ರವರನ್ನು ಪೂಜಿಸದೆ ಅವರ ಆಶಯಗಳಿಗಾಗಿ ಅವರನ್ನ ಅಂದರೆ ಅಂಬೇಡ್ಕರ್‌ರವರ ವಿಚಾರಗಳನ್ನು ಜೀವಂತವಾಗಿಡುವ ಮೂಲಕ ಅರ್ಥಪೂರ್ಣವಾಗಿ ಅವರನ್ನು ನೆನಪಿಸಿಕೊಳ್ಳಬೇಕಿದೆ. ●

"ಜಾತಿ ಪದ್ಧತಿಯನ್ನು ಒಡೆಯಲು ನಿಮಗೆ ಮನಸ್ಸಿದ್ದರೆ ವೇದ ಮತ್ತು ಶಾಸ್ತ್ರಗಳಿಗೆ ಸಿಡಿಮದ್ದು ಹಾಕಿ ಅವು ವಿಮೋಚನೆಗೆ ಯಾವ ಪಾತ್ರವನ್ನು ನೀಡುವುದಿಲ್ಲ ಸ್ಮೃತಿಗಳ ಧರ್ಮವನ್ನು ನೀವು ನಿರ್ನಾಮ ಮಾಡಲೇಬೇಕು"

— ಅಂಬೇಡ್ಕರ್


ಅಂಬೇಡ್ಕರ್
ವಿಶೇಷಾಂಕ
ಸಂವಾದ

'SAMVADA' KANNADA MONTHLY APRIL - 2003 RNI-KAR KAN/2002/9246